ವಿಶ್ವವಾಣಿ

ವಿಶ್ವಾಸವೇ ವಿಶ್ವ

ಶ್ರೇಯಾಂಕಾ ಐಸಿಸಿ ವರ್ಷದ ಉದಯೋನ್ಮುಖ ಆಟಗಾರ್ತಿ

ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಈ ವರ್ಷ ಉತ್ತಮ ಪ್ರದರ್ಶನ ತೋರಿದ ಕರ್ನಾಟಕದವರಾದ ಭಾರತ ಮಹಿಳಾ ತಂಡದ ಸ್ಪಿನ್ನರ್ ಶ್ರೇಯಾಂಕಾ ಪಾಟೀಲ ಅವರನ್ನು ವರ್ಷದ ಉದಯೋನ್ಮುಖ ಆಟಗಾರ್ತಿ ಎಂದು ಅಂತಾರಾಷ್ಟ್ರೀಯ ಕ್ರಿಕೆಟ್ ಮಂಡಳಿ ನಾಮನಿರ್ದೇಶನ ಮಾಡಿದೆ. ಶ್ರೇಯಾಂಕಾ ಅವರೊಂದಿಗೆ ದಕ್ಷಿಣ ಆಫ್ರಿಕಾದ ಅನ್ನೇರಿ ಡೆರ್ಕ್‌ಸೆನ್, ಸ್ಕಾಟ್ಲೆಂಡ್‌ನ ಸಸ್ಕಿಯಾ ಹಾರ್ಲೇ ಹಾಗೂ ಐರ್ಲೆಂಡ್‌ನ ಫ್ರೆಯಾ ಸಾರ್ಜೆಂಟ್ ಅವರ ಹೆಸರೂ ನಾಮನಿರ್ದೇಶನಗೊಂಡಿವೆ.

ಪುಟ ತೆರೆದಂತೆ...

ಕನ್ನಡಿಗರಾಗಿಯೂ ಕನ್ನಡ ಬರೊಲ್ಲ ಎಂದಾಗ ಬೇಸರವಾಗದೇ?
ಇದೇ ಅಂತರಂಗ ಸುದ್ದಿ
ವಿಶ್ವೇಶ್ವರ ಭಟ್
ಸಂ.ಪುಟ | 6

ಹಿಂದೂ ಸಮಾಜಕ್ಕೆ ಮುದ ನೀಡದ 'ಮೋಹನ'ವಾಣಿ
ವಿದ್ಯಮಾನ
ವಿನಾಯಕ ವೆಂ.ಭಟ್ಟ ಅಂಬ್ಲಿಹೊಂಡ
ಸಂ.ಗಮ | 7

ಮಾತಂದ್ರೆ ಮಾತು

ಸ್ಮಾರಕ ನಿರ್ಮಾಣದ ಕುರಿತು ಭಾರತದ ಮಾಜಿ ರಾಷ್ಟ್ರಪತಿ ಪ್ರಣವ್ ಮುಖರ್ಜಿ ಅವರು ನಿಧನರಾದಾಗ ಕಾಂಗ್ರೆಸ್ ತಲೆಕೆಡಿಸಿಕೊಂಡಿರಲಿಲ್ಲ. ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ವತಿಯಿಂದ ಸಂತಾಪ ಸೂಚಕ ಸಭೆಯನ್ನು ಕರೆಯಲು ಸಹ ಚಿಂತನೆ ಮಾಡಿರಲಿಲ್ಲ.

- ಶರ್ಮಿಷ್ಠಾ ಮುಖರ್ಜಿ
ಪ್ರಣವ್ ಮುಖರ್ಜಿ ಪುತ್ರಿ

ದಾರಿದೀಪೋಕ್ತಿ

ನಿಮಗೆ ಸಂಪೂರ್ಣ ಚಿತ್ರಣ ಗೊತ್ತಿಲ್ಲ ಅಂದ್ರೆ, ಬಾಯಿ ಮುಚ್ಚಿಕೊಂಡು ಸುಮ್ಮನಿರುವುದು ಲೇಸು. ಅರ್ಥಂಬರ್ಥ ತಿಳಿದು ಮಾತಾಡಿದರೆ, ನಿಮ್ಮ ಬಂಡವಾಳ ಗೊತ್ತಾಗಿ ಬೇರೆಯವರು ನಿಮ್ಮ ಬಾಯಿ ಮುಚ್ಚಿಸಬಹುದು. ಅದರ ಬದಲು ಮೊದಲೇ ಅರಿತುಕೊಂಡು ಆ ಕೆಲಸವನ್ನು ನೀವೇ ಮಾಡುವುದು ಒಳ್ಳೆಯದು.

ವಕ್ರತುಂಡೋಕ್ತಿ

ಡಯಟ್ ಆರಂಭಿಸುವ ಅತ್ಯಂತ ಪ್ರಶಸ್ತವಾದ ದಿನವೆಂದರೆ, ನಿನ್ನೆ ಅಥವಾ ನಾಳೆ!

ಕಂದಕಕ್ಕೆ ಬಿದ್ದ ಕಾರು: ತಂದೆ, ಮಗ ಸೇರಿ ಮೂವರು ಸಾವು

ಪುತ್ತೂರು: ನಿಯಂತ್ರಣ ತಪ್ಪಿದ ಕಾರೊಂದು ಇಲ್ಲಿನ ಬೈಪಾಸ್ ರಸ್ತೆಯಲ್ಲಿ ಶನಿವಾರ ಬೆಳಗ್ಗೆ ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ ತಂದೆ ಮತ್ತು ಮಗ ಸೇರಿ ಮೂವರು ಮೃತಪಟ್ಟಿದ್ದಾರೆ. ಸುಳ್ಯ, ಜಟ್ಟಿಪಳ್ಳದ ಕಾನತ್ತಿಲ ನಿವಾಸಿ ಅಣ್ಣು ನಾಯ್ಕ ಮತ್ತು ಅವರ ಪುತ್ರ ಚಿಕ್ಕಮಗಳೂರು ಜಿಲ್ಲೆಯ ಕಾರ್ಮಿಕ ಇಲಾಖೆಯ ಅಧಿಕಾರಿ ಚಿದಾನಂದ ನಾಯ್ಕ ಮತ್ತು ಸಂಬಂಧಿ ರಮೇಶ್ ನಾಯ್ಕ್ ಮೃತಪಟ್ಟವರು.

ಫನ್‌ತರಂಗ

- ರಘುಪತಿ ಶೃಂಗೇರಿ -

ತಾಲಿಬಾನ್ ಮೇಲೆ ಪಾಕ್ ಏರ್‌ಸ್ಟ್ರೈಕ್
ತಿರುಗೇಟು ನೀಡುತ್ತೇವೆ ಎಂದ ತಾಲಿಬಾನ್ - ಸುದ್ದಿ

ಗ್ರೇ ಏರಿಯಾದಲ್ಲಿದೆ ಆ ಪದ ಬಳಕೆಯ ತನಿಖೆ

ರವಿ ಬಳಸಿರುವ ಪದಕ್ಕೆ 'ಇಮ್ಯೂನಿಟಿ' ಸಿಗಲ್ಲವೆನ್ನುವುದು ಹಲವರ ವಾದ

ರಾಜ್ಯ, ರಾಷ್ಟ್ರದ ಹಿತವಿದ್ದರೆ ಮಾತ್ರ ಇಮ್ಯೂನಿಟಿ, ವೈಯಕ್ತಿಕ ಹೇಳಿಕೆಗಳಿಲ್ಲ

ಬೆಂಗಳೂರು: ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಬಳಸಿದ್ದಾರೆ ಎನ್ನಲಾದ 'ಆ' ಪದದ ತನಿಖೆ ಈ ಹಂತದಲ್ಲಿಯೂ ಗ್ರೇ ಏರಿಯಾದಲ್ಲಿಯೇ ಇದ್ದರೂ, ವೈಯಕ್ತಿಕ ಟೀಕೆ ಎನ್ನುವ ಕಾರಣಕ್ಕೆ ಸದನದ ಹೊರಗೆಯೂ ತನಿಖೆಗೆ ಅವಕಾಶವಿದೆ ಎನ್ನುವ ವಾದಗಳು ಶುರುವಾಗಿವೆ.

ಸುವರ್ಣಸೌಧದ ವಿಧಾನ ಪರಿಷತ್‌ನಲ್ಲಿ ಘಟನೆ ನಡೆದ ಬಳಿಕ ಸಭಾಪತಿ ಬಸವರಾಜ ಹೊರಟ್ಟಿ ಅವರು ರೂಲಿಂಗ್ ನೀಡಿದ್ದಾರೆ ಎನ್ನುವ ಕಾರಣಕ್ಕೆ ಈ ಪ್ರಕರಣದ ತನಿಖೆಯನ್ನು ಪೊಲೀಸ್ ಅಥವಾ ನ್ಯಾಯಾಂಗ ವ್ಯವಸ್ಥೆಯಲ್ಲಿ ತನಿಖೆ ಅಥವಾ ವಿಚಾರಣೆ ನಡೆಸಲು ಬರುವುದಿಲ್ಲ. ಶಾಸಕರಿಗೆ ಸದನದೊಳಗೆ ಮಾತಾಡುವ ಮಾತುಗಳಿಗೆ ಇರುವ 'ಇಮ್ಯೂನಿಟಿ'ಯಿಂದಾಗಿ ಪ್ರಕರಣದಲ್ಲಿ ಸಿ.ಟಿ.ರವಿ ಬಚಾವಾಗಲಿದ್ದಾರೆ ಎನ್ನಲಾಗಿತ್ತು.

ಆದರೀಗ ಸಂವಿಧಾನದಲ್ಲಿ ಶಾಸಕರಿಗೆ ನೀಡಿರುವ 'ಇಮ್ಯೂನಿಟಿ' ಕೇವಲ ರಾಜ್ಯ, ರಾಷ್ಟ್ರದ ಹಿತ, ನ್ಯಾಯಾಲಯಗಳು ನೀಡುವ ತೀರ್ಪುಗಳ ಮೇಲಿನ ಚರ್ಚೆಗೆ ಸೀಮಿತವಾಗಿರುತ್ತದೆ. ಆದರೆ ಸಿ.ಟಿ.ರವಿ ಅವರು ಬಳಸಿರುವ ಪದ ಸಾರ್ವಜನಿಕ ವಿಷಯವಾಗಿರದೇ, ವೈಯಕ್ತಿಕ ಟೀಕೆಯಾಗಿರುವುದರಿಂದ ಈ ವಿಚಾರವಾಗಿ ಸಿಐಡಿ ತನಿಖೆ ನಡೆಸಬಹುದು ಎನ್ನುವ ಅಭಿಪ್ರಾಯ ಕೇಳಿಬರುತ್ತಿದೆ.

ಸದನದೊಳಗಿನ ಹೇಳಿಕೆ, ಘಟನೆಗಳಿಗೆ ಸಭಾಪತಿಗಳ ತೀರ್ಮಾನವೇ ಅಂತಿಮ ಎನ್ನುವುದು ನಿಜ. ಆದರೆ ಇದು ಸದನ ಮುಂದೂಡಿಕೆಯಾದ ಸಮಯ ದಲ್ಲಿ ನಡೆದಿರುವ ಘಟನೆ. ಇದರೊಂದಿಗೆ ಲಕ್ಷ್ಮೀ ಹೆಬ್ಬಾಳ್ಕರ್ ವಿರುದ್ಧ ಮಾಡಿದ್ದಾರೆ ಎನ್ನಲಾದ ಮಾನಹಾನಿಕರ ಶಬ್ದ ಬಳಕೆಯ ವಿರುದ್ಧದ ಮಾನನಷ್ಟ ಮೊಕ್ಕದ್ದಮೆ ನ್ಯಾಯಾಲಯದಲ್ಲಿಯೇ ತೀರ್ಮಾನವಾಗಬೇಕು. ಆದ್ದರಿಂದ ಸದನದೊಳಗೆ ನಡೆದಿದ್ದರೂ ನ್ಯಾಯಾಂಗ ಅಥವಾ ಪೊಲೀಸರಿಂದ ತನಿಖೆ ನಡೆಸಲು ಅವಕಾಶವಿದೆ ಎನ್ನುವ ವಾದ ಶುರುವಾಗಿವೆ.

ತನಿಖೆಗೆ ಸಾಧ್ಯ ಎನ್ನುತ್ತಿರುವುದೇಕೆ?

- ಸಿ.ಟಿ.ರವಿ ಆಡಿರುವ ಮಾತು ವೈಯಕ್ತಿಕ ಹೇಳಿಕೆ, ಮಾನಹಾನಿಯಾಗಿರುವುದಕ್ಕೆ ನ್ಯಾಯಾಲಯದಲ್ಲಿಯೇ ಪರಿಹಾರ ಸಿಗಬೇಕು
- ಶಾಸಕರಿಗಿರುವ ವಿಶೇಷ ಸವಲತ್ತು ವೈಯಕ್ತಿಕ ಟೀಕೆಗೆ ಇಳಿದರೆ ಭವಿಷ್ಯದಲ್ಲಿ ಇದನ್ನೇ ದುರ್ಬಳಕೆ ಮಾಡಿಕೊಳ್ಳುವ ಸಾಧ್ಯತೆ
- ಶಾಸಕರನ್ನು ಬಂಧಿಸುವ ಅಥವಾ ವಶಕ್ಕೆ ಪಡೆಯಬೇಕೆಂದರೆ, ಮಾಹಿತಿ ನೀಡಬೇಕೆ ವಿನಾ ಅನುಮತಿ ಪಡೆಯಬೇಕಿಲ್ಲ

ಈ ಪ್ರಕರಣದಲ್ಲಿ ತನಿಖೆ ನಡೆಸಬೇಕೋ ಬೇಡವೋ ಎನ್ನುವ ಗೊಂದಲವಿರುವುದು ಖಚಿತ. ಆದರೆ ಬಳಸಿರುವ ಪದ 'ವೈಯಕ್ತಿಕ' ಟೀಕೆ ಎನ್ನಲಾಗುತ್ತಿರುವುದರಿಂದ ತನಿಖೆಗೆ ಅವಕಾಶವಿದೆ. ಆಡಲಾಗಿದೆ ಎನ್ನುವ ಮಾತು ಸಹ ಸದನ ಮುಂದೂಡಿದ್ದ ಸಮಯದಲ್ಲಿ ಆಗಿರುವುದರಿಂದ ತನಿಖೆ ನಡೆಸಬಹುದಾಗಿದೆ. ಏನೇ ಆದರೂ ಐತಿಹಾಸಿಕ ತೀರ್ಪಾಗಲಿದೆ.

- ಚಂದ್ರಮೌಳಿ, ಹಿರಿಯ ನ್ಯಾಯವಾದಿ

ಸಿಐಡಿ ಒಪ್ಪಿಸುವ ಲೆಕ್ಕಾಚಾರ

ಈ ಪ್ರಕರಣವನ್ನು ಬೆಳಗಾವಿ ಗ್ರಾಮಾಂತರ ಪೊಲೀಸರಿಂದ ಸಿಐಡಿಗೆ ವರ್ಗಾಯಿಸುವ ಹಿಂದೆಯೇ ತಾಂತ್ರಿಕ ಕಾರಣವಿದೆ ಎನ್ನಲಾಗಿದೆ. ಪೊಲೀಸರು ಕೆಲ ಇತಿಮಿತಿಗಳಲ್ಲಿ ತನಿಖೆ ನಡೆಸಬೇಕಾಗುತ್ತದೆ. ಆದರೆ ಸಿಐಡಿ ತನಿಖಾ ಸಂಸ್ಥೆಯಾಗಿರುವುದರಿಂದ ವಿಧಾನ ಪರಿಷತ್ ಮಹಜರು ಸೇರಿದಂತೆ ಹಲವು ತಾಂತ್ರಿಕ ಅಂಶಗಳ ಜಿಜ್ಞಾಸೆಗೆ ಕಡಿವಾಣ ಬೀಳಲಿದೆ. ಈ ಮಹಜರು ಮಾಡಲು ಸಿದ್ಧತೆ ನಡೆಸಿರುವ ಸಿಐಡಿ ಅಧಿಕಾರಿಗಳು, ಅಡ್ವೋಕೇಟ್ ಜನರಲ್ ಅವರಿಂದ ಕಾನೂನು ಸಲಹೆ ಎದುರು ನೋಡುತ್ತಿದ್ದಾರೆ. ಮಹಜರಿಗೆ ಯಾವ ಆಯಾಮದಲ್ಲಿ ಮುಂದುವರಿಯಬೇಕು ಎನ್ನುವ ಬಗ್ಗೆ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ತಿಳಿದುಬಂದಿದೆ.

ಮಹಿಳೆಯ ನಿಂದನೆಗೆ ಇಮ್ಯೂನಿಟಿ ಸಿಗುವುದಿಲ್ಲ: ಸದನದೊಳಗಿನ ಮಾತಿಗಳಿಗೆ ತನಿಖೆಯಿಂದ ವಿನಾಯಿತಿ ಎನ್ನುವ ಕಾರಣಕ್ಕೆ ವೈಯಕ್ತಿಕ ನಿಂದನೆ, ಮಹಿಳೆಯರ ವಿರುದ್ಧ ಮಾತನಾಡುವುದಕ್ಕೆ ಅವಕಾಶ ನೀಡಿದರೆ ಭವಿಷ್ಯದಲ್ಲಿ ಭಾರಿ ಸಮಸ್ಯೆಯಾಗುವ ಸಾಧ್ಯತೆಯಿರುತ್ತದೆ. ಕ್ರಿಮಿನಲ್ ವಿಷಯಗಳಿರುವ ಪ್ರಕರಣಗಳು ಸದನದಲ್ಲಿಯೇ ನಡೆದರೂ ಪೊಲೀಸರಿಂದ ತನಿಖೆ ನಡೆಸಲು ಸಾಧ್ಯವಿದೆ ಎನ್ನುವ ಐತಿಹಾಸಿಕ ತೀರ್ಪನ್ನು ಸೀತಾ ಸುರೇನ್ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಏಳು ಪೀಠ ತೀರ್ಪು ನೀಡಿದೆ. ಸೀತಾ ಸುರೇನ್ ಪ್ರಕರಣದಲ್ಲಿ, ಲಂಚ ಸ್ವೀಕಾರವಾಗಿತ್ತು. ಆದರೆ ಸಿ.ಟಿ.ರವಿ ಪ್ರಕರಣದಲ್ಲಿ ವಿಷಯ ಬೇರೆಯಾದರೂ, ವೈಯಕ್ತಿಕ ಟೀಕೆಯ ಕಾರಣಕ್ಕೆ ತನಿಖೆ ನಡೆಸಲು ಅವಕಾಶ ನೀಡಬಹುದು ಎನ್ನುವುದು ಹಿರಿಯ ವಕೀಲರ ವಾದವಾಗಿದೆ. ಒಂದು ವೇಳೆ ಈ ಪ್ರಕರಣದ ತನಿಖೆಗೆ ಅಸ್ತು ಸಿಕ್ಕರೆ, ಇದು ಐತಿಹಾಸಿಕ ತೀರ್ಪಾಗಲಿದೆ ಎನ್ನುವುದು ಸ್ಪಷ್ಟ.

ಭಾರತದ ಅರ್ಥ ವ್ಯವಸ್ಥೆಗೆ ಹೊಸ ಆಯಾಮ ನೀಡಿದ್ದ ನೇತಾರನ ಸುದೀರ್ಘ ಅಧ್ಯಾಯ ಅಂತ್ಯ

ಪಂಚಭೂತಗಳಲ್ಲಿ ಮನಮೋಹನ ಲೀನ

ಪ್ರಧಾನಿ ನರೇಂದ್ರ ಮೋದಿ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಅಂತಿಮ ನಮನ ಸಲ್ಲಿಸಿದರು.

ದೆಹಲಿ: ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಅಂತ್ಯಕ್ರಿಯೆ ದೆಹಲಿಯ ನಿಗಮ್‌ಬೋಧ್ ಘಾಟ್‌ನಲ್ಲಿ ಶನಿವಾರ ಮಧ್ಯಾಹ್ನ 1 ಗಂಟೆಗೆ ಸಿಖ್ ಧರ್ಮ ಸಂಪ್ರದಾಯದಂತೆ ಸಕಲ ಸರಕಾರಿ ಗೌರವಗಳೊಂದಿಗೆ ನೆರವೇರಿತು.

ಮೊದಲಿಗೆ ಮೂರನೇ ಮೋತಿಲಾಲ್ ಮಾರ್ಗದಲ್ಲಿರುವ ಮನಮೋಹನ್ ಸಿಂಗ್ ಅವರ ನಿವಾದದಿಂದ ಅವರ ಪಾರ್ಥಿವ ಶರೀರವನ್ನು ಹೂವಿನಿಂದ ಅಲಂಕೃತವಾದ ವಾಹನ ದಲ್ಲಿ ಬಿಗಿ ಭದ್ರತೆಯೊಂದಿಗೆ ಎಐಸಿಸಿ ಕಚೇರಿಗೆ ತರಲಾಯಿತು. ಕಾಂಗ್ರೆಸ್ ಮುಖಂಡರು ಅಂತಿಮ ದರ್ಶನ ಪಡೆದ ನಂತರ ಅಲ್ಲಿಂದ ನಿಗಮ್‌ಬೋಧ್‌ಗೆ ಪಾರ್ಥಿವ ಶರೀರವನ್ನು ತರಲಾಯಿತು. ಅಲ್ಲಿ ಅಂತಿಮ ವಿಧಾನಗಳು ನಡೆದವು.

ಪ್ರಧಾನಿ ನರೇಂದ್ರ ಮೋದಿ, ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ ಸಿಂಗ್, ಲೋಕಸಭಾ ಪ್ರತಿಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ದೆಹಲಿ ಮುಖ್ಯಮಂತ್ರಿ ಅತಿಶಿ, ತಮಿಳುನಾಡು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಅಣ್ಣಾಮಲೈ, ಡಿಎಂಡಿಕೆ ಮುಖ್ಯಸ್ಥ ವಿಜಯಕಾಂತ್, ಭೂತಾನ್ ದೊರೆ ಜಿಗ್ಮೆ ಖೇಸರ್, ಸೇನಾ ಮುಖ್ಯಸ್ಥರು, ಹಿರಿಯ ಅಧಿಕಾರಿಗಳು ಸೇರಿದಂತೆ ಪ್ರಮುಖ ಗಣ್ಯರು ಅಂತ್ಯಕ್ರಿಯೆಯಲ್ಲಿ ಪಾಲ್ಗೊಂಡಿದ್ದರು.

ಸ್ಮಾರಕಕ್ಕೆ ಸರಕಾರ ಜಾಗ ಮಂಜೂರು ಮಾಡಲಿದೆ: ಗೃಹ ಸಚಿವಾಲಯ

ಮಾಜಿ ಪ್ರಧಾನಿ ದಿವಂಗತ ಮನಮೋಹನ್ ಸಿಂಗ್ ಅವರ ಸ್ಮಾರಕ ನಿರ್ಮಾಣಕ್ಕೆ ಕೇಂದ್ರ ಸರಕಾರ ಜಾಗ ಮಂಜೂರು ಮಾಡಲಿದ್ದು, ಈ ವಿಷಯವನ್ನು ಅವರ ಕುಟುಂಬ ಮತ್ತು ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಅವರಿಗೆ ತಿಳಿಸಲಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಶುಕ್ರವಾರ ತಡರಾತ್ರಿ ಬಿಡುಗಡೆ ಮಾಡಿದ ಹೇಳಿಕೆಯಲ್ಲಿ ತಿಳಿಸಿದೆ. ಸಿಂಗ್ ಅವರ ಅಂತಿಮ ಸಂಸ್ಕಾರವನ್ನು ದೆಹಲಿಯ ನಿಗಮಬೋಧ್ ಘಾಟ್‌ನಲ್ಲಿ ಸಕಲ ಸರಕಾರಿ ಗೌರವಗಳೊಂದಿಗೆ ನಡೆಸಲಾಗುವುದು ಎಂದು ಗೃಹ ಸಚಿವಾಲಯ ಶುಕ್ರವಾರ ತಿಳಿಸಿತ್ತು. ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದ ಖರ್ಗೆ, ಸ್ಮಾರಕ ನಿರ್ಮಿಸುವ ಜಾಗದಲ್ಲಿಯೇ ಅಂತ್ಯಕ್ರಿಯೆ ನಡೆಸಬೇಕು ಎಂದು ಪ್ರಧಾನಿ ಮೋದಿಗೆ ಪತ್ರದ ಮೂಲಕ ತಿಳಿಸಿದ್ದರು. ಸ್ಮಾರಕ ನಿರ್ಮಿಸುವ ಜಾಗದಲ್ಲಿಯೇ ಅಂತ್ಯಕ್ರಿಯೆ ನಡೆಸದೇ ದೇಶದ ಮೊದಲ ಸಿಖ್ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಉದ್ದೇಶ ಪೂರ್ವಕವಾಗಿ ಅವಮಾನ ಮಾಡಲಾಗುತ್ತಿದೆ ಎಂದೂ ಕಾಂಗ್ರೆಸ್ ಆರೋಪಿಸಿತ್ತು. ಸ್ಮಾರಕ ವಿಚಾರದಲ್ಲಿ ರಾಜಕೀಯ ಬೇಡ ಎಂದು ಕೇಂದ್ರಕ್ಕೆ ಎಸ್‌ಪಿ ಮತ್ತು ಬಿಎಸ್‌ಪಿ ಪಕ್ಷಗಳು ಕೂಡ ಮನವಿ ಮಾಡಿವೆ.

ಸಪ್ನ ಬುಕ್‌ಹೌಸ್ ವತಿಯಿಂದ 69 ಪುಸ್ತಕಗಳ ಲೋಕಾರ್ಪಣೆ



ರಾಜ್ಯಸಭಾ ಸದಸ್ಯೆ ಡಾ.ಸುಧಾಮೂರ್ತಿ, ನಾಡೋಜ ಡಾ.ಹಂಪ ನಾಗರಾಜಯ್ಯ, ಸಂಸ್ಕೃತ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಮಲ್ಲೇಪುರಂ ಜಿ. ವೆಂಕಟೇಶ ಸೇರಿದಂತೆ ಹಲವು ಗಣ್ಯರು ಪುಸ್ತಕಗಳನ್ನು ಲೋಕಾರ್ಪಣೆ ಮಾಡಿದರು.

ಬೆಂಗಳೂರು: ಸಪ್ನ ಬುಕ್‌ಹೌಸ್ ಸಂಸ್ಥೆಯು 69ನೇ ಕನ್ನಡ ರಾಜ್ಯೋತ್ಸವದ ಅಂಗವಾಗಿ ನಡೆದ ಕಾರ್ಯಕ್ರಮದಲ್ಲಿ 69 ಪುಸ್ತಕಗಳ ಲೋಕಾರ್ಪಣೆಗೊಂಡಿವೆ. ಕಾರ್ಯಕ್ರಮದಲ್ಲಿ ವಿಶ್ವೇಶ್ವರ ಭಟ್ ಅವರ 'ಪದಮಣಿ ದರ್ಪಣ', ಲೋಕಧ್ವನಿ ಅಂಕಣಕಾರ ರಾಜು ಅಡಕಳ್ಳಿ ಅವರ 'ಹರಟೆ ಕಷಾಯ', ವಿಶ್ವವಾಣಿ ಪುರವಣಿ ಸಂಪಾದಕ ಶಶಿಧರ ಹಾಲಾಡಿ ಅವರ 'ಪರಿಸರ ಒಡನಾಟ' ಸೇರಿದಂತೆ 69 ಸಾಹಿತಿಗಳ ಪುಸ್ತಕ ಬಿಡುಗಡೆಯಾದವು. ಕಾರ್ಯಕ್ರಮದಲ್ಲಿ ಮಾತನಾಡಿದ ರಾಜ್ಯಸಭಾ ಸದಸ್ಯೆ ಸುಧಾಮೂರ್ತಿ, ಕನ್ನಡ ಭಾಷೆ ಕೇವಲ ಆಡು ಮಾತಾಗಿ ಉಳಿಯದಂತೆ ನೋಡಿಕೊಳ್ಳಬೇಕು. ಕನ್ನಡ ಭಾಷೆಯನ್ನು ಓದಲು, ಬರೆಯಲು ಮಕ್ಕಳಿಗೆ ಕಲಿಸಬೇಕು. ಬರೀ ಮಾತನಾಡುವ ಭಾಷೆ ಕನ್ನಡವಾದಾಗ ಅದರ ಬೇರು ಕಡಿತಗೊಳ್ಳುತ್ತದೆ. ಕನ್ನಡ ಭಾಷೆಯಾಗಿ ಕಲಿತಾಗ ಮಾತ್ರ ಕನ್ನಡ ನಮ್ಮಲ್ಲಿ ಉಳಿಯುತ್ತದೆ. ಶಾಲೆಯಲ್ಲಿ ಗುರುಗಳು, ಮನೆಯಲ್ಲಿ ಪೋಷಕರು ಮಕ್ಕಳ ಜತೆ ಕನ್ನಡದಲ್ಲೇ ಮಾತನಾಡಬೇಕು, ಕಲಿಸಬೇಕು. ಕನ್ನಡವನ್ನು ಮಾತನಾಡಿಲ್ಲ ಎಂದಾದರೆ ಕನ್ನಡದ ಬೇರುಗಳು ಅಲ್ಲಿಯೇ ಮುರುಟಿ ಹೋಗುತ್ತವೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ರೆಡ್ಡಿ ಭರ್ಜರಿ ಬ್ಯಾಟಿಂಗ್

ಆಸ್ಟ್ರೇಲಿಯಾ ಎದುರಿನ ಬಾರ್ಡರ್-ಗವಾಸ್ಕರ್ ಟೆಸ್ಟ್ ಸರಣಿಯ 4ನೇ ಪಂದ್ಯದಲ್ಲಿ 176 ಎಸೆತಗಳಲ್ಲಿ 105 ರನ್ ಗಳಿಸಿ (ನಾಟ್‌ಔಟ್) ದಿಟ್ಟ ಬ್ಯಾಟಿಂಗ್ ಪ್ರದರ್ಶನ ನೀಡಿದ ನಿತೀಶ್ ಕುಮಾರ್ ರೆಡ್ಡಿ, ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕದ ಸಂಭ್ರಮ ಆಚರಿಸಿದರು. ಅದರೊಂದಿಗೆ, ಆಸ್ಟ್ರೇಲಿಯಾದಲ್ಲಿ ಶತಕ ಸಿಡಿಸಿದ 3ನೇ ಅತಿ ಕಿರಿಯ ಹಾಗೂ 8ನೇ ಕ್ರಮಾಂಕದಲ್ಲಿ ಮೂರಂಕಿ ದಾಟಿದ ಮೊದಲ ಬ್ಯಾಟರ್ ಎಂಬ ಶ್ರೇಯಕ್ಕೆ ಭಾಜನರಾದರು.

- ಆಸ್ಟ್ರೇಲಿಯಾದಲ್ಲಿ ಭಾರತ ಪರ ಶತಕ ಸಿಡಿಸಿದ ಕಿರಿಯ ಬ್ಯಾಟರ್ ರೆಡ್ಡಿ
- 4ನೇ ದಿನಕ್ಕೆ ಕ್ರೀಸ್ ಕಾಯ್ದುಕೊಂಡಿರುವ ನಿತೀಶ್ ಕುಮಾರ್
- ಭಾರತ ತಂಡವು 3ನೇ ದಿನದಾಟ ಅಂತ್ಯಕ್ಕೆ 358 (9) ರನ್

ರಾಜ್ಯಮಟ್ಟದ 1400ಕ್ಕೂ ಹೆಚ್ಚು ಸದಸ್ಯರ ನೇಮಕಕ್ಕೆ ಅವಕಾಶ | ಕೈ ಕಾರ್ಯಕರ್ತರಿಗೆ ಹೊಸವರ್ಷಕ್ಕೆ ಸಿಗುವುದೇ ಸಿಹಿ ಸುದ್ದಿ?

ನಿಗಮಗಳಿಗೆ ನೇಮಕ ವಿಳಂಬ; ಅಸಮಾಧಾನ

ಬೆಂಗಳೂರು: ಭರ್ಜರಿ ಬಹುಮತದೊಂದಿಗೆ ಅಧಿಕಾರದ ಗದ್ದುಗೆ ಹಿಡಿದು ಇನ್ನು ಕೆಲವೇ ತಿಂಗಳಲ್ಲಿ ಎರಡು ವರ್ಷ ಪೂರೈಸಿದರೂ ನಿಗಮ-ಮಂಡಳಿಗಳ ಸದಸ್ಯರನ್ನು ನೇಮಿಸುವ ಕಾರ್ಯ ಪೂರ್ಣಗೊಳ್ಳದಿರುವುದು ಕಾಂಗ್ರೆಸ್ ಕಾರ್ಯಕರ್ತರಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ.

ಈಗಾಗಲೇ ನಿಗಮ-ಮಂಡಳಿಗಳ ಅಧ್ಯಕ್ಷ, ಉಪಾಧ್ಯಕ್ಷರ ನೇಮಕವನ್ನು ರಾಜ್ಯ ಸರಕಾರ ಮುಗಿಸಿದ್ದು, ಎರಡೂವರೆ ವರ್ಷದ ಬಳಿಕ ಬಿಟ್ಟುಕೊಡಬೇಕು ಎನ್ನುವ ಸೂಚನೆಯನ್ನು ನೀಡಿದೆ. ಆದರೆ ಈ ನಿಗಮ-ಮಂಡಳಿಗಳಿಗೆ ಸದಸ್ಯರನ್ನು ಈವರೆಗೆ ನೇಮಿಸದಿರುವುದು ಪಕ್ಷದ ಕಾರ್ಯಕರ್ತರಲ್ಲಿ ಬೇಸರಕ್ಕೆ ಕಾರಣವಾಗಿದೆ.

ನೇಮಕಕ್ಕೆ ಸಂಬಂಧಿಸಿದಂತೆ ಗೃಹ ಸಚಿವ ಡಾ.ಜಿ.ಪರಮೇಶ್ವರ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗಿತ್ತು. ಆದರೆ ಈ ಸಮಿತಿ ವರದಿಯನ್ನು ಸಿದ್ಧಪಡಿಸಿದ್ದರೂ, ನೇಮಕಕ್ಕೆ ಸರಕಾರ ಹಾಗೂ ಪಕ್ಷ ಹಿಂದೇಟು ಹಾಕುತ್ತಿರುವುದು ವಿವಾದಕ್ಕೆ ಕಾರಣವಾಗಿದೆ. ಸರಕಾರ ಎರಡು ವರ್ಷ ಪೂರೈಸಲು ಬಂದರೂ ಕಾರ್ಯಕರ್ತರಿಗೆ ಅಧಿಕಾರ ನೀಡಲು ಹಿಂಜರಿಕೆ ಏಕೆ? ಎನ್ನುವ ಪ್ರಶ್ನೆಯನ್ನು ಅನೇಕರು ಎತ್ತಿದ್ದಾರೆ.

1500ಕ್ಕೂ ಹೆಚ್ಚು ನೇಮಕ: ರಾಜ್ಯಮಟ್ಟದ ವಿವಿಧ ನಿಗಮ ಮಂಡಳಿಗಳಿಗೆ ಸದಸ್ಯರನ್ನು ನೇಮಿಸಿದರೆ ಸುಮಾರು 1500ಕ್ಕೂ ಹೆಚ್ಚು ಕಾರ್ಯಕರ್ತರಿಗೆ ಅವಕಾಶ ಸಿಗುತ್ತದೆ. ಇನ್ನು ಜಿಲ್ಲಾ ಹಾಗೂ ತಾಲೂಕು ಮಟ್ಟದ ಸಮಿತಿಗಳಿಗೆ ನೇಮಕ ಮಾಡಿದರೆ ಸುಮಾರು 10 ಸಾವಿರ ಕಾರ್ಯಕರ್ತರಿಗೆ ಅವಕಾಶ ನೀಡಬಹುದು. ಈ ಸ್ಥಾನಗಳನ್ನು ನೀಡುವ ಮೂಲಕ ಅಸಮಾಧಾನಗೊಂಡಿರುವ ಕಾರ್ಯಕರ್ತರನ್ನು ಸಂತೈಸಬಹುದು. ಆದರೆ ಹಲವು ಕ್ಷೇತ್ರದಲ್ಲಿ ಒಂದು ಸ್ಥಾನಕ್ಕೆ ನಾಲ್ಕೈದು ಆಕಾಂಕ್ಷಿಗಳಿರುವುದರಿಂದ ಹಾಗೂ ಸದ್ಯ ಯಾವುದೇ ಚುನಾವಣೆ ಇಲ್ಲದೇ ಇರುವುದರಿಂದ ನೇಮಕ ಪ್ರಕ್ರಿಯೆಯನ್ನು ವಿಳಂಬಗೊಳಿಸಲಾಗುತ್ತಿದೆ ಎನ್ನುವ ಆರೋಪ ಕೇಳಿಬರುತ್ತಿದೆ.

ಜನವರಿ 2ನೇ ವಾರದಲ್ಲಿ ನೇಮಕ ಪ್ರಕ್ರಿಯೆ

ನೇಮಕ ವಿಳಂಬಕ್ಕೆ ಸಂಬಂಧಿಸಿದಂತೆ ಪಕ್ಷದ ಕಾರ್ಯಕರ್ತರಲ್ಲಿ ಶುರುವಾಗಿರುವ ಅಸಮಾಧಾನದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಗಮನಕ್ಕೂ ಬಂದಿದೆ. ಆದ್ದರಿಂದ ಜನವರಿ 2ನೇ ವಾರದಲ್ಲಿ ಗೃಹ ಸಚಿವ ಪರಮೇಶ್ವರ ನೇತೃತ್ವದ ಸಮಿತಿ ಸಿದ್ಧಪಡಿಸಿರುವ ಪಟ್ಟಿಯ ಆಧಾರದಲ್ಲಿ ನೇಮಕ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎನ್ನಲಾಗಿದೆ. ಸದಸ್ಯರ ನೇಮಕದ ವೇಳೆಯೇ, ಶಾಸಕರು ನಿರಾಕರಿಸಿರುವ ನಿಗಮ-ಮಂಡಳಿ ಹಾಗೂ ನೇಮಕವಾಗದೇ ಇರುವ ನಿಗಮಗಳಿಗೂ ನೇಮಕ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಮೂಲಗಳು ತಿಳಿಸಿವೆ.

25 ಬೋರ್ಡ್‌ಗಳು ಖಾಲಿ



ಈಗಾಗಲೇ ಮೊದಲ ಹಂತದಲ್ಲಿ ಹಲವು ನಿಗಮ-ಮಂಡಳಿಗಳಿಗೆ ಅಧ್ಯಕ್ಷ, ಉಪಾಧ್ಯಕ್ಷರ ನೇಮಕ ಪ್ರಕ್ರಿಯೆ ನಡೆದಿದ್ದರೂ ಸುಮಾರು 25ಕ್ಕೂ ಹೆಚ್ಚು ಪ್ರಮುಖ ನಿಗಮಗಳಿಗೆ ಅಧ್ಯಕ್ಷರ ನೇಮಕವಾಗಬೇಕಿದೆ. ಇದರೊಂದಿಗೆ ಟೌನ್ ಪ್ಲಾನಿಂಗ್ ಬೋರ್ಡ್ ಸೇರಿದಂತೆ ವಿವಿಧ ಬೋರ್ಡ್‌ಗಳನ್ನು ಸೇರಿಸಿದರೆ ಸುಮಾರು 75 ಬೋರ್ಡ್‌ಗಳಿಗೆ ನೇಮಕವಾಗಬೇಕಿದೆ. ಇದರೊಂದಿಗೆ ಕೆಲ ಬೋರ್ಡ್‌ಗಳಿಗೆ ಉಪಾಧ್ಯಕ್ಷರ ನೇಮಕವೂ ಬಾಕಿ ಉಳಿದಿರುವುದರಿಂದ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನಗಳನ್ನೇ 120ಕ್ಕೂ ಹೆಚ್ಚು ಕಾರ್ಯಕರ್ತರಿಗೆ ನೀಡಬಹುದು ಎನ್ನುವುದು ಪಕ್ಷದೊಳಗಿನ ಮಾತಾಗಿದೆ.

ಸಮಾಚಾರ ಸಣ್ಣದಲ್ಲ

ಅಯ್ಯಪ್ಪಸ್ವಾಮಿ ಪೂಜೆ ಅನ್ನಸಂತರ್ಪಣೆ ಇಂದು

ಬೆಳಗಾವಿ: ಸ್ಥಳೀಯ ರುಕ್ಮಿಣಿ ನಗರ ಕಣಬರ್ಗಿ ರಸ್ತೆಯ ಶ್ರೀ ಅಯ್ಯಪ್ಪಸ್ವಾಮಿ ಮಹಾಪೂಜೆ ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮ ಭಾನುವಾರ ಸಡಗರದಿಂದ ನಡೆಯಲಿದೆ. ಈ ನಿಮಿತ್ತ ದಿ.29 ರಂದು ಬೆಳಗ್ಗೆ 5 ರಿಂದ ಅಭಿಷೇಕ 9ರಿಂದ ಸಹಸ್ರ ನಾಮಾರ್ಚನೆ, 10-30 ರಿಂದ ಭಜನೆ ಕಾರ್ಯಕ್ರಮ ನಡೆಯಲಿದೆ. ಮಧ್ಯಾಹ್ನ 12-30 ರಿಂದ ಮಂಗಳಾರತಿ 1-30 ರಂದ ಅನ್ನಪ್ರಸಾದ ನೆಡಯಲಿದೆ ಸಂಜೆ 7ರಿಂದ ಲಕ್ಷ ದಿಪೋತ್ಸವ ನಡೆಯಲಿದೆ. ಈ ಕಾರ್ಯಕ್ರಮಗಳಿಗೆಸರ್ವ ಭಕ್ತರು ಆಗಮಿಸಿ ಸಹಕರಿಸಬೇಕೆಂದು ಶ್ರೀ ನವದುರ್ಗಾ ಅಯ್ಯಪ್ಪ ಮಂದಿರ ಸೇವಾ ಸಮಿತಿ ಅಧ್ಯಕ್ಷ ಆನಂದ ಶೆಟ್ಟಿ, ಕಾರ್ಯದರ್ಶಿ ಮಹಾವೀರ ಜೈನ, ಪ್ರಧಾನ ಅರ್ಚಕ ಸುರೇಂದ್ರ ಗುರುಸ್ವಾಮಿ ಇವರು ಜಂಟಿಯಾಗಿ ಕೋರಿದ್ದಾರೆ.

ಪಿಕೆಪಿಎಸ್‌ಗೆ ಅಧ್ಯಕ್ಷ ಉಪಾಧ್ಯಕ್ಷ ಆಯ್ಕೆ

ರಾಮದುರ್ಗ: ತಾಲೂಕಿನ ಹಲಗತ್ತಿ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಕ್ಕೆ ಮುಂದಿನ 5 ವರ್ಷಗಳ ಅವಧಿಗೆ ನಡೆದ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಬಾಲಪ್ಪ ಗೋವಿಂದಪ್ಪ ರುದ್ರಗೌಡ ಉರ್ಫ್ ಧ್ಯಾವನಗೌಡ್ರ ಹಾಗೂ ಉಪಾಧ್ಯಕ್ಷರಾಗಿ ಮಾರುತಿ ಬಾಲಪ್ಪ ಮುದಕವಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ ಎಂದು ಚುನಾವಣಾಧಿಕಾರಿ ಗಿರೀಶ ಯಾವಗಲ್ ಘೋಷಿಸಿದರು. ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಾಹಕ ಬಸನಗೌಡ ದ್ಯಾವನಗೌಡ್ರು, ಸಂಘದ ಸಿಬ್ಬಂದಿ ವರ್ಗ ಹಾಗೂ ಗ್ರಾಮದ ಪ್ರಮುಖರು ಇದ್ದರು.

ಭೀಕರ ರಸ್ತೆ ಅಪಘಾತ : ಮಹಿಳೆ ಸಾವು

ಚಿಕ್ಕೋಡಿ: ಸರಕಾರಿ ಬಸ್ ಹಾಗೂ ಕಾರಿನ ಮಧ್ಯೆ ಸಂಭವಿಸಿದ ಭೀಕರ ರಸ್ತೆ ಅಪಘಾತದಲ್ಲಿ ಮಹಿಳೆಯೊಬ್ಬರು ಮೃತಪಟ್ಟ ಘಟನೆ ಶನಿವಾರ ನಿಪ್ಪಾಣಿ ಮುಧೋಳ ರಾಜ್ಯ ಹೆದ್ದಾರಿಯಲ್ಲಿ ಸಂಭವಿಸಿದೆ. ಬೆಳಗಾವಿ ಜಿಲ್ಲೆಯ ರಾಯಬಾಗ ಪಟ್ಟಣದ ನಿರ್ಮಲ ಅವಟೆ (60) ಮೃತಪಟ್ಟ ಮಹಿಳೆ. ಕಾರು ಚಲಾಯಿಸುತ್ತಿದ್ದ ಚಿಕ್ಕೋಡಿ ಹೆಸ್ಕಾಂ ಉಪವಿಭಾಗ ಸಹಾಯಕ ಅಭಿಯಂತರ ನೇಮಿನಾಥ ಅವಟೆ (43) ಅದೃಷ್ಟವಶಾತ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಚಿಕ್ಕೋಡಿ ಪಟ್ಟಣದ ಯಾದವ ನಗರದಲ್ಲಿ ವಾಸಿಸವಿದ್ದ ಇವರು ಕಾರಿನಲ್ಲಿ ಸಂಚರಿಸುವ ವೇಳೆ ಉಮರಾಣಿ ಹತ್ತಿರ ನಿಪ್ಪಾಣಿ ಮುಧೋಳ ರಾಜ್ಯ ಹೆದ್ದಾರಿಯಲ್ಲಿ ಅಪಘಾತ ಸಂಭವಿಸಿದೆ. ಘಟನೆಯಲ್ಲಿ ಗಾಯಗೊಂಡ ನೇಮಿನಾಥ ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನಾ ಸ್ಥಳಕ್ಕೆ ಚಿಕ್ಕೋಡಿ ಪೊಲೀಸ್ ಠಾಣೆ ಡಿವೈಎಸ್ಪಿ ಗೋಪಾಲಕೃಷ್ಣ ಗೌಡರ, ಸಿಪಿಐ ವಿಶ್ವನಾಥ್ ಚೌಗಲಾ, ಸಂಚಾರಿ ಪೊಲೀಸ್ ಠಾಣೆಯ ಪಿಎಸ್ಐ ರೂಪಾ ಗುಡ್ಡೋಡ್ಗಿ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಚಿಕ್ಕೋಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮನಮೋಹನ್‌ಸಿಂಗ್ ಅವರ ಕೊಡುಗೆ ಅಪಾರ

ಬೆಳಗಾವಿ: ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ನಿಧನಕ್ಕೆ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಅವರು ಸಂತಾಪ ಸೂಚಿಸಿದ್ದಾರೆ. ದೇಶದ ಅಭಿವೃದ್ಧಿಗೆ ಮನಮೋಹನ್ ಸಿಂಗ್ ಅವರ ಕೊಡುಗೆ ಎಂದಿಗೂ ಅವಿಸ್ಮರಣೀಯ ಎಂದು ಹರಿಯಾಣ ಮುಖ್ಯಮಂತ್ರಿ ನಯಾಬ್ ಸಿಂಗ್ ಸೈನಿ ಹೇಳಿದ್ದಾರೆ. ಮನಮೋ ಹನ್ ಸಿಂಗ್ ಅವರು ಅರ್ಥಶಾಸ್ತ್ರಜ್ಞ ಮತ್ತು ಆರ್ಥಿಕ ಸುಧಾರಣೆಗಳ ಪ್ರವರ್ತಕರು, ಇದು ದೇಶಕ್ಕೆ ತುಂಬಲಾರದ ನಷ್ಟ, ಅವರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಸಂಸದರು ಸಂತಾಪ ಸೂಚಿಸಿದ್ದಾರೆ.

ಅಗಲಿದ ಜೀವ

ಮುಕುಂದ ಕೃಷ್ಣರಾವ ಕಣಬೂರ

ಬೆಳಗಾವಿ: ನಾನಾವಾಡಿಯ ನಿವಾಸಿ ಮುಕುಂದ ಕೃಷ್ಣರಾವ ಕಣಬೂರ ಅವರು ಡಿಸೆಂಬರ್ 25 ರಂದು ನಿಧನರಾದರು. ಇವರಿಗೆ 76 ವರ್ಷ

ವಯಸ್ಸಾಗಿತ್ತು. ಮೂಲತಃ. ವಿಜಾಪುರದವರಾಗಿದ್ದ ಇವರು ಲೋಕೋಪಯೋಗಿ ಇಲಾಖೆಯಲ್ಲಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರಾಗಿ ನಿವೃತ್ತರಾಗಿದ್ದರು. ದಿವಂಗತರು ಪತ್ನಿ, ಮಗಳು, ಮಗ, ಅಳಿಯ, ಸೊಸೆ, ಮೊಮ್ಮಕ್ಕಳು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

{ಪ್ರದೀಪ್ ಈಶ್ವರ್} ಶಾಸಕ

ಮನಮೋಹನ್ ಸಿಂಗ್ ಅವರ ಅಪಾರ ಜ್ಞಾನ, ದೂರದೃಷ್ಟಿಯ ಆಲೋಚನೆ ಹಾಗೂ ಸಮರ್ಥ ನಾಯಕತ್ವದಲ್ಲಿ ದೇಶವು ಪ್ರಗತಿಯ ಹಾದಿಯಲ್ಲಿ ಸಾಗಿದೆ. ಪ್ರಗತಿಪರ ದೃಷ್ಟಿಕೋನ ಮತ್ತು ಅವಿಸ್ಮರಣೀಯ ಕೊಡುಗೆಗಳು ದೇಶದ ಮುಂದಿನ ತಲೆಮಾರಿಗೆ ಮತ್ತು ಮೊದಲ ಬಾರಿ ರಾಜಕೀಯ ಪ್ರವೇಶಿಸಿರುವ ನನ್ನಂತಹ ಶಾಸಕರಿಗೆ ಸ್ಫೂರ್ತಿಯಾಗಲಿವೆ.

ಶಿವಾನಂದ ಭಾರತಿ ಶಿಕ್ಷಣ ಸಂಸ್ಥೆಯ 50ನೇ ವರ್ಷದ ಮಹೋತ್ಸವ

ಸಾರ್ಥಕ ಬದುಕಿಗೆ ವಿದ್ಯೆ ಅತ್ಯವಶ್ಯ

ಬೈಲಹೊಂಗಲ: ಮನುಷ್ಯನಿಗೆ ಬೇಕಾಗಿದ್ದು ಶಾಂತಿ ಸಮಾಧಾನ, ಅದು ಕೇವಲ ವಿದ್ಯೆಯಿಂದ ಮಾತ್ರ ಪ್ರಾಪ್ತಿಯಾಗುತ್ತದೆ ಎಂದು ಸುಕ್ಷೇತ್ರ ಇಂಚಲದ ಶ್ರೀ ಶಿವಯೋಗೀಶ್ವರ ಸಾಧು ಸಂಸ್ಥಾನಮಠದ ಪೀಠಾಧಿಪತಿ ಡಾ.ಶಿವಾನಂದ ಭಾರತಿ ಸ್ವಾಮಿಜಿ ಹೇಳಿದರು.

ಶನಿವಾರ ಸಮೀಪದ ಸುಕ್ಷೇತ್ರ ಇಂಚಲ ಗ್ರಾಮದಲ್ಲಿ ಜರುಗಿದ ಡಾ.ಶಿವಾನಂದ ಭಾರತಿ ಸ್ವಾಮಿಜಿ ಅವರ 85 ನೇ ವರ್ಷದ ವರ್ಧಂತಿ ಮಹೋತ್ಸವ, ಶ್ರೀಗಳ 55 ನೇ ವರ್ಷದ ಪೀಠಾರೋಹಣ, ಹಾಗೂ 55 ನೇ ವರ್ಷದ ಅಖಿಲ ಭಾರತ ವೇದಾಂತ ಪರಿಷತ್, ಶ್ರೀ ಶಿವಾನಂದ ಭಾರತಿ ಶಿಕ್ಷಣ ಸಂಸ್ಥೆಯ 50ನೇ ವರ್ಷದ ಸುವರ್ಣ ಮಹೋತ್ಸವ ನಿಮಿತ್ಯ ಜರುಗಿದ ಸುವರ್ಣ ಭಾರತಿ ಸಮಾರಂಭದ ದಿವ್ಯ ಸಾನಿಧ್ಯ ವಹಿಸಿ ಮಾತನಾಡಿ, ವಿದ್ಯೆ ಇದ್ದರೆ ಧನ, ಕೀರ್ತಿ, ಸಮಾಧಾನ, ಶಾಂತಿ, ನೆಮ್ಮದಿ ಎಲ್ಲವೂ ಪ್ರಾಪ್ತಿಯಾಗುತ್ತದೆ. ವಿದ್ಯಾಹೀನರಾದರೇ ಜೀವನವೇ ವ್ಯರ್ಥ, ಜೀವನ ಸಾರ್ಥಕವಾಗಬೇಕಾದರೆ ವಿದ್ಯೆ ಪ್ರತಿಯೊಬ್ಬರಿಗೂ ಬಹುಮುಖ್ಯವಾಗಿದೆ. ವಿದ್ಯೆಯನ್ನು ಕಲಿಸಿದ ಗುರುಗಳನ್ನು ಮರೆಯಬಾರದು ಎಂದು ಕಿವಿಮಾತು ಹೇಳಿದರು.

ಕೆಎಲ್‌ಇ ಕಾರ್ಯಾಧ್ಯಕ್ಷ ಡಾ. ಪ್ರಭಾಕರ ಕೋರೆ ಮಾತನಾಡಿ, ರಾಜ್ಯದಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆಯುವಲ್ಲಿ ಮಠಾಧೀಶರ ಪಾತ್ರ ಹಿರಿದಾಗಿದ್ದು ಅದರಲ್ಲಿ ಬೆಳಗಾವಿ ಜಿಲ್ಲೆಯ ಮಠಾಧೀಶರು ಗ್ರಾಮೀಣ ಭಾಗದ ಬಡ ಜನತೆಯ ಶಿಕ್ಷಣ ಅರಿವು ಕುರಿತು ಮನಗಂಡು ಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕಿ ಈ ಭಾಗದಲ್ಲಿ ಶೈಕ್ಷಣ ಕ ಕ್ರಾಂತಿಯನ್ನು ಮಾಡಿದ್ದಾರೆ, ಅಲ್ಲದೇ ಗ್ರಾಮೀಣ ಭಾಗದ ಜನತೆಗೆ ಗುಣಮಟ್ಟದ ಆರೋಗ್ಯ ಸೇವೆ ಒದಗಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದರು.

ಮಾಜಿ ವಿಧಾನ ಪರಿಷತ್ ಸದಸ್ಯ ಮಹಾಂತೇಶ ಕವಟಗಿಮಠ ಮಾತನಾಡಿ, ಪುಟ್ಟ ಹಳ್ಳಿ ಇಂಚಲ ಗ್ರಾಮದಲ್ಲಿ ಶಿಕ್ಷಣದಿಂದ ವಂಚಿತವಾಗಿದ್ದನ್ನು ಮನಗಂಡು ಶ್ರೀಗಳು ಶಿಕ್ಷಣ ಸಂಸ್ಥೆಗಳನ್ನು ಹುಟ್ಟು ಹಾಕಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ಜ್ಞಾನಾರ್ಜನೆ ನೀಡುತ್ತಿರುವ ಕಾರ್ಯ ಅತ್ಯಂತ ಅವಿಸ್ಮರಣ ಯವಾಗಿದೆ. ಶ್ರೀಮಠದಲ್ಲಿ ನಿತ್ಯ ದಾಸೋಹ, ಸಾಮಾಜಿಕ, ಧಾರ್ಮಿಕ, ಆಧ್ಯಾತ್ಮಿಕ ಕಾರ್ಯಗಳು ನಿರಂತರವಾಗಿ ನಡೆಯುತ್ತಿವೆ. ಇವರ ಕಾರ್ಯಕ್ಕೆ ಎಲ್ಲರ ಕೈಜೋಡಿಸಿ, ಗುರುವಿನ ಕೃಪೆಗೆ ಪಾತ್ರರಾಗಿ, ಭಗವಂತನು ಅವರಿಗೆ ಆಯುರಾರೋಗ್ಯ ದಯಪಾಲಿಸಲೆಂದು ಪ್ರಾರ್ಥಿಸಿದರು.

ವೇದಿಕೆ ಮೇಲೆ ಮಲ್ಲಾಪುರ ಗಾಳೇಶ್ವರಮಠದ ಚಿದಾನಂದ ಸ್ವಾಮಿಜಿ, ಹುಬ್ಬಳ್ಳ ಜಡಿಮಠದ ರಾಮಾನಂದ ಸ್ವಾಮಿಜಿ, ಗಣಪತಿ ಮಹಾರಾಜರು, ಸಚ್ಚಿದಾನಂದ ಸ್ವಾಮಿಜಿ, ಶಿವಾನಂದ ಸ್ವಾಮೀಜಿ, ಆಡಳಿತಾಧಿಕಾರಿ ಪೂರ್ಣಾನಂದ ಸ್ವಾಮಿಜಿ, ಕೃಷ್ಣಾ ಸಕ್ಕರೆ ಕಾರ್ಖಾನೆ ಅಧ್ಯಕ್ಷ ಪರಪ್ಪ ಸವದಿ, ಶಾಸಕರಾದ ಮಹಾಂತೇಶ ಕೌಜಲಗಿ, ಬಾಬಾಸಾಹೇಬ ಪಾಟೀಲ, ಮಾಜಿ ಶಾಸಕರಾದ ಡಾ.ವಿಶ್ವನಾಥ ಪಾಟೀಲ, ಮಹಾಂತೇಶ ದೊಡಗೌಡರ,ಉದ್ಯಮಿ ವಿಜಯ ಮೆಟಗುಡ್ಡ, ಪುರಸಭೆ ಸದಸ್ಯ ಬಸವರಾಜ ಜನ್ಮಟ್ಟಿ, ಡಾ.ಬಿ.ಎಸ್.ಮಹಾಂತಶೆಟ್ಟಿ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

ಸುಕ್ಷೇತ್ರ ಇಂಚಲದಲ್ಲಿ ಜರುಗಿದ ಡಾ. ಶಿವಾನಂದ ಭಾರತಿ ಸ್ವಾಮಿಜಿ ಅವರ ವರ್ಧಂತಿ ಮಹೋತ್ಸವವನ್ನು ಕಾರ್ಯಕ್ರಮವನ್ನು ಶ್ರೀಗಳು ಹಾಗೂ ಗಣ್ಯಮಾನ್ಯರು ಉದ್ಘಾಟಿಸಿದರು.

> ಡಿಸಿಸಿ ಬ್ಯಾಂಕ್ ನಿರ್ದೇಶಕ ಪಂಚನಗೌಡ ದ್ಯಾಮನಗೌಡರ, ಲೆಪ್ಟಿನೆಂಟ ಕರ್ನಲ ಸಿದ್ದರಾಮ ಜಂಬಗಿ, ಅಂಚೆ ಇಲಾಖೆ ಅಧಿಕ್ಷಕ ವಿಜಯ ಆದೋನಿ ಮಾತನಾಡಿ, ಕುಗ್ರಾಮ ಇಂಚಲವು ಶಿಕ್ಷಣದಿಂದ ವಂಚಿತವಾದ ಗ್ರಾಮ ಇಂದು ಶಿಕ್ಷಕರ ತವರೂರು ಆಗಿದೆ. ಇದಕ್ಕೆ ಶ್ರೀಗಳ ಭದ್ರ ಬನಾದಿ ಹಾಕಿರುವ ಕಾರ್ಯ ಎಂದು ಮರೆಯಲಾಗದ ಕ್ಷಣವಾಗಿದೆ.
> – ರೋಹಿಣಿ ಪಾಟೀಲ್, ಕೆಪಿಸಿಸಿ ಸದಸ್ಯೆ

ಶಿಕ್ಷಣಕ್ಕಾಗಿ ನೀಡುವ ದಾನ ಶ್ರೇಷ್ಠ: ಶಾಸಕ ಲಕ್ಷ್ಮಣ ಸವದಿ

ಅಥಣಿ: ದಾನ ಧರ್ಮಗಳಲ್ಲಿ ಬಹಳಷ್ಟು ದಾನಗಳಿವೆ. ಅದರಲ್ಲಿ ಮುಖ್ಯವಾದ ದಾನ ಶಿಕ್ಷಣಕ್ಕಾಗಿ ನೀಡುವ ದಾನ ಬಹಳ ಶ್ರೇಷ್ಠವಾದ ದಾನವಾಗಿದೆ ಎಂದು ಮಾಜಿ ಉಪ ಮುಖ್ಯಮಂತ್ರಿ ಹಾಗೂ ಶಾಸಕ ಲಕ್ಷ್ಮಣ ಸವದಿ ಹೇಳಿದರು.

ಅವರು ತಾಲೂಕಿನ ನದಿ ಇಂಗಳಗಾಂವ ಗ್ರಾಮದ ಪೇರಲ ತೋಟದ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ದಿವಂಗತ ರಾಯಗೌಡ ಗೂಳಪ್ಪನವರ ಇವರ ಸ್ಮರಣಾರ್ಥವಾಗಿ ಸು. 9 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹಾಗೂ ಸೈನಿಕ ಲಕ್ಷ್ಮಣ ಹಿಂದೂರಾವ ಘೋರ್ಪಡೆ ಇವರು 2 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿದ ನೂತನ ಶಾಲಾ ಕೊಠಡಿಯನ್ನು ಉದ್ಘಾಟಿಸಿ ಮಾತನಾಡಿದ ಅವರು ಈ ಶಾಲಾ ಕೊಠಡಿಗಳಲ್ಲಿ ವಿದ್ಯಾರ್ಥಿಗಳು ಉತ್ತಮ ಶಿಕ್ಷಣ ಪಡೆದುಕೊಂಡು ತಮ್ಮ ಬದುಕನ್ನು ರೂಪಿಸಿಕೊಳ್ಳಬೇಕು. ಅವಾಗ ಮಾತ್ರ ಶಿಕ್ಷಣಕ್ಕಾಗಿ ಕೊಟ್ಟ ದಾನಕ್ಕೆ ಹಾಗೂ ದಾನ ನೀಡಿದ ಮಹನೀಯರಿಗೆ ಜೀವನ ಸ್ವಾರ್ಥಕ ಎನಿಸಿದಂತಾಗುತ್ತದೆ ಎಂದು ಹೇಳಿದರು.

ಈ ವೇಳೆ ದಾನಿಗಳಾದ ಶಿವರುದ್ರ ಗೂಳಪ್ಪನವರ ಹಾಗೂ ಮುರಗೆಪ್ಪ ಗುಳಪ್ಪನ್ನವರ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಮುಖ್ಯೋಪಾಧ್ಯಾಯ ಎಚ್ ಎಮ್ ತೇಲಿ, ಹಾಗೂ ಶಿಕ್ಷಕರಾದ ಮಹಾಂತೇಶ ಗುಳಪ್ಪನ್ನವರ, ಬಿ ಎಸ್ ಕಾಗವಾಡ, ಏಫ ಎಸ್ ಪಾಟೀಲ, ಕರ್ಣ ಹುಚ್ಚನ್ನವರ, ಇಮಾಮ್ ಮುಕ್ಕೆರಿ, ಎಸ್ ಡಿ ಎಮ್ ಸಿ ಅಧ್ಯಕ್ಷ ಅಶೋಕ್ ತೇವರಮನಿ, ಮುಖಂಡರರಾದ ಶ್ರೀಶೈಲ ನಾಯಿಕ, ರಾಜು ಗುಡೋಡಗಿ, ಗೌಡಪ್ಪ ಚನ್ನಣ್ಣವರ, ನಾಗಪ್ಪ ಗುಳಪ್ಪನ್ನವರ, ಸಂಜು ಪಾಟೀಲ, ಮಹಾಂತೇಶ ಪಾಟೀಲ ಸತೀಶ ಗುಂಡಕಲ್ಲಿ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಅಥಣಿ ತಾಲೂಕಿನ ನದಿ ಇಂಗಳಗಾಂವ ಗ್ರಾಮದ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಅಭಿವೃದ್ಧಿಗೆ ಶ್ರಮಿಸಿದ ದಾನಿಗಳಿಗೆ ಶಾಸಕ ಲಕ್ಷ್ಮಣ ಸವದಿ ಸನ್ಮಾನಿಸಿ ಅಭಿನಂದಿಸಿದರು.

ಪಾದಯಾತ್ರೆಯಿಂದ ದೇಹ,ಮನಸ್ಸು ಶುದ್ಧ

ಬೈಲಹೊಂಗಲ: ದೇಹ, ಮನಸ್ಸು ಶುದ್ಧಗೊಳಿಸಲು ದೇವರ ನಾಮಸ್ಮರಣೆಯ ಪಾದಯಾತ್ರೆ ಸಹಕಾರಿಯಾಗಲಿದೆ ಎಂದು ಪಟ್ಟಣದ ಶ್ರೀ ಗುರು ಮಡಿವಾಳೇಶ್ವರಮಠದ ಪೀಠಾಧಿಪತಿ ಮಡಿವಾಳೇಶ್ವರ ಸ್ವಾಮೀಜಿ ಹೇಳಿದರು.

ಅವರು ಪಟ್ಟಣದ ಶ್ರೀ ಗುರು ಮಡಿವಾಳೇಶ್ವರಮಠದ 43ನೇ ವರ್ಷದ ಜಾತ್ರಾ ಮಹೋತ್ಸವ, ನೂತನ ಶಿಲಾಮಠದ ಲೋಕಾರ್ಪಣೆ ಅಂಗವಾಗಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜ.5 ವರೆಗೆ ಪ್ರಾರಂಭಿಸಿದ ಶ್ರೀ ಮಡಿವಾಳೇಶ್ವರರ ಜ್ಯೋತಿಯಾತ್ರೆಯ ನೇತೃತ್ವ ವಹಿಸಿ, ಎಂ.ಜಿ. ಹೌಸಿಂಗ ಕಾಲೋನಿಯ ಉದ್ಭವ ಬಸವೇಶ್ವರ ದೇವಸ್ಥಾನದಲ್ಲಿ ಮಾತನಾಡಿ, ಶ್ರೀ ಗುರು ಮಡಿವಾಳೇಶ್ವರರ ಆದಿಯಾಗಿ ಸಕಲ ಗುರುಗಳು ಪಾದಯಾತ್ರೆ ಮೂಲಕ ನಾಡನ್ನು ಸನ್ಮಾರ್ಗದಲ್ಲಿ ಕೊಂಡೊಯ್ಯುವ ಪರಂಪರೆ ರೂಢಿಸಿದ್ದಾರೆ. ಗುರುಗಳ ಮಾರ್ಗದರ್ಶನ ಪಡೆದು ಧರ್ಮದ ನೆರಳಿನಲ್ಲಿ ಬದುಕು ಕಟ್ಟಿಕೊಳ್ಳಬೇಕು. ನಮ್ಮ ಆಚಾರ, ವಿಚಾರ, ಪರಂಪರೆ ಉಳಿಸಿ, ಬೆಳೆಸಿಕೊಂಡು ಮುಂದೆ ಸಾಗಬೇಕು.ಅಂದಾಗ ಮಾತ್ರ ಬದುಕಿಗೆ ಗೌರವ ಬರುತ್ತದೆ' ಎಂದರು.

ಪತ್ರಕರ್ತ ಬಸವರಾಜ ಕಲಾದಗಿ, ನಿವೃತ್ತ ಯೋಧ ಗಂಗಪ್ಪ ಗುಗ್ಗರಿ ಮಾತನಾಡಿ, ಶ್ರೀ ಮಠದ ಮೂಲಕ ಜ್ಯೋತಿ ಯಾತ್ರೆ ಪ್ರಾರಂಭಿಸಿ, ಧಾರ್ಮಿಕತೆ ಬಿತ್ತುತ್ತಿರುವ ಪೂಜ್ಯರ ಕಾರ್ಯ ಶ್ಲಾಘನೀಯವಾಗಿದ್ದು, ಭಕ್ತರು ತನು, ಮನ, ಧನದಿಂದ ಶ್ರೀಮಠದ ಸೇವಾ ಕಾರ್ಯಕ್ಕೆ ಕೈಜೋಡಿಸಬೇಕೆಂದರು.

ವೇ.ಮೂ. ಗದಗಯ್ಯ ರುದ್ರಾಕ್ಷಿಮಠ, ವಿಶ್ವಹಿಂದೂ ಪರಿಷದ್ ಜಿಲ್ಲಾ ಘಟಕದ ಅಧ್ಯಕ್ಷ ಪ್ರಮೋದಕುಮಾರ ವಕ್ಕುಂದಮಠ, ಸೋಮಲಿಂಗಪ್ಪ ಹರ್ಲಾಪೂರ, ಬಸವರಾಜ ನಾಗನೂರ, ಶ್ರೀಕಾಂತ್ ಪತ್ತಾರ, ಶಿವಪುತ್ರಪ್ಪ ತಲ್ಲೂರ, ಬಸವರಾಜ ಹರ್ಲಾಪೂರ, ಗೂಳಪ್ಪ ಗೂಳನ್ನವರ, ವಿವೇಕಾನಂದ ಪೂಜಾರ, ರಾಜು ಬಡಿಗೇರ, ಅಶೋಕ ಸವದತ್ತಿ, ಶಿವಪ್ಪ ದೊಡವಾಡ, ಅಡಿವೆಪ್ಪ ಕುರಿ, ಈರಪ್ಪ ಹಣಸಿ, ಮಹಾಂತೇಶ ಹಣಸಿ, ಮಲ್ಲಪ್ಪ ಹೊಂಗಲ, ಶಿವಾನಂದ ಹತ್ತರಕಿ ಹಾಗೂ ಇತರರು ಇದ್ದರು.

ಬೈಲಹೊಂಗಲದ ಶ್ರೀ ಗುರು ಮಡಿವಾಳೇಶ್ವರಮಠದ 43ನೇ ವರ್ಷದ ಜಾತ್ರಾ ಮಹೋತ್ಸವ, ನೂತನ ಶಿಲಾಮಠದ ಲೋಕಾರ್ಪಣೆ ಅಂಗವಾಗಿ ಶ್ರೀ ಮಡಿವಾಳೇಶ್ವರರ ಜ್ಯೋತಿಯಾತ್ರೆ ಪ್ರಾರಂಭವಾಗಿದೆ.

> ನಮ್ಮ ಸಂಸ್ಕಾರ, ಧಾರ್ಮಿಕತೆಯಲ್ಲಿ ಅಪಾರ ಶಕ್ತಿ ಅಡಗಿದೆ. ತಾಯಂದಿರು ಮಕ್ಕಳಿಗೆ ನಮ್ಮ ಪರಂಪರೆ ತಿಳಿಸುವ ಮೂಲಕ ಅವರ ಮುಂದಿನ ಜೀವನಕ್ಕೆ ದಾರಿದೀಪ ಆಗಬೇಕೆಂದರು.ಪ್ರತಿ ದಿನ ಬೆಳಿಗ್ಗೆ ಪಟ್ಟಣದ್ಯಾಂತ ಜ್ಯೋತಿ ಯಾತ್ರೆ, ಪ್ರಾರಂಭವಾಗಿದ್ದು ಭಕ್ತರು ಭಾಗವಹಿಸಿ, ಆಧ್ಯಾತ್ಮಿಕತೆ ಅಳವಡಿಸಿಕೊಳ್ಳಬೇಕು.
> – ಬಳುಟಗಿ ಶಿವಕುಮಾರ್ ಸ್ವಾಮೀಜಿ, ಖ್ಯಾತ ಪ್ರವಚನಕಾರ

ಅಡಿವೇಶಾಚಾರ್ಯ ಜೋಶಿಯವರ ಕಾರ್ಯ ಅನನ್ಯ

ಜ್ಞಾನ ಸತ್ರ ಮಂಗಲೋತ್ಸವದಲ್ಲಿ ಡಾ.ಕೃಷ್ಣಾಚಾರ್ಯ ಉಪಾಧ್ಯಾಯ ಅಭಿನುಡಿ

ಅಥಣಿ: ಅಡಿವೇಶಾಚಾರ್ಯ ಜೋಶಿಯವರು ಅರ್ಧ ಶತಮಾನಕ್ಕೂ ಹೆಚ್ಚು ಕಾಲ ಅಥಣಿಯ ಶ್ರೀ ಲಕ್ಷ್ಮೀ ನರಸಿಂಹ ದೇವಸ್ಥಾನದಲ್ಲಿ ಪಾಠ, ಪ್ರವಚನ, ನಿತ್ಯ ಪಾರಾಯಣ, ಅನ್ನ ದಾನದಂತಹ ವಿವಿಧ ಧಾರ್ಮಿಕ ಕಾರ್ಯಗಳ ಜತೆಗೆ ದೇವಸ್ಥಾನದ ಅಭಿವೃದ್ಧಿಗೆ ಶ್ರಮಿಸಿದ್ದಾರೆ ಎಂದು ಬೆಂಗಳೂರಿನ ವಿದ್ಯಾಧೀಶ ಸಂಸ್ಕೃತ ಶೋಧ ಕೇಂದ್ರದ ನಿರ್ದೇಶಕರಾದ ಡಾ.ಕೃಷ್ಣಾಚಾರ್ಯ ಉಪಾಧ್ಯಾಯ ಹೇಳಿದರು.

ಇಲ್ಲಿನ ಅಡಿವೇಶಾಚಾರ್ಯ ಜೋಶಿಯವರ ಜನ್ಮ ಶತಮಾನೋತ್ಸವದ ಅಂಗವಾಗಿ ನರಸಿಂಹ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಜ್ಞಾನ ಸತ್ರದ ಮಂಗಲೋತ್ಸವದಲ್ಲಿ ಭಾಗವಹಿಸಿ ಮಾತನಾಡಿದರು. ಜ್ಞಾನ ಸತ್ರ ಕಾರ್ಯಕ್ರಮದ ನೇತೃತ್ವ ವಹಿಸಿದ್ದ ಪಂ.ಬಿಂದುಮಾಧವಾಚಾರ್ಯ ಜೋಶಿ ಮಾತನಾಡಿ, ವೈಶಾಖ ಮಾಸದಲ್ಲಿ ಏಳು ದಿನಗಳ ಕಾಲ ನಡೆಯುವ ಲಕ್ಷ್ಮೀ ನರಸಿಂಹ ಜಯಂತಿ ಉತ್ಸವ, ರಥೋತ್ಸವವನ್ನು ಅದ್ದೂರಿಯಾಗಿ ಸತತ ನಡೆಸಿಕೊಂಡು ಬಂದ ಇವರು ದೇವಸ್ಥಾನದ ಅಭಿವೃದ್ಧಿಗೆ ಸ್ವಂತ ಶ್ರಮ ಪಟ್ಟಿದ್ದಾರೆ ಎಂದರು.

ಇದೇ ಸಂದರ್ಭದಲ್ಲಿ ಸಂಧ್ಯಾ ಟೋಣಪಿ ಮತ್ತು ತೇಜಸ್ವಿನಿ ಕದಡಿ ರಚಿಸಿದ ಆಧ್ಯಾತ್ಮಿಕ ಜ್ಞಾನದ ಖಣಿ ಉಗಾಭೋಗಗಳು ಎನ್ನುವ ಗ್ರಂಥವನ್ನು ಪಂಡಿತೋತ್ತಮರು ಬಿಡುಗಡೆಗೊಳಿಸಿದರು. ಜಮಖಂಡಿಯ ಶ್ರೀ ಲಕ್ಷ್ಮೀ ನರಸಿಂಹ ಸಂಸ್ಕೃತ ಮಹಾವಿದ್ಯಾಲಯದ ಪ್ರಾಂಶುಪಾಲ ಪಂ.ರಮಾಕಾಂತಾಚಾರ್ಯ ಜೋಶಿ, ಅಥಣಿಯ ಪಂ.ಬಿಂದುಮಾಧಾಚಾರ್ಯ ಜೋಶಿ, ಪಂ.ಜಯರಾಮಾಚಾರ್ಯ ಮದನಪಲ್ಲಿ, ಹುಬ್ಬಳ್ಳಿಯ ಪಂ.ಜಯತೀರ್ಥಾಚಾರ್ಯ ಹುಂಡೇಕಾರ, ಬೆಂಗಳೂರಿನ ಪಂ. ವೇಣುಗೋಪಾಲಾಚಾರ್ಯ ಗುಡಿ, ಪಂ.ಸಂದೇಶಾಚಾರ್ಯ ಝಳಕೀಕರ, ಪಂ.ಪವನಾಚಾರ್ಯ ಜೋಶಿ, ಧಾರವಾಡದ ಪಂ. ಕೇಶ್ವಾಚಾರ್ಯ ಕೆರೂರ, ಐನಾಪೂರ ದ ತತ್ವಜ್ಞಾಚಾರ್ಯ ಉಮರ್ಜಿ ಪ್ರವಚನ ನೀಡಿದರು.

ಕಾರ್ಯಕ್ರಮದಲ್ಲಿ ಪಂಡಿತೋತ್ತಮರಿಗೆ ನರಸಿಂಹ ದೇವಸ್ಥಾನದ ಪರವಾಗಿ ಅಡಿವೇಶಾಚಾರ್ಯ ಜೋಶಿ ಕುಟುಂಬದವರು ಗೌರವಿಸಿದರು. ಕಾರ್ಯಕ್ರಮದಲ್ಲಿ ಹಣಮಂರಾಚಾರ್ಯ ಕಟ್ಟಿ, ರೂಪಾ ಜೋಶಿ, ಗುರುರಾಜ ಬಾದರಾಯಣಿ, ಶ್ರೀರಾಮ ಕಟ್ಟಿ, ಗುರುರಾಜ ಮಣ್ಣೂರ, ವಾದಿರಾಜ ಜಂಬಗಿ ಸೇರುದಂತೆ ನೂರಾರು ಸಂಖ್ಯೆಯಲ್ಲಿ ಬ್ರಾಹ್ಮಣ ಸಮಾಜ ಬಂಧುಗಳು ಪಾಲ್ಗೊಂಡಿದ್ದರು.

ಅಡಿವೇಶಾಚಾರ್ಯ ಜೋಶಿಯವರ ಜನ್ಮ ಶತಮಾನೋತ್ಸವದ ಅಂಗವಾಗಿ ನರಸಿಂಹ ದೇವಸ್ಥಾನದಲ್ಲಿ ಹಮ್ಮಿಕೊಂಡಿದ್ದ ಜ್ಞಾನ ಸತ್ರದ ಮಂಗಲೋತ್ಸವ ನಡೆಯಿತು.



ಹಾರೂಗೇರಿ ಪಟ್ಟಣದ ಬೇತೆಲ್ ಆಶ್ರಯ ಫೌಂಡೇಶನ್ ವತಿಯಿಂದ ಅದ್ದೂರಿಯಾಗಿ ಕ್ರಿಸ್ಮಸ್ ಹಬ್ಬ ಆಚರಣೆ ಮಾಡಲಾಯಿತು. ಕಾರ್ಯಕ್ರಮದ ಪ್ರಾರಂಭದಲ್ಲಿ ಮಾಜಿ ಪ್ರಧಾನಿ ದಿ. ಮನಮೋಹನ್ ಸಿಂಗ್ ಅವರ ಭಾವಚಿತ್ರಕ್ಕೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪಾಸ್ಟರ್ ನೆಲ್ಸನ್ ಬಾಬು ಅವರ ನೇತೃತ್ವದಲ್ಲಿ ನಡೆದ ಪ್ರಾರ್ಥನೆಯನ್ನು ಘನ ಸೇವಕರಾದ ಪಾಸ್ಟರ್ ಬಾಬು ಹಳ್ಳೂರ್ ನೆರವೇರಿಸಿದರು.

ಸಿಂಗ್ ನಿಧನ : ಜಾರಕಿಹೊಳಿ ಸಂತಾಪ

ಬೆಳಗಾವಿ: ಡಾ. ಮನಮೋಹನ್ ಸಿಂಗ್ ಅವರ ನಿಧನದ ಆಘಾತಕಾರಿ ಸುದ್ದಿ ತಿಳಿದು ಅಪಾರ ದುಃಖವಾಗಿದೆ ಎಂದು ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ ಅವರು ಸಂತಾಪ ಸೂಚಿಸಿದ್ದಾರೆ. ಭಾರತದ ಮಾಜಿ ಪ್ರಧಾನಮಂತ್ರಿಯಾಗಿ, ದೃಷ್ಟಿಯುಳ್ಳ ನಾಯಕನಾಗಿ ಮತ್ತು ಗಣ್ಯ ಅರ್ಥಶಾಸ್ತ್ರಜ್ಞನಾಗಿ ದೇಶದ ಸೇವೆಗೆ ತಮ್ಮ ಜೀವನವನ್ನು ಸಮರ್ಪಿಸಿದ್ದರು. ಭಾರತದ ಆರ್ಥಿಕ ಪ್ರಗತಿಗೆ ಅವರು ನೀಡಿದ ಅಮೂಲ್ಯ ಕೊಡುಗೆಗಳನ್ನು ಎಂದಿಗೂ ಮರೆಯಲು ಸಾಧ್ಯವಿಲ್ಲ. ನಾನು ಸಹಭಾಗಿಯಾಗಿದ್ದೇನೆ ಎಂದು ಸಚಿವ ಸತೀಶ್ ಜಾರಕಿಹೊಳಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆತ್ಮಬಲದಿಂದ ಜೀವನದಲ್ಲಿ ಅಪಾರ ಸಾಧನೆ: ಹೆಗ್ಗನ್ನವರ

ರಾಮದುರ್ಗ: ಆತ್ಮಬಲ ಹೊಂದಿದಲ್ಲಿ ಜೀವನದಲ್ಲಿ ಸಾಧಿಸುವುದು ಅಸಾಧ್ಯವಾದುದು ಯಾವುದು ಇಲ್ಲ. ಆಸಕ್ತ ಕ್ಷೇತ್ರಗಳಲ್ಲಿ ನಿರಂತರ ಪರಿಶ್ರಮವಹಿಸಿದಲ್ಲಿ ಉನ್ನತ ಸಾಧನೆ ಮಾಡಲು ಸಾಧ್ಯವಿದೆ ಸಾಧಿಸುವ ಮೊದಲೆ ಕೈಚೆಲ್ಲಿ ಕುಳಿತುಕೊಳ್ಳಬಾರದು ಎಂದು ಸವದತ್ತಿ ತಹಸೀಲ್ದಾರ್ ಮಲ್ಲಿಕಾರ್ಜುನ ಹೆಗ್ಗನ್ನವರ ಹೇಳಿದರು.

ತಾಲೂಕಿನ ಸುರೇಬಾನ ಗ್ರಾಮದ ಪಾರ್ವತಿ ಸುಬ್ರಾಯಪ್ಪ ಮೋಟೆ ವೇದಿಕೆಯಲ್ಲಿ ಅವರಾದಿ ಶಿವಪೇಟೆಯ ಓಂ ಶಿವ ಮೇಳ ತಂಡ ಗುರುವಾರ ಆಯೋಜಿಸಿದ್ದ 2ನೇ ದಿನದ ರಾಜ್ಯಮಟ್ಟದ ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಅವರು, ಜಾನಪದ ಕಲೆಯೂ ಅಷ್ಟೆ ಎಲ್ಲರಿಗೂ ಒಲಿಯುವ ವಿದ್ಯೆ ಅಲ್ಲ. ಅದು ಕೆಲವರನ್ನು ಮಾತ್ರ ಅಪ್ಪಿಕೊಳ್ಳುತ್ತದೆ. ಡೊಳ್ಳು ಕಲಾವಿದ ಸಿದ್ದು ಮೋಟೆ ಅವರು ತಮ್ಮ ಸ್ವಂತ ಹಾಡುಗಳಿಂದ ಸಮಾಜದ ಅಂಕು ಡೊಂಕುಗಳನ್ನು ತಿದ್ದುವುದು, ದುರ್ಬಲರಿಗೆ ನೈತಿಕ ಬಲ ತುಂಬುವ ಮೂಲಕ ಸಮಾಜಕ್ಕೆ ದೊಡ್ಡ ಕೊಡುಗೆ ನೀಡುತ್ತಿರುವುದು ಶ್ಲಾಘನೀಯ ಕಲಾವಿದರಾಗಿ ಉಳಿಯದೇ ಇತರ ಜಾನಪದ ಕಲಾವಿದರಿಗೆ ಪ್ರೋತ್ಸಾಹ ನೀಡಿ ಬೆಳೆಸುತ್ತಿದ್ದಾರೆ ಎಂದರು.

ಪ್ರಸಕ್ತ ಮೊಬೈಲ್ ಯುಗದಿಂದ ಜಾನಪದ ಕಲೆ ನಸಿಶಿ ಹೋಗುತ್ತಿದೆ. ಇದರ ಮಧ್ಯೆ ಎಲ್ಲಿಯೋ ಎಲೆಮರೆ ಕಾಯಿಯಂತಿರುವ ಜಾನಪದ ಕಲಾವಿದರು ಬೆಳಗಾಗುವಷ್ಟರಲ್ಲಿ ಸಾಮಾಜಿಕ ಜಾಲತಾನಗಳ ಮೂಲಕ ಜನಪ್ರೀಯರಾಗುತ್ತಿದ್ದಾರೆ. ಅದಕ್ಕೆ ಹಾವೇರಿ ಜಿಲ್ಲೆಯ ಕಲಾವಿದರಾದ ಹನಮಂತ ಲಮಾಣಿ ಮತ್ತು ಬಾಳು ಬೆಳಗುಂದಿ ಸಾಕ್ಷಿ ಎಂದರು.

ಗ್ರಾಪಂ ಅಭಿವೃದ್ಧಿ ಅಧಿಕಾರಿ ಬಿ.ಎಸ್. ಗುಡದನ್ನವರ ಉಪನ್ಯಾಸ ನೀಡಿದರು. ಸುರೇಬಾನ ಗ್ರಾಪಂ ಅಧ್ಯಕ್ಷೆ ನಾಗರತ್ನ ಜಡಿ, ಉಪಾಧ್ಯಕ್ಷೆ ಬಸವ್ವ ಭಜಂತ್ರಿ, ನಿಂಗಪ್ಪ ಮೆಳ್ಳಿಕೇರಿ, ಶಂಕ್ರಯ್ಯಸ್ವಾಮಿ ಹಿರೇಮಠ, ಬಸವಂತಪ್ಪ ಮದಕಟ್ಟಿ, ಶ್ರೀಶೈಲ್ ಗಂಗರಗಿ, ಸರಸ್ವತಿ ಬೀಳಗಿ, ಕಾಶಪ್ಪ ಕಾರಜೋಳ, ಫಕೀರಪ್ಪ ಹಾವೋಜಿ, ಕರಿಯಪ್ಪ ವಡ್ಡರ, ಮರಿಯಪ್ಪ ದೊಡಮನಿ, ಕುಮಾರ ವಡ್ಡರ, ಭೀಮಣ್ಣ ಭಾವಿಕಟ್ಟಿ ಸೇರಿದಂತೆ ಇತರರಿದ್ದರು.

ರಾಮದುರ್ಗದ ಕುಬೇರ ಗರಡಿಮನಿ, ರೋಣ ತಾಲೂಕಿನ ಕೊತಬಾಳದ ಶಂಕ್ರಣ್ಣ ಸಂಕಣ್ಣವರ, ಧಾರವಾಡದ ಇಮಾಮಸಾಬ ವಲ್ಲೆಪ್ಪನವರ, ಗದಗಿನ ಯಲ್ಲಪ್ಪ ಡೊಕ್ಕನ್ನವರ, ಸುರೇಬಾನದ ಶಿವಾನಂದ ಶಿರೂರ, ಮಾರುತಿ ಪ್ಯಾಟಿ, ಚೆನ್ನಾಪೂರದ ಮೈಲಾರಪ್ಪ ಗೊಂದೆಪ್ಪನವರ, ಅವರಿಗೆ ಜಾನಪದ ಶಿವೋತ್ಸವ ಪ್ರಶಸ್ತಿ ಪ್ರದಾನ ಮಾಡಲಾಯಿತು.

ತಡರಾತ್ರಿ ವರೆಗೆ ವಿವಿಧ ಜಾನಪದ ಕಲಾ ತಂಡದವರಿಂದ ಡೊಳ್ಳು ಕುಣಿತ, ಕರಡಿ ಮಜಲು, ಸೋಬಾನ ಪದ, ಹಂತಿ ಪದ ಸೇರಿದಂತೆ ಹಲವು ಜಾನಪದ ಕಾರ್ಯಕ್ರಮ ಮತ್ತು ಜಾನಪದ ಒಡ್ಡೋಲಗ ಸಭಿಕರನ್ನು ರಂಜಿಸಿತು. ಸಿದ್ದು ಮೋಟೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಮಾರುತಿ ಪೂಜಾರ ಸ್ವಾಗತಿಸಿದರು. ಎಂ.ಎನ್. ಗವನ್ನವರ ಕಾರ್ಯಕ್ರಮ ನಿರೂಪಿಸಿದರು. ಆನಂದ ಹಕ್ಕೆನ್ನವರ ವಂದಿಸಿದರು.

ತಾಲೂಕಿನ ಸುರೇಬಾನದಲ್ಲಿ ಅವರಾದಿ ಶಿವಪೇಟೆಯ ಓಂ ಶಿವ ಮೇಳ ಆಯೋಜಿಸಿದ್ದ 2ನೇ ದಿನದ ರಾಜ್ಯ ಮಟ್ಟದ 8ನೇ ಜಾನಪದ ಸಮ್ಮೇಳನದವನ್ನು ಸವದತ್ತಿ ತಹಶೀಲ್ದಾರ್ ಮಲ್ಲಿಕಾರ್ಜುನ ಹೆಗ್ಗನ್ನವರ ಉದ್ಘಾಟಿಸಿದರು.

> ಸರಕಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜಾನಪದ ಸಂಭ್ರಮ ಎಂಬ ಹೊಸ ಅಧ್ಯಾಯವನ್ನು ಜಾರಿಗೆ ತರುವುದರಿಂದ ಅಳಿದು ಹೋಗುತ್ತಿರುವ ಜಾನಪದ ಕಲೆಗೆ ಉತ್ತೇಜನ ನೀಡಿದಂತಾಗುತ್ತದೆ.
> – ಪ್ರೊ. ಪಿ.ಎಲ್. ಮಿಸಾಳೆ, ಜಾನಪದ ವಿದ್ವಾಂಸ

ಸಂಗೀತ, ಚಿತ್ರಕಲೆಯಂತಹ ಹವ್ಯಾಸ ರೂಢಿಸಿ

ಬೆಳಗಾವಿ: ಹಿರಿಯ ನಾಗರಿಕರು ಸಾಹಿತ್ಯ, ಸಂಗೀತ, ಚಿತ್ರಕಲೆ ಹೀಗೆ ಯಾವುದಾದರೂಂದು ಹವ್ಯಾಸದಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕು. ಇದರಿಂದ ವಯೋಸಹಜ ಕಾಯಿಲೆ, ಬದುಕಿನ ನೋವುಗಳನ್ನು ಮರೆಯಬಹುದು. ಮನರಂಜನಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುವುದರಿಂದ ಮಾನಸಿಕ ಸದೃಢತೆಯನ್ನು ಬೆಳೆಸಿಕೊಳ್ಳಬಹುದೆಂದು ಘರ್ ಕುಲ್ ವೃದ್ಧಾಶ್ರಮದ ಅಧ್ಯಕ್ಷ ರಾಜೀವ್ ಪೋದ್ದಾರ ಇಂದಿಲ್ಲಿ ಹೇಳಿದರು.

ಇತ್ತೀಚೆಗೆ ನಾದಸುಧಾ ಸಂಗೀತ ಶಾಲೆಯ ಸಂಸ್ಥಾಪಕರಾದ ಡಾ. ಕೆ. ಸತ್ಯನಾರಾಯಣ ತಮ್ಮ 68 ನೇ ಹುಟ್ಟುಹಬ್ಬವನ್ನು ಬೆಳಗಾವಿ ತಾಲೂಕಿನ ಬೆನಕನಹಳ್ಳಿಯ ಘರಕುಲ ವೃದ್ಧಾಶ್ರಮದ ಸದಸ್ಯರೊಂದಿಗೆ ಆಚರಿಸಿಕೊಂಡರು. ಈ ಸಂದರ್ಭದಲ್ಲಿ ವೃದ್ಧಾಶ್ರಮದ ಅಧ್ಯಕ್ಷರಾದ ರಾಜೀವ ಪೋದ್ದಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಮೇಲಿನಂತೆ ಅಭಿಪ್ರಾಯ ಪಟ್ಟರು.

ಮುಂದೆ ಮಾತನಾಡುತ್ತ ರಾಜೀವ ಅವರು ನಗರದ ನಾದಸುಧಾ ಸಂಗೀತ ಶಾಲೆಯ ರುವಾರಿ ಕೆ. ಸತ್ಯನಾರಾಯಣ ಹುಟ್ಟು ಹಬ್ಬದ ಸಂಭ್ರಮವನ್ನು ವೃದ್ಧಾಶ್ರಮದವರೊಂದಿಗೆ ಹಂಚಿಕೊಳ್ಳುತ್ತಿರುವುದು ಸಂತೋಷದ ವಿಷಯ. ಇವರು ತಮ್ಮ ತಂಡದವರೊಂದಿಗೆ ಅನಾಥಾಶ್ರಮ, ವೃದ್ಧಾಶ್ರಮಗಳಿಗೆ, ಅಂಧಶಾಲೆಗಳಿಗೆ ಹೋಗಿ ಸಂಗೀತ, ಅಭಿನಯ, ನೃತ್ಯಗಳಿಂದ ಅವರನ್ನು ರಂಜಿಸುವುದರೊಂದಿಗೆ ಹಬ್ಬದ ವಾತಾವರಣ ನಿರ್ಮಿಸುತ್ತಾರೆ. ಇವರು ಸಲ್ಲಿಸುತ್ತಿರುವ ಸೇವೆ ನಿಜಕ್ಕೂ ಶ್ಲಾಘನೀಯ ಎಂದು ಹೇಳಿದರು.

ಈ ಸಂದರ್ಭದಲ್ಲಿ, ವಿದ್ವಾನ ಎಂ.ಜಿ. ರಾವ, ಸಂಧ್ಯಾ, ಪದ್ಮಾ ಸತ್ಯನಾರಾಯಣ, ಉಪಸ್ಥಿತರಿದ್ದರು. ಲಕ್ಷ್ಮೀ ಪೋದಾರ ಸ್ವಾಗತಿಸಿದರು, ಪೂರ್ಣಿಮಾ ಪತ್ತಾರ ವಂದಿಸಿದರು.

ನಾದಸುಧಾ ಸಂಗೀತ ಶಾಲೆಯ ಸಂಸ್ಥಾಪಕರಾದ ಡಾ. ಕೆ. ಸತ್ಯನಾರಾಯಣ ತಮ್ಮ 68 ನೇ ಹುಟ್ಟುಹಬ್ಬವನ್ನು ಬೆಳಗಾವಿ ತಾಲೂಕಿನ ಬೆನಕನಹಳ್ಳಿಯ ಘರಕುಲ ವೃದ್ಧಾಶ್ರಮದ ಸದಸ್ಯರೊಂದಿಗೆ ಆಚರಿಸಿಕೊಂಡರು.

ಪುಂಡಲೀಕ ಮಹಾರಾಜರ ಉತ್ಸವ ಮೂರ್ತಿ ಮೆರವಣಿಗೆ

ತೊಂಡಿಕಟ್ಟಿ: ರಾಮದುರ್ಗ ತಾಲೂಕಿನ ತೊಂಡಿಕಟ್ಟಿ ಗ್ರಾಮದಲ್ಲಿ ಡಿ.28 ರಿಂದ ಜ.3 ರವರಿಗೆ ಶ್ರೀ ಅವಧೂತ ಗಾಳೇಶ್ವರ ಮಹಾಸ್ವಾಮಿಗಳ 80ನೇ ಪುಣ್ಯಾರಾಧನೆ ಮತ್ತು ಅವಧೂತೈಕ್ಯ ಶ್ರೀ ಪುಂಡಲೀಕ ಮಹಾರಾಜರ ಶಿಲಾಮಂದಿರದ ಉದ್ಘಾಟನೆ, ಮೂರ್ತಿಪ್ರಾಣ ಪ್ರತಿಷ್ಠಾಪನೆ ನಿಮಿತ್ಯ ಶನಿವಾರದಂದು ಶ್ರೀ ಪುಂಡಲೀಕ ಮಹಾರಾಜರ ಉತ್ಸವ ಮೂರ್ತಿಯ ಮೆರವಣಿಗೆಯು ಮಹಿಳೆಯರ ಕುಂಭಮೇಳ ಹಾಗೂ ಕರಡಿ ಮಜಲು ಹಾಗೂ ಬ್ಯಾಂಡ ತಂಡವು ಭವ್ಯ ಮೆರವಣಿಗೆ ಗಮನ ಸೆಳೆಯಿತು.

ಅವಧೂತೈಕ್ಯ ಶ್ರೀ ಪುಂಡಲೀಕ ಮಹಾರಾಜರ ಉತ್ಸವ ಮೂರ್ತಿಯನ್ನು ಬುದ್ನಿಖುರ್ದ ಗ್ರಾಮದ ಹನುಮಾನ ಮಂದಿರ ಬಳಿ ಸಾರೋಟಿನಲ್ಲಿ ಪ್ರತಿಷ್ಠಾಪಿಸಿ ಮೆರವಣಿಗೆ ಬೆಳಗಾವಿ ಏಮ್ ಪಾರ ಸೇವಾ ಸಂಸ್ಥೆಯ ಶ್ರೀ ಸ್ವಾಮಿ ಚಿತ್‌ಪ್ರಕಾಶಾನಂದ ಸರಸ್ವತಿ ಶ್ರೀಗಳು ಮತ್ತು ಗಾಳೇಶ್ವರ ಮಠದ ಪೀಠಾಧಿಪತಿ ಶ್ರೀ ವೆಂಕಟೇಶ್ವರ ಮಹಾರಾಜರು, ಬೀದರ್ ಗುರುದೇವ ಆಶ್ರಮದ ಶ್ರೀ ಗಣೇಶಾನಂದ ಮಹಾರಾಜರು, ಹಡಗನಾಳದ ಶ್ರೀ ಮುತ್ಯೆಶ್ರೀ ಶ್ರೀಗಳು, ಬಿಜಗುಪ್ಪಿಯ ಶ್ರೀಸುವೃತಾನಂದ ಶ್ರೀಗಳು ವಿವಿಧ ಮಠಾಧಿಶರು ಪುಷ್ಪಾರ್ಚನೆ ಮಾಡುವ ಮೂಲಕ ಮೆರವಣಿಗೆ ಚಾಲನೆ ನೀಡಿದರು.

ಮೆರವಣಿಗೆ ಉದಕ್ಕು ಮಹಿಳೆಯರು ಅವಧೂತ ಗಾಳೇಶ್ವರ ಮಹಾರಾಜರಿಗೆ, ಶ್ರೀ ಪುಂಡಲೀಕ ಮಹಾರಾಜರಿಗೆ ಜೈಕಾರ ಹಾಕುತ್ತು ಹಾಗೂ ಶಿವಾಯ ನಮಃ ಓಂ ಎಂಬ ಮಂತ್ರವನ್ನು ಜಪ್ಪಿಸುತ್ತಾ ಸಾಗಿದರು.

ಮೆರವಣಿಗೆಯು ಬುದ್ನಿಖುರ್ದ ಗ್ರಾಮದಿಂದ ವಾದ್ಯಮೇಳಗೊಂದಿಗೆ ಸಾಗಿ ತೊಂಡಿಕಟ್ಟಿ ಗ್ರಾಮ ಮುಖ್ಯ ರಸ್ತೆ, ಗಾಂಧಿ ಕಟ್ಟೆ ಹಾಗೂ ಬಸ್ ನಿಲ್ದಾಣ ರಸ್ತೆ ಮೂಲಕ ಶ್ರೀ ಗಾಳೇಶ್ವರ ಮಠದವರಿಗೆ ಜರುಗಿತು.

ಮೆರವಣಿಗೆಯಲ್ಲಿ ಜಾತ್ರಾಮಹೋತ್ಸವ ಕಮೀಟಿಯವರು ಮತ್ತು ಸಕಲಸದ್ಭಕ್ತ ಮಂಡಳಿ ಉಪಸ್ಥಿತರಿದ್ದರು. ಇದಕ್ಕೂ ಮುಂಚೆ ಬ್ರಾಹ್ಮೀ ಮುಹೂರ್ತದಲ್ಲಿ ಶ್ರೀಗಳಮೂರ್ತಿಗಳಿಗೆ ರುದ್ರಾಭಿಷೇಕ ಶ್ರೀಮದ್ಭಗವದ್ಗೀತಾ ಪಾರಾಯಣ, ಸುಮಿತ ಭಟ್ಟ ಮೈಸೂರ ಹಾಗೂ ಸಂಗಡಿಗರಿಂದ ಹೋಮ, ಹವನ ಪೂಜಾ ಕಾರ್ಯಕ್ರಮ ಮತ್ತು ಪೂಜ್ಯರ ಉಪಸ್ಥಿತ ಗಣ್ಯಮಾನ್ಯರಿಂದ ಪ್ರಣವ ಧ್ವಜಾರೋಹಣ ಮಹಾರಥದ ಕಳಸಾರೋಹಣ.

ಅವಧೂತೈಕ್ಯ ಶ್ರೀ ಪುಂಡಲೀಕ ಮಹಾರಾಜರ ಉತ್ಸವ ಮೂರ್ತಿಯ ಮೆರವಣಿಗೆ ಸಡಗರ ಸಂಭ್ರಮದಿಂದ ಜರುಗಿತು.

ಜಂಗಮರಿಂದ ಸನ್ಮಾರ್ಗ ಸಾಧ್ಯ

ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿ ಗುರುನಮನ | ಸಾಹಿತಿ ಸಿದ್ದಪ್ಪ ಬಿದರಿ

ವಿಜಯಪುರ: ಎಲ್ಲರು ಜಂಗಮರಾಗಲು ಸಾಧ್ಯವಿಲ್ಲ, ಜಂಗಮರು ತಲೆ ಮೇಲೆ ಜಗತ್ತಿನ ಭಾರ ಹೊತ್ತುಕೊಂಡಿದ್ದಾರೆ. ನಮ್ಮನ್ನು ಬಾಗಿಸಿ ಸನ್ಮಾರ್ಗದಲ್ಲಿ ನಡೆಸುವ ಶಕ್ತಿ ಅವರಲ್ಲಿದೆ. ಅದನ್ನೇ ಶ್ರೀ ಸಿದ್ದೇಶ್ವರ ಅಪ್ಪಾವರು ಮಾಡಿ ಹೋಗಿದ್ದಾರೆ ಎಂದು ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಜಾನಪದ ಸಾಹಿತಿ ಸಿದ್ದಪ್ಪ ಬಿದರಿ ಹೇಳಿದರು.

ನಗರದ ಜ್ಞಾನಯೋಗಾಶ್ರಮದ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಗುರುನಮನ ಕಾರ್ಯಕ್ರಮದ 3ನೇ ಗೋಷ್ಠಿ 'ಗ್ರಾಮ ಸಂಸ್ಕೃತಿ' ಉದ್ಘಾಟಿಸಿ ಮಾತನಾಡಿದ ಅವರು, ಶಾಣ್ಯಾರ ಜಗಳ ಬುದ್ದಿವಳಗ, ದಡ್ಡರ ಜಗಳ ಬಡಿಗಿ ಒಳಗ ಎಲ್ಲಾರ ಜಗಳ ಒಂದೆ, ಸೋಸೆ ತಂದಾರ, ರೊಟ್ಟಿ ಬರುವಲ್ಲದು, ಮಾಸ್ತರ ನೌಕರಿ ಕೊಟ್ಟಾರ, ಕಲಿಸಾಕ ಬರುವಲ್ಲದು ಕಾರಣ ನಾವು ಗ್ರಾಮೀಣ ಸಂಸ್ಕೃತಿಯನ್ನು ಮರೆತಿದ್ದೇವೆ. ಹಿರಿಯರ ಮಾತಿಗೆ ಇಂದು ಬೆಲೆ ಇಲ್ಲದಂತಾಗಿದೆ. ಎಲ್ಲ ಸರಿಯಾಗಬೇಕಾದರೆ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳು ತಿಳಿಸಿರುವ ಗ್ರಾಮ ಸಂಸ್ಕೃತಿ, ಕೃಷಿ ಸಂಸ್ಕೃತಿಯನ್ನು ಪಾಲಿಸಬೇಕು ಎಂದರು.

ಶ್ರೀ ಸಿದ್ದೇಶ್ವರ ಅಪ್ಪಾವರು ನನಗೆ ಜಾನಪದ ಸಾಹಿತ್ಯದ ಮೂಲಕ ಸಮಾಜವನ್ನು ಎಚ್ಚರಿಸುವ ಕೆಲಸವನ್ನು ಮುಂದುವರೆಸು ಎಂದು ಆಶೀರ್ವದಿಸಿದ್ದಾರೆ. ದಡ್ಡರಿಗೆ ಧೈರ್ಯ ಬಾಳ, ಶಾಣ್ಯಾರಿಗೆ ಸಂಶಯಬಾಳ ಹಾಗೇ ನಾನು ಜಾನಪದದ ಮೂಲಕ ತಿಳಿದಷ್ಟನ್ನು ಹೇಳುವ ಕಾರ್ಯ ಮಾಡುತ್ತಿದ್ದೇನೆ. ಇಂದು ಮಕ್ಕಳು ತಂದೆ-ತಾಯಿ ಮಾತು ಕೇಳುತ್ತಿಲ್ಲ. ಶಾಲೆಯಲ್ಲಿ ಶಿಕ್ಷಕರ ಮಾತು ಕೇಳುತ್ತಿಲ್ಲ. ನಾವು ನಮ್ಮ ಮಕ್ಕಳನ್ನು ಸರಿಯಾದ ರೀತಿಯಲ್ಲಿ ಬೆಳೆಸಬೇಕು. ನಮ್ಮ ಆಚಾರ ವಿಚಾರಗಳನ್ನು ಮರೆಯದೆ ಗುರು ಹಿರಿಯರಿಗೆ ಗೌರವಿಸುವ ಸಂಸ್ಕಾರವನ್ನು ಮಕ್ಕಳಲ್ಲಿ ಬಿತ್ತಬೇಕು. ನೀರಿಲ್ಲದೇ ಮೀನು ಬದುಕಲ್ಲ, ಮೀನಿಲ್ಲದಿದ್ದರೆ ನೀರು ಸ್ವಚ್ಚವಾಗಿರುವುದಿಲ್ಲ. ಹಾಗೆಯೇ ಊರಲ್ಲಿ ಶರಣರು, ಸಂತರು, ಕಲಾವಿದರು, ಸಾಹಿತಿಗಳು ಹಾಗೂ ಹಿರಿಯರು ಇರಬೇಕು ಎಂದರು.

ಅಮೇರಿಕಾದಿಂದ ಆಗಮಿಸಿದ್ದ ಶಿಲ್ಪಾ ಹಾದಿಮನಿ ಅವರು ಮಾತನಾಡಿ, ಅಪ್ಪಾರವರು ನೀಡಿರುವ ಸತ್ಯ, ಪ್ರೇಮ, ಪ್ರವಚನಗಳು ನಮ್ಮೊಂದಿಗೆ ಸದಾ ಇವೆ. ಮಾನವೀಯ ಮೌಲ್ಯಗಳನ್ನು ನಮಗೆ ನೀಡಿ ಆದರ್ಶ ಬದುಕು ಸಾಗಿಸಿದ್ದಾರೆ. ಸಕಲರಿಗೂ ಲೇಸನ್ನೇ ಬಯಸಿ ಜಗತ್ತಿಗೆ ಜ್ಞಾನ ದಾಸೋಹವನ್ನು ಹಂಚಿ ಹೋಗಿದ್ದಾರೆ. ಅಮೇರಿಕಾದಲ್ಲಿ ನಾನು ಅವರನ್ನು ಭೇಟಿಯಾಗಿ ಆಶೀರ್ವಾದ ಪಡೆದುಕೊಂಡಿದ್ದೇನೆ. ಅದು ನನ್ನ ಬದುಕಿನ ಸಾರ್ಥಕ ಕ್ಷಣಗಳು ಎಂದು ಭಾವುಕರಾದರು.

ಜ್ಞಾನಯೋಗಾಶ್ರಮದ ಅಧ್ಯಕ್ಷ ಗುರುಗಳಾದ ಶ್ರೀ ಬಸವಲಿಂಗ ಸ್ವಾಮೀಜಿಗಳು ಆಶೀರ್ವಚನ ನೀಡಿದರು. ಈ ಸಂದರ್ಭದಲ್ಲಿ ಹಲವು ಸಾಹಿತಿಗಳು, ಸ್ವಾಮೀಜಿಗಳು ಹಾಗೂ ಆಶ್ರಮದ ನೂರಾರು ಭಕ್ತರು ಉಪಸ್ಥಿತರಿದ್ದರು.



ವಿಜಯಪುರದ ಜ್ಞಾನಯೋಗಾಶ್ರಮದಲ್ಲಿ ನಡೆಯುತ್ತಿರುವ ಶತಮಾನದ ಸಂತ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಗುರುನಮನ ಕಾರ್ಯಕ್ರಮದಲ್ಲಿ ಗ್ರಾಮ ಸಂಸ್ಕೃತಿ ಎಂಬ ಮೂರನೇ ಗೋಷ್ಠಿಯನ್ನು ರಾಜ್ಯೋತ್ಸವ ಪ್ರಶಸ್ತಿ ವಿಜೇತ ಜಾನಪದ ಸಾಹಿತಿ ಸಿದ್ಧಪ್ಪ ಬಿದರಿ ಉದ್ಘಾಟಿಸಿದರು.

> ಗ್ರಾಮ ಪಂಚಾಯತ್ ಚುನಾವಣೆಗಳು ಬಂದಾಗಿನಿಂದ ಗ್ರಾಮೀಣ ಜನರ ಮನಸ್ಸನ್ನು ಕದಡುವ ಕೆಲಸ ಮಾಡಿವೆ. ಗ್ರಾಮೀಣ ಸಂಸ್ಕೃತಿ ಉಳಿಸಿಕೊಳ್ಳಬೇಕಾದರೆ, ಪ್ರವಚನ, ಸತ್ಸಂಗ ಕಾರ್ಯಕ್ರಮಗಳಲ್ಲಿ ನಿಮ್ಮ ಮಕ್ಕಳನ್ನು ಕರೆದುಕೊಂಡು ಬರಬೇಕು. ಆಗ ಮಕ್ಕಳಲ್ಲಿ ಸಂಸ್ಕಾರ-ಸಂಸ್ಕೃತಿ ತಾನಾಗಿಯೇ ಬೆಳೆಯುತ್ತದೆ.
>
> -ಪ್ರಭುಸಾರಂಗ ಶಿವಾಚಾರ್ಯರು,
> ಸಿಂದಗಿಯ ಸಾರಂಗಮಠ

ನಾವೆಲ್ಲ ಒಂದಾಗಿ ಬದುಕಿದರೆ ಬದುಕು ಸುಂದರ

ಬಾಗಲಕೋಟೆ ಭೋವಿಪೀಠದ ಜಗದ್ಗುರು ಇಮ್ಮಡಿ ಸಿದ್ಧರಾಮೇಶ್ವರ ಮಹಾಸ್ವಾಮೀಜಿ ಮಾತನಾಡಿ, ಗ್ರಾಮೀಣ ಜನರು ನಾವು ಇಂದು ಗ್ರಾಮಗಳಿಂದ ವಲಸೆ ಬಂದು ನಗರಗಳನ್ನು ಸೇರುತ್ತಿದ್ದೇವೆ. ಇದರಿಂದ ನಮ್ಮಲ್ಲಿನ ಸಂಬಂಧಗಳ ಮೌಲ್ಯಗಳು ಕಡಿಮೆಯಾಗುತ್ತಿವೆ. ಕಾರಣ ನಾವು ನಮ್ಮ ಮೂಲ ಸಂಸ್ಕೃತಿಯನ್ನು ಮರೆಯುತ್ತಿದ್ದೇವೆ. ಕುಂಬಾರನ ಅಣತೆ, ನೇಕಾರನ ಬತ್ತಿ, ಗಾಣಿಗನ ಎಣ್ಣೆಯಂತೆ ನಾವೆಲ್ಲ ಒಂದಾಗಿ ಬದುಕಬೇಕಾಗಿದೆ. ಆಗ ಬದುಕು ಸುಂದರವಾಗುತ್ತದೆ ಎಂದರು.

ಸಂಭ್ರಮದ ಶಿವಯೋಗೀಶ್ವರ ಪಲ್ಲಕ್ಕಿ ಉತ್ಸವ, ಕುಂಭಮೇಳ

ಬಸವನಬಾಗೇವಾಡಿ: ಪಟ್ಟಣದ ತಾಳಿಕೋಟಿ ರಸ್ತೆಯ ಮಿನಿ ವಿಧಾನಸೌಧ ಎದುರುಗಡೆ ಇರುವ ಕೋಣಿನವರ ತೋಟದಲ್ಲಿ ಶ್ರೀ ಶಿವಯೋಗೀಶ್ವರ ಜಾತ್ರಾ ಮಹೋತ್ಸವ ಅತ್ಯಂತ ಸಡಗರ ಸಂಭ್ರಮದಿಂದ ಜರುಗಿತು.

ಪಲ್ಲಕ್ಕಿ ಉತ್ಸವ ಸಕಲವಾದ್ಯ ವೈಭವದೊಂದಿಗೆ ಪಟ್ಟಣದ ಪ್ರಮುಖ ರಸ್ತೆಗಳ ಮೂಲಕ ಕುಂಭಮೇಳದೊಂದಿಗೆ ಬಸವತೀರ್ಥ ಗಂಗಸ್ಥಳಕ್ಕೆ ತೆರಳಿ ಗಂಗೆ ಪೂಜೆ ಮಾಡಿ ನಂತರ ಸಕಲ ವಾದ್ಯ ವೈಭವ ಹಾಗೂ ಪುರವಂತರೊಂದಿಗೆ ದೇವಸ್ಥಾನಕ್ಕೆ ಪಲ್ಲಕ್ಕಿ ಉತ್ಸವ ತೆರಳಿತು. ನಂತರ ದೇವಸ್ಥಾನದ ಕತೃಗದ್ದಿಗೆ ಕುಂಭಾ ಅಭಿಷೇಕ ನೆರವೇರಿಸಲಾಯಿತು.

ನಂತರ ಸಂಜೆ ಪೂರವಂತ, ಅಯ್ಯಪ್ಪ ಸ್ವಾಮಿ ಮಾಲಾಧಾರ ಹಾಗೂ ಭಕ್ತರೊಂದಿಗೆ ಪಲ್ಲಕ್ಕಿ ಉತ್ಸವದೊಂದಿಗೆ ಅಗ್ಗಿ ಹಾಯುವ ಕಾರ್ಯಕ್ರಮ ಜರುಗಿತು. ಪಟ್ಟಣದ ಸೇರಿದಂತೆ ತಾಲೂಕಿನ ವಿವಿಧ ಗ್ರಾಮದ ಭಕ್ತರು ಬೆಳಗ್ಗೆಯಿಂದಲ್ಲೇ ದೇವಸ್ಥಾನಕ್ಕೆ ತೆರಳಿ ಕಾಯಿ, ಕರ್ಪೂರ, ನೈವಿದ್ಯೆ, ನೀಡಿ ದರ್ಶನ ಪಡೆದರು. ರಾತ್ರಿ 9ಕ್ಕೆ ಸೋಲಾಪುರ ಹಾಗೂ ಕಲಬುರ್ಗಿ ಜಿಲ್ಲೆಯ ಡೊಳ್ಳಿನ ಕಲಾವಿದರಿಂದ ಡೊಳ್ಳಿನ ಹಾಡಕಿ ಪದಗಳು ಹಾಗೂ ಇಡೀ ರಾತ್ರಿ ಜಾಗರಣೆ ಕಾರ್ಯಕ್ರಮ ಜರುಗಿತು.

ಪಲ್ಲಕ್ಕಿ ಉತ್ಸವದಲ್ಲಿ ಜಾತ್ರಾ ಮಹೋತ್ಸವದ ಅಧ್ಯಕ್ಷ ಅಪ್ಪು ವಾಡೇದ, ಬಸವರಾಜ ಹಾರಿವಾಳ, ರವಿ ಹಿರೇಮಠ, ಮಲ್ಲಪ್ಪ ಕೋಣಿನ, ಶಿವಾನಂದ ಬಾವೂರ, ವೀರಭದ್ರಪ್ಪ ತೋಟದ, ಸಂಗಪ್ಪ ಕೋಣಿನ, ಶೇಖಪ್ಪ ಹೂಗಾರ, ಮಾದೇವಿ ಮುಳವಾಡ, ನೀಲಮ್ಮ ಮಲಗೊಂಡ, ಶರಣು ಕೂಡಗಿ, ಸುನಂದ ವಾಡೇದ, ಬಸಮ್ಮ ಕೋಣಿನ, ಸವಿತಾ ಕಲ್ಯಾಣ, ಗೀತಾ ವಾಡೇದ, ಕಾಶಿಬಾಯಿ ಬಾವೂರ, ಶರಣಮ್ಮ ವಾಡೇದ, ಶಿವರಾಜ ಜಂಗಿ, ಮಹೇಶ ಹಿರೇಕುರಬರ, ಪ್ರಭುಗೌಡ ಪಾಟೀಲ, ಸದಾಶಿವಪ್ಪ ಹೊನವಾಡ, ಗರುರಾಜ ಬಾವೂರ, ರಾಘವೇಂದ್ರ ಕುಲಕರ್ಣಿ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಬಸವನಬಾಗೇವಾಡಿ ಪಟ್ಟಣದ ಮಿನಿ ವಿಧಾನಸೌಧ ಎದುರುಗಡೆ ಇರುವ ಕೋಣಿನವರ ತೋಟದಲ್ಲಿ ಶ್ರೀ ಶಿವಯೋಗೀಶ್ವರ ಜಾತ್ರಾ ಮಹೋತ್ಸವದಲ್ಲಿ ಪುರವಂತರು ಹಾಗೂ ಅಯ್ಯಪ್ಪ ಮಾಲಾಧಾರಿಗಳು ಅಗ್ಗಿ ಹಾಯ್ದರು.

ಸಮಾಚಾರ ಸಣ್ಣದಲ್ಲ

ಬಂದ್: ಮದ್ಯ ನಿಷೇಧಿಸಿ ಜಿಲ್ಲಾಧಿಕಾರಿ ಆದೇಶ

ವಿಜಯಪುರ: ಬಂದ್ ಹಿನ್ನೆಲೆಯಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಕರ್ನಾಟಕ ಅಬಕಾರಿ ಕಾಯ್ದೆ 1965 ರ ಕಲಂ 21ರ ಪ್ರಕಾರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಜಿಲ್ಲೆಯ ವಿಜಯಪುರ ನಗರ, ವಿಜಯಪುರ ತಾಲೂಕು, ದೇವರ ಹಿಪ್ಪರಗಿ ಪಟ್ಟಣ, ಸಿಂದಗಿ ಪಟ್ಟಣ, ಇಂಡಿ ಪಟ್ಟಣ,ತಿಕೋಟಾ ಪಟ್ಟಣ, ಮುದ್ದೇಬಿಹಾಳ ಪಟ್ಟಣ ಹಾಗೂ ಬಸವನ ಬಾಗೇವಾಡಿ ಪಟ್ಟಣಗಳಲ್ಲಿ ಮದ್ಯ ಮಾರಾಟ ನಿಷೇಧವು ಅವಶ್ಯವಿದ್ದ ಪ್ರಯುಕ್ತ ದಿನಾಂಕ: 29-12-2024 ರಂದು ರಾತ್ರಿ 12-00 ಗಂಟೆಯಿಂದ ದಿನಾಂಕ : 30-12-2024 ರಂದು ರಾತ್ರಿ 8-00 ಗಂಟೆಯವರೆಗೆ ಎಲ್ಲ ತರಹದ ಮದ್ಯ ಮಾರಾಟ, ಸಂಗ್ರಹಣೆ ಹಾಗೂ ಹಂಚಿಕೆಯನ್ನು ನಿಷೇಧಿಸಿ ಜಿಲ್ಲಾದಂಡಾಧಿಕಾರಿಗಳಾದ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ವಿದ್ಯುತ್ ವ್ಯತ್ಯಯ

ಕೊಲ್ಹಾರ: ತಾಲೂಕಿನ ಮಟ್ಯಾಳ ಉಪ ಕೇಂದ್ರ ದಿಂದ ವಿದ್ಯುತ್ ಸರಬರಾಜು ಕೇಂದ್ರಗಳಲ್ಲಿ ದಿನಾಂಕ 29-12-2024 ರಂದು ರವಿವಾರ ಮುಂಜಾನೆ 09:00 ಗಂಟೆಯಿಂದ ಸಾಯಂಕಾಲ 05:00 ಗಂಟೆಯವರೆಗೆ 110/11 ಕೆ ವ್ಹಿ ಮಟ್ಯಾಳ ವಿವಿ ಕೇಂದ್ರದಿಂದ ಹೋರಹೋಗುವ ಎಲ್ಲಾ 33 ಕೆ ವ್ಹಿ ಮತ್ತು 11 ಕೆ ವ್ಹಿ ಮಾರ್ಗದಲ್ಲಿ ಬರುವ ಬಳೂತಿ, ನಾಗರದಿನ್ನಿ, ಕುರುಬರದಿನ್ನಿ, ಚೀರಲದಿನ್ನಿ, ಗಣಿ, ಸಿದ್ದನಾಥ, ಯುಕೆಪಿ ಕೊಲ್ಹಾರ, ಆಸಂಗಿ, ಚಿಮ್ಮಲಗಿ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು ಗ್ರಾಹಕರು ಸಹಕರಿಸಬೇಕು ಎಂದು ಕಾರ್ಯನಿರ್ವಾಹಕ ಅಭಿಯಂತರರು ಕವಿಪ್ರನಿನಿ ವಿಜಯಪುರ ಪತ್ರಿಕಾ ಪ್ರಕಟಣೆಗೆ ತಿಳಿಸಿದ್ದಾರೆ.

ಅಧ್ಯಕ್ಷ, ಉಪಾಧ್ಯಕ್ಷರ ಅವಿರೋಧ ಆಯ್ಕೆ

ವಿಜಯಪುರ: ನಗರದ ಶ್ರೀ ಮಹಾಲಕ್ಷ್ಮೀ ಸಹಕಾರಿ ಬ್ಯಾಂಕಿನ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಮುಕುಂದ ಎಸ್.ಕುಲಕರ್ಣಿ ಹಾಗೂ ಉಪಾಧ್ಯಕ್ಷರಾಗಿ ವಿಕಾಸ ಅ. ಪದಕಿ ರವರು ಅವಿರೋಧವಾಗಿ ಆಯ್ಕೆಯಾದರು. ಈ ಸಂದರ್ಭದಲ್ಲಿ ನೂತನ ನಿರ್ದೇಶಕರುಗಳಾದ ವಿಜಯಕುಮಾರ ಜೋಶಿ, ಕೃಷ್ಣಾ ಗುನ್ನಾಳಕರ, ಗೋವಿಂದ ಜೋಶಿ, ಶ್ಯಾಮಸುಂದರ ಕುಲಕರ್ಣಿ, ಪವನ ಕುಲಕರ್ಣಿ, ರಾಧಾ ತಾವರಗೇರಿ, ವೀಣಾ ಟಂಕಸಾಲಿ, ಬಸವರಾಜ ಪತ್ತಾರ, ಸಚಿನ ಮದ್ದಿನಮಠ, ಪವನಕುಮಾರ ಮುರಾಳ, ವಿಶ್ವನಾಥ ತಳವಾರ ಚುನಾವಣಾಧಿಕಾರಿಯಾದ ರಿಟರ್ನಿಂಗ್ ಆಫೀಸರ್ ಮಹಾಲಕ್ಷ್ಮೀ ಸಹಕಾರಿ ಬ್ಯಾಂಕ್, ವಿಜಯಪುರ ಹಾಗೂ ಸಹಕಾರ ಸಂಘಗಳ ಸಹಾಯಕ ನಿರ್ಭಂಧಕರಾದ ಚೇತನ ಭಾವಿಕಟ್ಟಿ ರವರು ಘೋಷಿಸಿದರು. ಈ ಸಂದರ್ಭದಲ್ಲಿ ವ್ಯವಸ್ಥಾಪಕರಾದ ಪದ್ಮಾವತಿ ಕುಲಕರ್ಣಿ, ನಿದೇಶಕರಾದ ರಾಕೇಶ ಕುಲಕರ್ಣಿ, ಸದಸ್ಯರುಗಳಾದ ಗಿರೀಶ ಅಕ್ಕಲಕೋಟ, ಪ್ರಕಾಶ ಅಕ್ಕಲಕೋಟ, ಗೋವಿಂದ ಜೋಶಿ, ಪವನ ಜೋಶಿ, ಆದಿತ್ಯ ತಾವರಗೇರಿ, ದತ್ತಾತ್ರೇಯ ಜೋಶಿ, ಸಂಜು ದಿವಾಣಜಿ ಮುಂತಾದವರು ಉಪಸ್ಥಿತರಿದ್ದರು.

ನಾಳೆ ಬಂದ್ ಹೋರಾಟಕ್ಕೆ ಬೆಂಬಲ

ವಿಜಯಪುರ: ಡಿಸೆಂಬರ್ 30 ರಂದು ಬೆಳಿಗ್ಗೆ 8 ಘಂಟಗೆ ವಿಜಯಪುರ ಬಂದ್ ಕರೆಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಅಂಬೇಡ್ಕರ್‌ವಾದ) ಜಿಲ್ಲಾ ಸಮಿತಿಯಿಂದ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸುತ್ತಿದೆ. ಸಂಸತ್ ಭವನದಲ್ಲಿ ಕೇಂದ್ರ ಗೃಹ ಮಂತ್ರಿಗಳ ಹೇಳಿಕೆಯನ್ನು ಖಂಡಿಸಿ ಅಹಿಂದ ದಲಿತ ಪರ ಸಂಘಟನೆಗಳ ಒಕ್ಕೂಟ, ಹಾಗೂ ಅಂಬೇಡ್ಕರ್ ವಿಚಾರವಾದಿಗಳ ಬಳಗ, ರೈತ ಸಂಘಟನೆ, ಕಾರ್ಮಿಕ ಸಂಘಟನೆ, ಮಹಿಳಾ ಸಂಘಟನೆ, ಶೋಷಿತ ವರ್ಗಗಳ ಸಂಘಟನೆ, ಎಲ್ಲರ ನೇತೃತ್ವದಲ್ಲಿ ಬಂದ್ ಕರೆಗೆ ಸಂಪೂರ್ಣವಾದ ಬೆಂಬಲವನ್ನು ವ್ಯಕ್ತಪಡಿಸುತ್ತಿದೆ. ಕಾರಣ ಗ್ರಾಮ ಪಂಚಾಯತಿಯ ಸದಸ್ಯರು, ಮಹಿಳಾ ಒಕ್ಕೂಟ, ವಿದ್ಯಾರ್ಥಿ ಒಕ್ಕೂಟ, ತಾಲೂಕಾ ಸಮಿತಿ, ಜಿಲ್ಲಾ ಸಮಿತಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಭಾಗವಹಿಸಿ 30.12.2024 ರಂದು ವಿಜಯಪುರ ಜಿಲ್ಲಾ ಬಂದ ಕರೆ ಸಂಪೂರ್ಣವಾಗಿ ಯಶಸ್ವಿಗೊಳಿಸಬೇಕೆಂದು ಸಂಚಾಲಕರು ಸಂಜು ವೈ. ಕಂಬಾಗಿ ಪ್ರಕಟಣೆಯ ಮೂಲಕ ಕೋರಿದ್ದಾರೆ.

ವಿ+
ಸೋಮವಾರ

ಡಾ.ಸಿಂಗ್ ನಿಧನಕ್ಕೆ ಸಂತಾಪ

ಕೊಲ್ಹಾರ: ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ನಿಧನಕ್ಕೆ ಕೊಲ್ಹಾರ ಪಟ್ಟಣದ ಮಹಾತ್ಮ ಗಾಂಧೀಜಿ ವೃತ್ತದಲ್ಲಿ ಕಾಂಗ್ರೆಸ್ ಮುಖಂಡರು ಶನಿವಾರ ಮೌನಾಚರಣೆಯ ಮೂಲಕ ಸಂತಾಪ ಸೂಚಿಸಿದರು.

ಈ ಸಂದರ್ಭದಲ್ಲಿ ಕಾಂಗ್ರೆಸ ಮುಖಂಡ ಎಂ.ಆರ್ ಕಲಾದಗಿ ಮಾತನಾಡಿ, ಶ್ರೇಷ್ಠ ಆರ್ಥಿಕ ತಜ್ಞರಾಗಿದ್ದ ಮನಮೋಹನ ಸಿಂಗ್ ತಮ್ಮ ಆಡಳಿತದ ಅವದಿಯಲ್ಲಿ ದೇಶವನ್ನು ಮುನ್ನಡೆಸಿದ್ದರು. ಅವರ ಆಡಳಿತ ಅನುಕರಣೀಯ ಎಂದರು.

ಕಾಂಗ್ರೆಸ ಹಿರಿಯ ಮುಖಂಡರಾದ ಉಸ್ಮಾನಪಟೇಲ ಖಾನ್ ಮಾತನಾಡಿ, ಡಾ.ಮನಮೋಹನ ಸಿಂಗ್ ಭಾರತದ ಶ್ರೇಷ್ಠ ನಾಯಕರಲ್ಲಿ ಪ್ರಥಮರು, ಭಾರತ ಏಳ್ಗೆಗೆ ಅನೇಕ ಯೋಜನೆಗಳ ಮೂಲಕ ಅಪಾರ ಕೊಡುಗೆ ನೀಡಿ ದೇಶಕ್ಕೆ ಭದ್ರ ಅಡಿಪಾಯ ಹಾಕಿದವರು ಎಂದು ಹೇಳಿದರು.

ಈ ಸಂದರ್ಭ ಪ.ಪಂ ಸದಸ್ಯರಾದ ತೌಸಿಪ್ ಗಿರಗಾಂವಿ, ದಸ್ತಗೀರ ಕಲಾದಗಿ, ನಿಂಗಪ್ಪ ಗಣಿ, ಕಾಂಗ್ರೆಸ ಮುಖಂಡರಾದ ದಾದಾ ಗೂಗಿಹಾಳ, ಹನೀಪ ಮಕಾನದಾರ, ದಶರಥ ಈಟಿ, ಅನ್ವರ ಕಂಕರಪೀರ, ಮುಸ್ಕಾನ್ ಶಿರಬೂರ, ನೂರ ತಹಶೀಲ್ದಾರ, ಅಲ್ಲಾಭಕ್ಷ ಕಾಖಂಡಕಿ, ರಫೀಕ ಮನ್ನಾಬಾಯಿ, ಗೈಬುಸಾಬ ಕಂಕರಪೀರ, ತಿಪ್ಪಣ್ಣ ಕುದರಿ, ದಸ್ತಗೀರ ಬಾಗವಾನ, ಬಾಬು ಮುಲ್ಲಾ ಸಹಿತ ಅನೇಕ ಕಾಂಗ್ರೆಸ ಮುಖಂಡರು, ಪ.ಪಂ ಸದಸ್ಯರು ಸಹಿತ ಇನ್ನಿತರರು ಇದ್ದರು.

ಕಾಂಗ್ರೆಸ್ ದಲಿತರನ್ನು ಕೇವಲ ಓಟಿಗಾಗಿ ಬಳಸಿದೆ: ಸಂಸದ

ವಿಜಯಪುರ: ದಲಿತರ ಸಲುವಾಗಿ ಕಾಂಗ್ರೆಸ್ ಮೊಸಳೆ ಕಣ್ಣೀರು ಹಾಕುವ ಪ್ರವೃತ್ತಿ ರೂಢಿಸಿಕೊಂಡಿದೆ. ದಲಿತರ ಉದ್ದಾರ ಮಾಡುತ್ತೇವೆ ಎಂದು ಬಾಯಲ್ಲಿ ಹೇಳಿ, ಏನೂ ಮಾಡಲಿಲ್ಲ. ಕಾಂಗ್ರೆಸ್ ದಲಿತರನ್ನು ಕೇವಲ ಓಟಿಗಾಗಿ ಉಪಯೋಗಿಸಿಕೊಳ್ಳುತ್ತಿದೆ ಎಂದು ವಿಜಯಪುರ ಸಂಸದ ರಮೇಶ ಜಿಗಜಿಣಗಿ ಹೇಳಿದರು.

ನಗರದ ಜಿಲ್ಲಾ ಬಿಜೆಪಿ ಕಾರ್ಯಾಲಯದಲ್ಲಿ ಜಂಟಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಕಾಂಗ್ರೆಸ್ಸಿಗರು ಬಾಬಾಸಾಹೇಬ್ ಅಂಬೇಡ್ಕರಿಗೆ ಅವಮಾನ ಮಾಡಿದ್ದಾರೆ. ಅಂಬೇಡ್ಕರ ಅವರನ್ನು ಸೋಲಿಸಿದವರಿಗೆ ಪ್ರಶಸ್ತಿ ಕೊಟ್ಟರು, ಇವರಿಗೆ ಕೊಡಲಿಲ್ಲ. ಮೊಸಳೆ ಕಣ್ಣೀರು ಸುರಿಸುವುದು ಬಿಡಬೇಕು, ಅಮೀತ್ ಶಾ ರಾಜೀನಾಮೆ ಕೊಡಬೇಕು ಎಂಬ ನಾಟಕ ಬಹಳದಿನ ನಡೆಯೋದಿಲ್ಲ. ಕಾಂಗ್ರೆಸ್ ಮೊಸಳೆ ಕಣ್ಣೀರಿಗೆ ಜನರು ಮನಸೋಲ ಬಾರದು ಎಂದು ಮನವಿ ಮಾಡಿದರು. ಅಮೀತ್ ಶಾ ಹೇಳಿಕೆಯನ್ನು ತಿರುಚಿ ಹೇಳುವ ಕೆಲಸ ಮಾಡುತ್ತಿದ್ದಾರೆ. ಕಾಂಗ್ರೆಸ್ ನವರು ಒಳಸಂಚಿನಿಂದ ಹೀಗೆ ಮಾಡುತ್ತಿದ್ದಾರೆ. ಅಂಬೇಡ್ಕರರ ಅಂತ್ಯ ಸಂಸ್ಕಾರಕ್ಕೆ ಆರು ಅಡಿ ಜಾಗ ಕೊಟ್ಟಿಲ್ಲ, ಸಂದರ್ಭ ಬಂದಾಗ ನಾನು ಅವರ ಬಗ್ಗೆ ಹೇಳುತ್ತೇನೆ ಎಂದರು.

ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಎಸ್.ಪಾಟೀಲ ಕುಚಬಾಳ ಮಾತನಾಡಿ, ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ನಿರಂತರವಾಗಿ ಅವಮಾನಗಳನ್ನ, ಅಪಮಾನಗಳನ್ನ ಮಾಡಿಕೊಂಡು ಬಂದಿರುವ ಕಾಂಗ್ರೆಸ್ ಇಂದು ಅವರ ಹೆಸರಿನ ಮೇಲೆ ರಾಜಕಾರಣ ಮಾಡುತ್ತಿದ್ದಾರೆ.

ಅಂಬೇಡ್ಕರ ಅವರಿಗೆ ಯಾವುದು ಪ್ರಶಸ್ತಿ ಕೊಡಲಿಲ್ಲ. ಅಟಲಬಿಹಾರಿ ವಾಜಪೇಯಿ ಪ್ರಧಾನಿ ಇದ್ದಾಗ ಬಿಜೆಪಿ ಅವರಿಗೆ ಭಾರತರತ್ನ ಕೊಡಲಾಗಿದೆ. ಅಂಬೇಡ್ಕರ ಅವರಿಗೆ ಒಂದು ಸ್ಮಾರಕ ಕಟ್ಟಲಿಲ್ಲ. ಯಾವ ನೈತಿಕತಯಿಂದ ಇವರು ಮಾತನಾಡುತ್ತಿದ್ದಾರೆ. ದಲಿತರಿಗಾಗಿ ಇಟ್ಟಿದ್ದ 25 ಸಾವಿರ ಕೋಟಿ ಹಣ ಎಲ್ಲಿ ಹೋಗಿದೆ ಎಂಬುದು ತಿಳಿಸಿ. ಕಾಂಗ್ರೆಸ್ ಅಂದರೆ ಅದು ಸುಡುವ ಮನೆ ಎಂದು ಅಂಬೇಡ್ಕರ ಹೇಳಿದ್ದಾರೆ. ದೇಶದ ಜನರ ಎದುರು ಕಾಂಗ್ರೆಸ್ ಬೆತ್ತಲಾಗಿದೆ.

ಈ ವೇಳೆ ಮಾಜಿ ಶಾಸಕರಾದ ರಮೇಶ ಭೂಸನೂರ, ಸೋಮನಗೌಡ ಪಾಟೀಲ ಸಾಸನೂರ, ಮುಖಂಡರಾದ ವಿಜುಗೌಡ ಪಾಟೀಲ, ಚಂದ್ರಶೇಖರ ಕವಟಗಿ, ಕಾಸುಗೌಡ ಬಿರಾದಾರ, ಮಳುಗೌಡ ಪಾಟೀಲ, ಪ್ರೇಮಾನಂದ ಬಿರಾದಾರ, ಸಂಜೀವ ಐಹೊಳ್ಳಿ, ವಿವೇಕಾನಂದ ಡಬ್ಬಿ, ಈರಣ್ಣ ರಾವೂರ, ವಿಜಯ ಜೋಶಿ ಇತರರು ಇದ್ದರು.

ಡಾ.ಮನಮೋಹನಸಿಂಗ್ ಪಕ್ಷಭೇಧ ಮಾಡದ ಮಹಾನ್ ವ್ಯಕ್ತಿ

ಮಾಜಿ ಪ್ರಧಾನಿ ಡಾ.ಮನಮೋಹನಸಿಂಗ್ ಅವರು ಬಹಳ ಶ್ರೇಷ್ಠ ವ್ಯಕ್ತಿ. ದೇಶದ ಆರ್ಥಿಕತೆಗೆ ದೊಡ್ಡ ಕೊಡುಗೆ ನೀಡಿದ್ದಾರೆ. ಅವರು ಪ್ರಧಾನಿಗಳಾದಾಗ ನಾನು ವಿರೋಧ ಪಕ್ಷದಲ್ಲಿ ಸಂಸದನಾಗಿದ್ದೆ. ಜಿಲ್ಲೆಯ ಇಂಡಿ ಭಾಗದಲ್ಲಿ ಸುಮಾರು 76 ಹಳ್ಳಿಗಳಿಗೆ ಕುಡಿಯುವ ನೀರಿನ ಸಮಸ್ಯೆ ಕುರಿತು ಅವರಿಗೆ ಭೇಟಿಯಾಗಿ ಪತ್ರ ಕೊಟ್ಟಾಗ ಕೂಡಲೇ ಸ್ಪಂದಿಸಿ ಹಣ ಬಿಡುಗಡೆ ಮಾಡಿದರು. ಕೂಡಲೇ ನಾನು ಅವರ ಕಾಲಿಗೆ ಬಿದ್ದೆ. ಎಂದೂ ಪಕ್ಷಭೇಧ ಮಾಡದ ಮಹಾನ್ ವ್ಯಕ್ತಿ. ಅವರಿಗೆ ಭಾರತರತ್ನ ಕೊಡುವುದಾದರೆ ನಾನು ಖಂಡಿತ ಬೆಂಬಲಿಸುವೆ ಎಂದು ಸಂಸದ ರಮೇಶ ಜಿಗಜಿಣಗಿ ಸ್ಮರಿಸಿಕೊಂಡರು.

ದಲಿತ ಸಂಘಟನೆಗಳಿಂದ ಶಾ ಪ್ರತಿಕೃತಿ ದಹಿಸಿ ಪ್ರತಿಭಟನೆ

ವಿಜಯಪುರ: ಸಂವಿಧಾನಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರ ಬಗ್ಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವಮಾನಕಾರಿ ಹೇಳಿಕೆ ನೀಡಿದ್ದಾರೆಂದು ಆರೋಪಿಸಿ ಶನಿವಾರ ವಿವಿಧ ದಲಿತರ ಸಂಘಟನೆಗಳು ಅಮಿತ್ ಶಾ ಅವರ ಅಣುಕು ಶವಯಾತ್ರೆ ಮಾಡಿ, ಪ್ರತಿಕೃತಿ ದಹಿಸಿ ಉಗ್ರ ಪ್ರತಿಭಟನೆ ನಡೆಸಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಡಾ.ಬಿ.ಆರ್.ಅಂಬೇಡ್ಕರ್ ವೃತ್ತದಲ್ಲಿ ಜಮಾಯಿಸಿದ ದಲಿತಪರ, ಪ್ರಗತಿಪರ ನೂರಾರು ಕಾರ್ಯಕರ್ತರು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಕೃತಿ ದಹಿಸಿ ಆಕ್ರೋಶ ಹೊರಹಾಕಿದರು. ಸಂವಿಧಾನಕರ್ತ ಡಾ.ಬಿ.ಆರ್. ಅಂಬೇಡ್ಕರ್ ರವರ ಬಗ್ಗೆ ಅಪರಾಧಿಕ ಹಿನ್ನೆಲೆಯುಳ್ಳ ಗೃಹ ಸಚಿವ ಅಮಿತ್ ಶಾ ಅತ್ಯಂತ ಹಗುರವಾಗಿ, ಅವಮಾನಕರ ರೀತಿಯಲ್ಲಿ ಮಾತನಾಡಿದ್ದು, ಅವರ ಮೇಲೆ ಕ್ರಮ ಜರುಗಿಸಬೇಕು. ಕೂಡಲೇ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿ ಗಡಿಪಾರು ಮಾಡಬೇಕೆಂದು ಆಗ್ರಹಿಸಿ ದಲಿತ ಸಂಘಟನೆಗಳ ಮುಖಂಡರು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರಿಗೆ ಮನವಿ ಸಲ್ಲಿಸಿದರು.

ದಲಿತ ಮುಖಂಡ ಜೀತೇಂದ್ರ ಕಾಂಬಳೆ ಮಾತನಾಡಿ, ವ್ಯಾಪಾರಸ್ಥರು ಸ್ವಯಂಪ್ರೇರಿತವಾಗಿ ಅಂಗಡಿಗಳನ್ನು ಬಂದ್ ಮಾಡಿ ನಮ್ಮ ಹೋರಾಟಕ್ಕೆ ಬೆಂಬಲ ಸೂಚಿಸಿದ್ದಾರೆ. ನಾವು ಅಧಿಕೃತವಾಗಿ ಜಿಲ್ಲಾ ಬಂದ್‌ಗೆ ಕರೆ ಕೊಡದಿದ್ದರೂ ಪೊಲೀಸ್ ವರಿಷ್ಠಾಧಿಕಾರಿಗಳು, ಇತರೆ ಪೊಲೀಸ್ ಅಧಿಕಾರಿಗಳು ನಮಗೆ ಪ್ರತಿಭಟನೆ ನಡೆಸಲು ಅವಕಾಶ ಮಾಡಿಕೊಟ್ಟಿದ್ದಾರೆ. ಮಾಜಿ ಪ್ರಧಾನಿ ಡಾ.ಸಿಂಗ್ ಅವರ ಬಗ್ಗೆ ನಮಗೂ ಗೌರವವಿದೆ. ಕಾಂಗ್ರೆಸ್ ನಾಯಕರು, ದಲಿತ ಸಂಘಟನೆಗಳ ಮೇಲೆ ಕಾಂಗ್ರೆಸ್ ಸಿದ್ಧಾಂತ ಹೇರುವುದನ್ನು ನಾವು ಒಪ್ಪುವುದಿಲ್ಲ. ನಾವು ಯಾವುದೇ ಪಕ್ಷದ ಗುಲಾಮರಲ್ಲ. ಕೇಂದ್ರದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವ ಗೃಹ ಸಚಿವ ಅಮಿತ್ ಶಾ ಜಗತ್ತಿಗೆ ಮಾದರಿಯಾಗುವಂತೆ ಭಾರತಕ್ಕೆ ಸಂವಿಧಾನ ರಚಿಸಿ ಕೊಟ್ಟ ಭಾರತರತ್ನ ಅಂಬೇಡ್ಕರ್ ಅವರ ಬಗ್ಗೆ ಅವಮಾನಿಸುವ ರೀತಿಯಲ್ಲಿ ಮಾತನಾಡಿರುವ ತೀವ್ರ ಖಂಡನೀಯ. ಕೂಡಲೇ ಅವರನ್ನು ಸಚಿವ ಸ್ಥಾನದಿಂದ ವಜಾಗೊಳಿಸಿ, ಗಡಿಪಾರು ಮಾಡಬೇಕೆಂದು ಕಾಂಬಳೆ ಆಗ್ರಹಿಸಿದರು.

ಹಲವಾರು ದಲಿತಪರ, ಪ್ರಗತಿಪರ ಸಂಘಟನೆಗಳ ಮುಖಂಡರು, ನೂರಾರು ಕಾರ್ಯಕರ್ತರು ಭಾಗಿಯಾಗಿದ್ದರು.

ದಲಿತ ಸಂಘಟನೆಗಳ ಮುಖಂಡರು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರಿಗೆ ಮನವಿ ಸಲ್ಲಿಸಿದರು.

ಶ್ರೇಷ್ಠ ಆರ್ಥಿಕ ತಜ್ಞ ಡಾ.ಸಿಂಗ್

ತಾಳಿಕೋಟಿ: ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ರ ನಿಧನದ ಹಿನ್ನೆಲೆಯಲ್ಲಿ ಇಲ್ಲಿಯ ಬ್ಲಾಕ್ ಕಾಂಗ್ರೆಸ್ ನ ಪದಾಧಿಕಾರಿಗಳು ಹಾಗೂ ಮುಖಂಡರು ಶನಿವಾರ ಪಕ್ಷದ ಕಾರ್ಯಾಲಯದಲ್ಲಿ ಶ್ರದ್ಧಾಂಜಲಿ ಸಭೆ ನಡೆಸಿದರು.

ಈ ಸಂದರ್ಭದಲ್ಲಿ ಪಕ್ಷದ ಮುಖಂಡರಾದ ಪ್ರಭುಗೌಡ ಮದರಕಲ್ಲ ಮಾತನಾಡಿ ಮಾಜಿ ಪ್ರಧಾನಿ ಡಾ. ಮನಮೋಹನ ಸಿಂಗ್ ಅವರು ಈ ದೇಶ ಕಂಡ ಧೀಮಂತ ನಾಯಕ, ಶ್ರೇಷ್ಠ ಆರ್ಥಿಕ ತಜ್ಞ ರಾಗಿದ್ದು 90ರ ದಶಕದಲ್ಲಿ ಆರ್ಥಿಕ ವ್ಯವಸ್ಥೆ ಸುಧಾರಿಸಲು ಅವರು ನೀಡಿದ ಜನಪರ ಆರ್ಥಿಕ ಯೋಜನೆಗಳು ಇತಿಹಾಸದಲ್ಲಿ ಅಜರಾಮವಾಗಿವುಳಿಯುವಂತಹವುಗಳಾಗಿವೆ.ಅವರೊಬ್ಬ ಮಾದರಿ ರಾಜಕಾರಣಿಯಾಗಿದ್ದರು ಅವರ ಬದುಕಿನ ಆದರ್ಶಗಳನ್ನು ನಾವೆಲ್ಲರೂ ಅನುಸರಿಸುವ ಅಗತ್ಯ ಇದೆ ಎಂದರು.

ಕಾಂಗ್ರೆಸ್ ಮಜ್ದೂರ್ ಘಟಕದ ತಾಲೂಕ ಅಧ್ಯಕ್ಷ ಸಂಗನಗೌಡ ಅಸ್ಕಿ ಮಾತನಾಡಿದರು. ಆರಂಭದಲ್ಲಿ ಒಂದು ನಿಮಿಷಗಳ ಕಾಲ ಮೌನ ಆಚರಣೆ ಮಾಡಲಾಯಿತು. ಈ ಸಮಯದಲ್ಲಿ ಜಿಲ್ಲಾ ಉಪಾಧ್ಯಕ್ಷ ಸಿದ್ದನಗೌಡ ಪಾಟೀಲ ನಾವದಗಿ,ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಮಹಿಬೂಬ ಚೋರಗಸ್ತಿ, ರಾಜ್ಯ ಅಲ್ಪಸಂಖ್ಯಾತ ವಿಭಾಗದ ಮಾಜಿ ಕಾರ್ಯದರ್ಶಿ ಮಹೆಬೂಬಶಾ ಮಕಾನದಾರ, ಎಂ.ಎ.ಮೇತ್ರಿ, ಮೋದಿನಸಾ ನಗಾರ್ಚಿ, ಮೆಹಬೂಬ ಕೆಂಭಾವಿ, ಫಯಾಜ್ ಉತ್ನಾಳ, ಸದ್ದಾಮ್ ಹೊನ್ನಳ್ಳಿ, ಆಸೀಫ್ ಕೆಂಭಾವಿ, ರಫೀಕ್ ಬೇಪಾರಿ ಮತ್ತಿತರರು ಇದ್ದರು.

ವಿಪ್ರ ಪ್ರಿಮಿಯರ್ ಲೀಗ್ ಪಂದ್ಯಾವಳಿಗೆ ಚಾಲನೆ

ವಿಜಯಪುರ: ವಿಪ್ರ ಪ್ರಿಮಿಯರ್ ಲೀಗ ಕ್ರಿಕೆಟ್ ಪಂದ್ಯಾವಳಿಗೆ ಶನಿವಾರ ನಗರದ ಉತ್ತರಾಧಿಮಠದ ಆವರಣದಲ್ಲಿ ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಗಿರೀಶ್ ನೀಲಗುಂದ ಉದ್ಘಾಟಿಸಿದರು. ಈ ವೇಳೆ ಅವರು ಮಾತನಾಡಿ, ಬ್ರಾಹ್ಮಣ ಸಮುದಾಯದ ಒಗ್ಗಟ್ಟು ಮತ್ತು ಏಕತೆ ಬೆಳೆಸಲು ವಿಪ್ರ ಪ್ರೀಮಿಯರ ಕ್ರಿಕೆಟ್ ಪಂದ್ಯಾವಳಿ ಆಯೋಜಿಸಲಾಗಿದೆ. ಮುಂಬರುವ ದಿನಗಳಲ್ಲಿ ಅಖಿಲ ಭಾರತ ಬ್ರಾಹ್ಮಣ ಮಹಾಸಂಘದ ವತಿಯಿಂದ ರಾಜ್ಯ ಮಟ್ಟದ ಕ್ರಿಕೆಟ್ ಪಂದ್ಯಾವಳಿ ಆಯೋಜನೆ ಮಾಡಲು ಚಿಂತನೆ ಮಾಡಲಾಗಿದೆ. ಆದ್ದರಿಂದ ಬ್ರಾಹ್ಮಣ ಸಮುದಾಯದ ಯುವಕರ ತಂಡಗಳನ್ನು ರಚಿಸಲು ಕರೆ ನೀಡಿದರು. ಈ ವೇಳೆ ಪ್ರಸನ್ನಾಚಾರ್ಯ ಮನಗೂಳಿ, ಪ್ರಭಂಜನ ಮನಗೂಳಿ, ಕೃಪಾಚಾರ್ಯ ಗಲಗಲಿ, ಶ್ರೀಧರ, ಸುದನ್ವಾ ಸಂಗಮ, ಪ್ರಸಾದ ಜೋಶಿ, ರೋಹನ ಆಪ್ಟೆ, ರಾಹುಲ ಆಪ್ಟೆ, ಪವನ ಕುಲಕರ್ಣಿ ಸೇರಿದಂತೆ ಹಲವರು ಇದ್ದರು.

{ಶಿವಾನಂದ ಪಾಟೀಲ್} ಸಕ್ಕರೆ ಖಾತೆ ಸಚಿವ

ತೊಗರಿ ಬೆಳೆಗೆ ಬೆಂಬಲ ಬೆಲೆ ಹೆಚ್ಚಳ ಸಾಧ್ಯವಿಲ್ಲ. ಪರಿಹಾರ ನೀಡಲು ಸರಕಾರದಿಂದ ಸಾಧ್ಯವಿಲ್ಲ. ಆದರೆ ಬೆಂಬಲ ಬೆಲೆಯಡಿ ರೈತರ ತೊಗರಿ ಖರೀದಿಗೆ ಅವಕಾಶ ಕಲ್ಪಿಸಲಾಗಿದೆ.

ಹೇಮರಡ್ಡಿ ಮೇಟಿ ನಾಮನಿರ್ದೇಶನ

ಧಾರವಾಡ ಕೃಷಿ ವಿವಿಯ ರಿಸರ್ಚ್ ಕೌನ್ಸಿಲ್: 2 ವರ್ಷಗಳ ಅವಧಿ

ಮುದ್ದೇಬಿಹಾಳ: ತಾಲೂಕಿನ ಬಸರಕೋಡದ ಪ್ರಗತಿಪರ ರೈತ, ಜಿಪಂ ಮಾಜಿ ಸದಸ್ಯ ಹೇಮರಡ್ಡಿ ಮೇಟಿ ಅವರನ್ನು ಧಾರವಾಡ ಕೃಷಿ ವಿಶ್ವವಿದ್ಯಾಲಯದ ಕುಲಪತಿಗಳ ಅಧ್ಯಕ್ಷತೆಯ ರಿಸರ್ಚ್ ಕೌನ್ಸಿಲ್ (ಕೃಷಿ ಸಂಶೋಧನಾ ಪರಿಷತ್)ಗೆ ಸದಸ್ಯರನ್ನಾಗಿಸಿ ಎರಡು ವರ್ಷಗಳ ಅವಧಿಗೆ ನಾಮನಿರ್ದೇಶನ ಮಾಡಿ ವಿವಿಯ ರಜಿಸ್ಟ್ರಾರ್ ಜಯಲಕ್ಷ್ಮೀ ಅವರು ಆದೇಶ ಹೊರಡಿಸಿರುವುದು ಈ ಭಾಗದ ರೈತರ ಸಂಭ್ರಮಕ್ಕೆ ಕಾರಣವಾಗಿದೆ.

ಕೃಷಿಯಲ್ಲಿ ವಿಶೇಷ ಅನುಭವವುಳ್ಳ ಪ್ರಗತಿಪರ ರೈತ ವಿಭಾಗದಿಂದ ಕೃಷಿ ಮತ್ತು ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿನ ವಿಶೇಷ ಅನುಭವ, ಸೇವೆ ಪರಿಗಣಿಸಿ ವಿವಿಯ ಕುಲಪತಿ ಡಾ। ಪಿ.ಎಲ್.ಪಾಟೀಲ ಅವರ ಸೂಚನೆ ಮೇರೆಗೆ ಈ ನಾಮನಿರ್ದೇಶನ ಮಾಡಲಾಗಿದೆ. ಕೌನ್ಸಿಲ್‌ನಲ್ಲಿ ಕೃಷಿ, ತೋಟಗಾರಿಕೆ, ರೇಷ್ಮೆ ಸೇರಿ ಪೂರಕ ಸರಕಾರಿ ಇಲಾಖೆಗಳ ನಿರ್ದೇಶಕರು, ವಿಜ್ಞಾನಿಗಳು, ಸಂಶೋಧಕರು, ವಿವಿಯ ಎಚ್‌ಓಡಿಗಳು, ನವದೆಹಲಿಯ ಐಸಿಎಆರ್‌ನ ಎಡಿಜಿ ಸೇರಿ 54 ಸದಸ್ಯರಲ್ಲಿ ಇವರೂ ಒಬ್ಬರಾಗಿದ್ದಾರೆ.

> **ಕೋಟ್: ಕೃಷಿ ವಿವಿ ಕುಲಪತಿ ಡಾ। ಪಿ.ಎಲ್.ಪಾಟೀಲ ಅವರು ಕೆಲ ದಿನಗಳ ಹಿಂದೆ ಬಸರಕೋಡಕ್ಕೆ ವಿಚಾರ ಸಂಕಿರಣವೊಂದರಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದಾಗ ನನ್ನ ಕೃಷಿ ಚಟುವಟಿಕೆಯನ್ನು ಪ್ರತ್ಯಕ್ಷವಾಗಿ ಕಂಡು ಮಾಹಿತಿ ಪಡೆದುಕೊಂಡಿದ್ದು ಈ ನೇಮಕಕ್ಕೆ ಕಾರಣವಾಗಿದೆ. ಕೃಷಿಯಲ್ಲಿ ಬರುವ ಎಲ್ಲ ವಿಧದ ಮಾಹಿತಿ ಬಗ್ಗೆ ಸಂಶೋಧನೆ ನಡೆಸುವುದಕ್ಕೆ ಸಹಕರಿಸುವುದು ಕೌನ್ಸಿಲ್ ಸದಸ್ಯರ ಕೆಲಸವಾಗಿದೆ.**
>
> -ಹೇಮರಡ್ಡಿ ಮೇಟಿ, ಬಸರಕೋಡ.



ಮುದ್ದೇಬಿಹಾಳ ಧಾರವಾಡ ಕೃಷಿ ವಿವಿ ಕುಲಪತಿ ಡಾ. ಪಿ.ಎಲ್.ಪಾಟೀಲ ಅವರು ಹೇಮರಡ್ಡಿ ಮೇಟಿ ಅವರಿಗೆ ಆದೇಶ ಪತ್ರ ಹಸ್ತಾಂತರಿಸಿದರು.

> **ನಮ್ಮ ಆತ್ಮೀಯರು, ಪ್ರಗತಿಪರ ರೈತರೂ ಆಗಿರುವ ಹೇಮಣ್ಣ ಸಾಹುಕಾರ ಅವರು ರಿಸರ್ಚ್ ಕೌನ್ಸಿಲ್‌ಗೆ ನಾಮನಿರ್ದೇಶನಗೊಂಡಿರುವುದು ಹರ್ಷ ತಂದು ಕೊಟ್ಟಿದೆ. ಇವರ ಸೇವೆ ಧಾರವಾಡ ಕೃಷಿ ವಿವಿ ವ್ಯಾಪ್ತಿ ಮಾತ್ರವಲ್ಲದೆ ಇಡೀ ರಾಜ್ಯದ ರೈತರಿಗೆ ಅತ್ಯುಪಯುಕ್ತವಾಗಲಿ ಎಂದು ರೈತ ಮೋರ್ಚಾ ರಾಜ್ಯಾಧ್ಯಕ್ಷನಾಗಿ ಅಭಿನಂದಿಸುತ್ತೇನೆ.**
>
> **-ಎ.ಎಸ್.ಪಾಟೀಲ ನಡಹಳ್ಳಿ,**
> ಮಾಜಿ ಶಾಸಕರು

ಗುರುಸ್ಪಂದನಾ ಪೆನಲ್ ನಾಮಪತ್ರ ಸಲ್ಲಿಕೆ

ವಿಜಯಪುರ: ಅವಳಿ ಜಿಲ್ಲೆಯ ಪ್ರತಿಷ್ಠಿತ ಜಿಒಸಿಸಿ ಬ್ಯಾಂಕಿನ ಆಡಳಿತ ಮಂಡಳಿ ಚುನಾವಣೆಗೆ ಗುರುಸ್ಪಂದನಾ ಪೆನಲ್ ವತಿಯಿಂದ ನಾಮಪತ್ರ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕಿನ ಅಧ್ಯಕ್ಷ ಅರ್ಜುನ ಲಮಾಣಿ ಹಾಗೂ ನಿರ್ದೇಶಕ ಹಣಮಂತ ಕೊಣದಿ ಮಾತನಾಡಿ, 116 ವರ್ಷಗಳ ಇತಿಹಾಸ ಹೊಂದಿರುವ ನಮ್ಮ ಬ್ಯಾಂಕು ಪ್ರಗತಿಪಥದಲ್ಲಿದೆ. ಈ ಸಲ 1.75 ಕೋಟಿ ನಿವ್ವಳ ಲಾಭ ಗಳಿಸಿದ್ದು ಅವಳಿ ಜಿಲ್ಲೆಯಲ್ಲಿ 12 ಶಾಖೆಗಳನ್ನು ಹೊಂದಿದೆ, ನೌಕರರ ಅನುಕೂಲಕ್ಕಾಗಿ ಬಡ್ಡಿ ದರವನ್ನು ಇಳಿಸಲಾಗಿದ್ದು ವೈಯಕ್ತಿಕ ಸಾಲ 12 ಲಕ್ಷದ ವರೆಗೆ ನೀಡಲಾಗುತಿದೆ, ಬ್ಯಾಂಕಿನ ಕಾರ್ಯವ್ಯಾಪ್ತಿಯೂ ಅವಳಿ ಜಿಲ್ಲೆಯಲ್ಲದೇ ಕಲಬುರ್ಗಿ, ಬೆಳಗಾವಿ, ಕೊಪ್ಪಳ, ರಾಯಚೂರ, ಗದಗ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ, ನೌಕರರ ಅನುಕೂಲಕ್ಕಾಗಿ ಸಾಕಷ್ಟು ಯೋಜನೆಗಳನ್ನು ಹಮ್ಮಿಕೊಳ್ಳ ಲಾಗಿದ್ದು ನಮ್ಮ ಗುರುಸ್ಪಂದನಾ ಪೆನಲ್‌ನ 9 ಅಭ್ಯರ್ಥಿಗಳಿಗೂ ಮತ ನೀಡಿ ಬೆಂಬಲಿಸಿ ಆಶೀರ್ವದಿಸಬೇಕೆಂದು ವಿನಂತಿಸಕೊಂಡರು. ಬಾಗಲಕೋಟ ಜಿಲ್ಲಾ ಶಿಕ್ಷಕ ಸಂಘದ ಅಧ್ಯಕ್ಷ ಬಸವರಾಜ ಬಾಗೇನ್ನವರ, ಅಲ್ಲಾಭಕ್ಷ ವಾಲಿಕಾರ ಮಾತನಾಡಿ, ಸರಕಾರಿ ನೌಕರರ ಅನುಕೂಲಕ್ಕಾಗಿ ಹಲವಾರು ಹೊಸ ಹೊಸ ಯೋಜನೆಗಳನ್ನು ತರುತಿದ್ದು, ಬ್ಯಾಂಕಿಂಗ್ ವ್ಯವಸ್ಥೆಯನ್ನು ತಂತ್ರಜ್ಞಾನ ಸಹಿತ ಅಭಿವೃದ್ಧಿಪಡಿಸಲಾಗಿದೆ, ಗುರುಸ್ಪಂದನ ಪೆನಲ್‌ನ 9 ಜನರಿಗೆ ಮತ ನೀಡುವಂತೆ ಮನವಿ ಮಾಡಿದರು. ಪಾದಯಾತ್ರೆ ಮೂಲಕ ಜಿಒಸಿಸಿ ಬ್ಯಾಂಕಿಗೆ ತಲುಪಿ ನಾಮಪತ್ರ ಸಲ್ಲಿಸಿದರು.

ಭಾಷೆಯನ್ನು ಆಡಿಸಿ, ರೂಢಿಸಿ ಮಾತಾಡಿ ಉಳಿಸಿಕೊಳ್ಳಿ

ಸಪ್ನ ಬುಕ್‌ಹೌಸ್‌ನಲ್ಲಿ 69 ಕೃತಿಗಳ ಲೋಕಾರ್ಪಣೆ ಸಮಾರಂಭ ಕಾರ್ಯಕ್ರಮದಲ್ಲಿ ಸುಧಾಮೂರ್ತಿ ಹೇಳಿಕೆ



ಸಪ್ನ ಬುಕ್ ಹೌಸ್‌ನಿಂದ ಬಿಡುಗಡೆಗೊಂಡ ಎಲ್ಲ 69 ಕೃತಿಗಳೊಂದಿಗೆ ಡಾ.ಸುಧಾಮೂರ್ತಿ, ಪ್ರೊ.ಮಲ್ಲೇಪುರಂ ವೆಂಕಟೇಶ್, ಡಾ.ಹಂ.ಪ.ನಾಗರಾಜಯ್ಯ, ನಿತಿನ್ ಷಾ ಹಾಗೂ ಇತರರು. ಕೃತಿಗಳ ಬಿಡುಗಡೆ ಸಮಾರಂಭದಲ್ಲಿ ಪಾಲ್ಗೊಂಡ ರಾಜ್ಯಸಭಾ ಸದಸ್ಯೆ ಡಾ. ಸುಧಾಮೂರ್ತಿ ಅವರು ವಿಶ್ವೇಶ್ವರ ಭಟ್ ಅವರ ಪದಮಣಿ ದರ್ಪಣ ಕೃತಿಯನ್ನು ಓದಿ ಸಂಭ್ರಮಿಸಿದರು.

ಬೆಂಗಳೂರು: ವಿದ್ವತ್ತು ಯಾರ ಸೊತ್ತಲ್ಲ. ಯಾವುದೇ ಭಾಷೆಯನ್ನು ಕಳೆದುಕೊಳ್ಳಲು ಹೆಚ್ಚು ಸಮಯ ಬೇಕಿಲ್ಲ. ಮಾತನಾಡಿ ಉಳಿಸಿಕೊಳ್ಳುವುದು ನಮ್ಮ ಜವಾಬ್ದಾರಿಯಾಗಿದೆ ಎಂದು ಲೇಖಕಿ, ರಾಜ್ಯಸಭಾ ಸದಸ್ಯೆ ಡಾ. ಸುಧಾಮೂರ್ತಿ ಹೇಳಿದರು.

ಸಪ್ನ ಬುಕ್ ಹೌಸ್ 69ನೇ ಕನ್ನಡ ರಾಜ್ಯೋತ್ಸವದ ಹಿನ್ನೆಲೆ ಆಯೋಜಿಸಿದ್ದ 69 ಕನ್ನಡ ಪುಸ್ತಕಗಳ ಲೋಕಾರ್ಪಣಾ ಕಾರ್ಯಕ್ರಮದಲ್ಲಿ ಮಾತನಾಡಿ, ಕನ್ನಡ ಭಾಷೆ ಕೇವಲ ಆಡು ಮಾತಾಗಿ ಉಳಿಯದಂತೆ ನೋಡಿಕೊಳ್ಳಬೇಕು. ಕನ್ನಡ ಭಾಷೆಯನ್ನು ಓದಲು, ಬರೆಯಲು ಮಕ್ಕಳಿಗೆ ಕಲಿಸಬೇಕು. ಬರೀ ಮಾತನಾಡುವ ಭಾಷೆ ಕನ್ನಡವಾದರೆ ಅದರ ಬೇರು ಕಡಿತಗೊಳ್ಳುತ್ತದೆ ಎಂದು ಅಭಿಪ್ರಾಯಪಟ್ಟರು.

ಸದ್ಯದ ಪರಿಸ್ಥಿತಿಯಲ್ಲಿ ಕನ್ನಡ ಕೇವಲ ಆಡು ಭಾಷೆಯಾಗಿ ಉಳಿದುಕೊಳ್ಳುತ್ತದೆ. ಕನ್ನಡವನ್ನು ಕನ್ನಡ ಭಾಷೆಯಾಗಿ ಕಲಿತಾಗ ಮಾತ್ರ ನಮ್ಮಲ್ಲಿ ಉಳಿಯುತ್ತದೆ. ಮಕ್ಕಳಿಗೆ ಕನ್ನಡ ಭಾಷೆಯನ್ನು ಕಲಿಸಬೇಕು. ಮನೆಯಲ್ಲಿರುವ ತಾಯಿ, ಮನೆಯವರು ಕನ್ನಡ ಭಾಷೆಯನ್ನು ಮಕ್ಕಳಿಗೆ ಹೇಳಿ ಕೊಡಬೇಕು. ಶಾಲೆಯಲ್ಲಿ ಗುರುಗಳು, ಮನೆಯಲ್ಲಿ ಪೋಷಕರು ಮಕ್ಕಳ ಜತೆ ಕನ್ನಡವನ್ನು ಮಾತನಾಡಬೇಕು. ಕನ್ನಡವನ್ನು ಮಾತನಾಡಿಲ್ಲ ಎಂದಾದರೆ ಕನ್ನಡದ ಬೇರುಗಳು ಅಲ್ಲಿಯೇ ಮುರುಟಿ ಹೋಗುತ್ತವೆ ಎಂದು ಆತಂಕ ವ್ಯಕ್ತಪಡಿಸಿದರು.

ಆಳವಾದ ಬೇರಿದೆ: ಕನ್ನಡಕ್ಕೆ ಆಳವಾದ ಬೇರಿರುವ ಸಂಸ್ಕೃತಿಯಿದೆ ಅದನ್ನು ಕಳೆದುಕೊಳ್ಳಬಾರದು. ಕನ್ನಡವನ್ನು ಕಲಿಸುವಲ್ಲಿ ಎಲ್ಲರದ್ದೂ ವಿಶೇಷವಾದ ಜವಾಬ್ದಾರಿಯಿದೆ. ಕನ್ನಡ ಸಮೃದ್ಧವಾದ ಭಾಷೆ. ಹಲ್ಮಿಡಿ ಶಾಸನ 480 ಇಸವಿಯಲ್ಲಿ ಸಿಕ್ಕಿದರೂ ಅದಕ್ಕೂ 300-400 ವರ್ಷ ಹಿಂದೆಯೇ ಆಡುಭಾಷೆಯಾಗಿ ನಮ್ಮ ಕನ್ನಡ ಭಾಷೆ ಇದ್ದಿರಲೇಬೇಕು. 2000 ವರ್ಷದ ಭಾಷೆ, 20 ವರ್ಷ ದಲ್ಲಿ ಕಳೆದುಕೊಳ್ಳಬಹುದು. ಕಳೆದುಕೊಳ್ಳುವುದೇನು ಕಷ್ಟವಲ್ಲ. ಆದರೆ ರೂಢಿಸಿದರೆ 2000 ವರ್ಷ ಇರಬಹುದು. ದಯವಿಟ್ಟು ಅದನ್ನು ರೂಢಿಸಿ, ಆಡಿಸಿ ಮಾತಾಡಿ ಉಳಿಸಿ ಎಂದು ಸಲಹೆ ನೀಡಿದರು.

ಪುಸ್ತಕ ಲೋಕಾರ್ಪಣೆಯ ಮೇಳವನ್ನು ನಡೆಸಿಕೊಡುವುದು ದೊಡ್ಡ ಶ್ರಮ. ಒಂದು ಮದುವೆ ಮಾಡಿದಂತೆ. ವರ್ಷ ವರ್ಷವೂ ನಡೆಯುವ ಮದುವೆಯಿದು. ಒಳ್ಳೆ ಪುಸ್ತಕವನ್ನು ಹೊರ ತರುತ್ತಾರೆ. ಪುಸ್ತಕವನ್ನು ಕೊಂಡು ತಂದು ಓದಿ. ನಮ್ಮದು ಮಹಾನ್ ಭಾಷೆ, ಸುಸಂಸ್ಕೃತವಾದ ಭಾಷೆ, ಸುಂದರವಾದ ಬಾಷೆ, ಶಾಸ್ತ್ರೀಯ ಭಾಷೆ ನಮ್ಮದು. ಪರಿಪೂರ್ಣವಾದ ಭಾಷೆಯಾಗಿದ್ದು, ಇದನ್ನು ಕದಂಬರು, ಚಾಳುಕ್ಯರು, ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳು, ವಿಜಯನಗರದ ಅರಸರು, ಮೈಸೂರು ಒಡೆಯರು, ಯೋಧರು, ರಾಣಿಯರು, ಗುರುಗಳು ಇದ್ದ ದೇಶವಿದು, ಅಂಥಹ ದೊಡ್ಡ ನಾಡಿದು ಅದರ ಮೂಲ ಬೇರು ಕನ್ನಡವಾಗಿದೆ ಎಂದರು.

> **ಸಪ್ನ ಬುಕ್‌ಹೌಸ್ ಕನ್ನಡ ಪುಸ್ತಕ ಲೋಕದ ಒಂದು ಅಚ್ಚರಿ. ಪ್ರತಿ ವರ್ಷ ರಾಜ್ಯೋತ್ಸವದಲ್ಲಿ ಎಷ್ಟನೇ ರಾಜ್ಯೋತ್ಸವ ಆಗುವುದೋ ಅಷ್ಟು ಲೇಖಕರಿಂದ ಅಷ್ಟು ಕೃತಿಗಳನ್ನು ಪ್ರಕಟಮಾಡಿ, ರಾಜ್ಯದ ವಿವಿಧ ಭಾಗಗಳಿಂದ, ಗಡಿ ಭಾಗದವರಿಂದ, ಹೊರ ರಾಜ್ಯದವರೂ ಆಗಿರಬಹುದು. ಆ ಎಲ್ಲಾ ಲೇಖಕರನ್ನು ಕಡ್ಡಾಯವಾಗಿ ಬರಮಾಡಿಕೊಂಡು ಇಲ್ಲಿ ಸೇರಿಸಿ, ಈ ಸಂಭ್ರಮವನ್ನು ಪುಸ್ತಕೋತ್ಸವವನ್ನು ಏರ್ಪಾಟು ಮಾಡುವ ವಿಧಾನವೂ ಒಂದು ಅಚ್ಚರಿ.**
>
> – **ಬೈರಮಂಗಲ ರಾಮೇಗೌಡ** ಹಿರಿಯ ಸಾಹಿತಿ

ಸಪ್ನಾ ಬುಕ್ ಹೌಸ್‌ನ 69 ಕೃತಿಗಳ ಬಿಡುಗಡೆ ಸಮಾರಂಭವನ್ನು ನಾಡೋಜ ಹಂ.ಪ.ನಾಗರಾಜಯ್ಯ ಅವರು ಉದ್ಘಾಟಿಸಿದರು. ರಾಜ್ಯಸಭಾ ಸದಸ್ಯೆ ಡಾ.ಸುಧಾಮೂರ್ತಿ, ನಿತಿನ್ ಷಾ, ಪ್ರೊ.ಮಲ್ಲೇಪುರಂ ವೆಂಕಟೇಶ್ ಇದ್ದರು.

ಸಮಾರಂಭದಲ್ಲಿ ಹಾಜರಿದ್ದ ವಿಶ್ವೇಶ್ವರ ಭಟ್, ಸುಷ್ಮಾ ಭಟ್, ಡಾ.ವಿಜಯಲಕ್ಷ್ಮೀ ಬಾಳೇಕುಂದ್ರಿ ಹಾಗೂ ಇತರರು.

ಕಾರ್ಯಕ್ರಮದಲ್ಲಿ ಮಾತನಾಡಿದ ವಿದ್ವಾಂಸ ನಾಡೋಜ ಡಾ. ಹಂಪ ನಾಗರಾಜಯ್ಯ, ಜಾತಿ, ಲಿಂಗಬೇಧ, ಪ್ರಾದೇಶಿಕ ಬೇಧವಿಲ್ಲದೇ. ಹಿರಿಯರು ಕಿರಿಯರು ಎಂಬ ವ್ಯತ್ಯಾಸಗಳಿಲ್ಲದೆ ಕೇವಲ ಪುಸ್ತಕದ ಗುಣ ನೋಡಿ ಪ್ರಕಟಣೆಗೆ ಅರ್ಹವೋ ಇಲ್ಲವೋ ಎನ್ನುವುದನ್ನು ತೀರ್ಮಾನಿಸುವುದು ಸಪ್ನ ಬುಕ್‌ಹೌಸ್. ಸಾಹಿತಿಗಳನ್ನು ನಮ್ಮ ನೆಂಟರು, ಬಳಗ ಎಂದು ತಿಳಿದುಕೊಂಡವರು ಸಪ್ನ ಬುಕ್ ಹೌಸ್‌ನವರಾಗಿದ್ದಾರೆ. ಲೇಖಕರಾಗಿರುವ ಅನೇಕರಿಗೆ ಪುಸ್ತಕ ಪ್ರಕಟಿಸುವ ಹಂಬಲವಿದ್ದರೂ ಅನೇಕರಿಗೆ ಆ ಅವಕಾಶವಿರುವುದಿಲ್ಲ. ಅವರೇ ದುಡ್ಡು ಹಾಕಿ ಪ್ರಕಟಿಸಿದರೂ ಪ್ರಚಾರಕ್ಕೆ ಬಂದಿರುವುದಿಲ್ಲ. ಆದರೆ ಈ ಕೆಲಸವನ್ನು ಸಪ್ನ ಬುಕ್ ಹೌಸ್ ಉತ್ತಮವಾಗಿ ನಿಭಾಯಿಸುತ್ತಿದೆ ಎಂದರು.

ಕೃತಿಗಳ ವೈವಿಧ್ಯ ವಿಶೇಷ: ಕಾರ್ಯಕ್ರಮದಲ್ಲಿ ಬಿಡುಗಡೆಯಾದ 69 ಕೃತಿಗಳ ಪರಿಚಯ ಮಾಡಿದ ವಿಶ್ರಾಂತ ಕುಲಪತಿ ಪ್ರೊ. ಮಲ್ಲೇಪುರಂ ಅವರು ಮಾತನಾಡಿ, 69 ಕೃತಿಗಳ ವೈವಿಧ್ಯ ಬಹಳ ವಿಶೇಷವಾದುದು. ಆರೋಗ್ಯ, ವಿಜ್ಞಾನ, ಪ್ರಬಂಧ, ನಾಟಕ, ಕಾವ್ಯ, ಸಂಶೋಧನೆ, ಟಿಪ್ಪಣಿ ಹೀಗೆ ಸಾಹಿತ್ಯದ ಎಲ್ಲಾ ಪ್ರಕಾರದ ವಿಷಯವು ಇವುಗಳಲ್ಲಿ ಅಡಗಿದೆ. ಅದರಲ್ಲಿ ಆರು ಕೃತಿಗಳು ಮಕ್ಕಳ ಸಾಹಿತ್ಯಕ್ಕೆ ಸಂಬಂಧ ಪಟ್ಟದ್ದು, ಎನ್ನುತ್ತಾ 69 ಕೃತಿಗಳ ಪರಿಚಯವನ್ನು ಮಾಡಿದರು.

ಕಾರ್ಯಕ್ರಮದಲ್ಲಿ ವಿಶ್ವೇಶ್ವರ ಭಟ್ ಅವರ ಪದಮಣಿ ದರ್ಪಣ, ಲೋಕಧ್ವನಿ ಅಂಕಣಕಾರ ರಾಜು ಅಡಕಳ್ಳಿ ಅವರ ಹರಟೆ ಕಷಾಯ, ವಿಶ್ವವಾಣಿ ಪುರವಣಿ ಸಂಪಾದಕ ಶಶಿಧರ ಹಾಲಾಡಿ ಅವರ 'ಪರಿಸರದ ಒಡನಾಡಿ' ಸೇರಿದಂತೆ 69 ಸಾಹಿತಿಗಳ ಪುಸ್ತಕ ಬಿಡುಗಡೆಯಾದವು. ಈ ವೇಳೆ ಸಪ್ನ ಬುಕ್ ಹೌಸ್‌ನ ವ್ಯವಸ್ಥಾಪಕ ನಿತಿನ್ ಶಾ, ವತ್ಸಲಾ, ದೊಡ್ಡರಂಗೇಗೌಡ ಮತ್ತಿತರರು ಇದ್ದರು.

ಹೆಣ್ಣನ್ನು ಟೀಕಿಸುವ ಸಂಸ್ಕೃತಿ ಹೇಯ

ಕಾರ್ಯಕ್ರಮದಲ್ಲಿ ಮಾತನಾಡಿದ ಹಂ.ಪ ನಾಗರಾಜಯ್ಯ, ಹೆಣ್ಣುಮಕ್ಕಳನ್ನು ಸದನದಲ್ಲಿ ಕೆಟ್ಟ ಪದಗಳಲ್ಲಿ ಟೀಕಿಸುವ ಸಂಸ್ಕೃತಿಯನ್ನು ನೋಡಿಕೊಂ ಸಾಹಿತಿಗಳು ಸುಮ್ಮನೇ ಕೂರಬೇಕೇ ಎಂದು ಪ್ರಶ್ನಿಸಿದರು. ನಮ್ಮದು ಹಿರಿಯರನ್ನು ಗೌರವಿಸುವ ಸಂಸ್ಕೃತಿ. ಆದರೆ ಇಂತಹ ಸಂಸ್ಕೃತಿಯಲ್ಲಿ ಮಹಿಳೆಯರನ್ನು ಕೆಟ್ಟ ಪದಗಳಿಂದ ಬೈಯ್ಯುತ್ತಾರೆ. ದ್ರೌಪದಿ ವಸ್ತ್ರಾಪಹರಣದ ಸಂದರ್ಭದಲ್ಲಿ ಭೀಷ್ಮಾದಿಗಳು ಸುಮ್ಮನೆ ಕುಳಿತಂತೆ ಲೇಖಕರು ಸುಮ್ಮನೆ ಕುಳಿತಿರಬೇಕಾ? ಖಂಡಿಸಲೇಬೇಕು. ಇಂತಹ ಮನೋಧರ್ಮವಿದೆಯಲ್ಲ, ಇದು ಹೇಯವಾದುದು ಎಂದು ಬೇಸರ ವ್ಯಕ್ತಪಡಿಸಿದರು. ಕುವೆಂಪು ಅವರು ಸ್ವರ್ಗ ದ್ವಾರದಿ ಯಕ್ಷಪ್ರಶ್ನೆ ಎಂಬ ಕವಿತೆಯಲ್ಲಿ ಬರೆಯುತ್ತಾರೆ. ಸ್ವರ್ಗಕ್ಕೆ ನೇರವಾಗಿ ಹೋಗಲು ಪ್ರಯತ್ನಿಸಿದಾಗ ದ್ವಾರ ಪಾಲಕರು ತಡೆದಾಗ, ನಾನಿಂತಹ ಕವಿ ಎಂದು ಕುವೆಂಪು ತಮ್ಮನ್ನು ಪರಿಚಯಿಸಿಕೊಳ್ಳುತ್ತಾರೆ. ಆದರೆ ಹೇಮಾವತಿ ಗಂಡ ಎಂದಾಗ ಒಳ ಬಿಡುತ್ತಾರೆ ಎಂದು ಬರೆದಿದ್ದಾರೆ. ಇದು ದಾಂಪತ್ಯ ಗೀತೆ. ಮಡದಿಯನ್ನು ಹೇಗೆ ನೋಡಿಕೊಳ್ಳಬೇಕು? ಕುಟುಂಬದ ದಾಂಪತ್ಯ ಎನ್ನುವುದು ಹೇಗೆ ಇರಬೇಕು? ಮಹಿಳಾ ಪರಿವಾರವನ್ನುದ್ದೇಶಿಸಿ ಹೇಗೆ ಇರಬೇಕು? ಮಹಿಳೆಯರನ್ನು ಹೇಗೆ ಗೌರವಿಸಬೇಕು ಎಂದು ಬರೆಯುವವರ ಮಧ್ಯೆ ಹೀಗೆ ಹೆಣ್ಣನ್ನು ಬೈಯ್ಯುವ ಸಂದರ್ಭಗಳನ್ನು ಕಂಡಾಗ ನಾವೆಲ್ಲ ತಲೆ ತಗಿಸುವಂತಾಗಿದೆ. ನಾವು ಅವರೆಲ್ಲರಿಗೂ ಪಾಠ ಹೇಳಬೇಕು. ಹೆಣ್ಣಿಗೆ ಹೇಗೆ ಮರ್ಯಾದೆ ಕೊಡಬೇಕು, ಹೇಗೆ ಇರಬೇಕು ಎಂದು ಹೇಳಿಕೊಡಬೇಕು ಎಂದರು.

ಟ್ವೀಟೂ-ಖಾರಾ

ಬಿಜೆಪಿ ಕರ್ನಾಟಕ

ತುಘಲಕ್ ನೀತಿಗಳಿಂದ ಕರ್ನಾಟಕ ಕಾಂಗ್ರೆಸ್ ಸರಕಾರ ಸಾರಿಗೆ ಇಲಾಖೆಯನ್ನು ದಿವಾಳಿಯಾಗಿಸಿದೆ. ಶಕ್ತಿ ಯೋಜನೆಯಿಂದ ಲಾಭವಾಗಿದೆಯೆಂದು ಪುಂಗಿ ಬಿಡುವ ಸಚಿವ ರಾಮಲಿಂಗಾರೆಡ್ಡಿ ಅವರೇ, ನಾಲ್ಕು ಸಾರಿಗೆ ಸಂಸ್ಥೆಗಳಿಂದ 6,468 ಕೋಟಿ ರು.ಬಾಕಿ ಉಳಿಸಿದ್ದು ಯಾಕೆ..? ಇಲಾಖೆ ಸಿಬ್ಬಂದಿಗೆ ಭವಿಷ್ಯ ನಿಧಿ, ತುಟ್ಟಿಭತ್ಯೆ, ವೇತನ ಹೆಚ್ಚಳದ ಬಾಕಿ ಪಾವತಿಸದಷ್ಟು ಹೀನಾಯ ಸ್ಥಿತಿಗೆ ರಾಜ್ಯ ಸಾರಿಗೆ ಸಂಸ್ಥೆಯನ್ನು ತಳ್ಳಿದ ಅಪಕೀರ್ತಿಗೆ ಸರಕಾರ ಪಾತ್ರವಾಗಿದೆ.

ಉಮೇಶ್ ಬೆಂಗಳೂರು

ಶಕ್ತಿ ಯೋಜನೆಯಿಂದ ಸಾರಿಗೆ ಸಂಸ್ಥೆಗೆ ಆದಾಯ ಹೆಚ್ಚಾಗಿದೆ ಎನ್ನುವವರು ಮೂರ್ಖರು..!

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೀದರ್**

ಸಮಸ್ಯೆಯೇನು..?

- ಔರಾದ್ ತಾಲೂಕಿನ ಬೊಂತಿ ಗ್ರಾಮ ಪಂಚಾಯತಿಯ ಸಾವರಗಾಂವ್ ಗ್ರಾಮದಲ್ಲಿ ನೀರಿನ ಸಮಸ್ಯೆ.
- **ಪರಿಹಾರ:** ಔರಾದ್ ತಾಲೂಕಿನ ಬೊಂತಿ ಗ್ರಾಮ ಪಂಚಾಯತಿಯ ಸಾವರಗಾಂವ್ ಗ್ರಾಮಕ್ಕೆ ಖಾಸಗಿ ನೀರಿನ ಮೂಲವನ್ನು ಬಾಡಿಗೆಗೆ ಪಡೆದು ಗ್ರಾಮದಲ್ಲಿರುವ ಓವರ್‌ಟೆಗೆ ಸಂಪರ್ಕ ನೀಡಿ ಸರಬರಾಜಿನ ವ್ಯವಸ್ಥೆ ಮಾಡಲಾಗಿದೆ.

ಸಮಾಚಾರ ಸಣ್ಣದಲ್ಲ

ಮೈಸೂರು ರಸ್ತೆಗೆ ಸಿಎಂ ಹೆಸರು: ಜಿಟಿಡಿ ಬೆಂಬಲ

ಮೈಸೂರು: ನಗರದ ಒಂಟಿಕೊಪ್ಪಲು ಬಡಾವಣೆಯ ವೆಂಕಟೇಶ್ವರ ದೇವಾಲಯದ ಎದುರಿನ ರಸ್ತೆಗೆ ಸಿಎಂ ಸಿದ್ದರಾಮಯ್ಯ ಅವರ ಹೆಸರಿಡುವುದಕ್ಕೆ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಬೆಂಬಲ ಸೂಚಿಸಿದ್ದಾರೆ. ಶನಿವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕೆಆರ್‌ಎಸ್ ರಸ್ತೆಗೆ ಪ್ರಿನ್ಸಸ್ ರಸ್ತೆ ಅಂತ ನಾಮಕರಣ ಮಾಡಿಲ್ಲ ಅನ್ನುವುದಾದರೆ ಸಿದ್ದರಾಮಯ್ಯ ಅವರ ಹೆಸರು ಇಡುವುದರಲ್ಲಿ ತಪ್ಪೇನಿಲ್ಲ, ಸಂಸದ ಯದುವೀರ್ ಅವರು ಹೇಳಿದಂತೆ ಆ ರಸ್ತೆಗೆ ಪ್ರಿನ್ಸಸ್ ರಸ್ತೆ ಎಂದು ಹೆಸರಿಡಲಾಗಿದೆ ಎನ್ನುತ್ತಾರೆ. ಆದರೆ, ಮತ್ತೆ ಕೆಲವರು ಆ ರಸ್ತೆಗೆ ಯಾವ ಹೆಸರನ್ನೂ ಇಟ್ಟಿಲ್ಲ ಎನ್ನುತ್ತಾರೆ. ಒಂದು ವೇಳೆ ಆ ರಸ್ತೆಗೆ ಹೆಸರಿಡದಿದ್ದರೆ ಸಿದ್ದರಾಮಯ್ಯ ಅವರ ಹೆಸರಿಟ್ಟರೆ ತಪ್ಪಿಲ್ಲ ಎಂದು ತಮ್ಮ ನಿಲುವನ್ನು ಸ್ಪಷ್ಟಪಡಿಸಿದರು.

ಶಾಲೆಗಳಿಗೆ ಹುಸಿಬಾಂಬ್ ಕರೆ

ಮೈಸೂರು: ಮೈಸೂರಿನ ಮೂರು ವಿದ್ಯಾಸಂಸ್ಥೆಗಳಿಗೆ ಶನಿವಾರ ಬಾಂಬ್ ಬೆದರಿಕೆ ಸಂದೇಶ ಬಂದ ಹಿನ್ನೆಲೆಯಲ್ಲಿ ಕೆಲಕಾಲ ಆತಂಕದ ಪರಿಸ್ಥಿತಿ ಸೃಷ್ಟಿಯಾಯಿತು. ಜಯಲಕ್ಷ್ಮೀಪುರಂ ನ ವಿದ್ಯಾಶ್ರಮ, ಮೇಟಗಳ್ಳಿಯ ಫ್ಯೂಚರ್ ಫೌಂಡೇಶನ್ ಕಾಲೇಜು ಹಾಗೂ ಮೈಕಾ ಶಾಲೆಗೆ ಬೆದರಿಕೆ ಸಂದೇಶ ಬಂದಿದೆ. ಫ್ಯೂಚರ್ ಫೌಂಡೇಶನ್ ಹಾಗೂ ಮೈಕಾ ಸಂಸ್ಥೆಗಳಿಗೆ ವಾಟ್ಸಾಪ್ ಮೂಲಕ ಸಂದೇಶ ಬಂದಿದ್ದರೆ, ವಿದ್ಯಾಶ್ರಮಕ್ಕೆ ಫೋನ್ ಮೂಲಕ ಕರೆ ಬಂದಿದೆ. ಕೂಡಲೇ ಪೊಲೀಸರು ಬಾಂಬ್ ನಿಷ್ಕ್ರಿಯ ದಳದೊಂದಿಗೆ ಸ್ಥಳಕ್ಕೆ ತೆರಳಿ ಪೂರ್ಣ ಪರಿಶೀಲಿಸಿದ ನಂತರ ಇದು ಹುಸಿಕರೆ ಎಂದು ಖಚಿತಪಡಿಸಿದ್ದಾರೆ. ಕೆಲವು ದಿನಗಳ ಹಿಂದೆ ಬೆಂಗಳೂರಿನ ಕೆಲವು ಶಾಲೆಗಳಿಗೆ ಇದೇ ರೀತಿ ಕರೆ ಬಂದಿದ್ದು ಆತಂಕ ಸೃಷ್ಟಿಸಿತ್ತು. ಇದೀಗ ಮೈಸೂರಿನ ಶಾಲೆಗಳಿಗೂ ಇಂತಹ ಬೆದರಿಕೆಗಳು ಬಂದಿದೆ, ಜತೆಗೆ ಎಲ್ಲೆಡೆ ಹೊಸ ವರ್ಷಾಚರಣೆ ನಡೆಯಲಿರುವುದ ರಿಂದ ಆತಂಕ ಶುರುವಾಗಿದೆ.

ಕಾಲಿಗೆ ಗುಂಡು ಹಾರಿಸಿ ದರೋಡೆಕೋರನ ಸೆರೆ

ಧಾರವಾಡ: ಮನೆಗೆ ನುಗ್ಗಿ ವೃದ್ಧ ದಂಪತಿಯನ್ನು ಥಳಿಸಿ ದರೋಡೆ ಮಾಡಿದ್ದ ಆಂಧ್ರಪ್ರದೇಶ ಮೂಲದ ಕುಖ್ಯಾತ ದರೋಡೆಕೋರನ ಕಾಲಿಗೆ ಗುಂಡು ಹಾರಿಸಿ, ಬಂಧಿಸುವಲ್ಲಿ ಧಾರವಾಡದ ವಿದ್ಯಾಗಿರಿ ಪೊಲೀಸರು ಯಶಸ್ವಿಯಾಗಿದ್ದಾರೆ. ಧಾರವಾಡದ ನವಲೂರ ಬಳಿಯ ಮನೆಯೊಂದರಲ್ಲಿ ದಂಪತಿಗಳನ್ನು ಕಟ್ಟಿ ಹಾಕಿ ದರೋಡೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಯ ಮೇಲೆ ಪೊಲೀಸರು ಎರಡು ಸುತ್ತು ಗುಂಡು ಹಾರಿಸಿ ಬಂಧಿಸಿದ್ದಾರೆ. ಈ ಘಟನೆಯು ಹುಬ್ಬಳ್ಳಿ-ಧಾರವಾಡ ಮಧ್ಯೆ ಇರುವ ರಾಯಾಪುರದ ಬಳಿ ನಡೆದಿದೆ. ಆಂಧ್ರ ಮೂಲದ ಕುಖ್ಯಾತ ದರೋಡೆಕೋರ ಪಾಲಾ ವೆಂಕಟೇಶ್ವರ ಎಂಬಾತನ ಮೇಲೆ ಪಿಎಸ್‌ಐ ಪ್ರಮೋದ್ ಎಂಬುವರು ಗುಂಡು ಹಾರಿಸಿದ್ದಾರೆ. ಇದಕ್ಕೂ ಮೊದಲು ಪಿಎಸ್‌ಐ ಹಾಗೂ ಪೊಲೀಸ್ ಮೇಲೆ ಹಲ್ಲೆಯತ್ನ ನಡೆದಿದೆ. 5 ರಾಜ್ಯಗಳಿಗೆ ಬೇಕಾಗಿದ್ದ ನಟೋರಿಯಸ್ ದರೋಡೆಕೋರನ ಈತನ ಮೇಲೆ 80ಕ್ಕೂ ಹೆಚ್ಚು ಕಳ್ಳತನ, ದರೋಡೆ ಪ್ರಕರಣ ದಾಖಲಾಗಿತ್ತು.

ತಂದೆಯ ಕೊಲೆ: ಮಗನ ಬಂಧನ

ಮೃತ ಅಣ್ಣಪ್ಪ ಹಾಗೂ ಕೊಲೆ ಆರೋಪಿ ಪಾಂಡು.

ಪಿರಿಯಾಪಟ್ಟಣ: ಇನ್ಸೂರೆನ್ಸ್ ಹಣದ ಆಸೆಗಾಗಿ ತಂದೆಯನ್ನೇ ಕೊಲೆ ಮಾಡಿದ ಮಗನೊಬ್ಬನು ತನ್ನ ತಂದೆ ಅಪಘಾತದಿಂದ ಮೃತಪಟ್ಟಿದ್ದಾರೆ ಎಂದು ಕಥೆ ಹೆಣೆಯಲು ಯತ್ನಿಸಿದ ಪ್ರಕರಣ ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನಲ್ಲಿ ನಡೆದಿದೆ. ತಂದೆಯನ್ನು ಹತ್ಯೆ ಮಾಡಿದ ಮಗನನ್ನು ಪೊಲೀಸರು ಬಂಧಿಸಿದ್ದಾರೆ. ಪಿರಿಯಾಪಟ್ಟಣದ ಕೊಪ್ಪ ಗ್ರಾಮದ ಗೆರೋಸಿ ಕಾಲೋನಿಯ ಪಾಂಡು ಎಂಬಾತನೇ ತನ್ನ ತಂದೆ ಅಣ್ಣಪ್ಪರನ್ನು ಕೊಲೆ ಮಾಡಿರುವ ಆರೋಪಿ. ಪಿರಿಯಾಪಟ್ಟಣದ ಬೈಲುಕುಪ್ಪೆ ಬಳಿ ಈ ಘಟನೆ ನಡೆದಿದೆ. ದೂರಿನ ಹಿನ್ನೆಲೆಯಲ್ಲಿ ಸಬ್ ಇನ್ಸ್‌ಪೆಕ್ಟರ್ ಅಜಯ್ ಕುಮಾರ್ ಮತ್ತು ತಂಡ ಅನುಮಾನದ ಮೇಲೆ ವಿಚಾರಣೆ ನಡೆಸಿದ್ದಾರೆ. ಆಗ ಆರೋಪಿಯು ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾನೆ. ತನ್ನ ತಂದೆ ಹೆಸರಿನಲ್ಲಿ ಇನ್ಸೂರೆನ್ಸ್ ಇದೆ. ಹೀಗಾಗಿ, ಅವರು ಅಪಘಾತದಲ್ಲಿ ಸಾವನ್ನಪ್ಪಿದರೆ ಡಬಲ್ ಹಣ ಸಿಗಬಹುದೆಂಬ ಆಸೆಗೆ ಈ ಕೃತ್ಯ ಮಾಡಿದ್ದೇನೆ ಎಂದು ತಪ್ಪೊಪ್ಪಿಕೊಂಡಿದ್ದಾನೆ ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಇನ್ನೊಂದೆಡೆ, ಸಹೋದರ ಅಣ್ಣಪ್ಪ ಮೃತಪಟ್ಟ ಹಿನ್ನೆಲೆಯಲ್ಲಿ ದುಃಖಿತನಾದ ಅವರ ಅಣ್ಣ ಧರ್ಮ ಎಂಬವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಸದ್ಯ ಆರೋಪಿಯನ್ನು ಬಂಧಿಸಿರುವ ಬೈಲುಕುಪ್ಪೆ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವಿಮೆ ಹಣಕ್ಕಾಗಿ ಕೊಲೆ

'ನಿಮಗೆ ಟಿಬೇಟಿಯನ್ ಮೊದಲನೇ ಕ್ಯಾಂಪಿನಲ್ಲಿ ಕೆಲಸ ಇದೆ, ನೀವು ಹೋಗಿ' ಎಂದು ತಂದೆಗೆ ಹೇಳಿರುವ ಆರೋಪಿ, ಬಳಿಕ ಹಿಂಬದಿಯಿಂದ ಫಾಲೋ ಮಾಡಿಕೊಂಡು ಬಂದು ತಲೆ ಭಾಗಕ್ಕೆ ದೊಣ್ಣೆಯಿಂದ ಬಲವಾಗಿ ಹೊಡೆದಿದ್ದಾನೆ. ಇದರಿಂದ ತೀವ್ರವಾಗಿ ಗಾಯಗೊಂಡ ಅಣ್ಣಪ್ಪ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಬಳಿಕ ಆರೋಪಿಯು ತಂದೆಯ ಶವವನ್ನು ಬಿ.ಎಂ.ರಸ್ತೆಯ ಮಂಚದೇವನಹಳ್ಳಿ ಸಮೀಪ ಎಸೆದಿದ್ದಾನೆ. ಸ್ವಲ್ಪ ಸಮಯದ ನಂತರ ಠಾಣೆಗೆ ಬಂದು ತನ್ನ ತಂದೆಗೆ ಅಪರಿಚಿತ ವಾಹನ ಡಿಕ್ಕಿಯಾಗಿದ್ದು, ಅವರು ಮೃತಪಟ್ಟಿದ್ದಾರೆ ಎಂದು ಕಥೆ ಕಟ್ಟಿ ದೂರು ನೀಡಿದ್ದ.

ಮನಮೋಹನ್ ಸಿಂಗ್ ಆರ್ಥಿಕ ಸುಧಾರಣೆಯ ಧೀಮಂತ ಹರಿಕಾರ: ಶಾಸಕ ಪ್ರದೀಪ್ ಈಶ್ವರ್

ಚಿಕ್ಕಬಳ್ಳಾಪುರ: ಮಾಜಿ ಪ್ರಧಾನಿ ಡಾ.ಮನಮೋಹನ್ ಸಿಂಗ್ ಭಾರತದ ಆರ್ಥಿಕ ಸುಧಾರಣೆಯ ಹರಿಕಾರರಾಗಿದ್ದರು. 1991ರಲ್ಲಿಯೇ ವಿತ್ತಸಚಿವರಾಗುವ ಮೂಲಕ ದೇಶದಲ್ಲಿ ಆರ್ಥಿಕ ಸುಧಾರಣೆಗಳನ್ನು ಜಾರಿಗೆ ತಂದು ಭಾರತದ ಆರ್ಥಿಕತೆ ಹೊಸ ಮಗ್ಗುಲಿಗೆ ಹೊರಳುವಂತೆ ಮಾಡಿದ ಕೀರ್ತಿ ಅವರಿಗೆ ಸಲ್ಲುತ್ತದೆ. ಅವರ ಅಗಲಿಕೆ ದೇಶಕ್ಕೆ ಮಾತ್ರವಲ್ಲ, ಜಗತ್ತಿನ ಆರ್ಥಿಕತೆಗೂ ತುಂಬಲಾರದ ನಷ್ಟವಾಗಿದೆ ಎಂದು ಶಾಸಕ ಪ್ರದೀಪ್ ಈಶ್ವರ್ ಸಂತಾಪ ವ್ಯಕ್ತಪಡಿಸಿದ್ದಾರೆ.

1991ರಲ್ಲಿ ಪಿ.ವಿ.ನರಸಿಂಹರಾವ್ ನೇತೃತ್ವದ ಸರ್ಕಾರದಲ್ಲಿ ಡಾ.ಮನಮೋಹನ್ ಸಿಂಗ್ ಹಣಕಾಸು ಸಚಿವರಾಗಿ ನೇಮಕಗೊಂಡ ಅವರು ತಮ್ಮ ಚೊಚ್ಚಲ ಬಜೆಟ್‌ನಲ್ಲಿಯೇ ದೇಶದ ಪ್ರಗತಿಗೆ ಆರ್ಥಿಕ ಮುಲಾಮು ಹಚ್ಚಿದರು. ಬಜೆಟ್ ನಂತರದ ಪತ್ರಿಕಾಗೋಷ್ಠಿಯಲ್ಲಿ ಪತ್ರಕರ್ತರನ್ನು ಎದುರಿಸಿ ಅವರು ಕೇಳಿದ ಎಲ್ಲ ಪ್ರಶ್ನೆಗಳಿಗೆ ಸಮಾಧಾನದಿಂದ ಉತ್ತರಿಸಿದ್ದರು. ದೇಶದ ಆರ್ಥಿಕ ಸುಧಾರಣೆಯ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದರು. ಇಂತಹ ಅವರ ಐತಿಹಾಸಿಕ ಸುಧಾರಣೆಗಳು ಭಾರತವನ್ನು ದಿವಾಳಿತನದಿಂದ ರಕ್ಷಿಸಿದವು ಮಾತ್ರವಲ್ಲದೇ, ದೇಶದ ಆರ್ಥಿಕ ಅಭಿವೃದ್ಧಿಯ ಪಥವನ್ನು ಏರುತ್ತಿರುವ ಜಾಗತಿಕ ಶಕ್ತಿಯಾಗಿ ಮರು ವ್ಯಾಖ್ಯಾನಿಸುವಂತೆ ಮಾಡಿದವು.

ಮೇ 22, 2004ರಂದು ಪ್ರಧಾನ ಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ಸಿಂಗ್, ಮೇ 26, 2014ರವರೆಗೆ ಸತತ ಎರಡು ಅವಧಿಗೆ ಸೇವೆ ಸಲ್ಲಿಸಿದ್ದಾರೆ. ಭಾರತದ ಇತಿಹಾಸದಲ್ಲಿ ಮೂರನೇ ಅತಿ ಹೆಚ್ಚು ಅವಧಿಯ ಭಾರತದ ಪ್ರಧಾನಿ ಎನಿಸಿಕೊಂಡಿದ್ದಾರೆ. ಬಡತನದ ಕುಟುಂಬದಲ್ಲಿ ಜನಿಸಿದ ಡಾ.ಮನಮೋಹನ್ ಸಿಂಗ್ ಶಿಕ್ಷಣ, ಅರ್ಥಶಾಸ್ತ್ರ ಮತ್ತು ರಾಜಕೀಯದಲ್ಲಿ ಅಸಾಧಾರಣ ಸಾಧನೆ ಮಾಡಿದ್ದಾರೆ. 10 ವರ್ಷ ಕಾಲ ಪ್ರಧಾನಿಯಾಗಿ ದೇಶವನ್ನು ಮುನ್ನಡೆಸಿದ ನಾಯಕ ಎಂದರು.

ಇವರಿಗಿದ್ದ ಅಪಾರ ಜ್ಞಾನ, ದೂರದೃಷ್ಟಿಯ ಆಲೋಚನೆ ಹಾಗೂ ಸಮರ್ಥ ನಾಯಕತ್ವದಲ್ಲಿ ದೇಶವು ಪ್ರಗತಿಯ ಹಾದಿಯಲ್ಲಿ ಸಾಗಿದೆ.ಇವರ ಅಗಲಿಕೆ ದೇಶಕ್ಕೆ ತುಂಬಲಾರದ ನಷ್ಟವನ್ನು ಉಂಟುಮಾಡಿದೆ ಎಂದ ಶಾಸಕ ಪ್ರದೀಪ್ ಈಶ್ವರ್ ಅವರ ಪ್ರಗತಿಪರ ದೃಷ್ಟಿಕೋನ ಮತ್ತು ಅವಿಸ್ಮರಣೀಯ ಕೊಡುಗೆಗಳು ದೇಶದ ಮುಂದಿನ ತಲೆಮಾರಿಗೆ ಮತ್ತು ಮೊದಲ ಬಾರಿ ರಾಜಕೀಯ ಪ್ರವೇಶಿಸಿರುವ ನನ್ನಂತಹ ಶಾಸಕರಿಗೆ ಸ್ಫೂರ್ತಿಯಾಗಲಿವೆ ಎಂದು ಪ್ರದೀಪ್ ಈಶ್ವರ್ ತಿಳಿಸಿದ್ದಾರೆ.

ಸುಳ್ಯ ಬಳಿ ರಸ್ತೆ ಅಪಘಾತ: ಮೂವರ ದುರ್ಮರಣ

ಸುಳ್ಯ: ಪುತ್ತೂರಿನ ಪರ್ಲಡ್ಕ ಬಳಿ ಶನಿವಾರ ಮುಂಜಾನೆ ಕಾರೊಂದು ಪ್ರಪಾತಕ್ಕೆ ಉರುಳಿ ಸಂಭವಿಸಿದ ಭೀಕರ ರಸ್ತೆ ದುರಂತದಲ್ಲಿ ತಂದೆ-ಮಗ ಸೇರಿ ಮೂವರು ಸ್ಥಳದಲ್ಲೇ ದಾರುಣ ಸಾವನ್ನಪ್ಪಿದ್ದಾರೆ. ಅಂತ್ಯಸುಳ್ಯ ಜಟ್ಟಿಪಳ್ಳದ ನಿವೃತ್ತ ಪೋಸ್ಟ್ ಮಾಸ್ಟರ್ ಅಣ್ಣು ನಾಯ್ಕ (85), ಅವರ ಪುತ್ರ ಪಿಎಫ್ ಕಚೇರಿಯ ಅಧಿಕಾರಿ ಚಿದಾನಂದ ನಾಯ್ಕ (57) ಮತ್ತು ಕೃಷಿ ಕಾರ್ಮಿಕ ರಮೇಶ್ ನಾಯ್ಕ (67) ಅಪಘಾತದಲ್ಲಿ ಮೃತಪಟ್ಟ ನತದೃಷ್ಟರು. ಮುಂಜಾನೆ ಸಂಭವಿಸಿದ ಈ ದುರ್ಘಟನೆಯಿಂದ ಜಟ್ಟಿಪಳ್ಳ ಪರಿಸರದ ಜನರನ್ನು ಬೆಚ್ಚಿಬೀಳಿಸಿದೆ.

ನಿದ್ರೆಯ ಮಂಪರು ಅಪಘಾತಕ್ಕೆ ಕಾರಣ

ಅಣ್ಣು ನಾಯ್ಕ ಪತ್ನಿ ರತ್ನಾವತಿಯ ತವರು ವಿಟ್ಲದ ದಂಬೆ ಎಂಬಲ್ಲಿ ಗೋಂದೋಳು ಪೂಜೆ ಇದ್ದ ಕಾರಣ ಶುಕ್ರವಾರ ಅಣ್ಣುನಾಯ್ಕ ಕುಟುಂಬದವರು ವಿಟ್ಲಕ್ಕೆ ಹೋಗಿದ್ದರು. ಶನಿವಾರ ವಾಪಸ್ ಬರುವಾಗ ನಿದ್ರೆಯ ಮಂಪರಿನಿಂದ ಚಾಲಕನ ನಿಯಂತ್ರಣ ತಪ್ಪಿ ರಸ್ತೆಬದಿಯ ಪ್ರಪಾತಕ್ಕೆ ಕಾರು ಉರುಳಿ ಅಣ್ಣು ನಾಯ್ಕ ಸೇರಿದಂತೆ ಮೂವರು ಸ್ಥಳದಲ್ಲೇ ಮೃತಪಟ್ಟರು.

ಹಿರಿಯರಾದ ಅಣ್ಣು ನಾಯ್ಕ ಮತ್ತು ರಮೇಶ್ ನಾಯ್ಕರು ಅಣ್ಣು ನಾಯ್ಕರ ಪುತ್ರ ಚಿದಾನಂದರ ಜತೆ ಅವರ ಕಾರಿನಲ್ಲಿ ನಂತರ ಹೊರಟರು. ಅವರ ಕಾರು ಪುತ್ತೂರಿನ ಪರ್ಲಡ್ಕದಲ್ಲಿ ಬರುತ್ತಿರುವಾಗ ನಿದ್ದೆಯ ಮಂಪರಿನ ಕಾರಣದಿಂದಾಗಿ ಚಾಲಕನ ನಿಯಂತ್ರಣ ತಪ್ಪಿ ರಸ್ತೆ ಬದಿಯ ಪ್ರಪಾತಕ್ಕೆ ಉರುಳಿತು. ಪರಿಣಾಮವಾಗಿ ಮೂವರೂ ಸ್ಥಳದಲ್ಲೇ ಮೃತಪಟ್ಟರು. ಪುತ್ತೂರಿನ ಸರಕಾರಿ ಆಸ್ಪತ್ರೆಯಲ್ಲಿ ಶವಗಳ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಸಂಜೆ ಸಂಬಂಧಿಕರಿಗೆ ಒಪ್ಪಿಸಲಾಗಿದೆ.

ಗುತ್ತಿಗೆದಾರನ ಆತ್ಮಹತ್ಯೆ ಪ್ರಕರಣ: ಬಿಜೆಪಿ ಪ್ರತಿಭಟನೆ

ಶಾಸಕ ಮತ್ತಿಮಡು ವಿರುದ್ಧ ಏಕವಚನ ಪ್ರಯೋಗಕ್ಕೆ ಗರಂ, ಕಲಬುರಗಿ ಇನ್ಸ್ ಪೆಕ್ಟರ್ ವಿರುದ್ಧ ಕ್ರಮಕ್ಕೆ ಆಗ್ರಹ | ಬಿಜೆಪಿ ಮುಖಂಡರ ಹತ್ಯೆಗೆ ಸಂಚು, ಎಫ್‌ಐಆರ್ ದಾಖಲಿಸಲು ಪೊಲೀಸರ ನಕಾರ: ಪ್ರತಿಭಟನಕಾರರ ಟೀಕೆ | ಬಂದ್ ಎಚ್ಚರಿಕೆ

ಕಲಬುರಗಿ: ಬಿಜೆಪಿ ಮುಖಂಡರ ಹತ್ಯೆಗೆ ಸಂಚು ರೂಪಿಸಿದ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲು ಪೊಲೀಸ್ ಠಾಣೆಗೆ ಹೋದರೆ, ಸ್ಟೇಷನ್ ಬಜಾರ್ ಇನ್ಸ್‌ಪೆಕ್ಟರ್ ಶಕೀಲ್ ಅಂಗಡಿ ದಲಿತ ಶಾಸಕ ಎಂದು ಜಾತಿ ನಿಂದಿಸಿ, ಏಕವಚನದಲ್ಲಿ ಮಾತನಾಡಿದ್ದಾರೆ ಎಂದು ಬಿಜೆಪಿ ದೂರಿದೆ. ಕೂಡಲೇ, ಇನ್ಸ್‌ಪೆಕ್ಟರ್‌ರನ್ನು ಅಮಾನತು ಮಾಡಬೇಕು ಎಂದು ಆಗ್ರಹಿಸಿ ಶನಿವಾರ ಜಿಲ್ಲಾ ಬಿಜೆಪಿ ಬೃಹತ್ ಪ್ರತಿಭಟನೆ ನಡೆಸಿತು.

ಪಕ್ಷ ಮುಖಂಡರು ಹಾಗೂ ಕಾರ್ಯಕರ್ತರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ಪೊಲೀಸರ ನಡೆಯನ್ನು ಖಂಡಿಸಿ, ವಾಹನಗಳ ಸಂಚಾರ ತಡೆದು ಆಕ್ರೋಶ ವ್ಯಕ್ತಪಡಿಸಿದರು. ಅಲ್ಲದೆ, ಟೈರ್‌ಗಳಿಗೆ ಬೆಂಕಿ ಹಚ್ಚಿ, ಪೊಲೀಸ್, ಜಿಲ್ಲಾಡಳಿತ, ರಾಜ್ಯ ಸರಕಾರ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ವಿರುದ್ಧ ಘೋಷಣೆ ಕೂಗಿದರು.

ಡೆತ್ ನೋಟ್‌ನಲ್ಲಿ ಸ್ಫೋಟಕ ಮಾಹಿತಿ: ಬೀದರ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡ ಗುತ್ತಿಗೆದಾರ ಸಚಿನ್ ಪಾಂಚಾಳ್ ತಮ್ಮ ಡೆತ್‌ನೋಟ್‌ನಲ್ಲಿ ಆಂದೋಲಾ ಸ್ವಾಮೀಜಿ, ಶಾಸಕ ಬಸವರಾಜ ಮತ್ತಿಮಡು, ಬಿಜೆಪಿ ಮುಖಂಡರಾದ ಚಂದು ಪಾಟೀಲ, ಮಣಿಕಂಠ ರಾಠೋಡ್ ಹತ್ಯೆಗೆ ಕಾಂಗ್ರೆಸ್ ಮುಖಂಡರು ಸಂಚು ರೂಪಿಸಿದ್ದಾರೆ ಎಂದು ಬರೆದಿದ್ದಾರೆ. ಆರೋಪಿಗಳ ವಿರುದ್ಧ ದೂರು ಕೊಡಲು ಹೋದಾಗ ಸ್ಟೇಷನ್ ಬಜಾರ್ ಠಾಣೆಯ ಪೊಲೀಸರು ನಿರಾಕರಿಸಿದ್ದಾರೆ ಎಂದು ಪ್ರತಿಭಟನಕಾರರು ಆರೋಪಿಸಿದರು.

ಪ್ರತಿಭಟನೆಯಲ್ಲಿ ಭಾಗಿಯಾದ ಶಾಸಕ ಬಸವರಾಜ ಮತ್ತಿಮಡು, ಮಾಜಿ ಶಾಸಕ ರಾಜಕುಮಾರ ಪಾಟೀಲ ತೇಲ್ಕೂರ, ದತ್ತಾತ್ರೇಯ ಪಾಟೀಲ್ ರೇವೂರ್, ಜಿಲ್ಲಾ ಅಧ್ಯಕ್ಷರಾದದ ಚಂದು ಪಾಟೀಲ, ಶಿವರಾಜ ಪಾಟೀಲ ರದ್ದೇವಾಡಗಿ, ಅಮರನಾಥ ಪಾಟೀಲ ಮಾತನಾಡಿ, ಜತೆಗೆ ಬಿಜೆಪಿ ಮುಖಂಡರ ಕೊಲೆ ಸಂಚು ರೂಪಿಸಿದ ಆರೋಪಿಗಳ ವಿರುದ್ಧ ಕ್ರಮಕೈಗೊಳ್ಳಲು ಪ್ರಕರಣ ಸಿಬಿಐ ಗೆ ನೀಡಬೇಕು. ಜಿಲ್ಲೆಯಲ್ಲಿ ಸಂಪೂರ್ಣ ಕಾನೂನು ಸುವ್ಯವಸ್ಥೆ ಹಾಳಾಗಿದೆ ಕೂಡಲೇ, ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ್ ಖರ್ಗೆ ಅವರು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದರು.

ಸ್ಟೇಷನ್ ಬಜಾರ್ ಪೊಲೀಸ್ ಇನ್ಸ್ ಪೆಕ್ಟರ್ ನಾನು ದಲಿತ ಶಾಸಕ ಎಂದು ಜಾತಿ ನಿಂದನೆ ಮಾಡಿ, ಏಕವಚನದಲ್ಲಿ ಮಾತನಾಡಿದ್ದಾರೆ. ಒಬ್ಬ ಜನಪ್ರತಿನಿಧಿಗೆ ನೀಡುವ ಕನಿಷ್ಠ ಗೌರವ ನೀಡದೆ ಅಗೌರವ ತೋರಿ, 4-5 ಗಂಟೆ ಸಮಯ ವ್ಯರ್ಥಮಾಡಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರ ಕುಮ್ಮಕ್ಕಿನಿಂದ ಇಂತಹ ಘಟನೆ ನಡೆದಿದೆ. ಕೂಡಲೇ, ಸ್ಟೇಷನ್ ಬಜಾರ್ ಇನ್ಸ್ ಪೆಕ್ಟರ್ ಅವರನ್ನು ಅಮಾನತು ಮಾಡಬೇಕು. ಈ ಬಗ್ಗೆ ರಾಜ್ಯಪಾಲರು ಹಾಗೂ ಗೃಹ ಮಂತ್ರಿಗಗಳಿಗೆ ದೂರು ನೀಡುತ್ತೇನೆ.

– **ಬಸವರಾಜ ಮತ್ತಿಮಡು** ಬಿಜೆಪಿ ಶಾಸಕ

ಹತ್ಯೆಗೆ ಸಂಚು ನಡೆಸಿದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳುತ್ತವೆ. ಬೆದರಿಕೆ ಬಂದ ಜನಪ್ರತಿನಿದಿನಗಳಿಗೆ ಸೂಕ್ತ ಭದ್ರತೆ ನೀಡುತ್ತೇವೆ. ಸ್ಟೇಷನ್ ಬಜಾರ್ ಇನ್ ಪೆಕ್ಟರ್ ಶಕೀಲ್ ಅಂಗಡಿ ಬಗ್ಗೆ ಪರಿಶೀಲನೆ ನಡೆಸಿ ಕ್ರಮಕೈಗೊಳ್ಳುತ್ತೇವೆ.

– **ಕನಿಕಾ ಸೀಕ್ರಿವಾಲ್** ಡಿಸಿಪಿ

ಸಮಾಚಾರ ಸಣ್ಣದಲ್ಲ

ಸಿಎಂ ಪಿಣರಾಯಿ ಅನುಚಿತ ನಡೆ

ಕೊಚ್ಚಿ: ಇಡೀ ರಾಷ್ಟ್ರವೇ ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ನಿಧನದ ದುಃಖದಲ್ಲಿರುವಾಗ ಮುಖ್ಯಮಂತ್ರಿ ಪಿಣರಾಜಿ ವಿಜಯನ್ ಅವರು ಇಲ್ಲಿನ ವಿಮಾನ ನಿಲ್ದಾಣದಲ್ಲಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಂಡಿದ್ದಾರೆ ಎಂದು ಕಾಂಗ್ರೆಸ್ ಶನಿವಾರ ಟೀಕಿಸಿದೆ. ಈ ಸಂಬಂಧ ಮಾಧ್ಯಮದವರೊಂದಿಗೆ ಮಾತನಾಡಿರುವ ವಿಧಾನಸಭೆ ಪ್ರತಿಪಕ್ಷದ ವಿ.ಡಿ. ಸತೀಶನ್, 'ಹತ್ತು ವರ್ಷ ದೇಶದ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗ್ ಅವರ ಅಂತ್ಯಕ್ರಿಯೆ ದೆಹಲಿಯಲ್ಲಿ ನಡೆಯುತ್ತಿರುವಾಗ, ಮುಖ್ಯಮಂತ್ರಿಯವರು ಕೊಚ್ಚಿ ವಿಮಾನ ನಿಲ್ದಾಣದಲ್ಲಿ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳುವುದು ಅಗೌರವ ಹಾಗೂ ಅನುಚಿತ ನಡೆ' ಎಂದು ಟೀಕಿಸಿದ್ದಾರೆ. 'ಮುಖ್ಯಮಂತ್ರಿಯವರು ಕಾರ್ಯಕ್ರಮದಲ್ಲಿ ಭಾಗವಹಿಸಬಾರದಿತ್ತು. ಕಾರ್ಯಕ್ರಮವನ್ನು ಮುಂದೂಡುವಂತೆ ಹಾಗೂ ಸಿಎಂಗೆ ಮಾಹಿತಿ ನೀಡುವಂತೆ ವಿಮಾನ ನಿಲ್ದಾಣದ ಅಧಿಕಾರಿಗಳಿಗೆ ಮನವಿ ಮಾಡಿದ್ದೆವು' ಎಂದೂ ಹೇಳಿದ್ದಾರೆ.

ಬಿಹಾರ ಮುನ್ನಡೆಸಲು ನಿತೀಶ್ ಅಸಮರ್ಥ

ಪಟ್ನಾ: ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಗೆ ಸಹಜವಾಗಿ ಕರ್ತವ್ಯ ನಿರ್ವಹಿಸಲು ಆಗುತ್ತಿಲ್ಲ, ಅವರನ್ನು ಕೆಲವು ನಿಕಟವರ್ತಿಗಳು ಹಿಡಿದಿಟ್ಟುಕೊಂಡಿದ್ದಾರೆ ಎಂದು ಆರ್‌ಜೆಡಿ ನಾಯಕ, ಬಿಹಾರ ವಿಧಾನಸಭೆಯ ಪ್ರತಿಪಕ್ಷದ ನಾಯಕ ತೇಜಸ್ವಿ

ಯಾದವ್ ಶನಿವಾರ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ನಿತೀಶ್ ಅವರಿಗೆ ಏನೂ ಗೊತ್ತಾಗುತ್ತಿಲ್ಲ. ಅವರು ಬಿಹಾರವನ್ನು ಮುನ್ನಡೆಸಲು ಅಸಮರ್ಥರಾಗಿದ್ದಾರೆ. ನಿತೀಶ್ ಅವರು ತಾವಾಗಿಯೇ ನಿರ್ಧಾರಗಳನ್ನು ಕೈಗೊಳ್ಳುತ್ತಿಲ್ಲ. ಅವರ ಪಕ್ಷದ ನಾಲ್ಕು ಮಂದಿ ನಾಯಕರು, ದೆಹಲಿಯ ಇಬ್ಬರು ಹಾಗೂ ಇಲ್ಲಿನ ಇನ್ನುಳಿದವರು ನಿತೀಶ್ ಅವರನ್ನು ಹಿಡಿದಿಟ್ಟುಕೊಂಡಿದ್ದಾರೆ. ಅವರೇ ಎಲ್ಲ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಿದ್ದಾರೆ ಎಂದು ತೇಜಸ್ವಿ ಅವರು ಹೇಳಿದ್ದಾರೆ. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಬಾಬಾಸಾಹೇಬ್ ಅಂಬೇಡ್ಕರ್ ಅವರನ್ನು ಅವಮಾನಿಸಿದ್ದಾರೆ ಎಂಬ ಆರೋಪವನ್ನು ಉಲ್ಲೇಖಿಸಿ, ಬಿಜೆಪಿಗೆ ನೀಡಿರುವ ಬೆಂಬಲದ ಬಗ್ಗೆ ಮರುಚಿಂತನೆ ನಡೆಸುವಂತೆ ಕೋರಿ ಎಎಪಿ ನಾಯಕ ಅರವಿಂದ ಕೇಜ್ರಿವಾಲ್ ಅವರು ನಿತೀಶ್ ಅವರಿಗೆ ಪತ್ರ ಬರೆದಿದ್ದರು. ಆದರೆ ಈ ಪತ್ರಕ್ಕೆ ಸಂಜಯ್ ಝಾ ಅವರಿಂದ ಉತ್ತರ ಬಂದಿದೆ. ಪತ್ರಕ್ಕೆ ಉತ್ತರಿಸಲು ಝಾ ಯಾರು? ಎಂದು ತೇಜಸ್ವಿ ಪ್ರಶ್ನಿಸಿದ್ದಾರೆ.

ಮಹಾ ಕುಂಭಮೇಳಕ್ಕೆ ವಿಶೇಷ ರೈಲು

ಲಖನೌ: ಉತ್ತರ ಪ್ರದೇಶದ ಪ್ರಯಾಗ್‌ರಾಜ್‌ನಲ್ಲಿನ ಗಂಗಾ-ಯಮುನಾ-ಸರಸ್ವತಿ ನದಿಗಳ 'ತ್ರಿವೇಣಿ ಸಂಗಮ ಕ್ಷೇತ್ರ'ದಲ್ಲಿ 2025ರ ವರ್ಷಾರಂಭದಲ್ಲಿ ನಡೆಯಲಿರುವ ಮಹಾ ಕುಂಭಮೇಳಕ್ಕೆ ಕರ್ನಾಟಕದಿಂದ ತೆರಳುವ ಭಕ್ತರಿಗಾಗಿ ಮೈಸೂರ್ ನಗರ ರೈಲ್ವೆ ನಿಲ್ದಾಣದಿಂದ ಉತ್ತರ ಪ್ರದೇಶದ ಲಖನೌ ಜಂಕ್ಷನ್‌ಗೆ ವಿಶೇಷ ರೈಲು ವ್ಯವಸ್ಥೆ ಮಾಡಲಾಗಿದೆ. ನೈರುತ್ಯ ರೈಲ್ವೆಗೆ ಸೇರಿದ ರೈಲು ಸಂಖ್ಯೆ 06216 ಮೈಸೂರು-ಲಖನೌ ಜಂಕ್ಷನ್ ಏಕಮುಖ ಸ್ಪೆಷಲ್ ಎಕ್ಸ್‌ಪ್ರೆಸ್ ಡಿ.29ರ ಭಾನುವಾರ ರಾತ್ರಿ 12.30ಕ್ಕೆ ಮೈಸೂರಿನಿಂದ ಹೊರಟು ಡಿ.31ರ ಮಂಗಳವಾರ ನಸುಕಿನ 4 ಗಂಟೆಗೆ ಲಖನೌ ಜಂಕ್ಷನ್ ತಲುಪಲಿದೆ. ಈ ವಿಶೇಷ ರೈಲಿಗೆ ಮಂಡ್ಯ, ಬೆಂಗಳೂರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ, ಯಶವಂತಪುರ ಜಂಕ್ಷನ್, ತುಮಕೂರು, ಅರಸೀಕೆರೆ ಜಂಕ್ಷನ್, ಕಡೂರು, ಚಿಕ್ಕಜಾಜೂರು ಜಂಕ್ಷನ್, ದಾವಣಗೆರೆ, ಹಾವೇರಿ, ಎಸ್‌ಎಸ್‌ಎಸ್ ಹುಬ್ಬಳ್ಳಿ ಜಂಕ್ಷನ್, ಧಾರವಾಡ, ಬೆಳಗಾವಿ, ಘಟಪ್ರಭಾ, ನಂತರ ಮಹಾರಾಷ್ಟ್ರದ ಮೀರಜ್ ಜಂಕ್ಷನ್, ಸಾಂಗ್ಲಿ, ಕರಡ್, ಪುಣೆ ಜಂಕ್ಷನ್, ದೌಂಡ್ ಕಾರ್ಡ್ ಲೈನ್, ಅಹಮದ್ ನಗರ, ಮನ್ಮಾಡ್ ಜಂಕ್ಷನ್, ಭೂಸಾವಲ್ ಜಂಕ್ಷನ್, ಖಾಂಡ್ವಾ, ತಲ್ವಾಡಿಯಾ, ಭೋಪಾಲ್, ಖಾಂಡ್ವಾ, ತಲ್ವಾಡಿಯಾ, ಚನೇರಾ, ಖಾಂಡ್ವಾ, ತಲ್ವಾಡ್ಯ, ಚನೇರಾ, ಖಾಂಡ್ವಾ ನಿಲ್ದಾಣಗಳಲ್ಲಿ ನಿಲುಗಡೆ ಇರಲಿದೆ. ಈ ವಿಶೇಷ ರೈಲು 2ನೇ ದರ್ಜೆಯ 11 ಜನರಲ್ ಬೋಗಿಗಳು, 7 ಸ್ಲೀಪರ್ ಕ್ಲಾಸ್ ಬೋಗಿಗಳು ಮತ್ತು ಎಸ್‌ಎಲ್‌ಆರ್‌ಡಿ ಸೇರಿದಂತೆ 20 ಬೋಗಿಗಳನ್ನು ಒಳಗೊಂಡಿರುತ್ತದೆ ಎಂದು ಪ್ರಕಟಣೆ ತಿಳಿಸಿದೆ.

ಅಣೆಕಟ್ಟೆ: ಚೀನಾ ಸಮರ್ಥನೆ

ಬೀಜಿಂಗ್: ಟಿಬೆಟ್ ಭಾಗದಲ್ಲಿ ಬ್ರಹ್ಮಪುತ್ರಾ ನದಿಗೆ ಅಡ್ಡಲಾಗಿ ವಿಶ್ವದಲ್ಲೇ ಅತಿದೊಡ್ಡದೆನಿಸುವ ಅಣೆಕಟ್ಟೆ ನಿರ್ಮಾಣ ಮಾಡುವ ಯೋಜನೆಯಿಂದ ನದಿಯ ಹರಿವು ಒಳಗೊಂಡಿರುವ ದೇಶಗಳ ಮೇಲೆ ಯಾವುದೇ ನಕಾರಾತ್ಮಕ ಪರಿಣಾಮ ಬೀರುವುದಿಲ್ಲ. ಸುರಕ್ಷತೆಗೆ ಎದುರಾಗಬಹುದಾದ ಸಮಸ್ಯೆಗಳನ್ನು ದಶಕಗಳ ಅಧ್ಯಯನಗಳ ಮೂಲಕ ಸಮರ್ಪಕವಾಗಿ ಪರಿಹರಿಸಲಾಗಿದೆ ಎಂದು ಹೇಳಿರುವ ಚೀನಾ, ಯೋಜನೆ ಜಾರಿಯನ್ನು ಸಮರ್ಥಿಸಿಕೊಂಡಿದೆ. 13700 ಕೋಟಿ ಅಮೆರಿಕನ್ ಡಾಲರ್ ವೆಚ್ಚದಲ್ಲಿ ವಿಶ್ವದಲ್ಲೆ ಅತಿ ದೊಡ್ಡದಾಗ ಅಣೆಕಟೆಯನ್ನು ಚೀನಾ ನಿರ್ಮಾಣ ಮಾಡುತ್ತಿದೆ. ಸುರಕ್ಷತಾ ಕ್ರಮ ಕೈಗೊಂಡ ಬಳಿಕವೇ ಯೋಜನೆ ಕೈಗೆತ್ತಿಕೊಳ್ಳಲಾಗುತ್ತಿದೆ ಎಂದು ಚೀನಾ ವಿದೇಶಾಂಗ ಸಚಿವಾಲಯ ವಕ್ತಾರ ಮಾವೋ ನಿಂಗ್ ಹೇಳಿದ್ದಾರೆ. ಗಡಿಯಾಚೆಗಿನ ನದಿಗಳ ಹರಿವಿನ ವಿಷಯದಲ್ಲಿ ಚೀನಾ ಹೊಣೆಯರಿತೇ ಕೆಲಸ ಮಾಡುತ್ತದೆ ಎಂದು ಪ್ರಶ್ನೆಯೊಂದಕ್ಕೆ ನಿಂಗ್ ಉತ್ತರಿಸಿದ್ದಾರೆ. ಟಿಬೆಟ್ ಪ್ರದೇಶದಲ್ಲಿ ಜಲವಿದ್ಯುತ್ ಘಟಕ ನಿರ್ಮಾಣ ಕುರಿತು ದಶಕಗಳ ಕಾಲ ಅಧ್ಯಯನ ಮಾಡಲಾಗಿದೆ. ಯೋಜನೆಯ ಸುರಕ್ಷತೆ ಮತ್ತು ಪರಿಸರ ಸಂರಕ್ಷಣೆಗಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ನದಿ ಕಡಿಮೆ ಪ್ರಮಾಣದಲ್ಲಿ ಪ್ರವಹಿಸುವ ಪ್ರದೇಶಗಳ ಮೇಲೆಯೂ ಅಣೆಕಟ್ಟೆ ಯಾವುದೇ ಪರಿಣಾಮ ಬೀರುವುದಿಲ್ಲ. ನೆರೆಯ ದೇಶಗಳ ಜತೆ ಅಣೆಕಟ್ಟೆ ವಿಚಾರವಾಗಿ ಮಾತುಕತೆ ಮುಂದುವರಿಸಲಾಗುವುದು. ಅಣೆಕಟ್ಟೆ ನಿರ್ಮಾಣ ದಿಂದ ತೊಂದರೆ ಅನುಭವಿಸುವ ಜನರಿಗೆ ವಿಪತ್ತು ತಡೆ ಮತ್ತು ಪರಿಹಾರ ವಿಚಾರಗಳಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸಹಕಾರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ನಾವು ಸುಲಭವಾಗಿ ಈ ವಿಚಾರ ಬಿಡುವುದಿಲ್ಲ, ಹೋರಾಟ ಮುಂದುವರಿಸುತ್ತೇವೆ: ಎನ್.ರವಿಕುಮಾರ್

ಪ್ರಿಯಾಂಕ ಖರ್ಗೆ ರಾಜೀನಾಮೆಗೆ ಬಿಜೆಪಿ ಆಗ್ರಹ

ಬೆಂಗಳೂರು: ಗುತ್ತಿಗೆದಾರ ಸಚಿನ್ ಸಾವಿನ ಕುರಿತು ನ್ಯಾಯಾಂಗ ತನಿಖೆ ಆಗಬೇಕೆಂದಿರುವ ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್, ಸಚಿವ ಪ್ರಿಯಾಂಕ ಖರ್ಗೆ ಕೂಡಲೇ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದ್ದಾರೆ.

ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಹೆಣ್ಮಕ್ಕಳ ದುರ್ಬಳಕೆಯ ಸಂಚು ಸೇರಿದಂತೆ ಅನೇಕ ವಿಷಯಗಳು ಸಚಿನ್ ಡೆತ್‌ನೋಟ್‌ಲ್ಲಿವೆ. ತನಿಖೆ ನಡೆಯಲೆಂದು ಮುಂಚಿತವಾಗಿ ತಿಳಿಸಿದರೆ ಬಚಾವ್ ಆಗಬಹುದೆಂದು ಪ್ರಿಯಾಂಕ್ ಅವರು ಪತ್ರಿಕಾಗೋಷ್ಠಿ ಮಾಡಿದ್ದಾರೆ ಎಂದು ಆರೋಪಿಸಿದರು.

ಈಶ್ವರಪ್ಪನವರ ರಾಜೀನಾಮೆ ಪಡೆದ ದಾರಿಯಲ್ಲೇ ರಾಜೀನಾಮೆ ಕೊಡಬೇಕು. ನಿಮ್ಮ ಪಾತ್ರ ಏನೂ ಇಲ್ಲ ಎಂದು ಗೊತ್ತಾದರೆ ನೀವು ಮುಖ್ಯಮಂತ್ರಿಯಾದರೂ ನಮ್ಮ ಅಭ್ಯಂತರವಿಲ್ಲ. ನಾವು ಸುಲಭವಾಗಿ ಈ ವಿಚಾರ ಬಿಡುವುದಿಲ್ಲ. ಹೋರಾಟ ಮುಂದುವರಿಸುತ್ತೇವೆ ಎಂದರು.

ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ವಿಧಾನ ಪರಿಷತ್ ಸದಸ್ಯ ಎನ್.ರವಿಕುಮಾರ್.

ಸತ್ಯಶೋಧನಾ ಸಮಿತಿಗೆ ರಾಜ್ಯಾಧ್ಯಕ್ಷರ ನೇತೃತ್ವ: ಬಿಜೆಪಿ ಸತ್ಯಶೋಧನಾ ಸಮಿತಿಯು ಪಕ್ಷದ ರಾಜ್ಯಾಧ್ಯಕ್ಷ ವಿಜಯೇಂದ್ರ, ಅವರ ನೇತೃತ್ವದಲ್ಲಿ ಭಾನುವಾರ ತೂಗಾಂವ್ ಕಟ್ಟೆಗೆ ಭೇಟಿ ಕೊಡಲಿದೆ. ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಬಸವರಾಜ ಮತ್ತಿಮೂಡ, ಶೈಲೇಂದ್ರ ಬೆಲ್ದಾಳೆ, ಶರಣು ಸಲಗಾರ, ಸಿದ್ದು ಪಾಟೀಲ್, ಬೀದರ್ ಜಿಲ್ಲಾ ಅಧ್ಯಕ್ಷ ಸೋಮನಾಥ ಪಾಟೀಲ್, ಕಲಬುರಗಿ ಜಿಲ್ಲಾ ಅಧ್ಯಕ್ಷ ಚಂದು ಪಾಟೀಲ್, ಶಿವರಾಜ್ ಪಾಟೀಲ್ ಅವರು ಈ ಸಮಿತಿಯಲ್ಲಿ ಇರುತ್ತಾರೆ. ನಮ್ಮ ಈ ನಿಯೋಗ ಭಾಲ್ಕಿ ತಾಲೂಕಿನ ತೂಗಾಂವ್ ಕಟ್ಟೆಗೆ ಭೇಟಿ ಕೊಡುತ್ತದೆ. ಸಚಿನ್ ಮನೆಗೆ ತೆರಳಿ ವಿವರ ಪಡೆಯುತ್ತೇವೆ. ಬೆಂಗಳೂರಿನಲ್ಲಿ ಪ್ರತಿಭಟನೆ ಕುರಿತು ನಂತರ ತಿಳಿಸಲಾಗುವುದು ಎಂದರು.

> ರಾಜ್ಯದಲ್ಲಿ ಸರ್ವಾಧಿಕಾರ ತಾಂಡವವಾಡುತ್ತಿದೆ. ಸಿದ್ದರಾಮಯ್ಯನವರು ಪ್ರಜಾಪ್ರಭುತ್ವವಾದಿ, ಸಮಾಜವಾದಿ ಎಂದು ಹೇಳುತ್ತಿದ್ದು, ಅದೆಲ್ಲ ಬೋಗಸ್, ಬೂಸಾ. ಸಚಿನ್ ಬರೆದ ಪತ್ರದ ಮಾಹಿತಿಯ ಇಂಚಿಂಚನ್ನೂ ರಾಜ್ಯದಲ್ಲಿ ನಾವು ಪ್ರಚಾರ ಮಾಡುತ್ತೇವೆ.
> -ಎನ್.ರವಿಕುಮಾರ್ ಪರಿಷತ್ ಸದಸ್ಯ

ಕಲಬುರಗಿಯಲ್ಲಿ ಪ್ರಿಯಾಂಕ ಖರ್ಗೆ ಅಟ್ಟಹಾಸ

ಬೆಂಗಳೂರು: ಕಲಬುರಗಿ ಜಿಲ್ಲಾ ಉಸ್ತುವಾರಿ ಸಚಿವ ಪ್ರಿಯಾಂಕ ಖರ್ಗೆ ಅಟ್ಟಹಾಸ ಬಹಳ ನಡೆಯುತ್ತಿದೆ ಎಂದು ವಿಧಾನ ಪರಿಷತ್ ಪ್ರತಿಪಕ್ಷ ನಾಯಕ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಲಬುರಗಿಯಲ್ಲಿ ಆಡಳಿತ ಸಂಪೂರ್ಣವಾಗಿ ಕುಸಿದಿದೆ. ಎಲ್ಲದರಲ್ಲೂ ತಮಗೆ ಬೇಕಾದವರನ್ನು ಸಹಚರರನ್ನಾಗಿ ಜೋಡಿಸಿಕೊಂಡು ಎಲ್ಲ ರೀತಿಯ ದಂಧೆಗಳಲ್ಲಿ ತೊಡಗಿದ್ದಾರೆ ಎಂದು ದೂರಿದರು.

ಮರಳು ದಂಧೆ ಇದೆ. ಟೈಲ್ಸ್, ಸಿಮೆಂಟ್ ಫ್ಯಾಕ್ಟರಿಗಳ ದಂಧೆ ಇದೆ. ಎಲ್ಲ ರೀತಿಯ ದಂಧೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕಾಂಟ್ರಾಕ್ಟ್ ವಿಚಾರಕ್ಕೂ ಬೇಕಾದವರ ನೇಮಕ ಆಗಿದೆ. ಇದೇ ಕಾರಣಕ್ಕೂ ಸಚಿನ್ ಅವರ ಆತ್ಮಹತ್ಯೆ ಆಗಿದ್ದು, ಇದರ ಉನ್ನತ ತನಿಖೆ ಆಗಲೇಬೇಕು ಎಂದು ಆಗ್ರಹಿಸಿದರು.

ಪ್ರಿಯಾಂಕ್ ಖರ್ಗೆ ಅವರನ್ನು ಸಚಿವ ಸ್ಥಾನದಿಂದ ಕೈಬಿಡಿ. ಅಲ್ಲದೆ ತಕ್ಷಣ ಅವರನ್ನು ಬಂಧಿಸಬೇಕು. ಅವರು ಸಂಪೂರ್ಣವಾಗಿ ತನಿಖೆಗೆ ಸಹಕರಿಸುವಂತೆ ಸರಕಾರ ಮಾಡಬೇಕು. ಇಲ್ಲದಿದ್ದರೆ ಹೋರಾಟ ಅನಿವಾರ್ಯ ಎಂದಿರುವ ಅವರು, ಮೃತ ಸಚಿನ್ ಅವರು 7 ಪುಟಗಳ ಡೆತ್ ನೋಟ್ ಬರೆದು ಸಾಮಾಜಿಕ ಜಾಲತಾಣದಲ್ಲೂ ಹಾಕಿದ್ದಾರೆ. ಅದರಲ್ಲಿ ಆಂದೋಲ ಸ್ವಾಮೀಜಿ, ಚಂದು ಪಾಟೀಲ, ಬಸವರಾಜ ಮತ್ತಿಮೂಡ ಅವರನ್ನು ಸುಪಾರಿ ಕೊಟ್ಟು ಸಾಯಿಸುವ ವಿಚಾರವೂ ಪ್ರಸ್ತಾಪವಾಗಿದೆ ಎಂದರು.

> **ರಾಜ್ಯದ ವ್ಯವಸ್ಥೆ ಬೇರೆ, ಕಲಬುರಗಿ ವ್ಯವಸ್ಥೆಯೇ ಬೇರೆ**
> ರಿಪಬ್ಲಿಕ್ ಆಫ್ ಕಲಬುರಗಿ ಆಗಿದೆ. ಕರ್ನಾಟಕದ ವ್ಯವಸ್ಥೆಯೇ ಬೇರೆ. ಕಲಬುರಗಿ ವ್ಯವಸ್ಥೆಯೇ ಬೇರೆಯಾಗಿದೆ. ಪೊಲೀಸರು ಕೂಡ ಅಲ್ಲಿ ಪ್ರಿಯಾಂಕ ಖರ್ಗೆಯವರು ಹೇಳಿದ್ದೇ ಆಡಳಿತ ಎಂಬಂತೆ ನಡೆದುಕೊಳ್ಳುತ್ತಾರೆ. ಅಲ್ಲಿ ಖರ್ಗೆ ಮನೆತನದ ದೊಡ್ಡ ಪಾರುಪತ್ಯ ನಡೆದಿದೆ. ಬೇರೆ ಯಾರಿಗೂ ಮಾತನಾಡಲು ಅವಕಾಶ ಇಲ್ಲ. ವಿಶೇಷವಾಗಿ ದಲಿತ ಸಮುದಾಯಗಳು ಅವರ ವಿರುದ್ಧ ಮಾತನಾಡಿದರೆ, ಶಿಕ್ಷೆ ಅನುಭವಿಸಬೇಕಾಗುತ್ತದೆ. ಯಾರಾದರೂ ಅವರ ವಿರುದ್ಧ ಮಾತನಾಡಿದರೆ, ಪೊಲೀಸಿನವರು ಅಂಥವರ ಮನೆ ಮುಂದೆ ಇರುತ್ತಾರೆ ಎಂದು ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು.

ಬಿಜೆಪಿಯ ಆರೋಪಕ್ಕೆ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು

ಕಲಬುರಗಿ ಅಭಿವೃದ್ಧಿಯ ರಿಪಬ್ಲಿಕ್

ಬೆಂಗಳೂರು: ತಮ್ಮ ರಾಜೀನಾಮೆಗೆ ಒತ್ತಾಯಿಸಿರುವ ಬಿಜೆಪಿಗೆ ಉತ್ತರಿಸಿರುವ ಪ್ರಿಯಾಂಕ ಖರ್ಗೆ, ಕಲಬುರಗಿ ರಿಪಬ್ಲಿಕ್ ಆಗಿರೋದು ಹೌದು, ಆದರೆ ಅದು ಅಭಿವೃದ್ಧಿ ರಿಪಬ್ಲಿಕ್ ಆಗಿದೆ ಎಂದಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪ್ರಿಯಾಂಕ್ ಖರ್ಗೆ, ಕಲಬುರಗಿ ಒಂದು ರಿಪಬ್ಲಿಕ್ ಆಗಿರುವುದು ಹೌದು. ಆದರೆ ಬಳ್ಳಾರಿ ರೀತಿಯಲ್ಲ, ಅಭಿವೃದ್ಧಿಯ ರಿಪಬ್ಲಿಕ್ ಆಗಿದೆ ಎಂದಿದ್ದಾರೆ. ಅಲ್ಲದೆ, ಬೀದರ್ ನಲ್ಲಾದ ಘಟನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿರುವ ಯುವಕನ ಆತ್ಮಕ್ಕೆ ಶಾಂತಿ ಸಿಗಲಿ. ಈ ರೀತಿ ಘಟನೆ ಆಗಬಾರದಿತ್ತು. ಅವರ ಕುಟುಂಬಕ್ಕೆ ದುಃಖ ಭರಿಸೋ ಶಕ್ತಿ ಸಿಗಲಿ ಎಂದರು.

ನಮ್ಮ ಬಗ್ಗೆ ಮಾತನಾಡುವ ಬದಲು ಕಲಬುಗರಿಯ ನಿಮ್ಮ ನಾಯಕರ ಬಗ್ಗೆ ತಿಳಿದುಕೊಳ್ಳಿ ಎಂದು ಬಿಜೆಪಿ ಹೈಕಮಾಂಡ್‌ಗೆ ಸಲಹೆ ನೀಡಿದ್ದಾರೆ. ಕಲಬುರಗಿಯ ನಿಮ್ಮ ನಾಯಕರು ಏನ್ ಮಾಡ್ತಾರೆ ಅನ್ನುವುದನ್ನು ಕೇಳಲಿ. ಕಲಬುರಗಿಯಲ್ಲಿ ಐಪಿಎಲ್ ಬೆಟ್ಟಿಂಗ್, ಸ್ಯಾಂಡ್ ಮಾಫಿಯಾ ಮಾಡುವುದು ಯಾರು ಕೇಳಿ? ಪರಿತರ ಅಕ್ಕಿ, ಹಾಲಿನ ಪೌಡರ್ ಪ್ರಕರಣ ಯಾರ ಮೇಲೆ ದಾಖಲಾಗಿದೆ ಅವರು ಯಾರ ಪಕ್ಷದವರು? ಕಳೆದ ಕೆಲ ತಿಂಗಳ ಹಿಂದೆ ಬೇಲ್ ಮೇಲೆ ಆಚೆ ಬಂದವರು ಯಾರು ತಿಳಿದುಕೊಳ್ಳಿ ಎಂದು ಬಿಜೆಪಿಗೆ ತಿರುಗೇಟು ನೀಡಿದ್ದಾರೆ.

ರಾಜೀನಾಮೆ ಕೇಳೋದು ಫ್ಯಾಷನ್: ಏನೇ ಆದರೂ ಪ್ರಿಯಾಂಕ ಖರ್ಗೆಗೆ ರಾಜೀನಾಮೆ ಕೊಡಬೇಕು ಎನ್ನುತ್ತಾರೆ. ರಾಜೀನಾಮೆ ಕೇಳುವುದು ಬಿಜೆಪಿಗರಿಗೆ ಫ್ಯಾಷನ್ ಆಗಿದೆ. ಈ ಹಿಂದೆಯೂ ರಾಜೀನಾಮೆಗೆ ಆಗ್ರಹಿಸಿದ್ದರು. ಅಂದು ಚಿತ್ತೂರಿನ ಬಿಜೆಪಿ ಅಭ್ಯರ್ಥಿಮೇಲೆ ಹಲ್ಲೆ ಆಗಿದೆ ಎಂದು ರಾಜೀನಾಮೆ ಕೇಳಿದ್ದರು. ನಂತರ ತನಿಖೆಯಲ್ಲಿ ಆ ವ್ಯಕ್ತಿ ಕುಡಿದು ಬಿದ್ದು ಗಾಯ ಮಾಡ್ಕೊಂಡು ನಾಟಕ ಮಾಡಿರೋದು ಗೊತ್ತಾಯ್ತು. ನಾನು ಇಲ್ಲಿವರೆಗೂ ಬೀದರ್ ಎಸ್‌ಪಿಗೆ ಕರೆ ಕೂಡ ಮಾಡಿಲ್ಲ. ಕೇವಲ ರೈಲ್ವೆ ಪೊಲೀಸ್ ಎಸ್‌ಪಿಗೆ ಮಾತ್ರ ಕರೆ ಮಾಡಿ ಏನಾಗಿದೆ ಎಂದು ಕೇಳಿದ್ದೇನೆ ಎಂದು ಸ್ಪಷ್ಟನೆ ನೀಡಿದರು.

> ಮಾತೆತ್ತಿದರೆ ನಮ್ಮದು 50 ಸಾವಿರ ಕೋಟಿ ರು.ಆಸ್ತಿ ಇದೆ ಎನ್ನುತ್ತಾರೆ. ಇವರ ಯೋಗ್ಯತೆಗೆ 5 ಕೋಟಿ ರು. ತೋರಿಸಿಲ್ಲ. ಎಲ್ಲಾ ಹಿಟ್ ಆ್ಯಂಡ್ ರನ್ ಅಷ್ಟೇ. ಅವರಿಗೆ ಗೊತ್ತು. ಬಿಜೆಪಿಯವರ ಮೇಲೆ ಮಾನನಷ್ಟ ಮೊಕದ್ದಮೆ ಪ್ರಕರಣ ದಾಖಲಿಸಿದ್ದೇನೆ. ಮೃತ ಸಚಿನ್ ನನ್ನನ್ನ ಭೇಟಿ ಮಾಡಿಲ್ಲ. ನಾನು ಅವನೊಟ್ಟಿಗೆ ಮಾತಾಡಿಯೂ ಇಲ್ಲ
> ಪ್ರಿಯಾಂಕ್ ಖರ್ಗೆ, ಐಟಿ, ಬಿಟಿ ಸಚಿವ

> **ನಾನು ಬಿಜೆಪಿಯವರ ಮನೆ ದೇವ್ರು!**
> ಬಿಜೆಪಿಯವರು ನನ್ನ ಹೆಸರನ್ನೇ ಜಪ ಮಾಡುತ್ತಾರೆ. ದಿನವೂ ನನ್ನ ಹೆಸರು ಹೇಳದೇ ಇದ್ದರೆ ಅವರಿಗೆ ಊಟ ಜೀರ್ಣವಾಗಲ್ಲ. ಹೀಗಾಗಿ ಬಿಜೆಪಿಯವರ ಮನೆ ದೇವರು ನಾನು. ದಿನವೂ ಜಪ ಮಾಡುತ್ತಾರೆ. ಕುಟುಂಬದಲ್ಲಿ ಸಾವಾಗಿದೆ ನೋವಿನ ವಿಚಾರ. ಆದರೆ ಎಲ್ಲವನ್ನು ಸಿಬಿಐಗೆ ಕೊಟ್ಟರೆ ಹೇಗೆ? ಈ ಹಿಂದೆ ಎಲ್ಲವೂ ಕೊಟ್ಟರಲ್ಲ ಏನಾಗಿದೆ? ಬಿಜೆಪಿಯವರು ಹೇಳುವುದು ಒಂದು ನೀತಿ ಪಾಠ ನಮಗೊಂದು ಅಲ್ಲ. ನಾನು ದಾಖಲೆ ಇಲ್ಲದೆ ಮಾತನಾಡಲಾರೆ.

ಗಾಜಾ ಆಸ್ಪತ್ರೆಯ ನಿರ್ದೇಶಕ ಡಾ.ಹುಸ್ಸಮ್‌ಇಸ್ರೇಲ್ ವಶಕ್ಕೆ

ದೀರ್ ಅಲ್-ಬಲಾಹ್: ಉತ್ತರ ಗಾಜಾದ ಮೇಲೆ ದಾಳಿ ನಡೆಸಿರುವ ಇಸ್ರೇಲ್ ಸೇನೆಯು ಆಸ್ಪತ್ರೆಯೊಂದರ ನಿರ್ದೇಶಕರೊಬ್ಬರನ್ನು ವಶಕ್ಕೆ ಪಡೆದಿದೆ. ದಾಳಿಯಲ್ಲಿ ಮಕ್ಕಳು ಸೇರಿದಂತೆ 9 ಮಂದಿ ಮೃತಪಟ್ಟಿದ್ದಾರೆ. ಕಮಲ್ ಅಡ್ವಾನ್ ಆಸ್ಪತ್ರೆಯ ನಿರ್ದೇಶಕ ಡಾ.ಹುಸಮ್ ಅಬು ಸಫಿಯಾ ಅವರನ್ನು ಮತ್ತು ಇತರ ಸಿಬ್ಬಂದಿಯನ್ನು ಇಸ್ರೇಲ್ ಪಡೆ ಶುಕ್ರವಾರ ಬಂಧಿಸಿ ವಿಚಾರಣಾ ಕೇಂದ್ರದಲ್ಲಿ ಇಟ್ಟುಕೊಂಡಿದೆ ಎಂದು ಗಾಜಾದ ಆರೋಗ್ಯ ಇಲಾಖೆ ಹೇಳಿದೆ.

ಆಸ್ಪತ್ರೆಗೆ ನುಗ್ಗಿದ ಇಸ್ರೇಲ್ ಸೈನಿಕರು ಸಿಬ್ಬಂದಿ ಮತ್ತು ರೋಗಿಗಳು ಹೊರಹೋಗುವಂತೆ ಒತ್ತಾಯಿಸಿದ್ದಾರೆ ಎಂದು ತಿಳಿಸಿದೆ.

ಹುಸಮ್ ಅಬು ಅವರನ್ನು ವಶಕ್ಕೆ ಪಡೆದಿರುವ ಬಗ್ಗೆ ಇಸ್ರೇಲ್ ಸೇನೆ ಪ್ರತಿಕ್ರಿಯೆ ನೀಡಿಲ್ಲ. ಆಸ್ಪತ್ರೆಯ ಒಳಗೆ ನುಗ್ಗಿ ದಾಳಿ ನಡೆಸಲಾಗಿಲ್ಲ, ಆದರೆ ಜನರು ಹೊರಗೆ ಹೋಗುವಂತೆ ಆದೇಶಿಸಲಾಗಿದೆ ಎಂದು ಇಸ್ರೇಲ್ ಸೇನೆ ಶುಕ್ರವಾರ ಹೇಳಿತ್ತು.

ಕಳೆದ 24 ಗಂಟೆಗಳಲ್ಲಿ 48 ಜನ ಇಸ್ರೇಲ್ ದಾಳಿಯಿಂದಾಗಿ ಮೃತಪಟ್ಟಿದ್ದಾರೆ ಎಂದು ಗಾಜಾ ಆರೋಗ್ಯ ಇಲಾಖೆ ತಿಳಿಸಿದೆ.

ಇಸ್ರೇಲ್ ದಾಳಿಯಿಂದ ಸ್ವಲ್ಪದರಲ್ಲೇ ಪಾರಾದೆ

ಜಿನೇವಾ: ಹುಥಿ ಬಂಡುಕೋರರ ವಶದಲ್ಲಿರುವ ಯೆಮನ್ ರಾಜಧಾನಿ ಸನಾದ

ವಿಮಾನ ನಿಲ್ದಾಣದ ಮೇಲೆ ಇಸ್ರೇಲ್ ನಡೆಸಿದ ದಾಳಿಯಿಂದ ಸ್ವಲ್ಪದರಲ್ಲೇ ಪಾರಾದೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಮುಖ್ಯಸ್ಥ ಟೆಡ್ರೋಸ್ ಗೆಬ್ರೆಯೆಸಸ್ ಶನಿವಾರ ಹೇಳಿದ್ದಾರೆ.

ಬಿಬಿಸಿ ರೆಡಿಯೊಗೆ ಮಾತನಾಡಿರುವ ಗೆಬ್ರೆಯೆಸಸ್, ಸನಾದಲ್ಲಿ ವಿಮಾನ ಏರಲು ಗುರುವಾರ ಸಿದ್ಧತೆ ನಡೆಸುತ್ತಿದ್ದಾಗ ದಾಳಿ ನಡೆಸಲಾಯಿತು. ಅಂತಾರಾಷ್ಟ್ರೀಯ ಕಾನೂನಿನಡಿ ನಾಗರಿಕರ ರಕ್ಷಣೆಯಾಗಬೇಕು ಎಂದು ಒತ್ತಾಯಿಸಿದ್ದಾರೆ.

ಸನಾ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣ ಹಾಗೂ ಯೆಮನ್‌ನ ಇತರ ಸ್ಥಳಗಳನ್ನು ಗುರಿಯಾಗಿಸಿ ಇಸ್ರೇಲ್ ಗುರುವಾರ ವಾಯು ದಾಳಿ ನಡೆಸಿದೆ. ಬಂಡುಕೋರರು ಇಸ್ರೇಲ್‌ನತ್ತ ಕ್ಷಿಪಣಿ ಉಡಾಯಿಸಿದ್ದಕ್ಕೆ ಪ್ರತಿಯಾಗಿಸಿ ಈ ದಾಳಿ ನಡೆಸಲಾಗಿದೆ ಎಂದು ವರದಿಯಾಗಿದೆ.

ದ.ಕೊರಿಯಾ ಹಂಗಾಮಿ ಅಧ್ಯಕ್ಷರಿಗೆ ವಾಗ್ದಂಡನೆ

ಸೋಲ್: ದಕ್ಷಿಣ ಕೊರಿಯಾದ ನ್ಯಾಷನಲ್ ಅಸೆಂಬ್ಲಿಯು (ಸಂಸತ್) ಹಂಗಾಮಿ ಅಧ್ಯಕ್ಷ

ಹಂಗಾಮಿ ಅಧ್ಯಕ್ಷ ಹಾನ್ ಡಕ್-ಸೂ ಅವರಿಗೆ ವಾಗ್ದಂಡನೆ ವಿಧಿಸುವ ನಿರ್ಣಯವನ್ನು ಅಂಗೀಕರಿಸಿದೆ.

ಆಡಳಿತ ಪಕ್ಷಗಳ ತೀವ್ರ ವಿರೋಧದ ನಡುವೆಯೇ ವಾಗ್ದಂಡನೆ ನಿರ್ಣಯವನ್ನು 192-0 ಮತಗಳಿಂದ ಅಂಗೀಕರಿಸಲಾಯಿತು. ವಾಗ್ದಂಡನೆ ನಿರ್ಣಯ ಅಂಗೀಕರಿಸಿರುವ ಕಾರಣ ಅವರನ್ನು ಅಧ್ಯಕ್ಷ ಸ್ಥಾನದಿಂದ ವಜಾಗೊಳಿಸಬೇಕೇ ಅಥವಾ ಮುಂದುವರಿಸಬೇಕೇ ಎಂಬುದನ್ನು ದೇಶದ ಸಾಂವಿಧಾನಿಕ ನ್ಯಾಯಾಲಯವು ನಿರ್ಧರಿಸಲಿದೆ. ಅದುವರೆಗೂ ಅವರು ಅಧ್ಯಕ್ಷರ ಯಾವುದೇ ಅಧಿಕಾರವನ್ನು ಅನುಭವಿಸುವಂತಿಲ್ಲ.

- ಆಡಳಿತ ಪಕ್ಷಗಳ ತೀವ್ರ ವಿರೋಧದ ನಡುವೆಯೇ 192-0 ಮತಗಳಿಂದ ನಿರ್ಣಯ ಅಂಗೀಕಾರ
- ವಾಗ್ದಂಡನೆ ನಿರ್ಣಯವನ್ನು ವಿರೋಧಿಸಿದ ಆಡಳಿತ ಪಕ್ಷದ ಸದಸ್ಯರು ಮತದಾನದಿಂದ ದೂರ

ಪ್ರಧಾನಿಗೆ ಚೆಸ್ ಫಲಕ ಉಡುಗೊರೆ ನೀಡಿದ ವಿಶ್ವ ಚಾಂಪಿಯನ್

ಮೋದಿ ಭೇಟಿಯಾದ ಗುಕೇಶ್

ದೆಹಲಿ: ವಿಶ್ವ ಚೆಸ್ ಚಾಂಪಿಯನ್ ಡಿ.ಗುಕೇಶ್ ಅವರು ಶನಿವಾರ ಕುಟುಂಬ ಸಮೇತ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿದ್ದಾರೆ.

ಗುಕೇಶ್ ಭೇಟಿಯಾಗಿರುವ ಫೋಟೊಗಳನ್ನು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಹಂಚಿಕೊಂಡಿದ್ದಾರೆ.

'ಚೆಸ್ ಚಾಂಪಿಯನ್ ಮತ್ತು ಭಾರತದ ಹೆಮ್ಮೆಯ ಗುಕೇಶ್ ಅವರೊಂದಿಗೆ ಉತ್ತಮ ಮಾತುಕತೆ ನಡೆಸಲಾಯಿತು. ಗುಕೇಶ್ ಎಂದ ತಕ್ಷಣ ನನಗೆ ಮನಸ್ಸಿಗೆ ಹೊಳೆಯುವುದು ಅವರ ಧೃಢ ನಿಶ್ಚಯ ಮತ್ತು ಸಮರ್ಪಣೆ. ಅವರ ಆತ್ಮವಿಶ್ವಾಸ ನಿಜಕ್ಕೂ ಸ್ಫೂರ್ತಿದಾಯಕ. ಕೆಲವು ವರ್ಷಗಳ ಹಿಂದೆ ಅತ್ಯಂತ ಕಿರಿಯ ವಯಸ್ಸಿನ ಚೆಸ್ ಚಾಂಪಿಯನ್ ಆಗಬೇಕೆಂಬ ಕನಸಿನ ಮಾತುಗಳನ್ನಾಡಿದ ವಿಡಿಯೊ ನೋಡಿದ್ದನ್ನು ನಾನು ನೆನಪಿಸಿಕೊಳ್ಳುತ್ತೇನೆ. ಇಂದು ಅವರ ಸ್ವ ಪ್ರಯತ್ನಗಳಿಂದ ಅದು ನಿಜವಾಗಿದೆ' ಎಂದು ಪ್ರಧಾನಿ ಮೋದಿ ಅವರು ಗುಕೇಶ್‌ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

'ಆತ್ಮವಿಶ್ವಾಸದ ಜತೆಗೆ ಗುಕೇಶ್ ಶಾಂತತೆ ಮತ್ತು ನಮ್ರತೆಯನ್ನು ಹೊಂದಿದ್ದಾರೆ. ಪ್ರತಿಯೊಬ್ಬ ಕ್ರೀಡಾಪಟುವಿನ ಯಶಸ್ಸಿನಲ್ಲಿ ಅವರ ಹೆತ್ತವರು ಪ್ರಮುಖ ಪಾತ್ರ ವಹಿಸುತ್ತಾರೆ. ಗುಕೇಶ್ ಅವರನ್ನು ಬೆಂಬಲಿಸಿದ್ದಕ್ಕಾಗಿ ಆತನ ಪೋಷಕರನ್ನು ಅಭಿನಂದಿಸಿದೆ. ಗುಕೇಶ್ ಪೋಷಕರ ಸಮರ್ಪಣೆಯು ಕ್ರೀಡೆಯನ್ನು ವೃತಿಯಾಗಿ ಮುಂದುವರಿಸಬೇಕೆಂದು ಕನಸು ಕಾಣುವ ಯುವ ಆಕಾಂಕ್ಷಿಗಳ ಅಸಂಖ್ಯಾತ ಪೋಷಕರಿಗೆ ಸ್ಫೂರ್ತಿ ನೀಡುತ್ತದೆ' ಎಂದು ಮೋದಿ ಹೇಳಿದ್ದಾರೆ.



ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿ ಮಾಡಿದ ಡಿ.ಗುಕೇಶ್.

- 18 ವರ್ಷದ ಗುಕೇಶ್ ಅವರು ಇತ್ತೀಚೆಗೆ ಸಿಂಗಪುರದಲ್ಲಿ ನಡೆದ ವಿಶ್ವ ಚೆಸ್ ಚಾಂಪಿಯನ್‌ಶಿಪ್ ಫೈನಲ್‌ನಲ್ಲಿ ಚೀನಾದ ಡಿಂಗ್ ಲಿರೇನ್ ವಿರುದ್ಧ ಗೆದ್ದು ದಾಖಲೆ ಬರೆದಿದ್ದರು.
- ವಿಶ್ವ ಚೆಸ್ ಚಾಂಪಿಯನ್‌ಶಿಪ್ ಗೆದ್ದ ಅತಿ ಕಿರಿಯ ಆಟಗಾರ ಎನಿಸಿದ್ದಾರೆ. ಹಾಗೆಯೇ ಐದು ಬಾರಿಯ ವಿಶ್ವ ಚಾಂಪಿಯನ್ ಆನಂದ್ ಬಳಿಕ ಚೆಸ್ ಚಾಂಪಿಯನ್‌ಶಿಪ್ ಗೆದ್ದ ಎರಡನೇ ಭಾರತೀಯ ಎನಿಸಿದ್ದಾರೆ.

> ಗುಕೇಶ್ ಅವರು ಗೆದ್ದ ಆಟದ ಮೂಲ ಚದುರಂಗದ ಫಲಕವನ್ನು ಸ್ವೀಕರಿಸಿದ್ದಕ್ಕಾಗಿ ನಾನು ಸಂತೋಷ ಪಡುತ್ತೇನೆ. ಗುಕೇಶ್ ಮತ್ತು ಡಿಂಗ್ ಲಿರೇನ್ ಇಬ್ಬರೂ ಸಹಿ ಮಾಡಿರುವ ಚದುರಂಗ ಫಲಕವು ಒಂದು ಸ್ಮರಣಿಕೆಯಾಗಿದೆ.
> -ನರೇಂದ್ರ ಮೋದಿ ಪ್ರಧಾನಿ

ಜೈಶಂಕರ್-ವಾಲ್ಟ್ಜ ಭೇಟಿ ದ್ವಿಪಕ್ಷೀಯ ಮಾತುಕತೆ

ಸ್ಯಾನ್ ಫ್ರಾನ್ಸಿಸ್ಕೊ: ಅಮೆರಿಕ ಪ್ರವಾಸದಲ್ಲಿರುವ ಭಾರತದ ವಿದೇಶಾಂಗ ಸಚಿವ ಎಸ್.ಜೈಶಂಕರ್, ಚುನಾಯಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಈಗಾಗಲೇ ನೇಮಕ ಮಾಡಿರುವ ರಾಷ್ಟ್ರೀಯ ಭದ್ರತಾ ಸಲಹೆಗಾರ ಮೈಕೆಲ್ ವಾಲ್ಟ್ಜ ಅವರನ್ನು ಭೇಟಿಯಾಗಿ, ಮಾತುಕತೆ ನಡೆಸಿದ್ದಾರೆ.

ಉಭಯ ರಾಷ್ಟ್ರಗಳ ದ್ವಿಪಕ್ಷೀಯ ಸಂಬಂಧ ವೃದ್ಧಿ ಹಾಗೂ ಪ್ರಸ್ತುತ ಜಾಗತಿಕ ವಿಷಯಗಳ ಕುರಿತು ಈ ಇಬ್ಬರೂ ನಾಯಕರು ಚರ್ಚಿಸಿದರು. ಚುನಾಯಿತ ಅಧ್ಯಕ್ಷ ಟ್ರಂಪ್ ಅವರ ಮುಂದಿನ ಆಡಳಿತದ ಉನ್ನತಾಧಿಕಾರಿಯ ಜತೆಗೆ ಭಾರತದ ಸಚಿವರು ನಡೆಸಿದ ಮೊದಲ ಸಭೆ ಇದು. ವಾಷಿಂಗ್ಟನ್ ಡಿಸಿಯಲ್ಲಿ ನಡೆದ ಭಾರತೀಯ ರಾಯಭಾರಿಗಳ ಎರಡು ದಿನಗಳ ಸಮ್ಮೇಳನದಲ್ಲಿ ಜೈಶಂಕರ್ ಪಾಲ್ಗೊಂಡಿದ್ದರು.

> ನಮ್ಮ ದ್ವಿಪಕ್ಷೀಯ ಬಾಂಧವ್ಯದ ಬಗ್ಗೆ ಹಾಗೂ ಸದ್ಯದ ಜಾಗತಿಕ ವಿಷಯಗಳ ಕುರಿತು ವಿಸ್ತೃತ ಮಾತುಕತೆ ನಡೆಯಿತು. ಮೈಕೆಲ್ ವಾಲ್ಟ್ಜ ಅವರೊಂದಿಗೆ ಕೆಲಸ ಮಾಡಲು ಎದುರು ನೋಡುತ್ತಿದ್ದೇನೆ. ಭಾರತ-ಅಮೆರಿಕದ ಸಹಭಾಗಿತ್ವದ ನಿರಂತರ ಬೆಳವಣಿಗೆಯನ್ನು ಈ ಮಾತುಕತೆಯು ಮತ್ತಷ್ಟು ವೇಗಗೊಳಿಸುವ ವಿಶ್ವಾಸವಿದೆ.
> - ಎಸ್.ಜೈಶಂಕರ್ ವಿದೇಶಾಂಗ ಸಚಿವ



ಅಮೆರಿಕ ಪ್ರವಾಸದಲ್ಲಿರುವ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು ಟ್ರಂಪ್ ಆಡಳಿತದ ನಿಯೋಜಿತ ರಾಷ್ಟ್ರೀಯ ಭದ್ರತಾ ಸಲಹೆಗಾರ ಮೈಕೆಲ್ ವಾಲ್ಟ್ಜ ಅವರನ್ನು ಭೇಟಿಯಾಗಿ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಛತ್ರಪತಿ ಶಿವಾಜಿ ಪ್ರತಿಮೆ ಅನಾವರಣ

ಪಾಂಗಾಂಗ್ ಸರೋವರದ ದಡದಲ್ಲಿ ಸ್ಥಾಪಿಸಿರುವ ಛತ್ರಪತಿ ಶಿವಾಜಿ ಪ್ರತಿಮೆ ಎದುರು ಯೋಧರು.

ದೆಹಲಿ: ಪೂರ್ವ ಲಡಾಖ್ ವಲಯದಲ್ಲಿ ಚೀನಾದೊಂದಿಗೆ ಹಂಚಿಕೆಯಾಗಿರುವ ಎಲ್‌ಎಸಿ ಸಮೀಪದಲ್ಲಿರುವ ಪಾಂಗಾಂಗ್ ಸರೋವರದ ದಡದಲ್ಲಿ ಛತ್ರಪತಿ ಶಿವಾಜಿ ಪ್ರತಿಮೆಯನ್ನು ಭಾರತೀಯ ಸೇನೆ ಅನಾವರಣಗೊಳಿಸಿದೆ.

'ಫೈರ್ ಅಂಡ್ ಫ್ಯೂರಿ ಕಾರ್ಪ್ಸ್' ಎಂದೇ ಹೆಸರುವಾಸಿಯಾದ ಲೇಹ್ ನೆಲೆಯ '14 ಕಾರ್ಪ್ಸ್' ಈ ಮಾಹಿತಿಯನ್ನು ಎಕ್ಸ್‌ನಲ್ಲಿ ಹಂಚಿಕೊಂಡಿದೆ. ಪ್ರತಿಮೆಯನ್ನು ಸಮುದ್ರ ಮಟ್ಟದಿಂದ 14,300 ಅಡಿ ಎತ್ತರದಲ್ಲಿ ಸ್ಥಾಪಿಸಲಾಗಿದೆ. ಶೌರ್ಯ, ದೂರದೃಷ್ಟಿ, ಅಚಲ ನ್ಯಾಯದ ಸಂಕೇತವಾಗಿರುವ ಶಿವಾಜಿಯ ಮೂರ್ತಿಯನ್ನು ಲೆಫ್ಟಿನೆಂಟ್ ಜನರಲ್ ಹಿತೇಶ್ ಭಲ್ಲಾ ಗುರುವಾರ ಅನಾವರಣಗೊಳಿಸಿದ್ದಾರೆ ಎಂದು ತಿಳಿಸಿದೆ.

ಕಳೆದ ಐದು ತಿಂಗಳಿನಿಂದ ಕುರ್ಸ್ಕ್‌ನ ಬಹುಭಾಗ ಹಿಡಿತಕ್ಕೆ ಪಡೆದಿದ್ದ ಉಕ್ರೇನ್ ಸೇನೆ

ಗೆದ್ದ ನೆಲ ಕೈಬಿಡುವ ಸ್ಥಿತಿಯಲ್ಲಿ ಉಕ್ರೇನ್

ಕೀವ್: ರಷ್ಯಾದ ಮೇಲೆ ಪ್ರತಿ ದಾಳಿ ನಡೆಸಿ ಕುಸ್ರ್ಕ್ ಭೂಪ್ರದೇಶ ಆಕ್ರಮಿಸಿಕೊಂಡಿದ್ದ ಉಕ್ರೇನ್ ಸೇನೆ ಈಗ ಅದನ್ನು ಕಳೆದುಕೊಳ್ಳುವ ಸ್ಥಿತಿಗೆ ಸಿಲುಕಿದೆ.

ಕಳೆದ ಐದು ತಿಂಗಳಿನಿಂದ ಕುರ್ಸ್ಕ್‌ನ ಬಹುಭಾಗ ಹಿಡಿತಕ್ಕೆ ಪಡೆದಿದ್ದ ಉಕ್ರೇನ್ ಸೇನೆ ಈಗ ರಷ್ಯಾದ ಪ್ರತಿದಾಳಿಗೆ ತತ್ತರಿಸಿದ್ದು, ಸಾವಿರಾರು ಸೈನಿಕರು ಸತ್ತಿರುವ ಶಂಕೆ ಇದೆ. ಗಾಯಾಳು ಸೈನಿಕರು ಮತ್ತು ಮೃತಪಟ್ಟ ಸೈನಿಕರ ಶವಗಳನ್ನು ಸ್ಥಳಾಂತರಿಸಲು ಸಾಧ್ಯವಾಗದೆ, ಉಕ್ರೇನ್ ಸೇನೆ ಹತಾಶೆಗೆ ಸಿಲುಕಿದೆ ಎನ್ನುವ ಮಾಹಿತಿ ಹೊರಬಿದ್ದಿದೆ.

'ಇಲ್ಲಿ ಯುದ್ಧ ತುಂಬಾ ತೀವ್ರತೆ ಪಡೆದಿದೆ. ಸತ್ತವರ ಶವ ಸ್ಥಳಾಂತರಿಸಲು ಉಕ್ರೇನ್ ಸೇನಾ ಕಮಾಂಡರ್‌ಗಳಿಗೆ ಸಾಧ್ಯವಾಗುತ್ತಿಲ್ಲ. ಸಂವಹನದ ಕೊರತೆ ಮತ್ತು ಕಳಪೆ ತಂತ್ರಗಾರಿಕೆಯಿಂದಾಗಿ ಬಹಳಷ್ಟು ಜೀವಹಾನಿಯಾಗಿದೆ. ಸೇನಾ ತುಕಡಿಗಳಿಗೂ ಪ್ರತಿದಾಳಿಗೆ ಮಾರ್ಗಗಳು ಇಲ್ಲದಂತಾಗಿದೆ' ಎಂದುಸೈನಿಕರು ಮತ್ತು ಕಮಾಂಡರ್‌ಗಳು ಮಾಹಿತಿ ನೀಡಿದ್ದಾರೆ.

ಉಕ್ರೇನ್ ಮೇಲೆ ಕ್ಷಿಪಣಿ ಸುರಿಮಳೆಗೈದ ರಷ್ಯಾ.

ಉಕ್ರೇನ್ ಸೇನೆಯ ಮಿಂಚಿನ ಆಕ್ರಮಣದ ಅರಿವಿಲ್ಲದೆ ಕುರ್ಸ್ಕ್‌ನಲ್ಲಿ ಹಿಡಿತ ಕಳೆದುಕೊಂಡಿದ್ದ ರಷ್ಯಾ, ನಂತರ ತನ್ನ ಮಿತ್ರರಾಷ್ಟ್ರ ಉತ್ತರ ಕೊರಿಯಾದ ಸೈನಿಕರು ಸೇರಿದಂತೆ ಸುಮಾರು 50 ಸಾವಿರಕ್ಕೂ ಹೆಚ್ಚು ಸೈನಿಕರನ್ನು ಈ ಪ್ರದೇಶಕ್ಕೆ ನಿಯೋಜಿಸಿದೆ. ಉಕ್ರೇನ್ ಆಗಸ್ಟ್‌ನಲ್ಲಿ ಕುಸ್ರ್ಕ್‌ನಲ್ಲಿ ವಶಪಡಿಸಿಕೊಂಡ 984 ಚದರ ಕಿಲೋಮೀಟರ್ ಜಾಗದಲ್ಲಿ ಶೇ.40ರಷ್ಟನ್ನು ಈಗಾಗಲೇ ಕಳೆದುಕೊಂಡಿದೆ ಎನ್ನಲಾಗುತ್ತಿದೆ.

ಮೂರು ವರ್ಷಗಳ ಹಿಂದೆ ಆರಂಭಿಸಿದ ಪೂರ್ಣ ಪ್ರಮಾಣದ ಆಕ್ರಮಣದಲ್ಲಿ ಉಕ್ರೇನ್‌ನ ಐದನೇ ಒಂದು ಭಾಗವನ್ನು ರಷ್ಯಾ ಆಕ್ರಮಿಸಿಕೊಂಡಿದೆ. ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಕುರ್ಸ್ಕ್ ಮೇಲಿನ ನಿಯಂತ್ರಣವು, ರಷ್ಯಾ ಯುದ್ಧ ಕೊನೆಗೊಳಿಸುವ ಮಾತುಕತೆಗೆ ಬರುವಂತೆ ಒತ್ತಡ ಹೇರಲು ನೆರವಾಗಲಿದೆ ಎನ್ನುವ ಭರವಸೆಯನ್ನು ತಮ್ಮ ಬೆಂಬಲಿಗ ದೇಶಗಳಿಗೆ ನೀಡಿದ್ದಾರೆ.

- ರಷ್ಯಾದ ಪ್ರತಿದಾಳಿಗೆ ಉಕ್ರೇನ್ ತತ್ತರ, ಸಾವಿರಾರು ಸೈನಿಕರು ಸತ್ತಿರುವ ಶಂಕೆ
- ಗಾಯಾಳು ಸೈನಿಕರು, ಮೃತಪಟ್ಟ ಸೈನಿಕರ ಶವ ಸ್ಥಳಾಂತರಿಸಲು ಅಸಾಧ್ಯ ಸ್ಥಿತಿ
- ಉಕ್ರೇನ್ ಸೇನೆ ಹತಾಶೆಗೆ ಸಿಲುಕಿದೆ ಎನ್ನುವ ಮಾಹಿತಿ ಹೊರಬಿದ್ದಿದೆ.
- ಕುರ್ಸ್ಕ್‌ನಲ್ಲಿ ಉಕ್ರೇನ್ ವಶಪಡಿಸಿಕೊಂಡ ಶೇ.40ರಷ್ಟು ಜಾಗ ಈಗಾಗಲೇ ರಷ್ಯಾ ಪಾಲು

ಕನ್ನಡಿಗರಾಗಿಯೂ ಕನ್ನಡ ಬರೊಲ್ಲ ಎಂದಾಗ ಬೇಸರವಾಗದೇ?

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಬೆಂಗಳೂರಿನಲ್ಲಿ ಸುಮಾರು ವರ್ಷಗಳ ಹಿಂದೆ ವಿಶ್ವ ಬಂಟರ ಸಮಾವೇಶ ನಡೆದಿತ್ತು. ಜೀವರಾಜ್ ಆಳ್ವ ನೇತೃತ್ವದಲ್ಲಿ ಈ ಕಾರ್ಯಕ್ರಮವನ್ನು ಸಂಘಟಿಸಲಾಗಿತ್ತು. 'ಮಿಸ್ ವರ್ಲ್ಡ್' ಕಿರೀಟ ಧರಿಸಿದ ಐಶ್ವರ್ಯ ರೈ ಅವರನ್ನು ಈ ಕಾರ್ಯಕ್ರಮದ ಉದ್ಘಾಟನೆಗೆ ಆಮಂತ್ರಿಸಲಾಗಿತ್ತು. ಐಶ್ವರ್ಯರನ್ನು ಕಂಡ ತಕ್ಷಣ ಪುಳಕಿತರಾದ ಕೆಲವು ಪತ್ರಕರ್ತರು, ಹೇಗಿದ್ದರೂ ಅವರು ಮಂಗಳೂರಿನವರು ಮತ್ತು ಕನ್ನಡ ಬಲ್ಲವರೆಂದು, ಕನ್ನಡದಲ್ಲಿ ಮಾತಾಡಲಾರಂಭಿಸಿದರು. ಆದರೆ ಐಶ್ವರ್ಯ ರೈ, ''ನನ..ಗೆ ... ಕ ...ನ್ನ...ಡ ಬ .. ರೊಲ್ಲ'' ಎಂದು ಹೇಳಿ ತಬ್ಬಿಬ್ಬುಗೊಳಿಸಿದ್ದರು.

ಸಾಮಾನ್ಯವಾಗಿ ಕನ್ನಡದವರ ಹತ್ತಿರ ಹೋಗಿ, ನಮ್ಮ ಮಾತೃಭಾಷೆಯಲ್ಲಿ ಮಾತಾಡಿದಾಗ, ಅವರು ''ನನಗೆ ಕನ್ನಡ ಬರೊಲ್ಲ, ಸ್ಸಾರಿ'' ಎಂದು ಹೇಳಿದರೆ ಅದರಿಂದಾಗುವ ಬೇಸರ ಅಷ್ಟಿಷ್ಟಲ್ಲ. ಕೆಲವರಿಗೆ ನಿಜಕ್ಕೂ ಕನ್ನಡ ಬರುವುದಿಲ್ಲ ಮತ್ತು ಇನ್ನು ಕೆಲವರಿಗೆ ಕನ್ನಡ ಗೊತ್ತಿದ್ದೂ ಬರೊಲ್ಲ ಎಂದು ಸೋಗು ಹಾಕುತ್ತಾರೆ. ಈ ಎರಡೂ ಪ್ರಸಂಗಗಳಲ್ಲಿ ಬೇಸರವಾಗುತ್ತದೆ. ಬಾಲಿವುಡ್ ಜನಪ್ರಿಯ ನಟಿ ದೀಪಿಕಾ ಪಡುಕೋಣೆ ಮೂಲತಃ ಕನ್ನಡದವರು. ಅವರ ತಂದೆ ಪ್ರಕಾಶ ಪಡುಕೋಣೆ ಸಹ ಕನ್ನಡದವರು. ದೀಪಿಕಾ ನಟಿಸಿದ ಮೊದಲ ಸಿನಿಮಾ ಕೂಡ ಕನ್ನಡದ್ದೇ. ಆದರೆ ಅವರ ಬಳಿ ಕನ್ನಡದಲ್ಲಿ ಮಾತಾಡಿದರೆ, ನಿಮಗೆ ನಿರಾಸೆಯಾದೀತು.

ಈ ವಿಷಯದಲ್ಲಿ ನಮ್ಮ ಕ್ರಿಕೆಟ್ ಆಟಗಾರರಾದ ಅನಿಲ್ ಕುಂಬ್ಳೆ, ಜಾವಗಲ್ ಶ್ರೀನಾಥ್, ವೆಂಕಟೇಶ ಪ್ರಸಾದ್ ಅವರೇ ವಾಸಿ. ಅವರು ಅಚ್ಚ ಕನ್ನಡದಲ್ಲಿ ಮಾತಾಡುತ್ತಾರೆ. ಸ್ವಲ್ಪವೂ ನಖರಾ ಮಾಡುವುದಿಲ್ಲ. ಅಂತಾರಾಷ್ಟ್ರೀಯ ಪಂದ್ಯಗಳಲ್ಲೂ ಅವರು ಮೈದಾನದಲ್ಲೂ ತಮ್ಮ ತಮ್ಮಲ್ಲೇ ಕನ್ನಡದಲ್ಲಿ ಮಾತಾಡಿದ್ದುಂಟು. ''ನನಗೆ ಕನ್ನಡದಲ್ಲಿ ಫ್ಲೂಯೆನ್ಸಿ ಇಲ್ಲ.. ಹೀಗಾಗಿ ಇಂಗ್ಲಿಷಿನಲ್ಲಿ ಮಾತಾಡುತ್ತೇನೆ'' ಎಂದು ಸಹ ಇವರು ಹೇಳುವುದಿಲ್ಲ. ಅಸ್ಖಲಿತ ಕನ್ನಡದಲ್ಲಿಯೇ ಮಾತಾಡುತ್ತಾರೆ.

ಕನ್ನಡ ಗೊತ್ತಿದ್ದೂ, 'ಕನ್ನಡ ಬರೊಲ್ಲ' ಎಂದು ಸೋಗು ಹಾಕುವವರು ಆತ್ಮಸಾಕ್ಷಿ ಇಲ್ಲದವರು, ಬೇರೆ ಸಂಸ್ಕೃತಿಗೆ ಗುಲಾಮರಾದವರು. ನಾನು ಕೆಲವು ವರ್ಷಗಳ ಹಿಂದೆ, ಅಂತಾರಾಷ್ಟ್ರೀಯ ಸಮಾವೇಶವೊಂದರಲ್ಲಿ ಪಾಲ್ಗೊಳ್ಳಲು, ಬೆಲ್ಜಿಯಂ ರಾಜಧಾನಿ ಬ್ರುಸೆಲ್ಸ್‌ನಲ್ಲಿರುವ ಯುರೋಪಿಯನ್ ಯೂನಿಯನ್ (ಇಯು) ಪ್ರಧಾನ ಕಚೇರಿಗೆ ಹೋಗಿದ್ದೆ. ಅಲ್ಲಿ ಮಲ್ಲಿ ಎಂ.ಪಿ. ಎಂಬುವವರನ್ನು ಭೇಟಿ ಮಾಡಿದ್ದೆ. ಅವರು ಇಯು ಮಾಧ್ಯಮ ಕಾರ್ಯದರ್ಶಿ ಅವರಿಗೆ ಮೂರನೇ ಸಹಾಯಕರಾಗಿದ್ದರು. ಅವರನ್ನು ನೋಡಿದರೆ ಅಪ್ಪಟ ಕನ್ನಡಿಗರು ಎಂದು ಹೇಳಬಹುದಿತ್ತು. ನಾನು ಕನ್ನಡದವನೆಂದು ಪರಿಚಯಿಸಿಕೊಂಡೆ. ಆದರೆ ಅವರು ಇಂಗ್ಲಿಷಿನಲ್ಲಿ ಮಾತಾಡುತ್ತಿದ್ದರು. ಆರಂಭಿಕ ಮಾತುಕತೆಯ ನಂತರ, ನನಗೆ ತಡೆದುಕೊಳ್ಳಲಾಗಲಿಲ್ಲ. ''ನೀವು ಕನ್ನಡದವರಾ?'' ಎಂದು ಕೇಳಿದೆ. ಅದಕ್ಕೆ ಅವರು ಇಂಗ್ಲಿಷಿನಲ್ಲಿ, ''ನನ್ನ ಪೂರ್ತಿ ಹೆಸರು ಮಲ್ಲಿಕಾರ್ಜುನ ಮಾಲಿಪಾಟೀಲ್, ನಾನು ಮೂಲತಃ ಧಾರವಾಡದವನು. ಆದರೆ ಇಲ್ಲಿ ಕಳೆದ 22 ವರ್ಷಗಳಿಂದ ವಾಸವಾಗಿದ್ದೇನೆ, ಹೀಗಾಗಿ ನನಗೆ ಕನ್ನಡ ಮರೆತುಹೋಗಿದೆ'' ಎಂದು ಹೇಳಿದರು. ಅದಾದ ಬಳಿಕ ನಾನು ಅವರ ಜತೆ ಅರ್ಧ ಗಂಟೆ ಇದ್ದೆ. ಅವರು ಅಪ್ಪಿತಪ್ಪಿಯೂ ಕನ್ನಡದಲ್ಲಿ ಮಾತಾಡಲು ಉತ್ಸುಕತೆ ತೋರಲಿಲ್ಲ. ಹಾಗೆಂದು ಅವರ ಇಂಗ್ಲಿಷ್ ಅಷ್ಟೇನೂ ಸೊಗಸಾಗಿರಲಿಲ್ಲ. ''ನಿಮ್ಮ ಮನೆಯವರು ಬೆಲ್ಜಿಯಂನವರಾ?'' ಎಂದು ಬೇಕೆಂದೇ ಕೇಳಿದೆ. ''ನೋ..ನೋ.. ಶಿ ಈಸ್ ಫ್ರಾಮ್ ಸೌದತ್ತಿ'' ಎಂದರು. ಹಾಗಾದ್ರೆ ಮನೆಯಲ್ಲಿ ಖಂಡಿತವಾಗಿಯೂ ಅವರು ಕನ್ನಡದಲ್ಲೇ ಮಾತಾಡುತ್ತಾರೆ ಎಂಬುದು ಖಾತ್ರಿಯಾಗಿ ಹೋಯಿತು. ನಮ್ಮವರೇ ನಮ್ಮ ಭಾಷೆ ಬರೊಲ್ಲ ಎಂದು ಅಭಿಮಾನದಿಂದ ಹೇಳುವುದು ಅದೆಂಥ ಆತ್ಮಸಂತಸ ನೀಡಬಹುದು, ನನಗಂತೂ ಅರ್ಥವಾಗಿಲ್ಲ.

1964ರ ಜೂನ್ ತಿಂಗಳ 'ಕಸ್ತೂರಿ' ಮಾಸಪತ್ರಿಕೆಯಲ್ಲಿ ಕುಲಮರ್ವ ಬಾಲಕೃಷ್ಣ ಅವರು ಖ್ಯಾತ ಕ್ರಿಕೆಟಿಗ, ಭಾರತ ತಂಡದ ಬಲಗೈ ಆರಂಭಿಕ ಆಕ್ರಮಣಕಾರಿ ಬ್ಯಾಟ್ಸ್‌ಮನ್ ಬುಧೀ ಕುಂದರನ್ (ಇವರ ಹೆಸರಿನಲ್ಲಿಯೇ 'ರನ್' ಇದ್ದುದು ಕಾಕತಾಳೀಯ) ಅವರ ಬಗ್ಗೆ ಒಂದು ಸಂದರ್ಶನ ಲೇಖನ ಬರೆದಿದ್ದಾರೆ. ಕುಲಮರ್ವ ಬಾಲಕೃಷ್ಣ ಕುಂದರನ್ ಅವರನ್ನು ಸಂದರ್ಶಿಸ ಬಯಸಿದ್ದು ಅವರು ತಮ್ಮೂರಿನವರು, ದಕ್ಷಿಣ ಕನ್ನಡದವರು, ತುಳು ಭಾಷಿಕರು ಎಂಬ ಕಾರಣಕ್ಕೆ.

ಮೂಲತಃ ಕುಂದರನ್ ದಕ್ಷಿಣ ಕನ್ನಡದ ಮೂಲ್ಕಿಯವರು. ಆದರೆ ಮುಂಬೈಯಲ್ಲಿ ವಿದ್ಯಾಭ್ಯಾಸ ಮುಂದುವರಿಸಿದವರು. ಕುಲಮರ್ವ ಅವರು ಕುಂದರನ್‌ರನ್ನು ಭೇಟಿಯಾಗುತ್ತಿದ್ದಂತೆ, ತುಳುವಿನಲ್ಲಿ ಮಾತಾಡಲು ಆರಂಭಿಸಿದರು. ''ನನಗೆ ತುಳು ಬರೊಲ್ಲ'' ಎಂದು ಕುಂದರನ್ ಇಂಗ್ಲಿಷಿನಲ್ಲಿ ಹೇಳಿದರು. ''ಹಾಗಾದರೆ ಕನ್ನಡ ?'' ಎಂದು ಕೇಳಿದರು. ಅದಕ್ಕೆ ಆ ಬ್ಯಾಟ್ಸ್‌ಮನ್, ''ನೋ ಕನ್ನಡ'' ಎಂದು ಹೇಳಿದರು. ನಮ್ಮ ಊರಿನವರಾದರೂ ಇವರಿಗೆ ನಮ್ಮ ಭಾಷೆಯೇ ಬರುವುದಿಲ್ಲವಲ್ಲ ಎಂದು ಕುಲಮರ್ವರಿಗೆ ಆ ಕ್ಷಣದಲ್ಲಿ ಅನಿಸಿರಬೇಕು.

ಶಾಮ್ ಬೆನೆಗಲ್ ನಮ್ಮವರು, ಶಾಂತಾರಾಮ್ ನಮ್ಮವರು, ಗುರುದತ್ತ (ವಸಂತಕುಮಾರ ಶಿವಶಂಕರ ಪಡುಕೋಣೆ) ನಮ್ಮವರು, ಸುನಿಲ್ ಶೆಟ್ಟಿ ನಮ್ಮವರು ಎಂದು ಅಭಿಮಾನದಿಂದ ಕೊಚ್ಚಿಕೊಳ್ಳುತ್ತೇವೆ. ಆದರೆ ಅವರಾರೂ ತಮಗೆ ಕನ್ನಡ ಬರೊಲ್ಲ ಎಂದು ಹೇಳಿದರೆ, ಅದರಿಂದಾಗುವ ಬೇಸರ ಅಷ್ಟಿಷ್ಟಲ್ಲ.

ಯಾರು ಬುದ್ಧಿವಂತರು?

ಸುಮಾರು ವರ್ಷಗಳ ಹಿಂದಿನ ರೀಡರ್ಸ್ ಡೈಜೆಸ್ಟ್ ಮಾಸಿಕದಲ್ಲಿ ಓದಿದ ಒಂದು ಪ್ರಸಂಗವಿದು. ಮುಸ್ಸೋಲಿನಿ ಅಧಿಕಾರಕ್ಕೆ ಬಂದ ಕೆಲ ದಿನಗಳಲ್ಲಿ ಅಮೆರಿಕದ ಶ್ರೀಮಂತ ಆರ್ಟ್ ಸಂಗ್ರಹಕಾರ ಇಟಲಿಗೆ ಬಂದು, 16ನೇ ಶತಮಾನದ ಪ್ರಸಿದ್ಧ ಕಲಾವಿದ ಟಿಟಿಯನ್‌ನ ಬೃಹತ್ ವರ್ಣಚಿತ್ರವನ್ನು ಭಾರಿ ಬೆಲೆಗೆ ಖರೀದಿಸಿದ. ಅದನ್ನು ಅಮೆರಿಕಕ್ಕೆ ತೆಗೆದುಕೊಂಡು ಹೋಗುವುದು ಅವನ ಉದ್ದೇಶವಾಗಿತ್ತು. ಆದರೆ ಅದನ್ನು ಇಟಲಿಯಿಂದ ಹೊರಗೆ ತೆಗೆದುಕೊಂಡು ಹೋಗಲು ಮುಸ್ಸೋಲಿನಿ ಸರಕಾರ ಅನುಮತಿ ನೀಡಲಿಕ್ಕಿಲ್ಲ ಎಂದು ಅವನಿಗೆ ಕೆಲವರು ಹೇಳಿದರು. ಆಗ ಆ ಅಮೆರಿಕನ್ ಕಲಾ ಸಂಗ್ರಹಕಾರನಿಗೆ ಅತೀವ ಬೇಸರವಾಯಿತು. ಇದನ್ನು ತನ್ನ ದೇಶಕ್ಕೆ ತೆಗೆದುಕೊಂಡು ಹೋಗುವುದು ಹೇಗೆ ಎಂದು ಆತ ಒಬ್ಬ ಸಲಹೆಗಾರನನ್ನು ಕೇಳಿದ.

ಅದಕ್ಕೆ ಆತ ಒಂದು ಸಲಹೆ ನೀಡಿದ– ''ಒಂದು ಕೆಲಸ ಮಾಡಿ, ಟಿಟಿಯನ್‌ನ ವರ್ಣಚಿತ್ರದ ಮೇಲೆ ಮುಸ್ಸೋಲಿನಿ ವರ್ಣಚಿತ್ರವನ್ನು ಬಿಡಿಸುವಂತೆ ಸ್ಥಳೀಯ ಕಲಾವಿದನಿಗೆ ಹೇಳಿ. ಆತ ಅದನ್ನು ಬಿಡಿಸಿಕೊಡುತ್ತಾನೆ. ಮುಸ್ಸೋಲಿನಿ ಆಡಳಿತದ ಅಧಿಕಾರಿಗಳು ತಮ್ಮ ನಾಯಕನ ಚಿತ್ರವನ್ನು ಅಮೆರಿಕಕ್ಕೆ ತೆಗೆದುಕೊಂಡು ಹೋಗುವವನು ಮುಸ್ಸೋಲಿನಿ ಅಭಿಮಾನಿಯಿರಬೇಕೆಂದು, ತಕ್ಷಣ ಸಂತೋಷದಿಂದ ಅನುಮತಿ ನೀಡುತ್ತಾರೆ. ಅಮೆರಿಕಕ್ಕೆ ಹೋದ ನಂತರ, ಮೇಲಿನ ಪೇಂಟಿಂಗ್ ಅನ್ನು ಕೆರೆಸಿ ತೆಗೆದುಹಾಕಿ''.

ಅಮೆರಿಕದ ಕಲಾ ಸಂಗ್ರಹಕಾರನಿಗೆ ಇದು ಅದ್ಭುತ ಐಡಿಯಾ ಎಂದೆನಿಸಿತು. ಆತ ತಕ್ಷಣ ಸ್ಥಳೀಯ ಕಲಾಕಾರನನ್ನು ಕರೆಯಿಸಿ, ಟಿಟಿಯನ್ ಪೇಂಟಿಂಗ್ ಮೇಲೆ ಮುಸ್ಸೋಲಿನಿ ಪೇಂಟಿಂಗ್ ಬಿಡಿಸಿಕೊಡುವಂತೆ ಹೇಳಿದ. ಆತ ಬಿಡಿಸಿಕೊಟ್ಟ. ಮುಂದೆ ಆತ ಅಂದುಕೊಂಡಂತೆ ಆಯಿತು. ಯಾವ ತೊಂದರೆಯೂ ಇಲ್ಲದೇ ಪೇಂಟಿಂಗ್ ಅನ್ನು ಸುಲಭವಾಗಿ ಅಮೆರಿಕಕ್ಕೆ ತೆಗೆದುಕೊಂಡು ಬಂದ. ಬಂದವನೇ ಆ ಪೇಂಟಿಂಗ್ ಮೇಲೆ ಬಿಡಿಸಿದ ಮುಸ್ಸೋಲಿನಿ ಚಿತ್ರವನ್ನು ಕೆರೆಸಿ ಹಾಕುವಂತೆ ನುರಿತ ಪೇಂಟರ್‌ಗೆ ಹೇಳಿದ. ಆತ ಹರಿತವಾದ ಚಾಕುವಿನಿಂದ ಬಹಳ ನಾಜೂಕಿನಿಂದ ಮೇಲಿನ ಪದರ ಕೆರೆಸಿ ಹಾಕಿದ. ಟಿಟಿಯನ್‌ನ ಅದ್ಭುತ ಪೇಂಟಿಂಗ್ ಎದ್ದು ಕಂಡಿತು. ಅಷ್ಟಕ್ಕೇ ಸುಮ್ಮನಾಗದ ಪೇಂಟರ್, ''ಸರ್, ಈ ಟಿಟಿಯನ್ ಪೇಂಟಿಂಗ್ ಕೆಳಗೆ ಬೇರೆ ಇನ್ನೊಂದು ಪೇಂಟಿಂಗ್ ಇರುವಂತಿದೆ'' ಎಂದು ಹೇಳಿದ. ಕಲಾ ಸಂಗ್ರಹಕಾರನಿಗೆ ದಿಗಿಲಾಯಿತು. ಆ ಪೇಂಟರ್, ಟಿಟಿಯನ್‌ನ ಪೇಂಟಿಂಗ್ ಅನ್ನು ಕೆರೆಸುತ್ತಿದ್ದಂತೆ ಮತ್ತೊಂದು ಚಿತ್ರ ಎದ್ದು ಬಂದಿತು.

ನೋಡಿದರೆ ಮುಸ್ಸೋಲಿನಿ ಪೇಂಟಿಂಗ್!

ಹೀಗೊಂದು ಸಂಭಾಷಣೆ

ಕೆಲವು ವರ್ಷಗಳ ಹಿಂದೆ, ಸ್ವೀಡನ್ ರಾಜಧಾನಿ ಸ್ಟಾಕ್‌ಹೋಮ್‌ಗೆ ನಾನು ಹೋದಾಗ ಅಲ್ಲಿ ಕೇಳಿದ್ದು. ಒಮ್ಮೆ ಅಮೆರಿಕದ ಪ್ರವಾಸಿಗ ಸ್ಟಾಕ್‌ಹೋಮ್‌ನಲ್ಲಿ ಬಸ್ಸಿನಲ್ಲಿ ಹೋಗುತ್ತಿದ್ದ. ಅವನ ಪಕ್ಕದಲ್ಲಿ ಸ್ವೀಡಿಷ್ ಪ್ರಜೆ ಕುಳಿತಿದ್ದ. ಇಬ್ಬರೂ ಪರಸ್ಪರ ಪರಿಚಿತರಾದರು. ಹರಟೆ ಹೊಡೆಯಲಾರಂಭಿಸಿದರು. ಅಮೆರಿಕನ್ ಪ್ರಜೆ ಬಡಾಯಿ ಕೊಚ್ಚಿಕೊಳ್ಳುತ್ತಿದ್ದ– ''ಜಗತ್ತಿನಲ್ಲಿಯೇ ಅಮೆರಿಕದಂಥ ಪ್ರಜಾಸತ್ತಾತ್ಮಕ ದೇಶ ಮತ್ತೊಂದಿಲ್ಲ. ವೈಟ್ ಹೌಸಿಗೆ ಹೋಗಿ ಅಧ್ಯಕ್ಷನನ್ನು ಭೇಟಿ ಮಾಡಬಹುದು. ಅವನ ಜತೆ ಕೈಕುಲುಕಬಹುದು. ಪ್ರಮುಖ ವಿಷಯಗಳ ಬಗ್ಗೆ ಚರ್ಚಿಸಬಹುದು. ಇವೆಲ್ಲಾ ಬೇರೆ ದೇಶಗಳಲ್ಲಿ ಸಾಧ್ಯವಿಲ್ಲ. ಅದರಲ್ಲೂ ನಿಮ್ಮ ದೇಶದಲ್ಲಂತೂ ಸಾಧ್ಯವೇ ಇಲ್ಲವೇನೋ?''

ಇದೇನು ಅಮೆರಿಕನ್ ಪ್ರವಾಸಿಗ ತನ್ನ ದೇಶದ ಬಗ್ಗೆ ಬಹಳ ಬಡಾಯಿ ಕೊಚ್ಚಿಕೊಳ್ಳುತ್ತಾನಲ್ಲ ಎಂದು ಸ್ವೀಡಿಷ್ ಪ್ರಜೆಗೆ ಅನಿಸಿತು. ಆತ ಅಷ್ಟು ಹೇಳಿದ ನಂತರ ತಾನೂ ತನ್ನ ದೇಶದ ಬಗ್ಗೆ ಹೇಳದಿದ್ದರೆ ಹೇಗೆ ಎಂದು ಅನಿಸಿತು. ''ನಿಮ್ಮದೇನು ಮಹಾ? ನಮ್ಮ ದೇಶದಲ್ಲಿ ರಾಜ ಮತ್ತು ಶ್ರೀಸಾಮಾನ್ಯ ಒಂದೇ ಬಸ್ಸಿನಲ್ಲಿ ಕುಳಿತುಕೊಂಡು ಪ್ರಯಾಣ ಮಾಡುತ್ತಾರೆ, ಗೊತ್ತಾ?'' ಎಂದ ಸ್ವೀಡಿಷ್ ಪ್ರಜೆ.

ಅಷ್ಟೊತ್ತಿಗೆ ಮುಂದಿನ ಸ್ಟಾಪ್ ಬಂತು. ಸ್ವೀಡಿಷ್ ಪ್ರಜೆ ಬಸ್ಸಿನಿಂದ ಇಳಿದು ಹೋದ. ಅವರಿಬ್ಬರ ಸಂಭಾಷಣೆಯನ್ನು ಮತ್ತೊಬ್ಬ ಕೇಳಿಸಿಕೊಳ್ಳುತ್ತಿದ್ದ. ''ನಿಮ್ಮ ಪಕ್ಕದಲ್ಲಿ ಕುಳಿತಿದ್ದವ ಯಾರು ಗೊತ್ತಾಯಿತಾ?'' ಎಂದು ಕೇಳಿದಕ್ಕೆ ಅಮೆರಿಕದ ಪ್ರವಾಸಿಗ ಗೊತ್ತಿಲ್ಲ ಎಂದು ತಲೆ ಅಲ್ಲಾಡಿಸಿದ. ಅದಕ್ಕೆ ಮತ್ತೊಬ್ಬಾತ ಹೇಳಿದ– ''ಆತನೇ ಸ್ವೀಡನ್‌ನ ಆರನೇ ರಾಜ ಗುಸ್ತಾಫ್ ಅಡಾಲ್ಫ್!''

ಪತ್ರಕರ್ತರಲ್ಲಿ ಬದಲಾವಣೆ ಬೇಕು

ಪತ್ರಕರ್ತರ ಬಗ್ಗೆ ಒಂದು ಆರೋಪವಿದೆ. ಅದೇನೆಂದರೆ, ಬೇರೆಯವರ ತಪ್ಪುಗಳನ್ನು ಮುಖಪುಟದಲ್ಲಿ ದೊಡ್ಡದಾಗಿ ಪ್ರಕಟಿಸುವ ಪತ್ರಕರ್ತರು, ತಮ್ಮ ತಪ್ಪುಗಳನ್ನು ಮಾತ್ರ ಒಳಪುಟಗಳಲ್ಲಿ ಸಣ್ಣದಾಗಿ ಪ್ರಕಟಿಸುತ್ತಾರೆ. ಇದು ನಿಜವೂ ಹೌದು. ಈ ವಿಷಯದಲ್ಲಿ ಪತ್ರಕರ್ತರು ಇನ್ನಷ್ಟು ಹೃದಯ ವೈಶಾಲ್ಯ ಮೆರೆಯಬೇಕು ಎಂದು ಎಲ್ಲರೂ ಬಯಸುತ್ತಾರೆ. ಇಂದಿಗೂ ಅನೇಕ ಓದುಗರ ತಕರಾರೇನೆಂದರೆ, ಪತ್ರಕರ್ತರೇಕೆ ತಮ್ಮ ತಪ್ಪುಗಳನ್ನು ಮುಖಪುಟದಲ್ಲಿ ಪ್ರಕಟಿಸುವುದಿಲ್ಲ ಎಂದು.

ಅಸಲಿಗೆ, ಪತ್ರಕರ್ತರು ತಮ್ಮ ತಪ್ಪುಗಳನ್ನು ಬೇಗ ಒಪ್ಪಿಕೊಳ್ಳುವುದಿಲ್ಲ. ತಪ್ಪು ಬೇರೆಯವರ ಗಮನಕ್ಕೆ ಬಂದ ನಂತರ, ಪಾರಾಗುವ ಮಾರ್ಗವಿದೆಯಾ, ಬೇರೆಯವರ ಮೇಲೆ ಹೊರಿಸಬಹುದಾ ಎಂದು ಯೋಚಿಸುತ್ತಾರೆ. ಅವ್ಯಾವವೂ ಸಾಧ್ಯವಿಲ್ಲ ಎಂಬುದು ಗೊತ್ತಾದ ನಂತರ, ತಪ್ಪನ್ನು ಒಪ್ಪಿಕೊಳ್ಳುತ್ತಾರೆ. ಆಗಲಾದರೂ ಅದನ್ನು ಮುಖಪುಟದಲ್ಲಿ ಪ್ರಕಟಿಸಬಹುದಲ್ಲಾ? ಊಹುಂ.. ಅದನ್ನು ಒಳಪುಟದಲ್ಲಿ ಸಣ್ಣದಾಗಿ ಪೇಜ್ ಫಿಲ್ಲರ್ ಆಗಿ ಬಳಸಿ ಕೈ ತೊಳೆದುಕೊಳ್ಳುತ್ತಾರೆ. ಮುಖಪುಟದಲ್ಲೇ ಕ್ಷಮಾಪಣೆ ಪ್ರಕಟಿಸಬೇಕು ಎಂದು ಕೋರ್ಟ್ ತೀರ್ಪು ನೀಡಿದ ಪ್ರಸಂಗಗಳನ್ನು ಬಿಟ್ಟರೆ, ಉಳಿದ ಸಂದರ್ಭಗಳಲ್ಲಿ ಅಲ್ಲಿ ಅದನ್ನು ಪ್ರಕಟಿಸಿದ್ದು ಇಲ್ಲವೇ ಇಲ್ಲ.

ತಪ್ಪು ಮಾಡಿದ್ದು ಗೊತ್ತಾಗುತ್ತಿದ್ದಂತೆ, 'Quickly and with candour' ಕ್ಷಮಾಪಣೆಯನ್ನು ಪ್ರಕಟಿಸಬೇಕಂತೆ. ಅದರಿಂದ ಪತ್ರಿಕೆಯ ಮಾನ-ಮರ್ಯಾದೆ ಹೋಗುವ ಬದಲು ಜಾಸ್ತಿಯಾಗುತ್ತದೆ. ಪತ್ರಿಕೆ ಬಗ್ಗೆ ವಿಶ್ವಾಸಾರ್ಹತೆ ಜಾಸ್ತಿಯಾಗುತ್ತದೆ. ಓದುಗರಲ್ಲಿ ತಾವು ಓದುವ ಪತ್ರಿಕೆ ಬಗ್ಗೆ ವಿನೀತ ಭಾವ ಬೆಳೆಯುತ್ತದೆ. ತಪ್ಪನ್ನು ಓದುಗರೇ ಎತ್ತಿ ತೋರಿಸಬೇಕೆಂದಿಲ್ಲ, ಪತ್ರಿಕೆಯ ಸಂಪಾದಕೀಯ ಸಿಬ್ಬಂದಿಗೆ ಗೊತ್ತಾದರೂ ಸಾಕು, ಮರುದಿನವೇ ಕ್ಷಮಾಪಣೆ ಕೋರಿ, ಸರಿಯಾದ ಮಾಹಿತಿ ನೀಡಬೇಕು. ಯಾವ ಕಾರಣಕ್ಕೂ ಓದುಗರನ್ನು ದಾರಿ ತಪ್ಪಿಸಬಾರದು, ಯಾವತ್ತೂ ಅವರಿಗೆ ನಿಖರ, ಸ್ಪಷ್ಟ ಮತ್ತು ಸತ್ಯವಾದ ಮಾಹಿತಿಯನ್ನೇ ನೀಡಬೇಕು. ಸುದ್ದಿ ನೀಡುವ ಅವಸರದಲ್ಲಿ ತಪ್ಪುಗಳಾಗುವುದು ಸಹಜ. ಹಾಗಂತ ನಮ್ಮ ತಪ್ಪುಗಳನ್ನು ಸಮರ್ಥಿಸಿಕೊಳ್ಳಬಾರದು. ತಪ್ಪುಗಳನ್ನು ಸಮರ್ಥಿಸಿಕೊಳ್ಳುವುದೆಂದರೆ, ಓದುಗರನ್ನು ವಾಸ್ತವದಿಂದ ವಿಮುಖಗೊಳಿಸಿದಂತೆ.

ಪತ್ರಿಕೋದ್ಯಮದಲ್ಲಿ ಒಂದು ಮಾತಿದೆ– ''ಯಾವ ಸಂಪಾದಕನೂ ಓದುಗರ ಮುಂದೆ ಕ್ಷಮೆ ಯಾಚಿಸಿ ಸಣ್ಣವನಾಗಿಲ್ಲ''. ಹೀಗಿರುವಾಗ ಮುಖಪುಟದಲ್ಲಿ ಕ್ಷಮೆಯಾಚಿಸಲು ಯಾಕೆ ಹಿಂದೇಟು ಹಾಕಬೇಕು? ತನ್ನ ಪತ್ರಿಕೆಯ ಒಳಪುಟಗಳನ್ನು ಓದುಗರು ಓದುವುದಿಲ್ಲ ಎಂದು ಭಾವಿಸುವ ಸಂಪಾದಕ ಮಾತ್ರ ಹೀಗೆ ಯೋಚಿಸಬಲ್ಲ. ಅಮೆರಿಕದ ಅಲಬಾಮಾದಲ್ಲಿ 'ಮೊಬೈಲ್ ಪ್ರೆಸ್ ರಜಿಸ್ಟರ್' ಎನ್ನುವ ಪತ್ರಿಕೆಯಿದೆ. ತಾನು ಏನೇ ತಪ್ಪು ಮಾಡಿದರೂ ತಿದ್ದುಪಡಿ, ವಿಷಾದ ಮತ್ತು ಕ್ಷಮೆಯಾಚನೆಯನ್ನು ಮುಖಪುಟದಲ್ಲಿಯೇ ಅದು ಪ್ರಕಟಿಸುತ್ತದೆ. ಅದಕ್ಕೆಂದೇ ನಿರ್ದಿಷ್ಟ ಜಾಗವನ್ನು ಮೀಸಲಿಟ್ಟಿದೆ. ಅದೇ ರೀತಿ, 'ಆಗಸ್ಟಾ ಕ್ರಾನಿಕಲ್' ಎಂಬ ಪತ್ರಿಕೆ ಯಾವ ಪುಟದಲ್ಲಿ, ಯಾವ ಜಾಗದಲ್ಲಿ ತಪ್ಪು ವರದಿ ಪ್ರಕಟವಾಗಿದೆಯೋ, ಅದೇ ಜಾಗದಲ್ಲಿ, ತಿದ್ದುಪಡಿ ಪ್ರಕಟಿಸುತ್ತದೆ. ತಪ್ಪುಗಳನ್ನು ಒಪ್ಪಿಕೊಳ್ಳುವುದು ನಮ್ಮ ದೌರ್ಬಲ್ಯವಲ್ಲ, ಅದು ಅವಮಾನವೂ ಅಲ್ಲ. ಅದು ಪ್ರಾಮಾಣಿಕತೆ ಮತ್ತು ಓದುಗರನ್ನು ಗೌರವಿಸುವುದರ ಸಂಕೇತ.

ನಾವು ಮಾಡಿದ ತಪ್ಪು ವರದಿಗೆ, ತಿದ್ದುಪಡಿ ಪ್ರಕಟಿಸಿದರೆ, ಯಾವ ಓದುಗನೂ ಕೋರ್ಟಿಗೆ ಹೋಗುವುದಿಲ್ಲ. ಇದನ್ನು ನಿರಾಕರಿಸಿದಾಗ ಮಾತ್ರ ಆತ ಕಾನೂನು ಕ್ರಮಕ್ಕೆ ಮುಂದಾಗುತ್ತಾನೆ. ಕೋರ್ಟಿನಲ್ಲಿ ಪ್ರಕರಣ ಇತ್ಯರ್ಥವಾಗಲು ಹಲವಾರು ವರ್ಷಗಳು ಹಿಡಿಯುವುದರಿಂದ, ಓದುಗರು ಮರೆತುಬಿಡುತ್ತಾರೆಂದು ಸಂಪಾದಕರು ಕ್ಷಮೆಯಾಚಿಸುವುದಿಲ್ಲ ಅಥವಾ ತಿದ್ದುಪಡಿಯನ್ನೂ ಪ್ರಕಟಿಸುವುದಿಲ್ಲ. 'ಅಮೆರಿಕನ್ ಲಾಯರ್' ಎಂಬ ಪ್ರಮುಖ ನಿಯತಕಾಲಿಕ ಒಂದು 'ತಿದ್ದುಪಡಿ ಶಿಷ್ಟಾಚಾರ'ವನ್ನು ಹೊಂದಿದೆ. ಪತ್ರಿಕೆಯಲ್ಲಿ ಯಾರು ತಪ್ಪು ಮಾಡಿದ್ದಾರೋ, ಅದಕ್ಕೆ ಕಾರಣರಾದವರ ಹೆಸರುಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುತ್ತದೆ. 'ತಪ್ಪಾಯ್ತು, ತಿದ್ಕೋತೀವಿ' ಎಂಬುದಕ್ಕಿಂತ ಹೆಚ್ಚಿನ ವಿನೀತ ಭಾವ ಸಂಪಾದಕನಿಗೆ ಮತ್ತೊಂದಿಲ್ಲ. ನಮ್ಮಲ್ಲಿ ಇನ್ನಷ್ಟು ಬದಲಾವಣೆಗಳಾಗಬೇಕು. ತಪ್ಪುಗಳನ್ನು ಒಪ್ಪಿಕೊಳ್ಳಬೇಕು, ಆದರೆ.. ಕೆಲವು ಸಲ ಮಾಡಿದ ತಪ್ಪಿಗಿಂತ, ನಂತರ ಪ್ರಕಟಿಸಿದ ತಿದ್ದುಪಡಿ, ಸ್ಪಷ್ಟನೆ ಇನ್ನೂ ಆಭಾಸವನ್ನುಂಟುಮಾಡುತ್ತವೆ.

ರಂಗಭೂಮಿ ಅಲ್ಲ, ಹುಚ್ಚಾಸ್ಪತ್ರೆ

ಒಮ್ಮೆ ಮಾಸ್ಟರ್ ಹಿರಣ್ಣಯ್ಯ ಅವರ ಜತೆಗೆ ವೇದಿಕೆ ಹಂಚಿಕೊಂಡಿದ್ದೆ. ಆ ದಿನ ಅವರು ಅದ್ಭುತವಾಗಿ ಮಾತಾಡಿದರು. ಕಾರ್ಯಕ್ರಮ ಮುಗಿದ ಬಳಿಕ ಹಲವರು ಅವರನ್ನು ಸುತ್ತುವರಿದು ಅಭಿನಂದಿಸಿದರು.



ಅವರಲ್ಲೊಬ್ಬರು, ''ಹಿರಣ್ಣಯ್ಯನವರೇ, ನೀವು ರಂಗಭೂಮಿಯ ನಟರಾಗುವ ಬದಲು ಲೋಕಸಭಾ ಸದಸ್ಯರಾಗಿದ್ದರೆ ಎಷ್ಟು ಚೆನ್ನಾಗಿತ್ತು. ನಿಮ್ಮ ಮಾತಿನಿಂದ ಇಡೀ ಲೋಕಸಭೆ ತಲೆದೂಗುವಂತೆ ಮಾಡಬಹುದಾಗಿತ್ತು. ಲೋಕಸಭೆಗಿಂತ ದೊಡ್ಡ ರಂಗಭೂಮಿ ಯಾವುದಿದೆ? ಈಗಲೂ ಕಾಲ ಮಿಂಚಿಲ್ಲ, ಲೋಕಸಭಾ ಚುನಾವಣೆಗೆ ಸ್ಪರ್ಧಿಸಿ'' ಎಂದು ಹೇಳಿದರು.

ಅದಕ್ಕೆ ಹಿರಣ್ಣಯ್ಯನವರು ಥಟ್ಟನೆ ಹೇಳಿದರು– ''ಅಲ್ಲಯ್ಯಾ, ನಾನು ಲೋಕಸಭಾ ಸದಸ್ಯನಾಗಿದ್ದಿದ್ದರೆ ಮೂರ್ಖನ ಹಾಗೆ ಬಾಯಿಮುಚ್ಚಿ ಕುಳಿತು ಎದ್ದು ಬರಬೇಕಾಗುತ್ತಿತ್ತು. ನಮ್ಮ ರಾಜ್ಯದಿಂದ ಹೋದ ಒಬ್ಬನೇ ಒಬ್ಬ ಲೋಕಸಭಾ ಸದಸ್ಯ ಮಾತಾಡಿದ್ದನ್ನು ನೀವೆಲ್ಲ ಕೇಳಿದ್ದೀರಾ, ನೋಡಿದ್ದೀರಾ? ಇಲ್ಲಿ ನೀವೆಲ್ಲ ನನ್ನ ಮಾತನ್ನು ಕೇಳಿದಿರಿ ಎಂದು ಅಲ್ಲಿ ಯಾರು ಕೇಳುತ್ತಾರೆ? ಅಲ್ಲಿದ್ದವರಿಗೆ ಮಾತನ್ನು ಕೇಳುವ ವ್ಯವಧಾನ ಇಲ್ಲ, ಲೋಕಸಭಾ ಸದಸ್ಯನಾದರೆ ಪಕ್ಷದ ನಾಯಕರು ಹೇಳಿದಂತೆ ಮೂಕನಾಗಿ ಇರಬೇಕಾಗುತ್ತದೆ. ನಾನು ಹಾಗೆ ಇರುವುದುಂಟಾ? ಅಷ್ಟಕ್ಕೂ ಲೋಕಸಭೆ ಅನ್ನೋದು ರಂಗಭೂಮಿ ಅಲ್ಲ, ಅದೊಂದು ಹುಚ್ಚಾಸ್ಪತ್ರೆ. ಹೀಗಾಗಿ ನಾನು ನನ್ನ ಪಾಡಿಗೆ ನಾಟಕ ಮಾಡಿಕೊಂಡಿರುತ್ತೇನೆ. ಅದೇ ನನಗೆ ಇಷ್ಟ, ನನಗೆ ಮೂಕನ ಪಾತ್ರ ಮಾಡಿ ಗೊತ್ತಿಲ್ಲ''.

ಏಳೇಳು ಜನ್ಮ ಅಂದರೆ ಹದಿನಾಲ್ಕು? 49? ಅಥವಾ ಬರೀ ಒಂದು?

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಮಿತ ಹೇಳಿಕೆಗೆ ವಿಪಕ್ಷ ಕೆಂಡ' ಎಂಬ ಬ್ಯಾನರ್ ಹೆಡ್‌ಲೈನ್ ಅನ್ನು ಡಿಸೆಂಬರ್ 19ರ ವಿಶ್ವವಾಣಿಯಲ್ಲಿ ನೀವು ಗಮನಿಸಿರಬಹುದು. ಕಾಂಗ್ರೆಸ್‌ನವರ ಅಂಬೇಡ್ಕರ್ ಜಪ ವ್ಯಸನ ಕುರಿತಂತೆ ಕೇಂದ್ರ ಗೃಹಸಚಿವ ಅಮಿತ್ ಶಾ ರಾಜ್ಯಸಭೆಯಲ್ಲಿ ಮಾತನಾಡಿದ್ದಕ್ಕೆ ವಿರೋಧ ಪಕ್ಷಗಳು ವಿವಾದ ಸೃಷ್ಟಿಸಿರುವುದು. ಅಮಿತ್ ಶಾ ಹೇಳಿದ್ದೇನು? ಎಂಬುದು ಕೂಡ ಪತ್ರಿಕೆಯಲ್ಲಿ ಅಲ್ಲೇ ಪಕ್ಕದ ಬಾಕ್ಸ್ ಐಟಮ್‌ನಲ್ಲಿ ಪ್ರಕಟವಾಗಿದೆ. ''ಅಂಬೇಡ್ಕರ್ ಹೆಸರು ಹೇಳುವುದು ಈಗ ಕೆಲವರಿಗೆ ಫ್ಯಾಷನ್ ಆಗಿಬಿಟ್ಟಿದೆ. ಅಂಬೇಡ್ಕರ್ ಅಂಬೇಡ್ಕರ್ ಅಂಬೇಡ್ಕರ್... ಅದಕ್ಕಿಂತ, ಇಷ್ಟು ಸಲ ದೇವರ ನಾಮಸ್ಮರಣೆ ಮಾಡಿದ್ದರೆ ಏಳೇಳು ಜನ್ಮಕ್ಕೂ ಸ್ವರ್ಗಕ್ಕೆ ಹೋಗುತ್ತಿದ್ದರು...'' ಅದೇ ಬಾಕ್ಸ್ ಐಟಮ್‌ನಲ್ಲಿ ಕೆಳಗೆ ''ಬಾಬಾಸಾಹೇಬ್ ಅಂಬೇಡ್ಕರ್ ಕೊಟ್ಟ ಸಂವಿಧಾನದಡಿಯಲ್ಲೇ ಕಾರ್ಯ ನಿರ್ವಹಿಸುತ್ತಿರುವ ಸಂಸತ್‌ನಲ್ಲಿ ನಿಂತು ಅವರ ಸ್ಮರಣೆಯನ್ನು ವ್ಯಸನ ಎಂದಿದ್ದೀರಿ. ಆದರೆ ವಾಸ್ತವವಾಗಿ ನಿಮ್ಮ ಪಕ್ಷದವರು ಮೋದಿ.. ಮೋದಿ.. ಮೋದಿ.. ಎಂದು ಹೇಳುವುದು ಒಂದು ವ್ಯಸನ ಆಗಿದೆ. ಮೋದಿಯವರ ಬದಲಿಗೆ ಅಷ್ಟು ಬಾರಿ ದೇವರ ನಾಮಸ್ಮರಣೆ ಮಾಡಿದ್ದರೆ ಏಳು ಜನ್ಮದಲ್ಲಿ ಮಾತ್ರವಲ್ಲ ನೂರು ಜನ್ಮದಲ್ಲಿಯೂ ನಿಮಗೆ ಸ್ವರ್ಗವೇ ಸಿಗುತ್ತಿತ್ತು ಎಂದು ಸಿಎಂ ಸಿದ್ದರಾಮಯ್ಯ ಅಮಿತ್ ಶಾಗೆ ಬಹಿರಂಗ ಪತ್ರ ಬರೆದಿದ್ದಾರೆ'' ಎಂದು ಕೂಡ ಇತ್ತು.

'ತಿಳಿರುತೋರಣ' ರಾಜಕೀಯ ವಿಶ್ಲೇಷಣೆಯ ಅಂಕಣವಲ್ಲ. ಹಾಗಾಗಿ ಈ ಘಟನೆಯಲ್ಲಿರಬಹುದಾದ ರಾಜಕೀಯವನ್ನು ಬದಿಗಿಟ್ಟು ಬೇರೆ ಕೆಲವು ಸ್ವಾರಸ್ಯಗಳನ್ನಷ್ಟೇ ಗಮನಿಸೋಣ. ಮೊದಲನೆಯದಾಗಿ, ಆ ಬ್ಯಾನರ್ ಹೆಡ್‌ಲೈನ್ ತುಂಬ ಚೆನ್ನಾಗಿದೆ. 'ಅಮಿತ' ಎಂಬ ಪದಕ್ಕೆ ಕೆಂಪು ಬಣ್ಣ ಕೊಡುವುದಕ್ಕಿಂತ 'ಕೆಂಡ' ಪದಕ್ಕೆ ಕೆಂಪು ಬಣ್ಣ ಇದ್ದಿದ್ದರೆ ಇನ್ನೂ ಪರಿಣಾಮಕಾರಿ ಆಗುತ್ತಿತ್ತೇನೋ. ಅಮಿತ್ ಶಾ 'ಕಂಡದ್ದು ಕಂಡ್ಹಾಂಗೆ' ಹೇಳಿದ್ದಕ್ಕೆ ಕಾಂಗ್ರೆಸ್‌ನವರು 'ಕೆಂಡದಂಥ ಕ್ವಾಪ' ಮಾಡ್ಕೊಂಡಿದ್ದು ಹೌದಾದ್ದರಿಂದ ಕೆಂಡ ಪರ್ಫೆಕ್ಟ್ ಪದ. ಆದರೆ ಅಮಿತ್ ಶಾ ಹೇಳಿಕೆಯಲ್ಲಿ ಬೇರೊಂದು ಐಬು ಇದೆ. ಅದೇ ದೋಷ ಸಿದ್ದರಾಮಯ್ಯರ ಪ್ರತಿಕ್ರಿಯೆಯಲ್ಲೂ ಇದೆ. ಅದನ್ನು ಯಾರೂ ಗಮನಿಸಿರುವಂತಿಲ್ಲ. ಒಂದಕ್ಕಿಂತ ಹೆಚ್ಚು ಜನ್ಮಗಳಿದ್ದರೆ ಪ್ರತಿ ಜನ್ಮದಲ್ಲೂ ಸ್ವರ್ಗಕ್ಕೆ ಹೋಗುತ್ತಾರೆ ಎನ್ನುವುದು ಹೇಗೆ ಸಾಧ್ಯ? ನರಕಕ್ಕೆ ಹೋದವರು ಮಾತ್ರ ಮತ್ತೆಮತ್ತೆ ಹುಟ್ಟಿಬಂದು ಸ್ವರ್ಗ(ಮೋಕ್ಷ)ಪ್ರಾಪ್ತಿಗಾಗಿ ಹಾತೊರೆಯುತ್ತಾರೆ. ಸ್ವರ್ಗಕ್ಕೆ ಹೋದವರು ಒಮ್ಮೆ ಅಲ್ಲಿ ತಲುಪಿದರೆ(ಮೋಕ್ಷ ಸಿಕ್ಕಿದರೆ) ಮತ್ತೆ ಜನ್ಮವೆತ್ತುವ ಪ್ರಶ್ನೆಯೇ ಇಲ್ಲ. ಇವೆಲ್ಲ ಬರೀ ನಂಬಿಕೆಗಳು, ಹೋಗಿಬಂದವರು ಹೇಳಿದ್ದಲ್ಲ ಎನ್ನುವುದನ್ನು ಒಪ್ಪೋಣ; ಆದರೂ ಕೃಷ್ಣ ಪರಮಾತ್ಮನು ಭಗವದ್ಗೀತೆಯಲ್ಲಿ 'ಮಾಮುಪೇತ್ಯ ತು ಕೌಂತೇಯ ಪುನರ್ಜನ್ಮ ನ ವಿದ್ಯತೇ' ಎಂದಿರುವುದರಿಂದ ಒಮ್ಮೆ ಸ್ವರ್ಗಪ್ರಾಪ್ತಿಯಾದರೆ ಅದೇ ಪರ್ಮನೆಂಟ್ ರೆಸಿಡೆನ್ಸಿ, ಅಲ್ಲಿಯದೇ ಪೌರತ್ವ.

ಹೋಗಲಿ, ಇಲ್ಲೇ ಸ್ವರ್ಗ ಇಲ್ಲೇ ನರಕ ಮೇಲೇನಿಲ್ಲ ಸುಳ್ಳು ಎಂದುಕೊಂಡು ಸ್ವರ್ಗ-ನರಕಗಳ ವಿಚಾರವನ್ನು ಒತ್ತಟ್ಟಿಗಿಡೋಣ. ಸಿದ್ದರಾಮಯ್ಯರಂಥ ಸಿದ್ದರಾಮಯ್ಯರೂ ದೇವರ ನಾಮಸ್ಮರಣೆ, ಪುನರ್ಜನ್ಮ, ಸ್ವರ್ಗಪ್ರಾಪ್ತಿಯ ವಿಚಾರ ಮಾತಾಡಿದರಲ್ಲ ಎಂದು ಖುಷಿಪಡೋಣ. ಆದರೆ ಅಮಿತ್ ಶಾ ಹೇಳಿಕೆಯಲ್ಲಿ (ಕನಿಷ್ಠ ಅದರ ಕನ್ನಡ ಅನುವಾದದಲ್ಲಿ) ಇನ್ನೂ ಒಂದು ಗಮನಾರ್ಹ ಅಂಶ ಇದೆ. ರಾಜ್ಯಸಭೆಯಲ್ಲಿ ಅಮಿತ್ ಶಾ ಮಾತನಾಡಿದ್ದರ ಒರಿಜಿನಲ್ ವಿಡಿಯೊ ತುಣುಕನ್ನು ನಾನು ಯುಟ್ಯೂಬಲ್ಲಿ ನೋಡಿದ್ದೇನೆ. ಅವರು ಹೇಳಿದ್ದು ''ಸಾತ್ ಜನ್ಮೋಂ ತಕ್ ಸ್ವರ್ಗ ಮಿಲ್ತಾ ಥಾ...'' ಎಂದು. ಕನ್ನಡದಲ್ಲಿ 'ಏಳು ಜನ್ಮಕ್ಕೂ ಸ್ವರ್ಗ ಸಿಗುತ್ತಿತ್ತು' ಎಂದಿರಬೇಕಿತ್ತು. ಆದರೆ 'ಏಳೇಳು ಜನ್ಮಕ್ಕೂ...' ಅಂತ ಇದೆ. ಕನ್ನಡದ್ದೊಂದು ಅನನ್ಯ ವೈಶಿಷ್ಟ್ಯವದು! ಏಳು ಜನ್ಮ ಎನ್ನುವ ಬದಲಿಗೆ ಏಳೇಳು ಜನ್ಮ ಎಂಬ ಪದಪುಂಜ. ಅದನ್ನೇ ನಾನು ಇಂದಿನ ಅಂಕಣದ ತಲೆಬರಹದಲ್ಲಿ ''ಏಳೇಳು ಅಂದರೆ ಏಳು ಕೂಡಿಸು ಏಳು? ಅಥವಾ ಏಳು ಗುಣಿಸು ಏಳು? ಅಥವಾ ಏಳು ಭಾಗಿಸು ಏಳು?'' ಎಂದು ಪ್ರಶ್ನಿಸುತ್ತ ತರ್ಲೆಬರಹವಾಗಿಸಿದ್ದು. ಏಳರ ಘಾತ ಏಳು = 8,23,543 ಎಂದು ಕೂಡ ಒಮ್ಮೆ ಯೋಚಿಸಿದ್ದೆ, ತಲೆಬರಹದಲ್ಲಿ ಅಷ್ಟಕ್ಕೆ ಜಾಗವಿರುವುದಿಲ್ಲ, ಅಷ್ಟು ಜನ್ಮಗಳನ್ನು ಯಾರೂ ಅನುಭವಿಸುವುದೂ ಬೇಡ ಎಂದುಕೊಂಡು ಸೇರಿಸಲಿಲ್ಲ. ವಿಷಯ ಏನೂಂದ್ರೆ, ಕನ್ನಡದಲ್ಲಿ 'ಏಳು ಜನ್ಮ' ಎನ್ನುವುದನ್ನೇ ಹೆಚ್ಚು ಪರಿಣಾಮಕಾರಿಯಾಗಿ, ಒತ್ತಿಹೇಳುವ ರೀತಿಯಲ್ಲಿ 'ಏಳೇಳು ಜನ್ಮ' ಎನ್ನುತ್ತೇವೆ. ಆಡುಮಾತಿನಲ್ಲಿ, ಕಥೆ-ಕವಿತೆಗಳಲ್ಲಿ, ಚಿತ್ರಗೀತೆಗಳಲ್ಲೂ ವ್ಯಾಪಕವಾಗಿ ಈ ಪದಪುಂಜದ ಬಳಕೆಯಾಗಿದೆ, 12ನೆಯ ಶತಮಾನದಷ್ಟು ಹಿಂದಿನಿಂದಲೂ. ''ಅಯ್ಯಾ ಏಳೇಳು ಜನ್ಮದಲ್ಲಿ ಶಿವಭಕ್ತನಾಗಿ ಬಾರದಿರ್ದಡೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ... ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನಯ್ಯಾ...'' ಎಂದು ಬಸವಣ್ಣನವರ ಒಂದು ವಚನದಲ್ಲಿ ಬರುತ್ತದೆ. ಒಂದೊಂದು ಜನ್ಮದಲ್ಲೂ ತನ್ನ ಹೆಸರು ಏನಿರುತ್ತದೆಂದು– ಶಿಲಾದ, ಸ್ಕಂದ, ನೀಲಲೋಹಿತ, ಮನೋಹರ, ಕಾಲಲೋಚನ, ವೃಷಭ, ಮತ್ತು ಬಸವದಣ್ಣಾಯಕ- ಎಂಬ ಪಟ್ಟಿಯನ್ನೂ ಬಸವಣ್ಣ ಕೊಟ್ಟಿದ್ದಾರೆ! ಏಳೇಳು ಜನ್ಮ ಎಂದು ಬರುವ ಕನ್ನಡ ಚಿತ್ರಗೀತೆಗಳದೂ ಪಟ್ಟಿ ಮಾಡಬಹುದು. ನೆಚ್ಚಿನ ಒಂದೆರಡನ್ನಷ್ಟೇ ಉಲ್ಲೇಖಿಸಿ ಉಳಿದುವನ್ನು ನಿಮಗೆ ಬಿಡುತ್ತೇನೆ. ಮೊದಲನೆಯದು 'ತಿರುಗುಬಾಣ' ಚಿತ್ರದಲ್ಲಿ ಎಸ್ಪಿಬಿ ನಟಿಸಿ ಹಾಡಿದ 'ಇದೇ ನಾಡು ಇದೇ ಭಾಷೆ ಎಂದೆಂದೂ ನನ್ನದಾಗಿರಲಿ...' ಅದರ ಕೊನೆ ಚರಣದಲ್ಲಿ 'ಏಳೇಳು ಜನ್ಮವೇ ಬರಲಿ ಈ ಮಣ್ಣಲಿ ನಾನು ಹುಟ್ಟುವೆ... ಏನೇನು ಕಷ್ಟವೇ ಇರಲಿ ಸಿರಿಗನ್ನಡ ತಾಯ್ಗೆ ದುಡಿಯುವೆ...' ಎಂದು ಬರುತ್ತದೆ. ಇನ್ನೊಂದು ಕೂಡ ಎಸ್ಪಿಬಿಯವರೇ ಹಾಡಿದ್ದು, 'ಸೀತಾ' ಚಿತ್ರಕ್ಕಾಗಿ 'ಮದುವೆಯ ಈ ಬಂಧ ಅನುರಾಗದ ಅನುಬಂಧ ಏಳೇಳು ಜನುಮದಲೂ ತೀರದ ಸಂಬಂಧ...' ಬಹುಮಟ್ಟಿಗೆ ಏಳೇಳು ಜನ್ಮದ ಮಾತು ಬರುವುದು ಗಂಡು-ಹೆಣ್ಣಿನ ಸಂಬಂಧಕ್ಕೇ.

ಈ ಏಳು ಜನ್ಮದ ಕಾನ್ಸೆಪ್ಟ್ ಎಲ್ಲಿಂದ ಬಂದದ್ದು, ಅದರಲ್ಲೂ ಕನ್ನಡದಲ್ಲಿ 'ಏಳೇಳು ಜನ್ಮ' ಎಂಬ ಬಳಕೆ ಹೇಗೆ ಹುಟ್ಟಿಕೊಂಡದ್ದು ಎಂದು ಒಮ್ಮೆ 'ಇಗೋ ಕನ್ನಡ' ಅಂಕಣದಲ್ಲಿ ಓದುಗರೊಬ್ಬರು ಪ್ರೊ. ಜಿ.ವೆಂಕಟಸುಬ್ಬಯ್ಯನವರನ್ನು ಕೇಳಿದ್ದರು. ''ನನಗೂ ಅದು ಸ್ಪಷ್ಟವಾಗಿ ಗೊತ್ತಿಲ್ಲ, ಪ್ರಜಾವಾಣಿಯ ಓದುಗರಾರಾದರೂ ತಿಳಿಸಿದರೆ ಅವರಿಗೆ ಏಳೇಳು ಜನ್ಮದಲ್ಲೂ ಕೃತಜ್ಞನಾಗಿರುತ್ತೇನೆ'' ಎಂದು ಜಿ.ವಿ. ಉತ್ತರಿಸಿದ್ದರು. ಪುಸ್ತಕರೂಪದಲ್ಲಿ ಬಂದ 'ಇಗೋ ಕನ್ನಡ'ದಿಂದ ಆ ಟಿಪ್ಪಣಿಯನ್ನು ಯಥಾವತ್ತಾಗಿ ಇಲ್ಲಿ ದಾಖಲಿಸುತ್ತಿದ್ದೇನೆ: ''ಏಳೇಳು ಜನ್ಮ ಎಂಬ ಶಬ್ದ ಪುಂಜದ ಬಗ್ಗೆ ನಾನು ಅನೇಕ ದಿನಗಳಿಂದ ಆಲೋಚನೆ ಮಾಡುತ್ತಿದ್ದೇನೆ. ಈ ಸಂಖ್ಯೆಗೆ ಬಂದಿರುವ ಪ್ರಾಧಾನ್ಯವು ಎಲ್ಲಿಂದ ಬಂದಿದೆ ಎಂಬ ಬಗ್ಗೆ ನನಗೆ ಉತ್ತರವು ಸಿಕ್ಕಿಲ್ಲ. ಸಂಸ್ಕೃತದಲ್ಲಿ ಸಪ್ತ ಎಂಬ ಸಂಖ್ಯೆಯೇನೋ ಬಹು ಕಡೆಗಳಲ್ಲಿ ಪ್ರಯೋಗವಾಗುತ್ತದೆ. ಸಪ್ತ ನದಿಗಳು, ಸಪ್ತ ಸಮುದ್ರಗಳು, ಸಪ್ತ ಋಷಿಗಳು, ಸಪ್ತ ಲೋಕಗಳು, ಸಪ್ತ ಪರ್ವತಗಳು, ಸಪ್ತಾಶ್ವ, ಸಪ್ತಜಿಹ್ವೆ, ಸಪ್ತ ತಂತು ಇತ್ಯಾದಿ. ಆದರೆ ಅಲ್ಲಿಯೂ ಸಪ್ತ ಜನ್ಮ ಎಂಬ ಶಬ್ದ ಪ್ರಚಾರದಲ್ಲಿಲ್ಲ. ಜಯವಿಜಯರಿಗೆ ಸಂಬಂಧಿಸಿದ ಕಥೆಗಳಲ್ಲಿ ಅವರು ಮೂರು ಜನ್ಮಗಳಲ್ಲಿ ರಾಕ್ಷಸರಾಗಿದ್ದು ಮತ್ತೆ ವಿಷ್ಣುವಿನ ಬಳಿ ಸೇರಿಕೊಂಡರು ಎಂಬ ಕಥೆ ಇದೆ. ಹರಿಕಥೆಯ ದಾಸರುಗಳು ಈ ಕಥೆಯನ್ನು ಉಪಕಥೆಯಾಗಿ ದೊಡ್ಡದು ಮಾಡುತ್ತಿದ್ದರು. ಆ ಸಂದರ್ಭದಲ್ಲಿ ನಾನು ಕೇಳಿದ ಒಂದು ವಿವರ ಹೀಗಿದೆ: ನಾರಾಯಣನನ್ನು ಕಾಣಲು ಬಂದಾಗ ಸನಂದನಾದಿಗಳನ್ನು ದ್ವಾರಪಾಲಕರಾದ ಜಯವಿಜಯರು ತಡೆದರು. ಅವರು ಕೋಪಗೊಂಡು ದ್ವಾರಪಾಲಕರಿಗೆ ರಾಕ್ಷಸರಾಗಿ ಭೂಮಿಯಲ್ಲಿ ಹುಟ್ಟಿರಿ ಎಂದು ಶಾಪ ಕೊಟ್ಟರು. ಆಗ ಪಶ್ಚಾತ್ತಾಪಪಟ್ಟ ಜಯವಿಜಯರನ್ನು ನಾರಾಯಣನು ಸಮಾಧಾನಪಡಿಸಿ 'ಋಷಿಗಳ ಶಾಪವು ಎಂದೂ ನಿಷ್ಫಲವಾಗುವುದಿಲ್ಲ, ನೀವು ನನ್ನ ಭಕ್ತರಾಗಿದ್ದು ಏಳು ಜನ್ಮಗಳನ್ನು ಕಳೆದು ನನ್ನ ಬಳಿಗೆ ಹಿಂದಿರುಗುತ್ತೀರೋ ಅಥವಾ ನನ್ನ ಶತ್ರುಗಳಾಗಿದ್ದು ಮೂರು ಜನ್ಮಗಳ ಬಳಿಕ ಹಿಂದಿರುಗುತ್ತೀರೋ?' ಎಂದು ಕೇಳಿದನಂತೆ. ಅವರು 'ನಾವು ಶತ್ರುಗಳಾದರೂ ಚಿಂತೆಯಿಲ್ಲ. ಮೂರು ಜನ್ಮಗಳೇ ಸಾಕು. ಹಿಂದಿರುಗುತ್ತೇವೆ' ಎಂದರಂತೆ. ಹೀಗೆ ಜಯವಿಜಯರು ಮೂರು ಜನ್ಮಗಳಲ್ಲಿ ವಿಷ್ಣುದ್ವೇಷಿ ರಾಕ್ಷಸರಾಗಿದ್ದು ಮತ್ತೆ ವೈಕುಂಠವನ್ನು ಸೇರಿದರು ಎಂಬುದು ನಾನು ಕೇಳಿದ ಕಥೆ. ಆದರೆ ಈ ಕಥೆಗೆ ಭಾಗವತದಲ್ಲಿ ಆಧಾರವಿಲ್ಲ.



ಇತರ ಕಡೆ ಆಧಾರವಿರುವುದು ನನ್ನ ವಾಚನದಲ್ಲಿ ದೊರಕಿಲ್ಲ. ತಿಳಿದವರು ಈ ಏಳೇಳು ಜನ್ಮದ ಕಥೆಯನ್ನು ನನಗೆ ತಿಳಿಸಿದರೆ ನಾನು ಏಳೇಳು ಜನ್ಮ ಅವರಿಗೆ ಕೃತಜ್ಞನಾಗಿರುತ್ತೇನೆ. ಅಲ್ಲಿಯವರೆಗೆ, ಏಳು ಎಂಬ ಸಂಖ್ಯೆಗೆ ಇರುವ ಪ್ರಾಧಾನ್ಯ ಹೆಚ್ಚು ಎಂಬುದನ್ನು ಗಮನಿಸಿ ಕನ್ನಡದಲ್ಲಿ ಏಳೇಳು ಅಂತ ಮಾಡಿಕೊಂಡಿರಬಹುದು ಎಂದುಕೊಳ್ಳುತ್ತೇನೆ''.

ವೆಂಕಟಸುಬ್ಬಯ್ಯನವರಂಥ ಪ್ರಾಜ್ಞರೇ ಗೊತ್ತಿಲ್ಲವೆಂದು ಕೈಚೆಲ್ಲಿದ ಮೇಲೆ ನಮ್ಮಂಥ ಪಾಮರರ ಪಾಡೇನು? ಆದರೂ ನಾನು ಪ್ರೊ.ಟಿ.ವಿ.ವೆಂಕಟಾಚಲ ಶಾಸ್ತ್ರೀಯವರ 'ಶ್ರೀವತ್ಸ ನಿಘಂಟು'ವನ್ನೊಮ್ಮೆ ತೆರೆದು ನೋಡಿದೆ. ಅದರಲ್ಲೂ ಬೇರೆ ಸುಮಾರೆಲ್ಲ ವಿಷಯಗಳ 7ರ ಪಟ್ಟಿಗಳಿವೆಯೇ ಹೊರತು ಸಪ್ತಜನ್ಮ ಎನ್ನುವುದೇನಿಲ್ಲ. ವಿಶ್ವ ಹಿಂದೂ ಪರಿಷತ್‌ನವರು ತುಂಬ ಹಿಂದೆ ಪ್ರಾತಃಸ್ಮರಣಮ್ ಎಂಬೊಂದು ಪುಟ್ಟ ಪುಸ್ತಕ ಪ್ರಕಟಿಸಿದ್ದರು. ಚಿಕ್ಕಂದಿನಲ್ಲಿ ಅದರಿಂದ ಕೆಲವು ಶ್ಲೋಕಗಳನ್ನು (ಹಿರಿಯರ ಒತ್ತಾಯಕ್ಕೆ ಮಣಿದು ಅರೆಮನಸ್ಸಿನಿಂದ) ಹೇಳುವ ಕ್ರಮವಿತ್ತು. ಅದರಲ್ಲೊಂದು 'ಸಪ್ತಾರ್ಣವಾಃ ಸಪ್ತ ಕುಲಾಚಲಾಶ್ಚ ಸಪ್ತರ್ಷಯೋ ದ್ವೀಪವನಾನಿ ಸಪ್ತ। ಭೂರಾದಿ ಕೃತ್ವಾ ಭುವನಾನಿ ಸಪ್ತ ಕುರ್ವಂತು ಸರ್ವೇ ಮಮ ಸುಪ್ರಭಾತಮ್॥' ಎಂಬ ಶ್ಲೋಕ ನೆನಪಿದೆ. ಏಳು ಸಮುದ್ರಗಳು, ಏಳು ಪರ್ವತಗಳು, ಏಳು ಋಷಿಗಳು, ಏಳು ದ್ವೀಪಗಳು, ಏಳು ಭುವನಗಳು ಅಂತೆಲ್ಲ ಉಲ್ಲೇಖ ಅದರಲ್ಲಿದೆಯೇ ಹೊರತು ಏಳು ಜನ್ಮಗಳ ಸುದ್ದಿಯಿಲ್ಲ. 'ಸೌರಾಷ್ಟ್ರೇ ಸೋಮನಾಥಂ ಚ ಶ್ರೀಶೈಲೇ ಮಲ್ಲಿಕಾರ್ಜುನಮ್... ಎಂದು ಆರಂಭವಾಗಿ 12 ಜ್ಯೋತಿರ್ಲಿಂಗಗಳನ್ನು ಹೆಸರಿಸುವ ಸ್ತೋತ್ರದಲ್ಲೂ ಕೊನೆಗೆ 'ಏತಾನಿ ಜ್ಯೋತಿರ್ಲಿಂಗಾನಿ ಸಾಯಂ ಪ್ರಾತಃ ಪಠೇನ್ನರಃ। ಸಪ್ತ ಜನ್ಮ ಕೃತಂ ಪಾಪಂ ಸ್ಮರಣೇನ ವಿನಶ್ಯತಿ॥' ಎಂದೇನೋ ಇದೆ. ಅದೇನಿದ್ದರೂ ಆಮಿಷದ ನುಡಿ ಅಷ್ಟೇ. ಸಪ್ತ ಜನ್ಮಗಳ ವಿವರಗಳಿಲ್ಲ, ಅಲ್ಲದೇ ಕನ್ನಡದಲ್ಲಷ್ಟೇ ಬಳಕೆಯಲ್ಲಿರುವ 'ಏಳೇಳು ಜನ್ಮ'ದ ಬಗ್ಗೆ ಸಂಸ್ಕೃತ ಶ್ಲೋಕಗಳಲ್ಲಿ ಹುಡುಕಿ ಪ್ರಯೋಜನವಿಲ್ಲ.

ಕೊನೆಗೂ 'ಇಗೋ ಕನ್ನಡ'ದಲ್ಲೇ ಉತ್ತರ ಸಿಕ್ಕಿತು! ಪುಸ್ತಕದ ಪ್ರಸ್ತಾವನೆಯಲ್ಲಿ ವೆಂಕಟಸುಬ್ಬಯ್ಯನವರು ಹೀಗೆ ಬರೆದಿದ್ದಾರೆ: ''ಏಳೇಳು ಜನ್ಮಗಳು ಎಂಬುದರ ಬಗ್ಗೆ ನಾನು ಅಂಕಣದಲ್ಲಿ ಬರೆದಿದ್ದ ಅಭಿಪ್ರಾಯವನ್ನು ಆಧರಿಸಿ ಓದುಗರೊಬ್ಬರು ಬರೆದ ಪತ್ರದಲ್ಲಿ ಸ್ವಾರಸ್ಯವಾದ ವಿಷಯವು ಅಡಗಿರುವುದರಿಂದ ಅದನ್ನು ಇಲ್ಲಿ ಗಮನಕ್ಕೆ ತರುತ್ತಿದ್ದೇನೆ. ಪತ್ರ ಹೀಗಿದೆ: 'ಏಳೇಳು ಜನ್ಮದ ಕಥೆ ಏನೆಂದು ತಿಳಿಯಬಯಸಿದ್ದೀರಷ್ಟೆ? ನಾನೂ ಆ ಬಗ್ಗೆ ಸಾಕಷ್ಟು ಆಲೋಚಿಸಿದ್ದು ಹಾಗೂ ಸಮಾಲೋಚಿಸಿದ್ದು ತತ್ಫಲವಾದ ನನ್ನ ಅಭಿಪ್ರಾಯ ಹೀಗಿದೆ: ಸಪ್ತ ದ್ವೀಪಗಳು, ಸಪ್ತ ಧಾತುಗಳು, ಸಪ್ತ ನರಕಗಳು, ಸಪ್ತ ಮಾತೃಕೆಯರು, ಸಪ್ತ ಮಾರುತಗಳು, ಸಪ್ತರ್ಷಿಗಳು, ಸಪ್ತ ಲೋಕಗಳು, ಸಪ್ತ ವರ್ಣಗಳು, ಸಪ್ತ ಸ್ವರಗಳು, ಸಪ್ತ ಸಮುದ್ರಗಳು, ಸಪ್ತಾಶ್ವಗಳು... ಈ ರೀತಿ ಏಳರ ಹಿರಿಮೆ ಕಂಡ ನಮ್ಮ ಜನಪದವು ಯಾವ ಆಧಾರದ ಬಗ್ಗೆಯೂ ಚಿಂತೆ ಮಾಡದೆ ಇನ್ನಷ್ಟು ಏಳರ ವರ್ಗಗಳನ್ನು ಸೃಷ್ಟಿಸಿತು. ಏಳು ಹೆಡೆಗಳ ಸರ್ಪ, ಏಳು ಸುತ್ತಿನ ಕೋಟೆ, ಏಳು ಜನ್ಮ... ಹೀಗೆ. ಏಳು ಸಮುದ್ರದಾಚೆ ಇರುವ ರಾಕ್ಷಸ, ಅವನ ಏಳು ಸುತ್ತಿನ ಕೋಟೆಯೊಳಗೆ ಬಂಧಿತಳಾದ ರಾಜಕುಮಾರಿ, ಏಳು ಹೆಡೆಯ ಸರ್ಪದ ಕಾವಲಲ್ಲಿರುವ ಮಾಣಿಕ್ಯ, ಋಷಿಯ ಶಾಪದಿಂದ ಏಳು ಜನ್ಮ ಕಳೆದು ಕೀಳು ಜನ್ಮವೆತ್ತಿದ ರಾಕ್ಷಸನ ಶಾಪವಿಮೋಚನೆ, ಏಳು ಹಗಲು ಏಳು ರಾತ್ರಿ ಏಳು ಕುದುರೆಯ ಮೇಲೆ ಪ್ರಯಾಣಮಾಡಿ ರಾಜಕುಮಾರನು ಬಂಧಿತಳಾದ ರಾಜಕುಮಾರಿಯನ್ನು ಬಂಧಮುಕ್ತಗೊಳಿಸಿ ಮದುವೆಯಾಗುವುದು– ಈ ರೀತಿ ಮನೋರಂಜನೆಗಾಗಿ ನಮ್ಮ ಪೂರ್ವಿಕರು ಸೃಷ್ಟಿಸಿದ ಕಥೆಗಳಲ್ಲಿ, ಅಂಥ ಕಥೆಗಳಾಗಿ ರೂಪು ತಳೆದ ಅನೇಕ ಏಳುಗಳಲ್ಲೊಂದು ಈ ಜನ್ಮ. ಇದನ್ನೇ ಒತ್ತಿ ಹೇಳಲು ಏಳೇಳು ಜನ್ಮವಾಯಿತು. ಏಳು ಹೆಡೆಗಳ ಸರ್ಪ, ಏಳು ಸಮುದ್ರ, ಏಳು ಸುತ್ತಿನ ಕೋಟೆಗಳಂತೆ ಘನಗಂಭೀರಘೋರವಾಗಲು ಏಳು ಜನ್ಮವು ಏಳೇಳು ಜನ್ಮವಾಯಿತು. ಅಂದು ಆ ರಾಕ್ಷಸನಿಗೆ ಏಳು ಜನ್ಮ ಕಳೆದು ಕೀಳು ಜನ್ಮವೆತ್ತಿದಾಕ್ಷಣ ಮೋಕ್ಷ ದೊರೆತರೆ ಇಂದು ನಮ್ಮ ಜನಗಳಿಗೆ ಏಳೇಳು ಜನ್ಮ ಕಳೆದರೂ ಬುದ್ಧಿ ಬರುವುದಿಲ್ಲ! ಹೌದು, ಅಂದಹಾಗೆ ತಾವು ನನಗೆ ಏಳೇಳು ಜನ್ಮ ಕೃತಜ್ಞನಾಗಿರುವುದು ಸಾಧ್ಯವೇ? ಈ ಜನ್ಮವೇ ತಮ್ಮ ಪಾಲಿನ ಕಡೆಯ ಜನ್ಮವಾಗಿದ್ದರೆ?'– ವಿಶ್ವಾಸದಿಂದ ಬರೆದ ಈ ಆತ್ಮೀಯವಾದ ಪತ್ರದಲ್ಲಿ ತಾತ್ತ್ವಿಕ ಚಿಂತನೆಯೂ ಅಡಗಿರುವುದರಿಂದ ಅದನ್ನು ಇಲ್ಲಿ ಮುದ್ರಿಸಲಾಗಿದೆ. ನಿಜವಾಗಿ ಈ ಸಪ್ತ ಶಬ್ದಕ್ಕೆ ಇರುವ ಪ್ರಾಧಾನ್ಯ ಮತ್ತು ಗೌರವ ನಮ್ಮ ಜನತೆಯಲ್ಲಿ ಅತ್ಯಪೂರ್ವವಾದುದು. ಸಪ್ತಕಪಾಲ, ಸಪ್ತಕುಮಾರಿಕಾವದಾನ, ಸಪ್ತಕೋಣ, ಸಪ್ತಗಂಗಾ, ಸಪ್ತಚಕ್ರ, ಸಪ್ತಚ್ಛಂದ, ಸಪ್ತಪದಿ, ಸಪ್ತರಶ್ಮಿ, ಸಪ್ತವ್ಯಸನ ಇತ್ಯಾದಿ. ಹೀಗಿರುವುದರಿಂದ ಮೇಲಿನ ಸಪ್ತದಲ್ಲಿರುವ ಚಿಂತನದ ಅಂಶಕ್ಕೆ ಅಧಿಕವಾದ ಬೆಲೆ ಬರುತ್ತದೆ. ಈ ಬಗ್ಗೆ ನಿರ್ಮಮತೆಯಿಂದ ಆಲೋಚಿಸಬೇಕಾದದ್ದು ವಿದ್ವಾಂಸರಿಗೆ ಬಿಟ್ಟಿರುವ ವಿಷಯ.''

ಓದುಗರು ಜ್ಞಾನಿಗಳಿರುತ್ತಾರೆ, ಜಾಣರಿರುತ್ತಾರೆ, ನಾವು ಊಹಿಸಿದ ಚೌಕಟ್ಟಿನಿಂದ ಹೊರಗೆಯೂ ಯೋಚಿಸಬಲ್ಲವರಿರುತ್ತಾರೆ ಎನ್ನುವುದನ್ನು ನಾನೂ ಯಾವತ್ತಿಗೂ ಅನುಮೋದಿಸುತ್ತೇನೆ. 'ತಿಳಿರುತೋರಣ' ಅಂಕಣ ನಿಂತಿರುವುದೇ ಅಂಥದೊಂದು ಅಡಿಪಾಯದ ಮೇಲೆ. ಕಳೆದವಾರದ ಅಂಕಣದಲ್ಲಿ ಮರವನ್ನು ಸುತ್ತುವ ಬಳ್ಳಿಗಳ ಬಗ್ಗೆ ಬರೆಯುತ್ತ ಕೊನೆಯಲ್ಲೊಂದು ಜಾಣ್ಮೆಲೆಕ್ಕವನ್ನೂ ಸೇರಿಸಿದ್ದೆನಷ್ಟೆ? ನಾನಾದರೋ ಅದನ್ನು ಯಾವುದೋ ಜಾಲತಾಣದಿಂದ ಎರವಲು ಪಡೆದಿದ್ದೆ ಮತ್ತು ಅಲ್ಲಿ ಅದರ ಉತ್ತರ ಸಹ ಗಣಿತ ಸಮೀಕರಣಗಳ ಮೂಲಕವಷ್ಟೇ ಪ್ರಸ್ತುತಪಡಿಸಿದ್ದಿತ್ತು. ಅದನ್ನು ಜನಸಾಮಾನ್ಯರಿಗೂ ಅರ್ಥವಾಗುವಂತೆ ಹೇಗೆ ಬರೆಯುವುದಪ್ಪಾ ಎಂದು ಸಣ್ಣದೊಂದು ಹಿಂಜರಿತವೂ ನನ್ನಲ್ಲಿ ತುಂಬಿತ್ತು. ಆದರೆ ಕಳೆದವಾರದ ಅಂಕಣ ಪ್ರಕಟವಾಗಿ ಒಂದೆರಡು ಗಂಟೆಗಳೊಳಗೇ ಬೆಂಗಳೂರಿನಿಂದ ರೇಖಾ ಬಿ.ಎಸ್. ಅವರಿಂದ ಚಿತ್ರಸಮೇತ ಸರಿಯುತ್ತರ ಬಂತು! ಜಾಣ್ಮೆಲೆಕ್ಕಕ್ಕೆ ಉತ್ತರವನ್ನು ಅವರು ಕಂಡುಕೊಂಡರು ಎನ್ನುವುದಕ್ಕಿಂತಲೂ ಆ ಪ್ರಕ್ರಿಯೆಯನ್ನವರು ಎಷ್ಟು ಆನಂದಿಸಿದರೆಂದು ಅವರ ಸಂದೇಶದಲ್ಲಿ, ಜತೆಯಲ್ಲಿರುವ ಚಿತ್ರದಲ್ಲಿ, ಸೌಟಿನಲ್ಲೂ ಮೂಡಿಸಿರುವ ಸ್ಮೈಲಿಯಲ್ಲಿ ಗೊತ್ತಾಗುತ್ತದೆ: ''ನಾನು ಮೊದಲು ಬಳ್ಳಿಗಳ ಚಿತ್ರ ಬರೆದೆ. ಬೇರೆಬೇರೆ ಪರ್ಮ್ಯುಟೇಷನ್ಸ್/ ಕಾಂಬಿನೇಷನ್ಸ್ ಪ್ರಯತ್ನಿಸಿದೆ. ಯಾಕೋ ಸರಿಹೋಗಲಿಲ್ಲ, ಆಮೇಲೆ ನೋಡಿದರೆ, ನೀವು ಕೊಟ್ಟ ಲೆಕ್ಕದಲ್ಲೇ ಒಂದು ಸಿಂಪಲ್ ಸುಳಿವು ಇತ್ತು, ಅದನ್ನೇ ಅನುಸರಿಸಿದೆ. ಇವತ್ತು ಬೆಳಗ್ಗೆಯೇ ಸ್ವಲ್ಪ ಮೆಣಸಿನಪುಡಿ ಹುಳಿಪುಡಿಗಳನ್ನು ಮಾಡಲಿಕ್ಕೆಂದು ಮೆಣಸಿನಕಾಯಿ ಹುರಿಯುವುದಕ್ಕೆ ಮರದ ಸೌಟು ತೆಗೆದಿದ್ದೆ, ಅದು ಈ ರೀತಿ ಉಪಯೋಗಕ್ಕೆ ಬಂತು. ಯಾವ ಮರದ ಕೊಂಬೆಯನ್ನು ಕಡಿದು ಮಾಡಿದ ಸೌಟೋ ಏನೋ ಇದು. ಈಗ ಮಾಧವಿ-ಮಾಲತಿಗಳಿಂದ ಸುತ್ತಿಸಿಕೊಂಡು ಒಳಗೊಳಗೇ ಖುಷಿಪಡ್ತಿದೆ ಅನ್ನಿಸಿತು. ಏಕೆಂದರೆ ಇದರ ಹಣೆಬರಹದಲ್ಲಿ ಬಾಣಲೆಗೆ ಬಿದ್ದು ಖಾರ ಮೆತ್ತಿಕೊಳ್ಳುವುದಷ್ಟೇ ಇದ್ದದ್ದು. ಮಾಲತಿ ಮತ್ತು ಮಾಧವಿ ಒಟ್ಟು 7 ಬಾರಿ ಪರಸ್ಪರ ಮುಖಾಮುಖಿ ಆಗುತ್ತಾರೆಂದು ಕಂಡುಕೊಂಡೆ. ಡಿಸೆಂಬರ್ 22ರಂದು ಗಣಿತಜ್ಞ ಎಸ್.ರಾಮಾನುಜನ್ ಅವರ ಹುಟ್ಟುಹಬ್ಬದ ದಿನ, ಅವರಿಗೆ ಕಷ್ಟಕೊಡದೆ ಲೆಕ್ಕ ಸರಿಯಾಗಿಯೇ ಮಾಡಿದ್ದೇನೆಂಬ ಹೆಮ್ಮೆಯಿದೆ. ಅಂದಹಾಗೆ ನಾನು ಇದುವರೆಗೆ ಬಳ್ಳಿಗಳ ಸುತ್ತುವಿಕೆಯ ಬಗ್ಗೆ ಗಮನವೇ ಕೊಟ್ಟಿರಲಿಲ್ಲ, ಮನೆಯ ಕೈತೋಟಕ್ಕೆ ಹೋಗಿ ನೋಡಿದೆ, ನಮ್ಮ ಮನೆಯಲ್ಲಿ ಇರೋ ಬಳ್ಳಿಗಳು ಕೆಲವು ಪ್ರದಕ್ಷಿಣಾಕಾರವಾಗಿವೆ! ವೀಳ್ಯದೆಲೆ, ಇನ್ನೊಂದು ಆಲಂಕಾರಿಕ ಬಳ್ಳಿ (ಸಸ್ಯಶಾಸ್ತ್ರೀಯ ಹೆಸರೆಲ್ಲ ನೆನಪಿಗೆ ಬರುತ್ತಿಲ್ಲ). ಆದರೆ ಮಲ್ಲಿಗೆ ಬಳ್ಳಿ ಕೆಳಗಿನಿಂದ ಮೇಲೆ ನೇರಕ್ಕೆ ಹೋಗಿ ದಾಸವಾಳದ ಗಿಡಕ್ಕೆ ಹಬ್ಬಿ ಅದನ್ನು ಎಡ ಬಲ ಎರಡು ಕಡೆಯಿಂದಲೂ ತಬ್ಬಿ 'ಬಾಹುಬಂಧನ ಚುಂಬನ' ಮಾಡಿ ದಾಸವಾಳದ ಗಿಡವನ್ನು ಕಂಗೆಡಿಸಿದೆ ಎಂಬೊಂದು ಗುಮಾನಿ ಇದೆ!''

ರೇಖಾ ಅವರಂತೆಯೇ 'ನೋಡಿ ತಿಳಿ ಮಾಡಿ ಕಲಿ' ಮೂಲಕ ಸರಿಯುತ್ತರ ಕಂಡುಕೊಂಡ ಇನ್ನಿಬ್ಬರು ಓದುಗರು ಬೆಂಗಳೂರಿನಿಂದ ಸೀತಾ ವ್ಯಾಸಮುದ್ರ(ಎರಡು ಹುರಿಗಳನ್ನು ಒಂದು ಬಾಟಲಿಗೆ ಪ್ರದಕ್ಷಿಣವಾಗಿ ಒಂದನ್ನು, ಅಪ್ರದಕ್ಷಿಣವಾಗಿ ಇನ್ನೊಂದನ್ನು ಸುತ್ತುತ್ತ ಪ್ರಯೋಗ ಮಾಡಿ ಕಂಡುಕೊಂಡೆ ಎಂದು ಬರೆದು ಆ ಬಗ್ಗೆ ಒಂದು ಕವಿತೆಯನ್ನೂ ಹೆಣೆದವರು), ಮತ್ತು ಪುತ್ತೂರಿನಿಂದ ರೇವತಿ ಯು.ಎಂ(ಕೋಲಿಗೆ ಬಳ್ಳಿ ಸುತ್ತಿ ನೋಡಿದೆ ಎಂದು ಬರೆದವರು). ಬಳ್ಳಿಗಳ ಲೆಕ್ಕ ಬಿಡಿಸುವುದರಲ್ಲಿ ಹೆಣ್ಮಕ್ಕೇ ಸ್ಟ್ರಾಂಗ್ ಗುರೂ! ಎನ್ನಲೇಬೇಕಾಗಿದೆ. ಹೊಸ ಕ್ಯಾಲೆಂಡರ್ ವರ್ಷಾರಂಭದ ಸಂದರ್ಭದಲ್ಲಿ ಓದುಗಮಿತ್ರರೆಲ್ಲರಿಗೂ ಇಪ್ಪತ್ತುಇಪ್ಪತ್ತೈದರ ಲೆಕ್ಕದಲ್ಲಿ ಶುಭಾಶಯಗಳು.

ಹಿಂದೂ ಸಮಾಜಕ್ಕೆ ಮುದ ನೀಡದ ಮೋಹನ ವಾಣಿ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಕಾಶಿ, ಮಥುರಾ, ಸಂಭಲ್ ಮತ್ತು ಇತರ ಪ್ರದೇಶಗಳಲ್ಲಿನ ಮಸೀದಿಗಳ ಸರ್ವೆ ನಡೆಸುವ ಕುರಿತು ಚರ್ಚೆಗಳು ನಡೆಯುತ್ತಿರುವಾಗಲೇ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರೆಸ್ಸೆಸ್) ಸರಸಂಘಚಾಲಕ ಮೋಹನ್ ಭಾಗವತ್ ಅವರ ಇತ್ತೀಚಿನ ಹೇಳಿಕೆಯೊಂದು ಹಿಂದೂ ಹೋರಾಟಗಾರರ ಮತ್ತು ಸಾಧು-ಸಂತರ ಮುನಿಸಿಗೆ ಕಾರಣವಾಗಿದೆ. ''ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣವಾಗಬೇಕಿತ್ತು, ಈಗ ಆಗಿದೆ. ಇದು ಹಿಂದೂಗಳ ಪ್ರಮುಖ ಶ್ರದ್ಧಾಕೇಂದ್ರವಾಗಿದೆ. ಆದರೆ, ಮಂದಿರಗಳನ್ನು ಕಟ್ಟುವುದರಿಂದಲೇ ಯಾರೂ ಹಿಂದೂ ನಾಯಕನಾಗಲು ಸಾಧ್ಯವಿಲ್ಲ. ರಾಮಮಂದಿರದಂಥ ವಿವಾದಗಳನ್ನು ಮತ್ತೆ ಎಲ್ಲೆಂದರಲ್ಲಿ ಹುಟ್ಟುಹಾಕಬೇಡಿ. ಹೊಸ ವಿವಾದಗಳು ಈ ಕಾಲಕ್ಕೆ ಸ್ವೀಕಾರಾರ್ಹವಲ್ಲ. ನಮ್ಮ ದೇಶವಿಂದು ಸೌಹಾರ್ದಯುತವಾಗಿ ಬದುಕಬಲ್ಲದು ಎಂಬುದನ್ನು ಜಗತ್ತಿಗೆ ಸಾರುವ ಅಗತ್ಯವಿದೆ. ರಾಮಮಂದಿರ ನಿರ್ಮಾಣದ ನಂತರ ಕೆಲವರು ಹೊಸ ಹೊಸ ಜಾಗಗಳಲ್ಲಿ ಇಂಥ ವಿಚಾರಗಳನ್ನು ಮುಂದಿಟ್ಟುಕೊಂಡು ಹಿಂದೂಗಳ ನಾಯಕರಾಗಬಹುದೆಂದು ಭಾವಿಸುತ್ತಿದ್ದಾರೆ. ಆದರೆ ಇದನ್ನೊಪ್ಪಲು ಸಾಧ್ಯವಿಲ್ಲ'' ಎಂದಿದ್ದರು ಮೋಹನ್ ಭಾಗವತ್.

ಭಾರತೀಯ ಸಮಾಜದಲ್ಲಿ ಬಹಳ ಹಿಂದಿನಿಂದಲೂ ಸಾಮರಸ್ಯದಿಂದ ಬದುಕುತ್ತಿರುವ ನಾವು ಈ ಸದ್ಭಾವನೆಯನ್ನು ಜಗತ್ತಿಗೆ ಸಾರಬೇಕೆಂದರೆ, ಅದನ್ನು ಮಾದರಿಯಾಗಿ ಆಚರಿಸಿ ತೋರಿಸಬೇಕು ಎಂಬುದು ಅವರ ಅಭಿಪ್ರಾಯವಾಗಿತ್ತು. ಉತ್ತರ ಪ್ರದೇಶದ ಸಂಭಲ್‌ನ ಶಾಹಿ ಜಾಮಾ ಮಸೀದಿ ಮತ್ತು ರಾಜಸ್ಥಾನದ ಅಜ್ಮೇರ್‌ನ ಷರೀಫ್‌ನಂಥ ಧಾರ್ಮಿಕ ಸ್ಥಳಗಳ ಮೂಲವನ್ನು ಕೆದಕುವ ಇತ್ತೀಚಿನ ವಿವಾದಗಳ ಹಿನ್ನೆಲೆಯಲ್ಲಿ ಅವರು ಹೀಗೆಂದಿದ್ದಾರೆ ಎಂದು ಭಾವಿಸಲಾಗಿದೆ. ಮೋಹನ್ ಅವರು ಹೀಗೆ ಸೌಹಾರ್ದದ ಜಪಮಾಡುತ್ತಿರುವುದು ಇದೇ ಮೊದಲೇನಲ್ಲ; ರಾಮಮಂದಿರದ ಭೂಮಿಪೂಜೆ ಮತ್ತು ಮಂದಿರದ ಉದ್ಘಾಟನೆಯ ವೇಳೆಯೂ ಅವರು ಹೀಗೇ ಮಾತನಾಡಿದ್ದನ್ನು ನಾವು ನೆನಪಿಸಿಕೊಳ್ಳಬಹುದು.

ಭಾರತವನ್ನು ಮತ್ತೆ ಶ್ರೇಷ್ಠವಾಗಿಸುವ ಮಹತ್ವಾಕಾಂಕ್ಷೆಯ ಆರೆಸ್ಸೆಸ್ ತನ್ನ ಪಯಣದಲ್ಲಿ ಇಲ್ಲಿಯವರೆಗೆ 6 ಪೂರ್ಣಕಾಲಿಕ ಸರಸಂಘಚಾಲಕರನ್ನು ಕಂಡಿದೆ. ಅವರೆಲ್ಲ ವಿಭಿನ್ನ ಮನೋಧರ್ಮ ಮತ್ತು ವ್ಯಕ್ತಿತ್ವದವರಾಗಿದ್ದರೂ, ಒಂದೇ ಗುರಿಯನ್ನು ಹೊಂದಿದ್ದರು. ಭಾರತವನ್ನು ಹಿಂದೂರಾಷ್ಟ್ರವಾಗಿಸುವುದು ಹೆಡ್ಗೆವಾರ್ ಅವರ ಕಾಲದ ಚಿಂತನೆಯಾಗಿತ್ತು. ಹೆಡ್ಗೆವಾರ್ ಹಿಂದೂ ಏಕತೆಯ ಯೋಜನೆಗೆ ಅಡಿಪಾಯ ಹಾಕಿದರೆ, ಗೋಳ್ವಾಲ್ಕರ್ ಸದೃಢ ಸೈದ್ಧಾಂತಿಕ ಸಿಮೆಂಟ್‌ನಿಂದ ಆ ಸೌಧವನ್ನು ನಿರ್ಮಿಸಿದರು. ಹಾಗೆ ನೋಡಿದರೆ, ಬಾಳಾಸಾಹೇಬ್ ದೇವರಸ್ ಅವರು ರಾಜಕೀಯವಾಗಿ ಹೆಚ್ಚು ಪ್ರಸ್ತುತರಾಗಿದ್ದರು, ಜನಸಂಘ/ಬಿಜೆಪಿ ಒಂದು ರಾಜಕೀಯ ಶಕ್ತಿಯಾಗಿ ಬೆಳೆಯಲು ಕಾರಣರಾಗಿದ್ದರು. ನಂತರ ಬಂದ ರಾಜೇಂದ್ರ ಸಿಂಗ್ ಮತ್ತು ಕರ್ನಾಟಕದವರೇ ಆಗಿದ್ದ ಸುದರ್ಶನ್, ದೇವರಸ್‌ರ ಕಾಲದಲ್ಲಿ ದಕ್ಕಿದ್ದ ಕೀರ್ತಿಯನ್ನು ಕ್ರೋಡೀಕರಿಸಲು ನೆರವಾದರು.

ಕ್ರಾಂತಿಕಾರಕ ಚಿಂತನೆ, ಅಧ್ಯಯನಶೀಲತೆ ಮತ್ತು ವಿದ್ವತ್ಪೂರ್ಣ ಭಾಷಣಗಳಿಗೆ ಹೆಸರಾದ ಮೋಹನ್ ಭಾಗವತ್, ಹಿಂದಿನ ಸರಸಂಘಚಾಲಕರುಗಳಿಗೆ ಹೋಲಿಸಿದರೆ ಹಿಂದುತ್ವದ ವಿಷಯದಲ್ಲಿ ಅತಿರೇಕವಿಲ್ಲದ, ಸ್ವಲ್ಪ ಮೃದು ಎನ್ನಬಹುದಾದ ನಿಲುವನ್ನು ಹೊಂದಿರುವವರು. ಸುಧಾರಣಾವಾದಿಯಾದ ಇವರು ಭೂತಕಾಲಕ್ಕಷ್ಟೇ ಅಂಟಿಕೊಳ್ಳದೆ ಭವಿಷ್ಯವನ್ನು ಕಲ್ಪಿಸಿಕೊಳ್ಳುವ, ಹಿಂದುತ್ವದ ಹರಿವಿಗೆ ದಿಟ್ಟ ಮತ್ತು ಪರಿವರ್ತನಶೀಲ ಬದಲಾವಣೆಗಳನ್ನು ಪರಿಚಯಿಸುವ ದೂರದೃಷ್ಟಿಯುಳ್ಳವರಾಗಿದ್ದಾರೆ. ಜತೆಗೆ, ಕಠಿಣ ಪರಿಸ್ಥಿತಿಯಲ್ಲಿ ಕೆಲಸವನ್ನು ವಹಿಸಿಕೊಂಡವರಾಗಿದ್ದಾರೆ ಎನ್ನಬಹುದು. ಉದಾಹರಣೆಗೆ, ಅವರು ಮೋದಿಯವರನ್ನು ಆಡ್ವಾಣಿಯವರ ಉತ್ತರಾಧಿಕಾರಿಯಾಗಿ ಅಭಿಷೇಕಿಸುವ, ಅಪಾಯಕಾರಿಯಾಗಬಹುದಾಗಿದ್ದ ನಿರ್ಧಾರವನ್ನು ತೆಗೆದುಕೊಂಡು ಪ್ರಬುದ್ಧತೆಯನ್ನು ಪ್ರದರ್ಶಿಸಿದವರು. ಒಂದೆಡೆ, ಅವರು ಮೋದಿಯವರಂಥ ಪ್ರಬಲ ವ್ಯಕ್ತಿಯೊಂದಿಗಿನ ತಮ್ಮ ಸಂಬಂಧವನ್ನು ಎಚ್ಚರಿಕೆಯಿಂದ ಮುನ್ನಡೆಸಬೇಕಿತ್ತು, ಮತ್ತೊಂದೆಡೆ ಹಿಂದುತ್ವದೊಳಗೆ ಸೈದ್ಧಾಂತಿಕ ಬದಲಾವಣೆಗೂ ತೊಡಗಬೇಕಿತ್ತು. ಈ ಪಯಣದುದ್ದಕ್ಕೂ ಭಾಗವತ್ ಅವರು ಹಿಂದುತ್ವದ ಮೂಲಸಿದ್ಧಾಂತದೊಂದಿಗೆ ರಾಜಿಮಾಡಿಕೊಂಡಿದ್ದಾರೆ ಎಂದು ಭಾವಿಸುವವರಿಂದ 'ಆರೆಸ್ಸೆಸ್‌ನ ದುರ್ಬಲ ಮುಖ್ಯಸ್ಥ' ಎಂಬ ಹಣೆಪಟ್ಟಿಯನ್ನೂ ಕಟ್ಟಿಸಿಕೊಳ್ಳಬೇಕಾಯಿತು.

ಸುದರ್ಶನ್‌ರಿಂದ ಭಾಗವತ್ ಅಧಿಕಾರ ವಹಿಸಿಕೊಂಡಾಗ, ಆರೆಸ್ಸೆಸ್ ಸೈದ್ಧಾಂತಿಕವಾಗಿ ಗೊಂದಲದಲ್ಲಿ ಸಿಲುಕಿತ್ತು. 2004ರಲ್ಲಿ ವಾಜಪೇಯಿ ನೇತೃತ್ವದ ಬಿಜೆಪಿಯ ಆಶ್ಚರ್ಯಕರ ಸೋಲಿನ ನಂತರ ಸಂಘ ಆಘಾತಕ್ಕೊಳಗಾಗಿತ್ತು, ಆಡ್ವಾಣಿಯವರ 'ಜಿನ್ನಾ ಪ್ರಮಾದ'ದಿಂದ ಇನ್ನೂ ತತ್ತರಿಸುತ್ತಿರುವಾಗ, ಅಟಲ್-ಆಡ್ವಾಣಿ ಜೋಡಿಗಿಂತ ಹೆಚ್ಚು ಉದಾರವಾದಿಯಾದ ಹೊಸ ಮುಖಕ್ಕಾಗಿ ಹುಡುಕುತ್ತಿತ್ತು. ಆರೆಸ್ಸೆಸ್, ಬಿಜೆಪಿ ಮತ್ತು ಅದರ ಇತರ ಅಂಗಸಂಸ್ಥೆಗಳ ನಡುವಿನ ಸಾಮರಸ್ಯ ದಿನೇದಿನೆ ಕಮ್ಮಿಯಾಗುತ್ತಿತ್ತು. 'ಅಟಲ್-ಆಡ್ವಾಣಿ ಯುಗ ಕೊನೆಗೊಂಡಿದೆ, ಬಿಜೆಪಿಗೆ ಹೊಸರಕ್ತದ ಅಗತ್ಯವಿದೆ' ಎಂಬುದು ಮನವರಿಕೆಯಾದ ನಂತರ, ''ಪಕ್ಷದ ಹೊಸ ಅಧ್ಯಕ್ಷರು 'ಗ್ಯಾಂಗ್ ಆಫ್ ಫೋರ್'(ಸುಷ್ಮಾ ಸ್ವರಾಜ್, ಅರುಣ್ ಜೇಟ್ಲಿ, ವೆಂಕಯ್ಯನಾಯ್ಡು ಮತ್ತು ಅನಂತ್ ಕುಮಾರ್)ನಿಂದ ಬರುವುದಿಲ್ಲ ಎಂದು ಭಾಗವತ್ ಧೈರ್ಯದಿಂದ ಹೇಳಿ, ನಿತಿನ್ ಗಡ್ಕರಿಯಂಥ ಕಿರಿಯರನ್ನು ಬಿಜೆಪಿಯ ಅಧ್ಯಕ್ಷರಾಗಿ ಆಯ್ಕೆಮಾಡಿದ್ದರು. 2014ರ ಚುನಾವಣೆಗೆ ಗಡ್ಕರಿಯವರನ್ನು ಪಕ್ಷದ ಪ್ರಧಾನಿ ಅಭ್ಯರ್ಥಿಯಾಗಿಸಲೂ ಮೊದಲು ಮನಸ್ಸು ಮಾಡಿದ್ದರು; ಆದರೆ ಗಡ್ಕರಿಯವರ ಅನಾರೋಗ್ಯ, ಅವರ ವಿರುದ್ಧವಿದ್ದ ಕೆಲ ಆರೋಪಗಳ ಕಾರಣದಿಂದಾಗಿ ಈ ನಿರ್ಧಾರವನ್ನು ತ್ವರಿತವಾಗಿ ಬದಲಿಸಿ, ಮೋದಿಯವರ ಹೆಸರು ಮುನ್ನೆಲೆಗೆ ಬರುವಂತೆ ನೋಡಿಕೊಂಡರು. ಅಂದು ಮೋದಿಯವರನ್ನು ಪ್ರಧಾನಿ ಅಭ್ಯರ್ಥಿಯಾಗಿ ಘೋಷಿಸುವುದು ಸುಲಭದ ಮಾತಾಗಿರಲಿಲ್ಲ. 2014ರಲ್ಲಿ ಬಿಜೆಪಿಯು ಗೆಲ್ಲಲು ವಿಫಲವಾದಲ್ಲಿ ಹಿಂದುತ್ವ ಚಳವಳಿಯ ಭವಿಷ್ಯವೇ ಅಪಾಯಕ್ಕೀಡಾಗುತ್ತದೆ ಎಂದು ಭಾಗವತ್ ಅರಿತಿದ್ದರು. ಬಿಜೆಪಿಯ ಎಲ್ಲ ಮುಖ್ಯಮಂತ್ರಿಗಳ ಪೈಕಿ ಮೋದಿಯವರ ಬಳಿ ಸಂಪನ್ಮೂಲಗಳು ಮಾತ್ರವಲ್ಲ, 'ಬಿಜೆಪಿ ತನ್ನ ಮೂಲಸಿದ್ಧಾಂತವಾದ ಹಿಂದುತ್ವದಿಂದ ಚಂಚಲವಾಗಬಾರದು' ಎಂಬ ಸೈದ್ಧಾಂತಿಕ ಸ್ಪಷ್ಟತೆಯೂ ಇತ್ತು. ಮೋದಿಯವರ ಶುದ್ಧಚಾರಿತ್ರ್ಯ ಮತ್ತು ಸಾಂಸ್ಥಿಕ ಕೌಶಲಗಳು ಭಾಗವತರ ಪ್ರಸ್ತಾಪಕ್ಕೆ ಜಯಸಿಗಲು ಕಾರಣವಾದವು.

ಹಾಗಂತ, ಆಕ್ರಮಣಕಾರಿ ಹಿಂದುತ್ವದ ಧೋರಣೆಯನ್ನು ಭಾಗವತ್ ಸಂಪೂರ್ಣ ವಿರೋಧಿಸಿದರು ಎಂದಲ್ಲ. ಆದರೆ, ''ಮುಸ್ಲಿಂ-ವಿರೋಧಿ ಅಭಿಯಾನವು ಅನಿಯಂತ್ರಿತವಾಗಿ ಮುಂದುವರಿದರೆ, 'ಹಿಂದುತ್ವ' ಮತ್ತು 'ಹಿಂದೂ' ಎಂಬ ಪರಿಭಾಷೆಗಳು ಜಾಗತಿಕವಾಗಿ ಅಪಖ್ಯಾತಿಗೆ ಒಳಗಾಗುತ್ತವೆ; ಇದು ಆರೆಸ್ಸೆಸ್‌ನ ಸಂಪೂರ್ಣ ಹಿಂದೂ ಯೋಜನೆಯನ್ನು ದಾರಿತಪ್ಪಿಸಲು ಕಾರಣವಾಗುತ್ತದೆ'' ಎಂದು ಅವರು ಅರಿತಿದ್ದರು. ದೇಶದ 20 ಕೋಟಿ ಮುಸ್ಲಿಮರನ್ನು ಕಾರಣವಿಲ್ಲದೆ ದೂರತಳ್ಳಲು ಸಾಧ್ಯವಿಲ್ಲ ಎಂಬುದನ್ನು ಅವರು ಅರಿತಿದ್ದರಿಂದಲೇ 'ಇಸ್ಲಾಮೋಫೋಬಿಯಾ' ಪ್ರಕ್ರಿಯೆಯನ್ನು ಮೊದಲು ನಿಧಾನಗೊಳಿಸಲು ನಿರ್ಧರಿಸಿ, ಬಳಿಕ ಅಶಿಸ್ತಿನ, ಸ್ವಘೋಷಿತ ಹಿಂದುತ್ವ ಯೋಧರನ್ನು ಪಳಗಿಸಲು ಬಯಸಿದರು. 'ಮುಸ್ಲಿಮರಿಲ್ಲದೆ ಹಿಂದುತ್ವ ಅಪೂರ್ಣ' ಎಂದು ಧೈರ್ಯದಿಂದ ಹೇಳಿದರು. ಈ ಹೇಳಿಕೆಯು ಆಗ 'ಹಿಂದುತ್ವ ಬ್ರಿಗೇಡ್' ಅನ್ನು ಬೆಚ್ಚಿಬೀಳಿಸಿತ್ತು. ಆದರೆ ಭಾಗವತ್ ಅಲ್ಲಿಗೇ ನಿಲ್ಲಿಸಲಿಲ್ಲ. ರಾಮಮಂದಿರ/ಬಾಬ್ರಿ ಮಸೀದಿ ವಿವಾದಕ್ಕೆ ಸಂಬಂಧಿಸಿ ಸುಪ್ರೀಂಕೋರ್ಟ್ ತೀರ್ಪಿತ್ತಾಗ, ಅದನ್ನು ಹಿಂದೂಗಳ ಜಯವೆಂದು ಭಾವಿಸಿ ವಿಜಯೋತ್ಸವ ಆಚರಿಸಬಾರದು ಎಂದು ಕೇಳಿಕೊಂಡಿದ್ದರು. ಮುಂದೆ, ವಾರಾಣಸಿಯ ಜ್ಞಾನವಾಪಿ ಮಸೀದಿಯನ್ನು ದೇವಾಲಯದ ಮೇಲೆ ನಿರ್ಮಿಸಲಾಗಿದೆಯೇ ಎಂಬುದನ್ನು ನಿರ್ಧರಿಸಲು ಸಮೀಕ್ಷೆ ನಡೆಸುವಂತೆ ನ್ಯಾಯಾಲಯ ಆದೇಶಿಸಿದಾಗ, ''ಪ್ರತಿ ಮಸೀದಿಯ ಕೆಳಗೆ ಶಿವಲಿಂಗವನ್ನು ಏಕೆ ಹುಡುಕಬೇಕು?'' ಎಂದು ಅವರು ಕೇಳಿದ್ದನ್ನೂ ಇಲ್ಲಿ ಸ್ಮರಿಸಬಹುದು. ''ಭಾರತ 'ವಿಶ್ವಗುರು' ಆಗಬೇಕೆಂದು ನಾವು ಮಾತನಾಡುತ್ತೇವೆ, ಆದರೆ 'ಮಹಾಶಕ್ತಿ' (ಸೂಪರ್ ಪವರ್) ಆಗಬೇಕೆಂದು ಯೋಚಿಸುವುದೇ ಇಲ್ಲ. ಹಾಗಾಗಿ ಮಹಾಶಕ್ತಿ ಆಗುವ ನಿಟ್ಟಿನಲ್ಲಿ ಹೆಚ್ಚು ಕೆಲಸ ಮಾಡಬೇಕಿದೆ. ಹಿಂದೂಸ್ತಾನ ಎನ್ನುವುದು ಯಾವಾಗಲೂ ಹಿಂದೂರಾಷ್ಟ್ರವೇ ಆಗಿದೆ. ಸೈದ್ಧಾಂತಿಕವಾಗಿ ಎಲ್ಲಾ ಭಾರತೀಯರು ಹಿಂದೂಗಳು ಮತ್ತು ಹಿಂದೂಗಳು ಎಂದರೆ ಎಲ್ಲಾ ಭಾರತೀಯರು. ಹಾಗಾಗಿ, ಪ್ರತ್ಯೇಕ ಹಿಂದೂರಾಷ್ಟ್ರದ ಕೂಗು ಪ್ರಸ್ತುತವಲ್ಲ. ಹಿಂದೂ ಸಿದ್ಧಾಂತಕ್ಕೆ ಯಾವುದೇ ಪರ್ಯಾಯವಿಲ್ಲದಿರುವುದರಿಂದ ಅದಕ್ಕೆ ಈಗ ವಿಶ್ವಾದ್ಯಂತ ಹೆಚ್ಚು ಬೇಡಿಕೆಯಿದೆ. ಹಾಗಾಗಿ ನಾವು ಹಿಂದೂಗಳು ಬಹಳ ಜವಾಬ್ದಾರಿಯಿಂದ ವರ್ತಿಸಬೇಕು'' ಎಂಬುದು ಭಾಗವತ್‌ರ ಅಂಬೋಣವಾಗಿತ್ತು. ಅವರ ಈ 'ಸೌಹಾರ್ದ ನಿಲುವುಗಳು', ಸಂಘದ ಹಿಂದಿನ ಸರಸಂಘಚಾಲಕರುಗಳ ಧೋರಣೆಗೆ ವ್ಯತಿರಿಕ್ತವಾದುದಾಗಿವೆ ಎಂದು ತೋರುವುದಂತೂ ಸತ್ಯ.

ಭಾಗವತರ ಮಾತುಗಳು ಕೇವಲ ವೈಯಕ್ತಿಕ ಅಭಿಪ್ರಾಯವಾಗಿರದೆ, ಆರೆಸ್ಸೆಸ್‌ನ ಒಟ್ಟಭಿಪ್ರಾಯವೂ ಆಗಿರುತ್ತದೆ. ಜತೆಗೆ, ಪರೋಕ್ಷವಾಗಿ ಬಿಜೆಪಿ ನೇತೃತ್ವದ ಕೇಂದ್ರ ಸರಕಾರದ ಧೋರಣೆಯೂ ಆಗುತ್ತದೆ ಎಂಬ ಅರಿವು ಹಿಂದೂ ಹೋರಾಟಗಾರರಿಗೆ ಇದೆ. ಅದಕ್ಕಾಗಿಯೇ ಅವರು ಭಾಗವತರ ಇತ್ತೀಚಿನ ಹೇಳಿಕೆಗಳಿಂದ ಗಾಬರಿಗೊಂಡಿರುವುದು. ''ಭಾಗವತ್ ಅವರು ಸಂಘಟನೆಯೊಂದರ ಮುಖ್ಯಸ್ಥರಾಗಿರಬಹುದು; ಆದರೆ ಅವರು ಹೇಳಿದ್ದನ್ನು ಕೇಳಲು ಅವರು ಹಿಂದೂ ಧಾರ್ಮಿಕ ಮುಖಂಡರೇನಲ್ಲ, ಹಿಂದೂಗಳಿಗೆ ಅವರ ಐತಿಹಾಸಿಕ ಆಸ್ತಿ ಸಿಗಲೇಬೇಕು'' ಎಂದು ಜಗದ್ಗುರು ರಾಮಭದ್ರಾಚಾರ್ಯರು ಸೇರಿದಂತೆ ಅನೇಕ ಯತಿಗಳು ತಿರುಗೇಟು ನೀಡಿದ್ದಾರೆ.

ಶತಮಾನಗಳಿಂದ ಇಸ್ಲಾಮಿಕ್ ದಾಳಿಕೋರರಿಂದ ನಾಶವಾದ 40 ಸಾವಿರಕ್ಕೂ ಹೆಚ್ಚು ದೇಗುಲಗಳನ್ನು ಮರಳಿ ಪಡೆವ ಬಗ್ಗೆ ಚರ್ಚೆ ನಡೆಯುತ್ತಲೇ ಇದೆ. ಮರಾಠರ ಆಳ್ವಿಕೆಯಲ್ಲಿ ಮತ್ತು ಮಹಾರಾಣಿ ಅಹಲ್ಯಾಬಾಯಿಯಿಂದಾಗಿ ದೇಗುಲಗಳನ್ನು ಮರಳಿ ಪಡೆದಿದ್ದನ್ನು ನಾವು ಮರೆಯುತ್ತಿದ್ದೇವೆಯೇ? ತ್ರಯಂಬಕೇಶ್ವರದಿಂದ ಸೋಮನಾಥ ಮತ್ತು ಜಗನ್ನಾಥಪುರಿಯವರೆಗೆ ನೆಲಸಮಗೊಂಡ ಸಾವಿರಾರು ದೇಗುಲಗಳನ್ನು ಮರುನಿರ್ಮಿಸಲಾಗಿರುವುದನ್ನು ನಾವು ನಂಬುತ್ತಿಲ್ಲವೇ? ಅಫ್ಜಲ್‌ಖಾನ್‌ನನ್ನು ಕೊಂದ ನಂತರ ಶಿವಾಜಿಯು ತುಳಜಾಭವಾನಿ ಕ್ಷೇತ್ರದಲ್ಲಿ ಮಾಡಿದಂತೆ, ದಾಳಿಕೋರರು ನಮ್ಮ ದೇಗುಲಗಳನ್ನು ಕೆಡವಿದ ವಾರಗಳು ಅಥವಾ ತಿಂಗಳುಗಳಲ್ಲಿ ಅವನ್ನು ಪುನರ್‌ನಿರ್ಮಿಸಿದ ಉದಾಹರಣೆಗಳೂ ಇವೆ. ಅಂತೆಯೇ ಅವರಿಂದ ನೆಲಸಮಗೊಂಡ ಎಲ್ಲಾ 40 ಸಾವಿರ ದೇವಾಲಯಗಳ ಮರುನಿರ್ಮಾಣಕ್ಕಾಗಿ ಕಾಯಲಾಗುತ್ತಿದೆ. ಈ ಸಂಗತಿಯನ್ನು ನಾವು ಮರೆತರೆ, ಆ ದೇಗುಲಗಳನ್ನು ಉಳಿಸಿಕೊಳ್ಳಲು ಪ್ರಾಣತ್ಯಾಗ ಮಾಡಿದ್ದ ನಮ್ಮ ಪೂರ್ವಜರನ್ನು ಅವಮಾನಿಸಿದಂತಾಗುತ್ತದೆ. ಹಾಗಾಗಬಾರದು. ಆಕ್ರಮಣಕಾರರು ದೇಗುಲಗಳನ್ನು ನೆಲಸಮಗೊಳಿಸಿದ ಅಥವಾ ತಮ್ಮ ಧಾರ್ಮಿಕ ರಚನೆಯಿಂದ ಅವನ್ನು ಬದಲಿಸಿದ ಕುರಿತಾದ ಸಾಕಷ್ಟು ದಾಖಲೆಗಳು ನಮ್ಮಲ್ಲಿವೆ. ಹಾಗಾಗಿ, ಕಾನೂನು ಹೋರಾಟಗಳನ್ನು ಮುಂದುವರಿಸುವ ಮೂಲಕ, ಅಯೋಧ್ಯೆಯ ರೀತಿಯಲ್ಲಿ ಶಾಂತಿಯುತವಾಗಿ ಮತ್ತು ದೇಶದ ಕಾನೂನಿನಡಿ ಕಾಶಿ ಮತ್ತು ಮಥುರಾ ಜತೆಗೆ, ನಮ್ಮ ಪ್ರಕರಣವನ್ನು/ಸಮರ್ಥನೆಯನ್ನು ಸಾಬೀತುಪಡಿಸಬಲ್ಲ ಉಳಿದ ಅನೇಕ ದೇಗುಲಗಳನ್ನು ಮರಳಿ ಪಡೆಯಲು ನಾವು ಯತ್ನಿಸಲೇಬೇಕು. ಆಗ ಮಾತ್ರವೇ ನಮ್ಮ ಪೂರ್ವಜರಿಗೆ ಮತ್ತು ದೇವತೆಗಳಿಗೆ ಋಣಸಂದಾಯ ಮಾಡಿದಂತಾಗುತ್ತದೆ ಎಂಬುದು ಹಿಂದೂ ಹೋರಾಟಗಾರರ ಸ್ಪಷ್ಟ ಅಭಿಪ್ರಾಯ. ರಾಮಮಂದಿರದ ಹೋರಾಟಕ್ಕೊಂದು ನ್ಯಾಯ, ಮಿಕ್ಕವಕ್ಕೆ ಇನ್ನೊಂದು ನ್ಯಾಯ ಎನ್ನುವುದು ತರವಲ್ಲ. ಪ್ರತಿ ದೇಗುಲದೊಂದಿಗೂ ಅದರದ್ದೇ ಆದ ಇತಿಹಾಸ, ಸಂಸ್ಕೃತಿ ಮತ್ತು ಶ್ರದ್ಧೆಗಳು ಕೂಡಿಕೊಂಡಿರುತ್ತವೆ. 'ಅದು ಮೇಲು, ಇದು ಕೀಳು' ಎಂದು ಶ್ರೇಣೀಕರಿಸಿ ನೋಡುವುದು ತಪ್ಪು ಎಂಬುದು ಅವರ ತರ್ಕ. ಜತೆಗೆ, ನೂರಾರು ಜನರ ಬಲಿದಾನಕ್ಕೆ ಕಾರಣವಾದ ಅಯೋಧ್ಯಾ ಹೋರಾಟದ ವೇಳೆಯಲ್ಲೂ ಆರೆಸ್ಸೆಸ್ ಇದೇ ಸೌಹಾರ್ದದ ನಿಲುವನ್ನು ತೆಗೆದುಕೊಳ್ಳಬಹುದಿತ್ತಲ್ಲಾ! ಸೌಹಾರ್ದದ ನಿಲುವು ಈಗ ಮಾತ್ರವೇಕೆ?' ಎಂಬುದು ಹಿಂದೂ ಹೋರಾಟಗಾರರ ಪ್ರಶ್ನೆ.

ಅಂತೂ, ವೈವಿಧ್ಯಮಯ ಜಾಗತಿಕ ವಿಪ್ಲವಗಳ ಪರಿಸ್ಥಿತಿಯಲ್ಲಿ, ಭವಿಷ್ಯದಲ್ಲಿ ಒಂದು ರಾಷ್ಟ್ರವಾಗಿ ಭಾರತ ಎಲ್ಲಿ ನಿಲ್ಲಬೇಕು ಎಂದು ಯೋಚಿಸುವಾಗ, ಭಾಗವತ್ ಅವರ ಸೌಹಾರ್ದದ ವಿಚಾರಧಾರೆ ಪ್ರಸ್ತುತ ಎನಿಸುತ್ತದೆ. ಆದರೆ, ಪರಕೀಯರ ಸತತ ದಾಳಿಯಿಂದ ನೆಲಸಮವಾದ ಅಥವಾ ವಿರೂಪಗೊಂಡು ನಮ್ಮನ್ನು ನಿತ್ಯ ಚುಚ್ಚುತ್ತಿರುವ ಹಂಪಿಯಂಥ, ನಮ್ಮ ಸಂಸ್ಕೃತಿಯ ಪ್ರತಿರೂಪವಾಗಿದ್ದ ಸಾವಿರಾರು ದೇಗುಲಗಳನ್ನು ನೆನೆದಾಗ, ಅವುಗಳನ್ನು ಹಿಂಪಡೆಯಬೇಕೆಂಬ ಹಿಂದೂ ಹೋರಾಟಗಾರರ ನಿಲುವೇ ಸರಿಯೆನಿಸುತ್ತದೆ. ಭಾಗವತರ ಧೋರಣೆಯು ಮುಂದಿನ ದಿನಗಳಲ್ಲಿ ಸಮಸ್ತ ಹಿಂದೂ ಸಮಾಜಕ್ಕೆ ಸ್ವೀಕಾರ ಆಗಲಿದೆಯೇ ಅಥವಾ ಉಳಿದ ಮಂದಿರಗಳ ಪುನರುತ್ಥಾನಕ್ಕಾಗಿ ಹೋರಾಡುತ್ತಿರುವ ಹಿಂದೂ ಸಂಘಟನೆಗಳು ತಮ್ಮ ದಾರಿಯಲ್ಲೇ ಮುಂದುವರಿಯುತ್ತವೆಯೇ ಎಂಬುದಕ್ಕೆ ಕಾಲವೇ ಉತ್ತರಿಸಬೇಕಿದೆ.

(ಲೇಖಕರು ಪ್ರಚಲಿತ ವಿದ್ಯಮಾನಗಳ ವಿಶ್ಲೇಷಕರು)

ಎಲ್ಲಾ ಕಡೆ ಬರೀ ಮ್ಯಾಕ್ಸ್, ಟ್ಯಾಕ್ಸ್‌ನದ್ದೇ ಟಾಕ್ಸ್

ತುಂಟರಗಾಳಿ
ಹರಿ ಪರಾಕ್
vveditoped@gmail.com

ಸಿನಿಗನ್ನಡ

ಮ್ಯಾಕ್ಸ್' ಚಿತ್ರದ ಮೂಲಕ ವಿಜಯ್ ಕಾರ್ತಿಕೇಯ ಅವರು ತಮ್ಮ ನಿರ್ದೇಶನದಲ್ಲಿ ಸುದೀಪ್ ಅವರಿಗೋಸ್ಕರ ಒನ್ ನೈಟ್ ತೆಗೆದುಕೊಂಡಿದ್ದಾರೆ ಮತ್ತು ಅದು ಔಟ್ ಸ್ಟ್ಯಾಂಡಿಂಗ್ ಅನ್ನೋ ಮಟ್ಟದಲ್ಲಿ ಇದೆ. ಇದು ಒಂದು ರಾತ್ರಿಯಲ್ಲಿ ನಡೆಯೋ ಕಥೆ. ಪೊಲೀಸ್ ಅಧಿಕಾರಿಯಾದ ಸುದೀಪ್ ಚಾರ್ಜ್ ತೆಗೆದುಕೊಳ್ಳುವ ಮುನ್ನವೇ ವಿಲನ್‌ಗಳ ಮೇಲೆ ಮಾಡುವ ಚಾರ್ಜ್ ಈ ಚಿತ್ರದ ಕಥೆಯ ಹೂರಣ. ಚಾರ್ಜ್ ತೆಗೆದುಕೊಳ್ಳದೇನೇ ಇಷ್ಟೊಂದು ಕೆಲಸ ಮಾಡೋ ನಾನು ಚಾರ್ಜ್ ತಗೊಂಡ್ರೆ ಇನ್ನೇನ್ ಮಾಡಬಹುದು ನೋಡಿ ಅನ್ನೋ ಲೆವೆಲ್ಲಿಗೆ ಚಿತ್ರವನ್ನು ಆವರಿಸಿಕೊಂಡಿದ್ದಾರೆ ಕಿಚ್ಚ ಸುದೀಪ್. ಹಾಗಾಗಿ ಇಡೀ ಸಿನಿಮಾ 'ಕಿಚ್ಚಾರ್ಪಣಮಸ್ತು' ಆಗಿದೆ. ಒಂದು ರಾತ್ರಿಯಲ್ಲಿ ನಡೆಯುವ ಕಥೆಯಲ್ಲಿ ತಮ್ಮ ಸಂಪೂರ್ಣ ಪ್ರತಿಭೆ ತೋರಿಸಿರೋ ಸುದೀಪ್, ತಾವು ರಾತ್ರೋರಾತ್ರಿ ಆದ ಸ್ಟಾರ್ ಅಲ್ಲ ಅಂತ ನಿರೂಪಿಸಿದ್ದಾರೆ. ಅವರನ್ನ ತೆರೆಯ ಮೇಲೆ ನೋಡೋದೇ ಒಂದು ಹಬ್ಬ. ಭಾರತೀಯ ಚಿತ್ರರಂಗದಲ್ಲಿ 'ಒನ್ ಆಫ್ ದಿ ಸ್ಟೈಲಿಷ್ ಸ್ಟಾರ್' ಅನ್ನಿಸಿಕೊಂಡಿರೋ ಸುದೀಪ್ ಕತ್ತಲೆಯಲ್ಲೇ ನಡೆಯುವ ಈ ಚಿತ್ರದಲ್ಲಿ ಕತ್ತಲಲ್ಲಿ ಹೊಳೆಯುವ ಸ್ಟಾರ್ ಆಗಿ ಅಕ್ಷರಶಃ ಮಿಂಚುತ್ತಾರೆ. ಈ 'ಮ್ಯಾಕ್ಸ್ ಬುಕ್'ನಲ್ಲಿ ಹಲವು ಚಾಪ್ಟರ್‌ಗಳಿವೆ. ಹೆಸರಿಗೆ ಮ್ಯಾಕ್ಸ್ ಬುಕ್ ಆದ್ರೂ, ಮನರಂಜನೆಗೆ ಹಲವು ವಿಂಡೋಸ್ ಇವೆ. ಒಂದು ರಾತ್ರಿಯಲ್ಲಿ ನಡೆಯೋ ಕಥೆ ಆದ್ರೂ ಸುದೀಪ್ ಅವರ ಮುಖದಲ್ಲಿ ಮತ್ತು ಅಭಿನಯದಲ್ಲಿ ನೈಟ್ ಶಿಫ್ಟ್ ಮಾಡಿದ ಸುಸ್ತು ಕಾಣಿಸೋದಿಲ್ಲ. 'ಅಭಿನಯ ಚಕ್ರವರ್ತಿ' ಅನ್ನೋ ಅವರ ಬಿರುದಿಗೆ ಲೋಪ ಬಂದಿಲ್ಲ. ಆದರೆ ಟೈಟಲ್ ಕಾರ್ಡ್‌ನಲ್ಲಿ ಮಾತ್ರ 'ಅಬಿನಯ ಚತ್ರವರ್ತಿ' ಆಗಿರೋದು ಅಕ್ಷಮ್ಯ. ಒಟ್ಟಾರೆ ಹೇಳೋದಾದ್ರೆ, 'ವಿಕ್ರಾಂತ್ ರೋಣ' ರಿಲೀಸ್ ಆದಮೇಲೆ, ಸುದೀಪ್ ಅವರ ಸಿನಿಮಾಗಳು ಇಲ್ಲದೇ, ಅಂಗಡಿಗಳಲ್ಲಿ 'ರಿಸೀವ್ಡ್ ರುಪೀಸ್ 27 ಆನ್ ಫೋನ್ ಪೇ' ಅನ್ನೋ ವಾಯ್ಸ್ ಅನ್ನೇ ಕೇಳಿ ಸಮಾಧಾನ ಮಾಡಿಕೊಳ್ಳುತ್ತಿದ್ದ ಸುದೀಪ್ ಅಭಿಮಾನಿಗಳಿಗೆ ಮ್ಯಾಕ್ಸ್ ಮೂಲಕ ಸಮಾಧಾನಕರ ಬಹುಮಾನ ಅಲ್ಲ, ದೊಡ್ಡ ಕ್ಯಾಷ್ ಬ್ಯಾಕೇ ಸಿಕ್ಕಿದಂತಾಗಿದೆ.

ಲೂಸ್ ಟಾಕ್

ಕರೋನಾ ವೈರಸ್

- **ಎನ್ರೀ ಸ್ವಾಮಿ, ಮತ್ತೆ ಬರ್ತಾ ಇದ್ದೀರ ಅಂತ ಸುದ್ದಿ ಆಗ್ತಾ ಇದೆ. ನಿಜಾನಾ?**
- ಏನ್ ಮಾಡೋದು, ನಾನ್ ಬರಲ್ಲ ಅಂದ್ರೂ, ನಿಮ್ಮ ಸರಕಾರದೋರು, ಟಿವಿ ಚಾನೆಲ್‌ಗಳವರು ನನ್ನ ಬಿಡಲ್ವಲ್ಲ, ಮತ್ತೆ ಮತ್ತೆ 'ಕರೋನಾ ಪ್ಯಾರ್ ಹೈ' ಅಂತಿರ್ತಾರೆ
- **ಏನೋ, ಅಂತೂ ನಮ್ಮ ಜನ ಮತ್ತೆ ನೀನ್ ಬರ್ತೀಯಾ ಅಂತ ಹೆದರಿಕೊಂಡಿದ್ದಾರೆ**
- ವ್ಯಾಕ್ಸಿನ್ ಹಾಕಿಸಿಕೊಂಡವರಿಗೆ ಸಮಸ್ಯೆ ಇಲ್ಲ, 'ಲಸಿಕೆ' ಹಾಕಿಸಿಕೊಳ್ಳೋಕೆ 'ಆಲಸಿಕೆ' ತೋರಿಸಿದವರು ಅನುಭವಿಸ್ತಾರೆ
- **ಅಲ್ಲ, ನೀನ್ ಯಾಕೆ ಹಿಂಗೆ ಹೇಳದೇ ಕೇಳದೇ ಬರೋದು?**
- 'ಹೇಳಿ ಹೋಗು ಕಾರಣ' ಥರ, ಇನ್ನೂ ಯಾರೂ ನಂಗೆ 'ಹೇಳಿ ಬಾ ಕರೋನಾ' ಅಂತ ಹೇಳಿಲ್ಲ ಅದಕ್ಕೇ
- **ಅದ್ಸರಿ, ಇಯರ್ ಎಂಡಲ್ಲೇ ನಿನ್ ಹವಾ ಜಾಸ್ತಿ ಅಲ್ವಾ, ಯಾಕೆ?**
- ಪ್ರತಿ ಎಂಡಿನಲ್ಲು ಸ್ಟಾರ್ಟು ಇರ್ತದೆ ಅಂತ ಯೋಗರಾಜ್ ಭಟ್ರೇ ಹೇಳಿಲ್ವಾ?
- **ಆದ್ರೂ, ಮತ್ತೆ ಲಾಕ್ ಡೌನು, ಸೀಲ್ ಡೌನು ಅಂತಾದ್ರೆ, ನಮ್ಮ ಜನಗಳಿಗೆ ಕಷ್ಟ ಆಗಲ್ವಾ?**
- ನೋಡಪ್ಪಾ, ಕರೋನಾ ಮನುಷ್ಯನಿಗೆ ಬರದೆ, ಮರಕ್ಕಾ ಬರುತ್ತೆ? ಹೃದಯ ಮತ್ತು ಶ್ವಾಸಕೋಶ ಎರಡನ್ನೂ ಗಟ್ಟಿ ಮಾಡ್ಕೊಂಡು ಎಲ್ಲಾನೂ ಎದುರಿಸಬೇಕಪ್ಪಾ

(ಕಾಲ್ಪನಿಕ ಸಂದರ್ಶನ)

ಗರುಡನ ಮಂತ್ರವನು ಕಲಿತಿರುವಾತಗೆ ಉರಗ ಕಚ್ಚಿದರೆ...

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಅದು ದೈವಸನ್ನಿಧಿಯ ಆವರಣದಲ್ಲಿದ್ದ ಸುಪ್ರಸಿದ್ಧ ಮಠ. ಅಲ್ಲಿದ್ದವರು ಮಹಾನ್ ಆಧ್ಯಾತ್ಮಿಕ ಸಾಧಕರು (ಅವರನ್ನು ಸದ್ಯಕ್ಕೆ 'ಸ್ವಾಮೀಜಿ' ಎನ್ನೋಣ). ದೇವರ ಪೂಜೆ-ಪುನಸ್ಕಾರಗಳ ಜತೆಗೆ ಭಕ್ತರ ಕುಂದುಕೊರತೆಗಳನ್ನೂ ಆಲಿಸಿ, ತಮಗಾದ ಪ್ರೇರಣೆಯಂತೆ ಪರಿಹಾರ ಸೂಚಿಸುತ್ತಿದ್ದುದು ಅವರ ವಾಡಿಕೆ. ಆ ಮಠಕ್ಕೊಂದು ಆಡಳಿತ ಮಂಡಳಿಯಿತ್ತು. ಈ ವ್ಯವಸ್ಥೆಯಲ್ಲೊಂದು ಪದ್ಧತಿ ನಡೆದುಕೊಂಡು ಬಂದಿತ್ತು. ಅದೆಂದರೆ- ಸ್ವಾಮೀಜಿಯ ಪಾದಪೂಜೆ ಮಾಡಲು ಬಯಸುವ ಭಕ್ತರಿಂದ ನಿರ್ದಿಷ್ಟ ಮೊತ್ತವನ್ನು ದಕ್ಷಿಣೆಯಾಗಿ ಪಡೆಯಲಾಗುತ್ತಿತ್ತು ಮತ್ತು ಅದು ಸಂಪೂರ್ಣವಾಗಿ ಮಠಕ್ಕೆ ಸೇರುತ್ತಿತ್ತು. ಆ ಹಣದ ಮೇಲೆ ಸ್ವಾಮೀಜಿಗೆ ಯಾವುದೇ ಹಕ್ಕು ಇರುತ್ತಿರಲಿಲ್ಲ. ಆದರೆ, ಪೂಜೆ-ಪುನಸ್ಕಾರ, ಹಬ್ಬ-ಹರಿದಿನದ ವೇಳೆ ಸ್ವಾಮೀಜಿ ತೀರ್ಥ ನೀಡುವಾಗ ಭಕ್ತರು ಅರ್ಪಿಸುವ ದಕ್ಷಿಣೆ ಸ್ವಾಮೀಜಿಯ ಸುಪರ್ದಿಗೆ ಸೇರುತ್ತಿತ್ತು. ''ಸರ್ವಸಂಗ ಪರಿತ್ಯಾಗಿಗಳಿಗೆ ದುಡ್ಡೇಕೆ? ಅದು ಮತ್ತೊಮ್ಮೆ ಲೌಕಿಕಕ್ಕೆ ಅಂಟಿಕೊಳ್ಳುವುದರ ದ್ಯೋತಕವಲ್ಲವೇ?'' ಎಂದು ನೀವು ಕೇಳಬಹುದು. ಆದರೆ ಸ್ವಾಮೀಜಿ ಅದನ್ನು ಬಳಸುತ್ತಿದ್ದುದು ಸ್ವಂತಕ್ಕಲ್ಲ; ಲೋಕಕಲ್ಯಾಣಕ್ಕೆಂದು ತಾವು ಹಮ್ಮಿಕೊಳ್ಳುತ್ತಿದ್ದ ಹವನ-ಹೋಮಗಳಿಗೆ ಅದನ್ನು ವಿನಿಯೋಗಿಸುತ್ತಿದ್ದರು. 'ಕೆರೆಯ ನೀರನು ಕೆರೆಗೆ ಚೆಲ್ಲಿ' ಎಂಬಂತೆ ಸಮಾಜಕ್ಕೇ ಅದು ಸೇರುತ್ತಿತ್ತು. ''ತೀರ್ಥದ ತಟ್ಟೆಗೆ ಬಿದ್ದ ಕಾಸನ್ನು ಹೀಗೇಕೆ ಹೋಮಕ್ಕೆ ವಿನಿಯೋಗಿಸಿದಿರಿ? ಅಷ್ಟೊಂದು ಖರ್ಚು ಮಾಡುವ ಅಗತ್ಯವೇನಿತ್ತು?'' ಎಂದು ಆಡಳಿತ ಮಂಡಳಿಯು ಸ್ವಾಮೀಜಿಯನ್ನು ಕೇಳುವಂತಿರಲಿಲ್ಲ. ಇದು ಅಲ್ಲಿ ನಡೆದುಕೊಂಡು ಬಂದ ಪರಿಪಾಠ.

ಸ್ವಾಮೀಜಿ ತಮ್ಮಲ್ಲಿದ್ದ ದೈವಿಕ ಶಕ್ತಿಯಿಂದಾಗಿ ಭಕ್ತರನ್ನು ಮಠದೆಡೆಗೆ ಸೆಳೆದು ಅವರ ಉದ್ಧಾರಕ್ಕೆ ಕಾರಣರಾಗಿ, ಅರಿವಿನ ಹಣತೆಯನ್ನೂ ಹಚ್ಚುತ್ತಿದ್ದುದರಿಂದ, ಅವರ ಪಾದಪೂಜೆಗೆ ಮುಂದಾಗುವ ಭಕ್ತರ ಸಂಖ್ಯೆ ಹೆಚ್ಚುತ್ತಲೇ ಹೋಯಿತು. ತತ್ಪರಿಣಾಮವಾಗಿ, ಪಾದಪೂಜೆ ನಿಮಿತ್ತ ಸಂದಾಯವಾಗುವ ದಕ್ಷಿಣೆ ಮಾತ್ರವಲ್ಲದೆ, ದವಸ-ಧಾನ್ಯ, ಹಣ್ಣು-ಹಂಪಲು, ಸೀರೆ-ರವಿಕೆ ಕಣ, ಪಂಚೆ-ಶಲ್ಯ ಮುಂತಾದ ವೈವಿಧ್ಯಮಯ ವಸ್ತುಗಳಿಂದ ತುಂಬಿ ತುಳುಕುತ್ತಿತ್ತು ಮಠದ ಉಗ್ರಾಣ. ಒಟ್ಟಾರೆಯಾಗಿ, ಆರ್ಥಿಕವಾಗಷ್ಟೇ ಅಲ್ಲದೆ ಯಾವ ತೆರನಾದ ಸಂಪನ್ಮೂಲಕ್ಕೂ ಮಠದಲ್ಲಿ ಕೊರತೆಯಿರಲಿಲ್ಲ, ಮೊದಲೇ ತಿಳಿಸಿದಂತೆ, ಇವಿಷ್ಟಕ್ಕೂ ಹಕ್ಕುದಾರನಾಗಿದ್ದುದು ಮಠದ ಆಡಳಿತ ಮಂಡಳಿಯೇ ವಿನಾ, ಸ್ವಾಮೀಜಿಯಲ್ಲ.

ಒಮ್ಮೆ ವಯೋವೃದ್ಧ ಭಕ್ತರೊಬ್ಬರಿಗೆ ಸ್ವಾಮೀಜಿ ತೀರ್ಥ ನೀಡಿ ಯೋಗಕ್ಷೇಮ ವಿಚಾರಿಸಿದಾಗ, ಗದ್ಗದಿತರಾದ ಭಕ್ತರಿಂದ ಮಾತು ಹೊರಡಲಿಲ್ಲ. ಅವರು ಸಂಕಟದಲ್ಲಿರುವುದನ್ನು ಅರಿತ ಸ್ವಾಮೀಜಿ, ''ಏನಾಯ್ತು ಹೇಳಿ...'' ಎಂದು ಆಪ್ಯಾಯತೆಯಿಂದಲೇ ಕೇಳಿದಾಗ ಆ ವಯೋವೃದ್ಧರು, ''ಮಹಾಸ್ವಾಮೀ, ನಾಲ್ವರು ಹೆಣ್ಣುಮಕ್ಕಳಿರುವ, ಊಟಕ್ಕೂ ತತ್ವಾರವಾಗಿರುವ ಬಡಕುಟುಂಬ ನಮ್ಮದು. ಹೀಗಿರುವಾಗ ಮಗಳ ಮದುವೆ ಮಾಡಬೇಕಾಗಿ ಬಂದಿದೆ, ಒಳ್ಳೆಯ ಕಡೆ ಸಂಬಂಧವೂ ಸಿಕ್ಕಿದೆ. ಆದರೆ ದವಸ-ಧಾನ್ಯ ತರುವುದಕ್ಕೂ ದುಡ್ಡಿಲ್ಲ. ತಾವು ಕೃಪೆತೋರಿ ಮಠದ ಕಡೆಯಿಂದ ಸ್ವಲ್ಪ ಆರ್ಥಿಕ ನೆರವು ಕೊಡಿಸಬೇಕು. ತಮ್ಮಿಂದ ಹಾಗೆಯೇ ತೀರ್ಥ ಸ್ವೀಕರಿಸಬಾರದು, ಆದರೆ ಇಷ್ಟೇ ನನ್ನಲ್ಲಿರೋದು...'' ಅಂತ ಹೇಳಿ ಸ್ವಾಮೀಜಿಯ ಮುಂದಿದ್ದ ತಟ್ಟೆಗೆ 25 ಪೈಸೆಯ ನಾಣ್ಯವನ್ನು ಹಾಕಿದರು. ಆಗ ಸ್ವಾಮೀಜಿ, ''ನೊಂದುಕೊಳ್ಳಬೇಡಿ, ಮಠದ ಆಡಳಿತಾಧಿಕಾರಿಗಳಿಗೆ ನಾವು ಒಂದು ಮಾತು ಹೇಳುತ್ತೇವೆ. ಅವರನ್ನು ಸಂಜೆ ಭೇಟಿಯಾಗಿ ನಂತರ ಊರಿಗೆ ಹೊರಡಿ. ಹೆದರಬೇಡಿ, ದೇವರಿದ್ದಾನೆ'' ಎಂದು ಭರವಸೆಯಿತ್ತು ಕಳಿಸಿದರು. ಮರುದಿನ ಮುಂಜಾನೆ ಸ್ವಾಮೀಜಿ ವಾಡಿಕೆಯಂತೆ ಭಕ್ತರಿಗೆ ತೀರ್ಥವನ್ನು ವಿತರಿಸತೊಡಗಿದರು, ಒಬ್ಬರಾದ ಮೇಲೊಬ್ಬರು ಬಂದು ತಟ್ಟೆಗೆ ದಕ್ಷಿಣೆ ಹಾಕಿ ತೀರ್ಥ ಸ್ವೀಕರಿಸಿ ತೆರಳುತ್ತಿದ್ದರು. ಕೊನೆಯಲ್ಲಿದ್ದವರು ತಟ್ಟೆಗೆ 5 ರುಪಾಯಿ ನೋಟು ಹಾಕಿ ತೀರ್ಥಕ್ಕೆ ಕೈಯೊಡ್ಡಿದಾಗ ಸ್ವಾಮೀಜಿ ಅದೇಕೋ ಒಮ್ಮೆ ಕತ್ತೆತ್ತಿ ನೋಡಿದರೆ- ''ಇಷ್ಟೇ ನನ್ನಲ್ಲಿರೋದು..'' ಅಂತ ಹೇಳಿ ಹಿಂದಿನ ದಿನ ತಟ್ಟೆಗೆ 25 ಪೈಸೆ ಹಾಕಿದ್ದ ಅದೇ ವಯೋವೃದ್ಧ ಭಕ್ತರು!

ಸ್ವಾಮೀಜಿಗೆ ಅರೆಕ್ಷಣ ಅಯೋಮಯ! 'ನಿನ್ನೆ ತಟ್ಟೆಗೆ ನಾಲ್ಕಾಣೆ ಹಾಕಿದ್ದವರು ಇಂದು ಅದರ 20 ಪಟ್ಟು ಹೆಚ್ಚು ಹಾಕಿದ್ದಾರೆಂದರೆ ಏನೋ ಕರಾಮತ್ತಾಗಿರಬೇಕು' ಎಂದುಕೊಳ್ಳುತ್ತಲೇ, ''ಮಠದ ಅಧಿಕಾರಿಗಳ ಬಳಿ ನಿಮ್ಮ ಸಂಕಷ್ಟವನ್ನೆಲ್ಲಾ ವಿವರಿಸಿ ನೆರವಾಗುವಂತೆ ತಿಳಿಸಿದ್ದೆ. ನಿಮ್ಮ ಕೆಲಸವಾಯಿತೇ?'' ಎಂದು ಕೇಳಿದರು ಸ್ವಾಮೀಜಿ. ಒಮ್ಮೆಲೇ ಭೋರಿಟ್ಟು ಅಳತೊಡಗಿದ ಆ ವಯೋವೃದ್ಧರು, ''ಮಹಾಸ್ವಾಮೀ, ಭೇಟಿಯಾಗಿದ್ದೆ. ಆದರೆ ಅವರು, 'ಈ ಊರಲ್ಲಿ ಹೆಣ್ಣು ಹೆತ್ತೋರು ಸಾಕಷ್ಟಿದ್ದಾರೆ... ಅವರಿಗೆಲ್ಲಾ ಹೀಗೆ ಮದುವೆಗೆ ದುಡ್ಡು ಕೊಟ್ಕೊಂಡು ಕೂರೋಕ್ಕಾಗುತ್ತೇನ್ರೀ? ಸ್ವಾಮೀಜಿ ಹೇಳಿದಾಕ್ಷಣ ದುಡ್ಡು ಕೊಟ್ಟುಬಿಡೋಕೆ ನಮ್ಮ ಮಠವೇನು ಧರ್ಮಛತ್ರವಾ? ತಗೊಳ್ಳಿ ಇಷ್ಟೇ ಆಗೋದು' ಅಂತ ಹೇಳಿ ನನ್ನ ಕೈಗೆ 5 ರುಪಾಯಿ ಹಾಕಿದರು. ಅದನ್ನೇ ನಾನೀಗ ತೀರ್ಥದ ತಟ್ಟೆಗೆ ಹಾಕಿದ್ದು. ಮಗಳ ಮದುವೆ ಮಾಡೋದು ನನ್ನ ಹಣೇಲಿ ಬರೆದಿಲ್ಲ ಅನ್ಸುತ್ತೆ'' ಎನ್ನುತ್ತ ಅಲ್ಲಿಂದ ಹೊರಡಲು ಅನುವಾದರು...

ಸ್ವಾಮೀಜಿಗೆ ಅದೇನನ್ನಿಸಿತೋ... ''ಇರಿ, ದುಡುಕಬೇಡಿ'' ಎಂದವರು ಕಣ್ಣರೆಪ್ಪೆಗಳನ್ನು ಜೋಡಿಸಿಕೊಂಡರು. ಅರೆಕ್ಷಣದ ನಂತರ ತೆರೆದಾಗ ಕಂಗಳಲ್ಲಿ ಅಸೀಮ ಕಾಂತಿ! ಅದೇನು ಅನುಸಂಧಾನವೋ, ಸಂಕಲ್ಪವೋ.... ಪ್ರಾಯಶಃ ಅವರು ಭಗವಂತನೊಂದಿಗೆ 'ಮೌನ-ಸಂವಹನ'ಕ್ಕೆ ಇಳಿದಿದ್ದಿರಬೇಕು! ನಂತರ, ಹಸನ್ಮುಖಿ ಸ್ವಾಮೀಜಿ ಮಧುರ ದನಿಯಲ್ಲಿ, ''ಈಗಾಗಲೇ ರಾತ್ರಿಯಾಯಿತು. ನೀವು ನಮ್ಮೊಂದಿಗೆ ಬಿಡಾರದಲ್ಲೇ ಉಳಿದಿದ್ದು, ನಾಳಿನ ಪೂಜೆ-ಪ್ರಸಾದ ಸ್ವೀಕರಿಸಿ ಊರಿಗೆ ತೆರಳುವಿರಂತೆ'' ಎಂದರು. ಒಪ್ಪಿಗೆ ಎಂಬಂತೆ ವಯೋವೃದ್ಧರು ತಲೆಯಾಡಿಸಿದರು.

ಮರುದಿನ ಬೆಳಗ್ಗೆಯ ಪೂಜೆ ಮುಗಿಸಿದ ಸ್ವಾಮೀಜಿ ವಾಡಿಕೆಯಂತೆ ತೀರ್ಥ ವಿತರಣೆಗೆ ಸಜ್ಜಾಗಿ ಪೀಠದಲ್ಲಿ ಕೂತು, ಅರೆಕ್ಷಣ ರೆಪ್ಪೆಮುಚ್ಚಿ ನೀಳವಾಗಿ ಉಸಿರೆಳೆದುಕೊಂಡರು. ಪ್ರಾಯಶಃ ಅದು ಭಗವಂತನೊಂದಿಗಿನ ಮತ್ತೊಂದು ಕಂತಿನ 'ಮೌನ-ಸಂವಹನ' ಇದ್ದಿರಬೇಕು. ಅಂದು ಹಬ್ಬವಾಗಿದ್ದರಿಂದ ಸ್ಥಳೀಕರು ಮಾತ್ರವಲ್ಲದೆ ರಾಜ್ಯದೆಲ್ಲೆಡೆಯ ಭಕ್ತರೂ ಜಮಾಯಿಸಿದ್ದರು. ಅಂದರೆ ವಾಡಿಕೆಗಿಂತ 6-7 ಪಟ್ಟು ಹೆಚ್ಚು ಜನರು ಮಠದ ಮಡಿಲಲ್ಲಿ! ತೀರ್ಥದ ಬಟ್ಟಲ ಎದುರು ಇಟ್ಟುಕೊಳ್ಳುತ್ತಿದ್ದ ಮಾಮೂಲಿನ ತಟ್ಟೆಯ ಬದಲಿಗೆ, ಬೋಗುಣಿಯಂಥ ದೊಡ್ಡ ಬೆಳ್ಳಿಯ ಹರಿವಾಣವನ್ನಿಡಲು (ಅದು ಮಾಮೂಲಿ ತಟ್ಟೆಗಿಂತ ಸಾಕಷ್ಟು ಆಳದ್ದೂ, ಹೆಚ್ಚು ಗಾತ್ರದ್ದೂ ಆಗಿತ್ತು!) ಶಿಷ್ಯರಿಗೆ ಸೂಚಿಸಿದರು. ಶಿಷ್ಯರಿಗೆ ಮೊದಮೊದಲು ಅರ್ಥವಾಗದಿದ್ದರೂ, ಗುರುವಾಜ್ಞೆಯಂತೆ ಅವರೆದುರು ಹರಿವಾಣವನ್ನಿಟ್ಟರು. ನಂತರ, ತೀರ್ಥಕ್ಕೆ ಬರುವಂತೆ ಭಕ್ತರಿಗೆ ಸ್ವಾಮೀಜಿಯ ಕಣ್ಣ ಇಶಾರೆ. ಭಕ್ತರಾ ಅವರು...? ಭಕ್ತರ ರೂಪದಲ್ಲಿದ್ದ ಮಹಾಸಾಗರವದು! ಅದೇನೋ ಗೊತ್ತಿಲ್ಲ, ಒಬ್ಬೊಬ್ಬರೂ ಹರಿವಾಣಕ್ಕೆ ನಾಣ್ಯದ ಬದಲು ದೊಡ್ಡ ನೋಟುಗಳನ್ನೇ ಹಾಕಿ ಸ್ವಾಮೀಜಿಯಿಂದ ತೀರ್ಥ ಸ್ವೀಕರಿಸಿ ಕೃತಾರ್ಥರಾದರು. ಉಗಮಸ್ಥಾನದಿಂದ ಹೊರಟ ನದಿಗೆ ಒಂದೊಂದೇ ಉಪನದಿ ಸೇರುತ್ತಾ ಮಹಾನದಿಯೇ ಆಗಿ ಸಾಗರವನ್ನು ಸೇರುವ ಭವ್ಯನೋಟದಂತೆ, ತೀರ್ಥಾಕಾಂಕ್ಷಿಗಳ ಸಾಲಿಗೆ ಹೊಸಬರ ಸೇರ್ಪಡೆಯಾಗುತ್ತಲೇ ಹೋಯಿತು. ಅವರೆಡೆಗೆ ದೃಷ್ಟಿ ಹೊರಳಿಸಿ ಹೊರಳಿಸಿ ಆ ವಯೋವೃದ್ಧ ಭಕ್ತರ ಕತ್ತು ನೋಯತೊಡಗಿತೇ ವಿನಾ, ಅಂಥ ಒಬ್ಬೊಬ್ಬರಿಗೂ ತೀರ್ಥ ವಿತರಿಸುತ್ತಿದ್ದ ಸ್ವಾಮೀಜಿಯ ಕೈ ನೋಯಲಿಲ್ಲ! ಈ 'ತೀರ್ಥ-ತಪಸ್ಸು' ಸಾಕಷ್ಟು ಕಾಲದವರೆಗೆ ನಡೆಯಿತು! ಕೊನೆಯಲ್ಲಿ ಉಳಿದ ವಯೋವೃದ್ಧ ಭಕ್ತರಿಗೆ ತೀರ್ಥನೀಡಲು ಸ್ವಾಮೀಜಿ ಮುಂದಾದರು, ಹರಿವಾಣಕ್ಕೆ ದಕ್ಷಿಣೆ ಹಾಕಲು ವಯೋವೃದ್ಧರು ತಡಕಾಡಿದರು... ಅದು ಎಲ್ಲಿಂದ ಬರಬೇಕು? ಇದ್ದ 5 ರುಪಾಯಿಯನ್ನೂ ಹಿಂದಿನ ದಿನವೇ ಸ್ವಾಮೀಜಿಗೆ ಅವರು ಸಮರ್ಪಿಸಿಬಿಟ್ಟಿದ್ದರು! ಅವರ ಕಂಗಾಲು ಕಂಡ ಸ್ವಾಮೀಜಿ, ''ಪರವಾಗಿಲ್ಲ... ಕೈಯೊಡ್ಡಿ'' ಎಂದು ಹೇಳಿ ತೀರ್ಥವನ್ನು ಹಾಕಿದರು. ಅದನ್ನು ಸ್ವೀಕರಿಸಿ ಸ್ವಾಮೀಜಿಯ ಪಾದಕ್ಕೆ ಹಣೆಯೊತ್ತಿದ ವಯೋವೃದ್ಧರು ಕೆಲಕ್ಷಣದ ನಂತರ ಕತ್ತೆತ್ತಿ ನೋಡಿದರೆ, ಸ್ವಾಮೀಜಿ ಪುಟ್ಟಮಗುವಿನಂತೆ ನಗುತ್ತಿದ್ದಾರೆ... ಅವರ ಕೈಯಲ್ಲಿ ಗಜಗಾತ್ರದ ಬೆಳ್ಳಿ ಹರಿವಾಣ, ಅದರಿಂದ ಉಕ್ಕಿ ಹರಿಯುತ್ತಿರುವ ನೋಟುಗಳು...

''ನೀವು ಹೊದ್ದಿರುವ ಶಲ್ಯವನ್ನು ಅಗಲವಾಗಿ ಬಿಡಿಸಿಟ್ಟುಕೊಳ್ಳಿ'' ಎಂದರು ಸ್ವಾಮೀಜಿ. ಅಯೋಮಯ ಸ್ಥಿತಿಯಿಂದ ಇನ್ನೂ ಹೊರಬಂದಿರದ ವಯೋವೃದ್ಧರು, ಹಾವಾಡಿಗನ ಪುಂಗಿಯಾಟದ ವರಸೆಗೆ ತಲೆದೂಗುವ ಹಾವಿನಂತೆ ಹಾಗೇ ಮಾಡಿದರು. ಹರಿವಾಣದಲ್ಲಿದ್ದ ಅಷ್ಟೂ ಹಣವನ್ನು ಆ ಶಲ್ಯದೊಳಕ್ಕೆ ಸುರಿದು ''ಲೋಕಾ ಸಮಸ್ತಾ ಸುಖಿನೋ ಭವಂತು, ಸಮಸ್ತ ಸನ್ಮಂಗಳಾನಿ ಭವಂತು'' ಎಂದು ಉದ್ಗರಿಸಿದ ಸ್ವಾಮೀಜಿ, ''ಇನ್ನು ಹೊರಡಿ, ಮದುವೆ ಹತ್ತಿರ ಬರ್ತಾ ಇದೆ; ಸಿದ್ಧತೆ ಮಾಡಿಕೊಳ್ಳಿ'' ಎಂದು ಹೇಳಿದ್ದರ ಜತೆಗೆ, ''ಮದುವೆ ಸಮಾರಂಭದಲ್ಲಿ ಅರಿಸಿನ-ಕುಂಕುಮ ಸೇರಿದಂತೆ ಮಂಗಳದ್ರವ್ಯಗಳನ್ನು ಇರಿಸಿಕೊಳ್ಳಲು ಇದನ್ನೇ ಬಳಸಿಕೊಳ್ಳಿ'' ಎನ್ನುತ್ತಾ ಆ ಬೆಳ್ಳಿಯ ಹರಿವಾಣವನ್ನೂ ವಯೋವೃದ್ಧ ಭಕ್ತರಿಗೆ ನೀಡಿಬಿಟ್ಟರು. 'ಕೆರೆಯ ನೀರನು ಕೆರೆಗೆ ಚೆಲ್ಲಿ, ವರವ ಪಡೆದವರಂತೆ ಕಾಣಿರೋ' ಎಂಬ ದಾಸರ ಪದವನ್ನು ಸಾಕಾರಗೊಳಿಸಿಬಿಟ್ಟರು! ಇಷ್ಟೂ ಘಟನಾವಳಿಯನ್ನು ಮಠದ ಆಡಳಿತಾಧಿಕಾರಿ ಕಣ್ಣಗಲಿಸಿಕೊಂಡು ನೋಡುತ್ತಿದ್ದರು,

ಆದರೆ ಅವರೇನೂ ಮಾತಾಡುವಂತಿರಲಿಲ್ಲ. ಏಕೆಂದರೆ, ಅದು ಭಕ್ತರು ಸ್ವಾಮೀಜಿಗೆ ಪಾದಪೂಜೆಯ ಬಾಬ್ತು ನೀಡಿದ ದುಡ್ಡಾಗಿರಲಿಲ್ಲ, ತೀರ್ಥದ ಹರಿವಾಣಕ್ಕೆ ಧಾರೆಯಾಗಿ ಇಳಿದ ಭಕ್ತರ 'ಹೃದಯಸಂಪತ್ತು' ಆಗಿತ್ತು. ಮಠದ ನಿಯಮದಂತೆ ಅದು ಸ್ವಾಮೀಜಿಗಳ ಸ್ವತ್ತಾಗಿದ್ದು, ಅದನ್ನು ತಮ್ಮಿಷ್ಟದ 'ಲೋಕಕಲ್ಯಾಣ'ದ ಬಾಬತ್ತಿಗೆ ಬಳಸುವ ವಿವೇಚನಾಧಿಕಾರ ಸ್ವಾಮೀಜಿಗಿತ್ತು! ಅಂತೆಯೇ ಅವರು ನಡೆದುಕೊಂಡಿದ್ದರು....

★★★

ಇಂಥ ದೊಡ್ಡತನ ಮೆರೆದ ಮಹಾನ್ ಅಧ್ಯಾತ್ಮ ಸಾಧಕರ, ಅವರಿದ್ದ ದೈವಸನ್ನಿಧಿಯ ಮತ್ತು ಮಠದ ಹೆಸರನ್ನು ಮೇಲಿನ 'ಅಕ್ಷರ ರಂಗೋಲಿ'ಯಲ್ಲಿ ಬೇಕೆಂದೇ ಉಲ್ಲೇಖಿಸಿಲ್ಲ; ಕಾರಣ, ಅದು ಇಲ್ಲಿನ ಉದ್ದೇಶವೂ ಅಲ್ಲ. ಗುರುವಿನ ಮಹಿಮೆಯನ್ನು ಮನವರಿಕೆ ಮಾಡಿಕೊಡುವುದಷ್ಟೇ ಇಲ್ಲಿನ ನಮ್ರ ಬಯಕೆ. ''ನಿಮ್ಮ ಮುಂದೆ ದೇವರು ಮತ್ತು ಗುರು ಇಬ್ಬರೂ ಕಾಣಿಸಿಕೊಂಡರೆ ಮೊದಲು ಯಾರಿಗೆ ನಮಿಸುತ್ತೀರಿ?'' ಎಂದು ಅನುಭಾವಿಯೊಬ್ಬರನ್ನು ಪ್ರಶ್ನಿಸಿದ್ದಕ್ಕೆ, ''ಗುರುವಿಗೇ ಮೊದಲು ನಮಿಸುವೆ; ಏಕೆಂದರೆ, ದೇವರೆಡೆಗೆ ಸಾಗುವ ದಾರಿಯನ್ನು ತೋರಿದ್ದು ಅವನೇ ಅಲ್ಲವೇ?'' ಎಂಬ ಉತ್ತರ ಬಂತಂತೆ! ಸದ್ಗುರುವು ದೇವರಿಗಿಂತಲೂ ಮಿಗಿಲಾದವನು. 'ಗುರುವೇ ನಿಮ್ಮಾಜ್ಞೆಯನು ಮೀರದೆ ನಡೆವವನು..' ಎಂಬ ಗೀತೆಯಲ್ಲಿ, ''ಗರುಡನ ಮಂತ್ರವನು ಕಲಿತಿರುವಾತಗೆ, ಉರಗ ಕಚ್ಚಿದರೆ ವಿಷವೇರುವುದೇ..?'' ಎಂಬ ಸಾಲು ಬರುತ್ತದೆ. ನಿಜಾರ್ಥದ ಗುರುಗಳು ಮತ್ತು ಅವಧೂತರು ಸರ್ವಶಕ್ತರು, ಅವರನ್ನು ಲೌಕಿಕದ ಯಾವ ವ್ಯವಸ್ಥೆಯೂ ಕಟ್ಟಿಹಾಕಲಾಗದು. ಹಣವೂ ಸೇರಿದಂತೆ ಅಷ್ಟಸಿದ್ಧಿಗಳೂ ಅವರಿಗೆ ತೃಣಕ್ಕೆ ಸಮಾನ; ಆದರೆ ನಂಬಿದ ಆರ್ತರಿಗೆ ಬೇಕೆಂದಾಗ ಅವನ್ನು ಅವರು ಮೊಗೆಮೊಗೆದು ತೆಗೆದುಕೊಡಬಲ್ಲರು...

ನೆಟ್ ಪಿಕ್ಸ್

ಊರಲ್ಲಿ ಎಲೆಕ್ಷನ್ ಭರಾಟೆ ಜೋರಾಗೇ ಇತ್ತು. ಎಲ್ಲ ಕಡೆ ಪ್ರಚಾರದ ಹವಾ. ಖೇಮು ಕೂಡ ಎಲೆಕ್ಷನ್ನಲ್ಲಿ ಬ್ಯುಸಿಯಾಗಿದ್ದ. ಒಂದು ದಿನ ಬೆಳಗ್ಗೆ ಹೀಗೇ ತಮ್ಮ ಪಕ್ಷದ ಕಾರ್ಯಕರ್ತರೊಡನೆ ಊರಲ್ಲಿ ತಿರುಗಾಡುತ್ತಿದ್ದಾಗ ಅಲ್ಲಿಗೆ ಸೋಮು ಬಂದ. ಅದಾಗಲೇ ಫುಲ್ ಟೈಟಾಗಿದ್ದ ಪಾರ್ಟಿ, ಖೇಮು ಹತ್ರ ಬಂದು 'ಸರ್, ನೀವು ನಮ್ ಪಾರ್ಟಿಗೇ ವೋಟ್ ಹಾಕ್ಬೇಕು, ನಾನು ನಿಮ್ ತಮ್ಮ ಇದ್ದಂಗೆ ಅಂದ್ಕಳಿ' ಅಂದ. ಅದನ್ನು ಕೇಳಿದ ಖೇಮುಗೆ ಕೆಂಡಾಮಂಡಲ ಸಿಟ್ಟು ಬಂತು. ಒಂದೇ ಸಮನೆ ಸೋಮುವನ್ನು ಹಿಡಿದು ಹಿಗ್ಗಾಮುಗ್ಗ ಬಾರಿಸತೊಡಗಿದ. ಸರಿ ಸೋಮು ಅಲ್ಲಿಂದ ಎಸ್ಕೇಪ್. ನಂತರ ಮಧ್ಯಾಹ್ನದ ಹೊತ್ತಿಗೆ ಸೋಮು ಮತ್ತೆ ಖೇಮು ಮುಂದೆ ಹಾಜರಾದ. ಈಗಲೂ ಫುಲ್ ಟೈಟು. ಈಗಲೂ ಅದೇ ಡೈಲಾಗು. 'ಸರ್, ನೀವು ನಮ್ ಪಾರ್ಟಿಗೇ ವೋಟ್ ಹಾಕ್ಬೇಕು, ನಾನು ನಿಮ್ ತಮ್ಮ ಇದ್ದಂಗೆ ಅಂದ್ಕಳಿ'. ಮತ್ತೆ ಖೇಮು ಕಡೆಯಿಂದ ಅವನಿಗೆ ಧರ್ಮದೇಟುಗಳು ಬಿದ್ದವು. ಮತ್ತೆ ಸೋಮು ಎಸ್ಕೇಪ್. ಸಂಜೆ ಇನ್ನೇನು ಕತ್ತಲಾಗಿ ಸ್ವಲ್ಪ ಹೊತ್ತು ಕಳೆದು ಪ್ರಚಾರ ಮುಗಿಯುವ ಹಂತಕ್ಕೆ ಬಂದಿತ್ತು. ಖೇಮು ಬಳಿಗೆ ಮತ್ತೆ ಬಂದ ಸೋಮು ಅದಾಗಲೇ ಸಾಕಷ್ಟು ಬಾರಿ 'ರಿಪೀಟ್' ಆರ್ಡರ್ ಮಾಡಿ ಇನ್ನಷ್ಟು ಟೈಟ್ ಆಗಿ, ಸೇಮ್ ಡೈಲಾಗ್ 'ರಿಪೀಟ್' ಮಾಡಿದ- 'ಸರ್, ನೀವು ನಮ್ ಪಾರ್ಟಿಗೇ ವೋಟ್ ಹಾಕ್ಬೇಕು. ನಾನು ನಿಮ್ ತಮ್ಮ ಇದ್ದಂಗೆ ಅಂದ್ಕಳಿ'. ಖೇಮುಗೆ ಮತ್ತೆ ಸಿಕ್ಕಾಪಟ್ಟೆ ಸಿಟ್ಟು ಬಂತು. ಇನ್ನೇನು ಹೊಡೆಯಲು ಕೈ ಎತ್ತಬೇಕು, ಅಷ್ಟರಲ್ಲಿ ಖೇಮು ಪಕ್ಕದಲ್ಲಿದ್ದವರು ಕೇಳಿದರು, 'ಅಲ್ರೀ ಖೇಮು, ಪಾಪ ಅವನಿಗೆ ಯಾಕ್ರೀ ಹೊಡೀತೀರ? ಏನೋ ವೋಟ್ ಕೇಳ್ತಾವೆ. ಹಾಕಂಗಿದ್ರೆ ಹಾಕಿ, ಇಲ್ಲಾಂದ್ರೆ ಬಿಟ್ಟಾಕಿ. ಪಾಪ ಅದಕ್ಯಾಕೆ ಅವನಿಗೆ ಧರ್ಮದೇಟು ಹಾಕ್ತೀರಿ. ಪಾಪ, ನಾನು ನಿಮ್ ತಮ್ಮ ಇದ್ದಂಗೆ ಅಂತ ತಿಳ್ಳಿ ಅಂತ ಬೇರೆ ಅಂತಿದಾನೆ. ಅದಕ್ಕಾದರೂ ಕರುಣೆ ಬೇಡ್ವಾ?'. ಅದಕ್ಕೆ ಖೇಮು ಹೇಳಿದ 'ಹೊಡೀತಾ ಇರೋದು ಅದಕ್ಕೇನೇ, ವೋಟ್ ಕೇಳಿದ್ದಕ್ಕೆ ಬೇಜಾರಿಲ್ಲ, ಅದ್ ಬಿಟ್ಟು ತಮ್ಮ ಇದ್ದಂಗೆ ಅಂತಾನೇ. ತಮ್ಮ ಇದ್ದಂಗೆ ಏನ್ ಬಂತು ರೀ, ಈ ಬಡ್ಡಿಮಗ ನನ್ ಸ್ವಂತ ತಮ್ಮನೇ'.

ಲೈನ್ ಮ್ಯಾನ್

- **ಸದ್ಯದ ಪ್ರಶ್ನೆ. ಇವೆರಡರಲ್ಲಿ ಯಾವುದು ಜಾಸ್ತಿ ಫೇಮಸ್?**
- ಸುದೀಪ್ ಅವರ ಮ್ಯಾಕ್ಸ್
- ನಿರ್ಮಲಾ ಅವರ ಟ್ಯಾಕ್ಸ್
- **ದುಬಾರಿ ಪೆನ್ ತಗೊಳ್ಳೋದರ ಉಪಯೋಗ**
- ಅನ್ನಿಸಿದ್ದನ್ನು ಸುವರ್ಣಾಕ್ಷರಗಳಲ್ಲಿ ಬರೆದಿಡಬಹುದು
- **ಸುಪ್ರೀಂ 'ಕೋರ್ಟ್' ಜಡ್ಜ್‌ಗಳೇ ರೆಬೆಲ್ ಆದ್ರೆ**
- so..now..the ball is in whose court'..?
- **ಸೌಂಡ್ ಪಾರ್ಟಿ ಸ್ವಗತ**
- ಸೈರನ್ ಹಾಕಿಲ್ಲ ಅಂದ್ರೆ ambulanceಗೆ ಬೆಲೆ ಸಿಗಲ್ಲ..
- ಹಂಗೇನೆ... ಸೌಂಡ್ ಮಾಡದೇ ಇದ್ರೆ ಮನುಷ್ಯರಿಗೆ ಬೆಲೆ ಸಿಗಲ್ಲ..
- **ಗಾಂಧಿನಗರದ ಕೆಲವು ಹೀರೋಗಳ ವ್ಯಥೆ**
- ನಾನೇ ಇಲ್ಲಿ ನಂಬರು ಒನ್ ಅಂತ ಹೇಳ್ತಾ ಇದ್ರೂ ನಂಬೋರು ಮಾತ್ರ ಯಾರೂ ಇಲ್ಲ
- **ಇದೀಗ ತಾನೆ ಹೊಳೆದ ಸುದ್ದಿ:**
- ಬಂಗಾರದ ವಿಷಯದಲ್ಲಷ್ಟೇ ಅಲ್ಲ, ಐಡಿಯಾಗಳ ವಿಷಯದಲ್ಲೂ ಅಷ್ಟೇ.. 'ಹೊಳೆಯುವುದೆಲ್ಲಾ' ಬಂಗಾರ ಅಲ್ಲ.
- **ಒಂದು ಅಮಿತಾಬ್ ಬಚ್ಚನ್ ಮತ್ತು ಇನ್ನೊಂದು ಲೋಕಲ್ ಬಚ್ಚನ್ ಸುದೀಪ್ ಚಿತ್ರವನ್ನು ಮಲಯಾಳಿಗಳು- ಒಂದೇ ರೀತಿ ಉಚ್ಚರಿಸುತ್ತಾರೆ. ಯಾವುದದು?**
- ಕೂಲಿ-ಗೂಳಿ
- **ಯಾವುದೋ ಹಗರಣದಲ್ಲಿ ಇವರದ್ದೇನೂ ತಪ್ಪಿಲ್ಲ ಅಂತಾ ಮಂತ್ರಿಯೊಬ್ಬರ ಬಗ್ಗೆ ಕೋರ್ಟ್ ತೀರ್ಪು ಬಂದರೆ ಆಗ ಅವರು**
- 'ಮಂತ್ರಿಮುಗ್ಧ'
- **ಹುಲಿಗಳನ್ನು ಟ್ರೈನ್ ಮಾಡುವ ಜಾಗಕ್ಕೆ ಏನಂತಾರೆ?**
- 'ಹುಲಿ'ಗೆ ತರಬೇತಿ ಕೇಂದ್ರ

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:67, Issue: 234

ಸಮಾಚಾರ ಸಣ್ಣದಲ್ಲ

ಜೈಪುರ ಅನಿಲ ಟ್ಯಾಂಕರ್ ಸ್ಫೋಟ: ಸಾವು 20ಕ್ಕೆ

ಜೈಪುರ: ರಾಜಸ್ಥಾನದ ಜೈಪುರ-ಅಜ್ಮೀರ್ ಹೆದ್ದಾರಿಯಲ್ಲಿ ಡಿ.20ರಂದು ನಡೆದ ಅಪಘಾತದಲ್ಲಿ ಎಲ್‌ಪಿಜಿ ಟ್ಯಾಂಕರ್ ಸ್ಫೋಟಗೊಂಡಿದ್ದರಿಂದ ಗಂಭೀರವಾಗಿ ಗಾಯಗೊಂಡಿದ್ದವರಲ್ಲಿ ಮತ್ತೊಬ್ಬರು ಶನಿವಾರ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದಿದ್ದು, ಘಟನೆಯಲ್ಲಿ ಸಾವಿಗೀಡಾದವರ ಸಂಖ್ಯೆ 20ಕ್ಕೆ ಏರಿಕೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಎಸ್‌ಎಂಎಸ್ ಆಸ್ಪತ್ರೆಯಲ್ಲಿ ಇನ್ನೂ ಏಳು ಗಾಯಾಳುಗಳಿದ್ದಾರೆ. ಅವರ ಸುಟ್ಟಗಾಯಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಆಸ್ಪತ್ರೆಯ ಅಧೀಕ್ಷಕ ಡಾ ಸುಶೀಲ್ ಭಾಟಿ ತಿಳಿಸಿದ್ದಾರೆ. ರಾಜಸ್ಥಾನ ಮುಖ್ಯಮಂತ್ರಿ ಭಜನ್ ಲಾಲ್ ಶರ್ಮಾ ಎಸ್‌ಎಂಎಸ್ ಆಸ್ಪತ್ರೆಗೆ ಭೇಟಿ ನೀಡಿ ವೈದ್ಯರೊಂದಿಗೆ ಮಾತನಾಡಿದ್ದಾರೆ.

ದೆಹಲಿ ಗೃಹಲಕ್ಷ್ಮಿ ತನಿಖೆಗೆ ಲೆ.ಗೌ. ಆದೇಶ

ದೆಹಲಿ: ಆಮ್ ಆದ್ಮಿ ಪಕ್ಷ(ಎಎಪಿ)ದಿಂದ ಮಹಿಳಾ ಸಮ್ಮಾನ್ ಯೋಜನೆಯಡಿ ಮಹಿಳೆಯರಿಗೆ ಮಾಸಿಕ 2100 ರು.ಗಳ ಆರ್ಥಿಕ ನೆರವು ಘೋಷಿಸಿದ ವಿಚಾರವೀಗ ವಿವಾದಕ್ಕೀಡಾಗಿದೆ. ಯೋಜನೆಗೆ ಅರ್ಹ ಮಹಿಳೆಯರ ಆಯ್ಕೆಗಾಗಿ ಮಾಹಿತಿ ಸಂಗ್ರಹಿಸುವ ಕಾರ್ಯವನ್ನು ಆಮ್ ಆದ್ಮಿ ಪಕ್ಷದ ಆಡಳಿತ, ಸರಕಾರೇತರ ಸಂಸ್ಥೆಗೆ ವಹಿಸಿರುವುದು ಪ್ರಶ್ನೆ ಹುಟ್ಟುಹಾಕಿದೆ. ಸರಕಾರಿ ಯೋಜನೆಗೆ ಖಾಸಗಿ ಸಂಸ್ಥೆಯಿಂದ ದತ್ತಾಂಶ ಸಂಗ್ರಹ ಕಾರ್ಯವನ್ನು ಹೇಗೆ ನಡೆಸಲಾಗುತ್ತಿದೆ? ಜನರ ವೈಯಕ್ತಿಕ ಮಾಹಿತಿಯ ಗೌಪ್ಯತೆ ಉಲ್ಲಂಘಿಸಿದವರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಲೆಫ್ಟಿನೆಂಟ್ ಗವರ್ನರ್ ಕಚೇರಿಯಿಂದ ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಲಾಗಿದೆ.

ಆಧ್ಯಾತ್ಮಿಕ ವಿಮೋಚನೆ ಹೆಸರಲ್ಲಿ 4 ಆತ್ಮಹತ್ಯೆ

ತಿರುವಣ್ಣಾಮಲೈ: ತಮಿಳುನಾಡಿನ ತಿರುವಣ್ಣಾಮಲೈನ ಗಿರಿವಾಲಂ ಪಥದಲ್ಲಿರುವ ಖಾಸಗಿ ಹೋಟೆಲ್‌ನಲ್ಲಿ ಒಂದೇ ಕುಟುಂಬದ ಮೂವರು ಸೇರಿದಂತೆ ನಾಲ್ವರ ಶವ ಪತ್ತೆಯಾಗಿದೆ. 'ಆಧ್ಯಾತ್ಮಿಕ ವಿಮೋಚನೆ' ಹೆಸರಲ್ಲಿ ನಾಲ್ವರೂ ವಿಷ ಸೇವಿಸಿ ಜೀವ ಕಳೆದುಕೊಂಡಿದ್ದಾರೆ ಎಂದು ಪೊಲೀಸ್ ತನಿಕೆಯಿಂದ ತಿಳಿದುಬಂದಿದೆ. ಮೃತರನ್ನು ಚೆನ್ನೈನ ವ್ಯಾಸರ್‌ಪಾಡಿ ನಿವಾಸಿ ಮಹಾಕಾಲ ವ್ಯಾಸರ್(40), ಕೆ.ರುಕ್ಮಿಣಿ ಪ್ರಿಯಾ(45), ಕೆ.ಜಲಂಧರಿ (17) ಮತ್ತು ಮುಕುಂದ್ ಆಕಾಶ್ ಕುಮಾರ್(12) ಎಂದು ಗುರುತಿಸಲಾಗಿದೆ. ವಿಚ್ಛೇದಿತ ಮಹಿಳೆ ರುಕ್ಮಿಣಿ ಪ್ರಿಯಾ ಮತ್ತು ಅವರ 2 ಮಕ್ಕಳು ಕೆಲ ತಿಂಗಳ ಹಿಂದೆ ಮಹಾಕಾಲ ವ್ಯಾಸರನ್ನು ಭೇಟಿಯಾಗಿ, ಅವರೆಲ್ಲರೂ ಅಧ್ಯಾತ್ಮದಲ್ಲಿ ಆಸಕ್ತಿ ಹೊಂದಿದ್ದರು ಎಂದು ತಿಳಿದುಬಂದಿರುವುದಾಗಿ ಪೊಲೀಸರು ತಿಳಿಸಿದ್ದಾರೆ.

ಬಾಂಗ್ಲಾದೇಶ: ಕ್ರೈಸ್ತರ 19 ಮನೆಗಳಿಗೆ ಬೆಂಕಿ

ಢಾಕಾ: ನೊಬೆಲ್ ಪ್ರಶಸ್ತಿ ಪಡೆದಿರುವ ಮೊಹಮ್ಮದ್ ಯೂನುಸ್ ನೇತೃತ್ವದ ಮಧ್ಯಂತರ ಸರಕಾರ ಆಡಳಿತಕ್ಕೆ ಬಂದ ಬಳಿಕ ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರ ಮೇಲಿನ ದಾಳಿ ಹೆಚ್ಚಿದೆ. ಮೊದಲಿಗೆ ಹಿಂದೂ ಸಮುದಾಯ, ದೇಗುಲಗಳ ಮೇಲೆ ದಾಳಿ ಮುಸ್ಲಿಂ ಸಮುದಾಯ ಈಗ ಕ್ರೈಸ್ತ ಸಮುದಾಯದತ್ತ ಕೆಂಗಣ್ಣು ಬೀರಿದೆ. ಚಿತ್ತಗಾಂಗ್ ಪ್ರದೇಶದಲ್ಲಿ ಕ್ರಿಸ್ಮಸ್ ಸಂಭ್ರಮಾಚರಣೆಯಲ್ಲಿದ್ದ ಕ್ರೈಸ್ತ ಸಮುದಾಯದವರ ಮೇಲೆ ಮುಗಿಬಿದ್ದ ಧರ್ಮಾಂಧರ ಗುಂಪು 19 ಮನೆಗಳಿಗೆ ಬೆಂಕಿ ಹಚ್ಚಿದೆ. ಬಂದರ್ಬನ್ ಜಿಲ್ಲೆಯ ನೋಟುನ್ ತೊಂಗ್ಝಿರಿ ತ್ರಿಪುರಾ ಪರಾ ಪ್ರದೇಶದಲ್ಲಿ ಘಟನೆ ನಡೆದಿದ್ದು, ತಡವಾಗಿ ವರದಿಯಾಗಿದೆ. 17 ಮನೆಗಳು ಪೂರ್ಣ ಭಸ್ಮವಾಗಿದ್ದರೆ, ಎರಡು ಮನೆಗಳು ಭಾಗಶಃ ಸುಟ್ಟಿವೆ. ಈ ಬಗ್ಗೆ ಬಾಂಗ್ಲಾ ಸರಕಾರ ಸಮುದಾಯದ ಗುಂಪುಗಳ ನಡುವಿನ ವೈಷಮ್ಯವೇ ಕಾರಣ ಎಂದು ಹೇಳಿದೆ.

ಹಿಮಪಾತ; ಕುಲುವಿನಲ್ಲಿ 5000 ಪ್ರವಾಸಿಗರ ರಕ್ಷಣೆ

ಡೆಹ್ರಾಡೂನ್: ಹಿಮಾಚಲ ಪ್ರದೇಶದಲ್ಲಿ ಭಾರೀ ಹಿಮಪಾತವಾಗುತ್ತಿದ್ದು, ಕುಲುವಿನ ಸ್ಕೀ ರೆಸಾರ್ಟ್ ಸೊಲಾಂಗ್ ನಾಲಾದಲ್ಲಿ ಕಷ್ಟದಲ್ಲಿ ಸಿಲುಕಿದ್ದ 5 ಸಾವಿರ ಪ್ರವಾಸಿಗರನ್ನು ರಕ್ಷಿಸಲಾಗಿದೆ. ಸೋಲಾಂಗ್ ನಾಲಾದಲ್ಲಿ ಒಂದು ಸಾವಿರಕ್ಕೂ ಅಧಿಕ ವಾಹನಗಳು ಹಿಮಚ್ಛಾದಿತ ರಸ್ತೆಯಲ್ಲಿ ಸಿಲುಕಿಕೊಂಡು ಮುಂದೆ ಚಲಿಸಲಾಗದಂತಾಗಿದ್ದವು. ಈ ವಾಹನಗಳಲ್ಲಿ 5,000 ಪ್ರವಾಸಿಗರಿದ್ದರು. ರಕ್ಷಣಾ ಕಾರ್ಯಾಚರಣೆ ನಡೆಸಿ ವಾಹನ ಸಂಚಾರ ಸುಗಮಗೊಳಿಸಲಾಯಿತು. ಪ್ರವಾಸಿಗರನ್ನು ರಕ್ಷಿಸಿದ ಕುಲು ಪೊಲೀಸರು, ಸುರಕ್ಷಿತ ಸ್ಥಳಗಳಿಗೆ ಕರೆದೊಯ್ದರು. ಹಿಮಾಚಲ ಪ್ರದೇಶದ ಲಾಹೌಲ್-ಸ್ಪಿತಿ, ಚಂಬಾ, ಕಂಗ್ರಾ, ಕುಲು, ಶಿಮ್ಲಾ ಮತ್ತು ಕಿನ್ನೌರ್ ಜಿಲ್ಲೆಗಳಲ್ಲಿ ಹಿಮಪಾತವಾಗುತ್ತಿದೆ. ಇನ್ನಷ್ಟು ದಿನಗಳ ಕಾಲ ಹಿಮಪಾತ ಮತ್ತು ಶೀತಅಲೆ ಈ ಭಾಗದಲ್ಲಿ ಮುಂದುವರಿಯಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

{ಸಂಜಯ್ ಮಲ್ಹೋತ್ರಾ} ಆರ್‌ಬಿಐ ಗವರ್ನರ್

ಮನಮೋಹನ್ ಸಿಂಗ್ ಶ್ರೇಷ್ಠ ಅರ್ಥಶಾಸ್ತ್ರಜ್ಞರು. 1982ರ ಸೆ16ರಿಂದ 1985ರ ಜ.14ರವರೆಗೆ ಆರ್‌ಬಿಐ ಗವರ್ನರ್ ಆಗಿದ್ದರು. 1982-83ರಲ್ಲಿ ತೀವ್ರ ಬರ, ಕೃಷಿ-ಕೈಗಾರಿಕಾ ಕ್ಷೇತ್ರ ಉತ್ಪಾದನೆ ಕುಸಿದಿತ್ತು. ಆಗ ವಿತ್ತೀಯ ವ್ಯವಸ್ಥೆ ಪರಿಶೀಲನೆಗೆ ಪ್ರೊ. ಸುಖಮೋಯ್ ಚಕ್ರವರ್ತಿ ಸಮಿತಿ ರಚಿಸಿದರು. ಆರ್ಥಿಕ ಸುಧಾರಣೆಗೆ ಅವರು ಕೈ ಗೊಂಡ ಕ್ರಮಗಳು ಅಚ್ಚಳಿಯದ ಹೆಗ್ಗುರುತು ಮೂಡಿಸಿವೆ.

21 ಕುಶಾಲುತೋಪು, ಸರಕಾರಿ ಗೌರವ | ಅಂತಿಮ ಯಾತ್ರೆ ಲಕ್ಷಾಂತರ ಮಂದಿ ಭಾಗಿ | ಮನಮೋಹನ್ ಸಿಂಗ್ ಅಮರ್ ರಹೇ ಘೋಷಣೆ

ಮನಮೋಹನ್ ಸಿಂಗ್ ಚಿತೆಗೆ ಪುತ್ರಿಯಿಂದ ಅಗ್ನಿಸ್ಪರ್ಶ

ದೆಹಲಿ: ದೇಶಕಂಡ ಅಪರೂಪದ ರಾಜಕಾರಣಿ, ಶ್ರೇಷ್ಠ ಅರ್ಥಶಾಸ್ತ್ರಜ್ಞ ಡಾ.ಮನಮೋಹನ್ ಸಿಂಗ್ ಅವರ ಅಂತ್ಯಸಂಸ್ಕಾರ ಯಮುನಾ ನದಿಯ ದಂಡೆಯಲ್ಲಿನ ದೆಹಲಿಯ ನಿಗಮ ಬೋಧ್ ಘಾಟ್‌ನಲ್ಲಿ ಶನಿವಾರ ನಡೆದಿದ್ದು, ತಂದೆಯ ಚಿತೆಗೆ ಹಿರಿಯ ಪುತ್ರಿ ಉಪಿಂದರ್ ಸಿಂಗ್ ಮಧ್ಯಾಹ್ನ 12.55ರ ವೇಳೆ ಅಗ್ನಿಸ್ಪರ್ಶ ಮಾಡಿದರು.

ಇದಕ್ಕೂ ಮುನ್ನ ಮನಮೋಹನ್ ಸಿಂಗ್ ಅವರ ಪಾರ್ಥಿವ ಶರೀರವನ್ನು ನವದೆಹಲಿಯಲ್ಲಿನ ಅವರ ನಿವಾಸದಿಂದ ಕಾಂಗ್ರೆಸ್ ಪ್ರಧಾನ ಕಚೇರಿಗೆ ಕೊಂಡೊಯ್ದು ಕೆಲ ಕಾಲ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಿಕೊಡಲಾಯಿತು.

ಬಳಿಕ ಕಾಂಗ್ರೆಸ್ ಪ್ರಧಾನ ಕಚೇರಿಯಿಂದ ಅಂತಿಮ ಯಾತ್ರೆ ಆರಂಭಗೊಂಡು ನಿಗಮಬೋಧ್ ಘಾಟ್‌ವರೆಗೂ ಸಾಗಿತು. ಬಗೆಬಗೆ ಹೂವುಗಳಿಂದ ಅಲಂಕೃತವಾದ ಸೇನಾಪಡೆಯ ವಾಹನದಲ್ಲಿ ಮಾಜಿ ಪ್ರಧಾನಿಯ ಪಾರ್ಥಿವ ಶರೀದ ಅಂತಿಮಯಾತ್ರೆ ಮೆರವಣಿಗೆಯಲ್ಲಿ ಸಾಗಿತು. ದೇಶ ಕಂಡ ಅತಿವಿಶಿಷ್ಟ ರಾಜಕಾರಣಿಯ ಅಂತಿಮ ಯಾತ್ರೆಯಲ್ಲಿ ಲಕ್ಷಾಂತರ ಮಂದಿ ಭಾಗಿಯಾದರು. ಈ ವೇಳೆ 'ಮನಮೋಹನ್ ಸಿಂಗ್ ಜಿ ಅಮರ್ ರಹೇ' ಮೊದಲಾದ ಘೋಷಣೆಗಳನ್ನು ಅಭಿಮಾನಿಗಳು ಕೂಗುತ್ತಾ ರಸ್ತೆಯಲ್ಲಿ ಮೆರವಣಿಗೆಯಲ್ಲಿ ಸಾಗಿದರು.

ಮನಮೋಹನ್ ಸಿಂಗ್ ಅವರಿಗೆ ಅಂತಿಮ ವಿದಾಯ ಹೇಳಲು ದೆಹಲಿಯ ನಿಗಮಬೋಧ್ ಘಾಟ್‌ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು, ಉಪ ರಾಷ್ಟ್ರಪತಿ ಜಗದೀಪ್ ಧನಕರ್, ಲೋಕಸಭಾ ಸ್ಪೀಕರ್ ಓಂ ಬಿರ್ಲಾ, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ರಕ್ಷಣಾ ಸಚಿವ ರಾಜನಾಥ್ ಸಿಂಗ್ ಸೇರಿದಂತೆ ಕೇಂದ್ರ ಸರಕಾರದ ಎಲ್ಲಾ ಸಚಿವರು, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕಾಂಗ್ರೆಸ್ ವರಿಷ್ಠ ನಾಯಕಿ ಸೋನಿಯಾ ಗಾಂಧಿ, ಕರ್ನಾಟಕ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ. ಶಿವಕುಮಾರ್ ಹಾಗೂ ವಿವಿಧ ರಾಜ್ಯಗಳ ಸಿಎಂಗಳು, ಹಲವು ಕಾಂಗ್ರೆಸ್ ನಾಯಕರುಗಳು ಹಾಜರಿದ್ದು, ಅಗಲಿದ ಮಾಜಿ ಪ್ರಧಾನಿಗೆ ಪುಷ್ಪ ನಮನ ಸಲ್ಲಿಸಿದರು.

ದೆಹಲಿಯ ಕಾಂಗ್ರೆಸ್ ಕಚೇರಿಯಿಂದ ನಿಗಮಬೋಧ ಘಾಟ್‌ವರೆಗೂ ಪುಷ್ಪಾಲಂಕೃತ ಸೇನಾ ವಾಹನದಲ್ಲಿ ಮಾಜಿ ಪ್ರಧಾನಿ ಡಾ. ಮನಮೋಹನ್ ಸಿಂಗ್ ಅವರ ಅಂತಿಮ ಯಾತ್ರೆಯನ್ನು ಮೆರವಣಿಗೆಯಲ್ಲಿ ಕೊಂಡೊಯ್ಯಲಾಯಿತು. ಸಾವಿರಾರು ವಾಹನಗಳ ಸಮೇತ ಲಕ್ಷಾಂತರ ಜನರು ಅಂತಿಮಯಾತ್ರೆಯಲ್ಲಿ ಸಾಗಿದರು.

ಸಿಖ್ ಸಂಪ್ರದಾಯದಂತೆ ಅಂತಿಮ ವಿಧಿ

ಆನಂತರ ಸಿಖ್ ಧರ್ಮದ ಧಾರ್ಮಿಕ ವಿಧಿವಿಧಾನಗಳಂತೆ ಮಂತ್ರ-ಶ್ಲೋಕಗಳ ಪಠಣೆ ಮಾಡಿ ಮಧ್ಯಾಹ್ನ 12.55ರ ವೇಳೆಗೆ ಮನಮೋಹನ್ ಸಿಂಗ್ ಅವರ ಪಾರ್ಥಿವ ಶರೀರಕ್ಕೆ ಅಗ್ನಿಸ್ಪರ್ಶ ಮಾಡಲಾಯಿತು. 1990ರ ದಶಕದಲ್ಲಿ ಕುಸಿತ ಕಾಣುತ್ತಿದ್ದ ಭಾರತದ ಆರ್ಥಿಕತೆಯನ್ನು ಸರಿದಾರಿಗೆ ತಂದ, ಆರ್ಥಿಕವಾಗಿ ಸದೃಢವಾದ ನವಭಾರತ ರೂಪುಗೊಳ್ಳುವಂತೆ ಮಾಡಿದ ಶ್ರೇಷ್ಠ ಅರ್ಥಶಾಸ್ತ್ರಜ್ಞ, ದೇಶ ಕಂಡ ಅಪರೂಪದ ಪ್ರಧಾನಿಯನ್ನು ಅಶ್ರುಧಾರೆಯೊಂದಿಗೆ ದೇಶ ಬೀಳ್ಕೊಟ್ಟಿತು.

ಮುಖ್ಯಾಂಶಗಳು

- 92 ವರ್ಷಗಳ ತುಂಬು ಜೀವನ ಕಂಡ ಮನಮೋಹನ್ ಸಿಂಗ್
- ಗುರುವಾರ ರಾತ್ರಿ ದೆಹಲಿಯ ಏಮ್ಸ್ ಆಸ್ಪತ್ರೆಯಲ್ಲಿ ನಿಧನ
- ಭಾರತದ ಆರ್ಥಿಕ ಸುಧಾರಣೆಗಳ ಶಿಲ್ಪಿ ಎಂದೇ ಜನಪ್ರಿಯ
- 2004-14ರ ಅವಧಿಯಲ್ಲಿ ಸತತ 10 ವರ್ಷ ಕಾಲ ಪ್ರಧಾನಿ

7 ದಿನಗಳ ಶೋಕಾಚರಣೆ

ಬಳಿಕ, ಚೀಫ್ ಆಫ್ ಡಿಫೆನ್ಸ್ ಸ್ಟಾಫ್ ಜನರಲ್ ಅನಿಲ್ ಚೌಹಾಣ್, ವಾಯುಪಡೆ, ನೌಕಾದಳ, ಸೇನಾಪಡೆ ಮುಖ್ಯಸ್ಥರು ಹಾಜರಿದ್ದು ಮಾಜಿ ಪ್ರಧಾನಿಗೆ ಅಂತಿಮ ನಮನ ಸಲ್ಲಿಸಿದರು. ಮೂರೂ ಸೇನಾಪಡೆಗಳ ಯೋಧರು ಬಂದೂಕಿನಿಂದ 21 ಬಾರಿ ತೋಪು ಸಿಡಿಸಿ ಸರಕಾರಿ ಗೌರವ ಸಲ್ಲಿಸಿದರು. ಬಳಿಕ ಪಾರ್ಥಿವ ಶರೀರಕ್ಕೆ ಹೊದಿಸಲಾಗಿದ್ದ ರಾಷ್ಟ್ರಧ್ವಜವನ್ನು ಮನಮೋಹನ್ ಸಿಂಗ್ ಅವರ ಕುಟುಂಬಸ್ಥರಿಗೆ ಸೇನಾಸಿಬ್ಬಂದಿ ಗೌರವಪೂರ್ವಕ ಹಸ್ತಾಂತರಿಸಿದರು. ಅಲ್ಲದೇ, ಮಾಜಿ ಪ್ರಧಾನಿ ಮನಮೋಹನ್ ಸಿಂಗ್ ಅವರ ಗೌರವಾರ್ಥ ದೇಶಾದ್ಯಂತ 7 ದಿನಗಳ ರಾಷ್ಟ್ರೀಯ ಶೋಕಾಚರಣೆಯನ್ನು ಆಚರಿಸಲಾಗುತ್ತಿದ್ದು, ಈ ಸಂದರ್ಭದಲ್ಲಿ ರಾಷ್ಟ್ರದಾದ್ಯಂತ ರಾಷ್ಟ್ರಧ್ವಜವನ್ನು ಅರ್ಧಕ್ಕೆ ಹಾರಿಸಲಾಗುವುದು ಎಂದು ಕೇಂದ್ರ ಗೃಹ ಸಚಿವಾಲಯ ಪ್ರಕಟಿಸಿದೆ.

ಪ್ರಕೃತಿಯ ಕಂಬನಿ

ಡಾ.ಮನಮೋಹನ ಸಿಂಗ್ ಅವರ ಅಂತಿಮ ಯಾತ್ರೆಯ ವೇಳೆ ಕುಟುಂಬದವರು, ಅಭಿಮಾನಿಗಳ ಜತೆಗೆ ಪ್ರಕೃತಿಯೂ ಕಂಬನಿಗರೆಯಿತು. ದೆಹಲಿಯಲ್ಲಿ 101 ವರ್ಷಗಳಲ್ಲೇ ಗರಿಷ್ಠ ಎನ್ನುವಂತಹ ದಾಖಲೆ ಪ್ರಮಾಣದ ವರ್ಷಧಾರೆಯಾಯಿತು. ಅಂತಿಮ ಯಾತ್ರೆಯ ಜತೆಗೇ ಸಾಗಿ ಬಂದಿದ್ದ ಲಕ್ಷಾಂತರ ಮಂದಿ ನಿಗಮಬೋಧ್ ಘಾಟ್ ಹೊರಭಾಗದಲ್ಲಿ ಕಂಬನಿ ಮಿಡಿದರು.

ರಾಹುಲ್ ವಾಗ್ದಾಳಿ

ಮನಮೋಹನ್ ಸಿಂಗ್ ಅವರ ಅಧಿಕೃತ ಸ್ಮಾರಕ ನಿರ್ಮಾಣಗೊಳ್ಳುವ ಸ್ಥಳದ ಬದಲು ನಿಗಮಬೋಧ ಘಾಟ್‌ನಲ್ಲಿ ಅಂತ್ಯಸಂಸ್ಕಾರ ಮಾಡುವ ಮೂಲಕ ಸಿಂಗ್ ಅವರಿಗೆ ಹಾಗೂ ಅವರ ಕುಟುಂಬ ಮತ್ತು ಸಮುದಾಯವನ್ನು ಅಪಮಾನಿಸಲಾಗಿದೆ. ಮಾಜಿ ಪ್ರಧಾನಿಗಳ ಅಂತ್ಯಸಂಸ್ಕಾರವನ್ನು ಅಧಿಕೃತ ಸಮಾಧಿ ಸ್ಥಳದಲ್ಲಿಯೇ ಮಾಡಲಾಗಿದೆ. ಸ್ಮಾರಕ ನಿರ್ಮಾಣ ಸ್ಥಳದಲ್ಲೇ ಅತ್ಯಂತ ಗೌರವಪೂರ್ವಕ ಅಂತ್ಯಸಂಸ್ಕಾರಕ್ಕೆ ದೇಶದ ಹೆಮ್ಮೆಯ ಪುತ್ರ ಮನಮೋಹನ್ ಸಿಂಗ್ ಅರ್ಹರಾಗಿದ್ದರು. ಸರಕಾರ ಅವರಿಗೆ ಇಷ್ಟಾದರೂ ಗೌರವ ತೋರಿಸಬೇಕಿತ್ತು ಎಂದು ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಕೇಂದ್ರ ಸರಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದಾರೆ.

ರಾಷ್ಟ್ರಪತಿ ದ್ರೌಪತಿ ಮುರ್ಮು ಅವರು ಮನಮೋಹನ್ ಸಿಂಗ್ ಅವರಿಗೆ ಗೌರವ ವಂದನೆ ಸಲ್ಲಿಸಿದರು.

ಮನಮೋಹನ್ ಸಿಂಗ್ ಶವಪೆಟ್ಟಿಗೆಗೆ ಹೊದಿಸಲಾಗಿದ್ದ ರಾಷ್ಟ್ರಧ್ವಜವನ್ನು ತೆಗೆಯುತ್ತಿರುವ ಸೇನಾ ಯೋಧರು.

ತಂದೆ ಮನಮೋಹನ್ ಸಿಂಗ್ ಚಿತೆಗೆ ಅಗ್ನಿಸ್ಪರ್ಶ ಮಾಡಿದ ಹಿರಿಯ ಪುತ್ರಿ ಉಪಿಂದರ್ ಸಿಂಗ್, ತಾಯಿ ಗುರುಶರಣ್ ಕೌರ್ ಜತೆ.

ಯಮುನಾ ನದಿಯ ತಟದಲ್ಲಿ ನಿಗಮ್ ಬೋಧ್ ಘಾಟ್‌ನಲ್ಲಿ ಸಿದ್ಧಪಡಿಸಲಾಗಿದ್ದ ಚಿತೆ.

ಹೌತಿ ಉಗ್ರರ ದಾಳಿ ತಡೆಗೆ ಅಮೆರಿಕದ ಥಾಡ್ ಬಳಕೆ

ಟೆಲ್‌ಅವಿವ್: ಇತ್ತೀಚೆಗೆ ದೇಶದ ಮೇಲೆ ಯೆಮೆನ್ ಮೂಲದ ಹೌತಿ ಉಗ್ರರಿಂದ ಬ್ಯಾಲಿಸ್ಟಿಕ್ ಕ್ಷಿಪಣಿಗಳ ದಾಳಿ ಹೆಚ್ಚುತ್ತಿರುವ ಹಿನ್ನೆಲೆ ಇಸ್ರೇಲ್, ಇದೇ ಮೊದಲ ಬಾರಿಗೆ ಅಮೆರಿಕ ನಿರ್ಮಿತ 'ಥಾಡ್' ವಾಯುದಾಳಿ ರಕ್ಷಣಾ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ತನ್ನಲ್ಲಿನ 'ಐರನ್ ಡೋಮ್' ರಕ್ಷಣಾ ವ್ಯವಸ್ಥೆಗೆ ಪರ್ಯಾಯವಾಗಿ ಅಮೆರಿಕ ಸೇನೆಯ ರಕ್ಷಣಾತ್ಮಕ ವ್ಯೂಹದ ರಾಡಾರ್ ವ್ಯವಸ್ಥೆಯನ್ನು ಬಳಸಲು ಆರಂಭಿಸಿದೆ.

ಯೆಮೆನ್‌ನಿಂದ ಇಸ್ರೇಲ್‌ನತ್ತ ಹಾರಿಸಲಾದ ಶಕ್ತಿಶಾಲಿ ಖಂಡಾಂತರ ಕ್ಷಿಪಣಿಗಳನ್ನು ಆಕಾಶದಲ್ಲೇ ನಾಶಪಡಿಸಲು ಅಮೆರಿಕದ 'ಟರ್ಮಿನಲ್ ಹೈ ಆಲ್ಟಿಟ್ಯೂಡ್ ಏರಿಯಾ ಡಿಫೆನ್ಸ್'(ಟಿಎಚ್‌ಎಎಡಿ-ಥಾಡ್) ಕ್ಷಿಪಣಿ ನಾಶಕ ರಾಡಾರ್ ವ್ಯವಸ್ಥೆಯನ್ನು ಇಸ್ರೇಲ್ ಶುಕ್ರವಾರದಿಂದ ಬಳಸಲಾರಂಭಿಸಿದೆ. ಈ ಹೊಸ ರಾಡಾರ್ ವ್ಯವಸ್ಥೆಯ ಮೂಲಕವೇ ಇರಾನ್ ಬೆಂಬಲಿತ ಉಗ್ರರ ಗುಂಪು 'ಹೌತಿ' ಹಾರಿಸಿದ್ದ ಖಂಡಾಂತರ ಕ್ಷಿಪಣಿಗಳನ್ನು ಹೊಡೆದುರುಳಿಸಲಾಗಿದೆ ಎಂದು ಇಸ್ರೇಲ್ ರಕ್ಷಣಾ ಪಡೆ ಹೇಳಿಕೊಂಡಿದೆ. ಅಮೆರಿಕ ಅಕ್ಟೋಬರ್‌ನಲ್ಲಿಯೇ ಬಲಾಢ್ಯ 'ಥಾಡ್' ರಕ್ಷಣಾ ವ್ಯವಸ್ಥೆಯನ್ನು ಇಸ್ರೇಲ್ ನೀಡಿತ್ತು. ಇಲ್ಲಿಯವರೆಗೂ ತನ್ನದೇ ತಂತ್ರಜ್ಞಾನದ 'ಐರನ್ ಡೋಮ್' ಮೇಲೆ ಆಧರಿಸಿದ್ದ ಇಸ್ರೇಲ್, ಇದೇ ಮೊದಲ ಬಾರಿಗೆ 'ಥಾಡ್'ಗೆ ಮನ್ನಣೆ ನೀಡಿದೆ ಎಂದು ಟೈಮ್ಸ್ ಆಫ್ ಇಸ್ರೇಲ್ ವರದಿ ಮಾಡಿದೆ. 'ಥಾಡ್' ವ್ಯವಸ್ಥೆ ಆರು ಟ್ರಕ್-ಮೌಂಟೆಡ್ ಲಾಂಚರ್‌ಗಳನ್ನು ಒಳಗೊಂಡಿದೆ. ಪ್ರತಿಯೊಂದರಲ್ಲೂ ಕ್ಷಿಪಣಿ ನಾಶಪಡಿಸುವ 8 ಪ್ರತಿದಾಳಿ ಬಾಂಬ್‌ಗಳು ಇರುತ್ತವೆ. ಜತೆಗೆ ರಾಡಾರ್ ಮತ್ತು ಅಗ್ನಿಶಾಮಕ ನಿಯಂತ್ರಣ ವ್ಯವಸ್ಥೆಯೂ ಇದರಲ್ಲಿದೆ.

3 ಮಹಿಳಾ ಐಪಿಎಸ್‌ಗಳ ನೇತೃತ್ವದ ಎಸ್‌ಐಟಿ | ಎಫ್‌ಐಆರ್ ಸೋರಿಕೆ; ಸಂತ್ರಸ್ತೆ ಕುಟುಂಬಕ್ಕೆ ಆಘಾತ

ಅಣ್ಣಾ ವಿವಿ ಅತ್ಯಾಚಾರ ಪ್ರಕರಣ: ಎಸ್‌ಐಟಿ ರಚಿಸಿದ ಹೈಕೋರ್ಟ್

ಚೆನ್ನೈ: ರಾಜಧಾನಿ ನಗರದಲ್ಲಿರುವ ಅಣ್ಣಾ ವಿಶ್ವವಿದ್ಯಾಲಯ ಕ್ಯಾಂಪಸ್‌ನಲ್ಲಿ ದ್ವಿತೀಯ ಇಂಜಿನಿಯರಿಂಗ್ ವಿದ್ಯಾರ್ಥಿನಿಯ ಅತ್ಯಾಚಾರ ಪ್ರಕರಣದ ತನಿಖೆಗೆ ಮದ್ರಾಸ್ ಹೈಕೋರ್ಟ್, ಮಹಿಳಾ ಐಪಿಎಸ್ ಅಧಿಕಾರಿ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವನ್ನು (ಎಸ್‌ಐಟಿ) ಶನಿವಾರ ರಚನೆ ಮಾಡಿ ಆದೇಶ ಹೊರಡಿಸಿದೆ.

- ಸಂತ್ರಸ್ತೆ ಕುಟುಂಬಕ್ಕೆ 25 ಲಕ್ಷ ರು. ಪಾವತಿಗೆ ಆದೇಶ
- ಚೆನ್ನೈ ಪೊಲೀಸ್ ಆಯುಕ್ತ ವಿರುದ್ಧ ಕ್ರಮಕ್ಕೂ ಆದೇಶ

ನ್ಯಾಯಮೂರ್ತಿ ಎಸ್.ಎಂ.ಸುಬ್ರಮಣಿಯನ್ ಮತ್ತು ನ್ಯಾ. ವಿ.ಲಕ್ಷ್ಮಿನಾರಾಯಣನ್ ಅವರ ನೇತೃತ್ವದ ಪೀಠ, 'ಎಸ್‌ಐಟಿ'ಗೆ ನಿಯೋಜನೆಗೊಂಡಿರುವ ಎಲ್ಲಾ ಅಧಿಕಾರಿ, ಸಿಬ್ಬಂದಿಗಳೂ ಮಹಿಳೆಯರೇ ಆಗಿರುವಂತೆ ಹೈಕೋರ್ಟ್ ವ್ಯವಸ್ಥೆ ಮಾಡಿದೆ. ಐಪಿಎಸ್ ಅಧಿಕಾರಿಗಳಾದ ಸ್ನೇಹಪ್ರಿಯ, ಐಮನ್ ಜಮಾಲ್, ಬೃಂದಾ ಅವರ ನೇತೃತ್ವದ ಎಸ್‌ಐಟಿ, ಅತ್ಯಾಚಾರ ಘಟನೆಗೆ ಸಂಬಂಧಿಸಿದ ಎರಡೂ ಪ್ರಕರಣಗಳನ್ನೂ ತನಿಖೆ ಮಾಡಲಿದೆ. ಇದೇ ವೇಳೆ, ಘಟನೆಯ ಕುರಿತ ಪ್ರಥಮ ಮಾಹಿತಿ ವರದಿ(ಎಫ್‌ಐಆರ್) ರಾಜ್ಯ ಪೊಲೀಸ್ ಇಲಾಖೆ ಯಿಂದಲೇ ಸೋರಿಕೆ ಆಗಿರುವುದರಿಂದ ಸಂತ್ರಸ್ತ ಯುವತಿ ಮತ್ತು ಕುಟುಂಬದವರು ಮಾನಸಿಕ ಆಘಾತಕ್ಕೆ ಒಳಗಾಗುವಂತಾಗಿದೆ. ಅದಕ್ಕೆ ಪರಿಹಾರವಾಗಿ ಸಂತ್ರಸ್ತ ಕುಟುಂಬದವರಿಗೆ 25 ಲಕ್ಷ ರು. ಪಾವತಿಸುವಂತೆ ಹೈಕೋರ್ಟ್, ತಮಿಳುನಾಡು ಸರಕಾರಕ್ಕೆ ಆದೇಶಿಸಿದೆ. ಅಲ್ಲದೇ, ಸಂತ್ರಸ್ತ ವಿದ್ಯಾರ್ಥಿನಿ ವ್ಯಾಸಂಗ ಮುಂದುವರಿಸಲು ಶಿಕ್ಷಣ, ವಸತಿ-ಊಟ ಹಾಗೂ ಆಪ್ತ ಸಮಾಲೋಚನೆ ವ್ಯವಸ್ಥೆ ಎಲ್ಲವನ್ನೂ ಉಚಿತವಾಗಿ ಒದಗಿಸುವಂತೆ ಅಣ್ಣಾ ವಿಶ್ವವಿದ್ಯಾಲಯಕ್ಕೆ ಪೀಠ ಆದೇಶಿಸಿದೆ.

ಪೊಲೀಸ್ ಆಯುಕ್ತ ವಿರುದ್ಧ ಕ್ರಮಕ್ಕೆ ಆದೇಶ

ಕೃತ್ಯದ ಮಾಹಿತಿ ಮತ್ತು ತನಿಖಾ ಹಂತದ ವಿವರ ಸೋರಿಕೆ ಮಾಡಿದ ಹಿನ್ನೆಲೆಯಲ್ಲಿ ತಮಿಳುನಾಡು ಪೊಲೀಸರ ವಿರುದ್ಧ ಸಲ್ಲಿಕೆಯಾಗಿದ್ದ ಎರಡು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳ ವಿಚಾರಣೆ ನಡೆಸಿದ ಪೀಠ, ಮಹಿಳೆ ಮತ್ತು ಮಕ್ಕಳ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣಗಳಲ್ಲಿ ಇನ್ನು ಮುಂದೆ ಯಾವುದೇ ಕಾರಣಕ್ಕೂ ಮಾಹಿತಿ ಸೋರಿಕೆ ಆಗದಂತೆ ನೋಡಿಕೊಳ್ಳುವುದಾಗಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕರು ಖಚಿತಪಡಿಸಬೇಕು ಎಂದು ಆದೇಶಿಸಿ ಎರಡೂ ಅರ್ಜಿಗಳನ್ನು ವಿಲೇವಾರಿ ಮಾಡಿದೆ. ಅಲ್ಲದೇ, ಸುದ್ದಿಗೋಷ್ಠಿ ನಡೆಸಿ ಕೃತ್ಯ ಮತ್ತು ಸಂತ್ರಸ್ತೆಯ ಮಾಹಿತಿ ಒಳಗೊಂಡ ಎಫ್‌ಐಆರ್ ಪ್ರತಿ ಬಹಿರಂಗ ಹಾಗೂ ಪೊಲೀಸ್ ತನಿಖೆಯ ವಿವರ ಸೋರಿಕೆ ಮಾಡಿದ ಆರೋಪದಡಿ ಚೆನ್ನೈಮಹಾನಗರ ಪೊಲೀಸ್ ಆಯುಕ್ತರ ವಿರುದ್ಧ ನಿಯಮಗಳ ರೀತ್ಯ ಶಿಸ್ತುಕ್ರಮ ಜರುಗಿಸುವಂತೆಯೂ ರಾಜ್ಯ ಸರಕಾರಕ್ಕೆ ಪೀಠ ಆದೇಶಿಸಿದೆ.

ಅಪ್ಪ ನಿಧನರಾದಾಗ ಕಾಂಗ್ರೆಸ್ ಸಂತಾಪ ಸಭೆಯನ್ನೇ ನಡೆಸಲಿಲ್ಲ

ದೆಹಲಿ: ನಮ್ಮ ತಂದೆ, ಮಾಜಿ ರಾಷ್ಟ್ರಪತಿ ಪ್ರಣಬ್ ಮುಖರ್ಜಿ ಅವರು 2020ರ ಆಗಸ್ಟ್‌ನಲ್ಲಿ ನಿಧನರಾದಾಗ ಕಾಂಗ್ರೆಸ್ ಪಕ್ಷ ಕನಿಷ್ಠ ಸಂತಾಪವನ್ನೂ ಸೂಚಿಸಲಿಲ್ಲ, ಕುಟುಂಬಕ್ಕೆ ಕರೆಯನ್ನೂ ಮಾಡಲಿಲ್ಲ ಎಂದು ಪುತ್ರಿ ಶರ್ಮಿಷ್ಠಾ ಮುಖರ್ಜಿ ಶನಿವಾರ ತೀವ್ರ ಬೇಸರ ವ್ಯಕ್ತಪಡಿಸಿದ್ದಾರೆ.

ನಮ್ಮ ತಂದೆ ಕಾಂಗ್ರೆಸ್‌ನ ಹಿರಿಯ ನಾಯಕರೂ ಆಗಿದ್ದರು. ದಶಕಗಳ ಕಾಲ ಪಕ್ಷಕ್ಕಾಗಿ ದುಡಿದಿದ್ದರು. ಅವರು ನಿಧನರಾದಾಗ ಕಾಂಗ್ರೆಸ್ ಕಾರ್ಯಕಾರಿಣಿಯನ್ನೂ ಕರೆಯಲಿಲ್ಲ, ಪಕ್ಷದ ವತಿಯಿಂದ ಸಂತಾಪ ಸೂಚಕ ಸಭೆ ನಡೆಸುವ ಸೌಜನ್ಯದ ನಡೆಯನ್ನೂ ತೋರಲಿಲ್ಲ ಎಂದು ಶರ್ಮಿಷ್ಠಾ ಅಸಮಾಧಾನ ಹೊರಹಾಕಿದ್ದಾರೆ.

ಪಕ್ಷದಿಂದ ಸಂತಾಪ ಸೂಚಕ ಸಭೆ ಆಯೋಜಿಸದ ಬಗ್ಗೆ ಪಕ್ಷದ ಹಿರಿಯ ಮುಖಂಡರೊಬ್ಬರನ್ನು ಕೇಳಿದಾಗ. 'ರಾಷ್ಟ್ರಪತಿಗಳಿಗೆ ಆ ರೀತಿ ಮಾಡುವುದಿಲ್ಲ' ಎಂದು ಹೇಳುವ ನಮ್ಮ ಕುಟುಂಬದ ದಾರಿ ತಪ್ಪಿಸಿದರು. ಅದರಿಂದಲೇ ಆ ಕಾಂಗ್ರೆಸ್ ನಾಯಕರ ತುಚ್ಛ ಧೋರಣೆ ನಮಗೆ ಮನದಟ್ಟಾಯಿತು. ಆದರೆ, ಮಾಜಿ ರಾಷ್ಟ್ರಪತಿ ಕೆ.ಆರ್.ನಾರಾಯಣನ್ ಅವರ ನಿಧನರಾದಾಗ 'ಸಿಡಬ್ಲ್ಯುಸಿ' ಸಭೆ ಕರೆದು ಸಂತಾಪ ಸೂಚಿಸಲಾಗಿತ್ತು. ಈ ವಿಚಾರ ನನ್ನ ತಂದೆಯ ಡೈರಿಯಿಂದಲೇ ನನಗೆ ನಂತರ ತಿಳಿಯಿತು. ತಂದೆಯವರೇ ಆ ಸಂತಾಪ ಸೂಚಕ ಸಭೆಯನ್ನು ಮುನ್ನಡೆಸಿದ್ದರು ಎಂದು ಶರ್ಮಿಷ್ಠಾ ಪತ್ರಿಕಾ ಹೇಳಿಕೆಯಲ್ಲಿ ಬರೆದಿದ್ದಾರೆ.

ನನ್ನ ತಂದೆಗೆ ಆದಂತೆ ಬೇರೆ ನಾಯಕರಿಗೂ ಆಗಬಾರದು ಎಂದಿರುವ ಶರ್ಮಿಷ್ಠಾ, ಡಾ. ಮನಮೋಹನ್ ಸಿಂಗ್ ಅವರ ಸ್ಮಾರಕಕ್ಕಾಗಿ ಕೇಂದ್ರ ಸರಕಾರಕ್ಕೆ ಕಾಂಗ್ರೆಸ್ ಪಕ್ಷ ಮಾಡಿರುವ ಮನವಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಹಣ ಅಕ್ರಮ ವರ್ಗಾವಣೆ: ರಾಮರಾವ್‌ಗೆ ಸಮನ್ಸ್

ಹೈದರಾಬಾದ್: ತೆಲಂಗಾಣ ರಾಜಧಾನಿ ಹೈದರಾಬಾದ್‌ನಲ್ಲಿ 2023ರ ಫೆಬ್ರವರಿಯಲ್ಲಿ ನಡೆದ 'ಫಾರ್ಮುಲಾ-ಇ-ರೇಸ್'ಗೆ ಸಂಬಂಧಿಸಿದ 55 ಕೋಟಿ ರು.ಗಳನ್ನು ಅಕ್ರಮವಾಗಿ ವರ್ಗಾವಣೆ ಮಾಡಿದ ಪ್ರಕರಣದ ತನಿಖೆ ನಡೆಸುತ್ತಿರುವ ಜಾರಿ ನಿರ್ದೇಶನಾಲಯ(ಇ.ಡಿ), ಜನವರಿಯಲ್ಲಿ ವಿಚಾರಣೆಗೆ ಹಾಜರಾಗುವಂತೆ ಭಾರತ್ ರಾಷ್ಟ್ರ ಸಮಿತಿ(ಬಿಆರ್‌ಎಸ್) ಪಕ್ಷದ ಮಾಜಿ ಸಚಿವ ಕೆ.ಟಿ.ರಾಮರಾವ್ ಮತ್ತಿತರರಿಗೆ ಶನಿವಾರ ಸಮನ್ಸ್ ಜಾರಿ ಮಾಡಿದೆ.

ತೆಲಂಗಾಣ ಪೊಲೀಸ್ ಭ್ರಷ್ಟಾಚಾರ ನಿಗ್ರಹ ದಳ(ಎಸಿಬಿ) ದೂರು ಆಧರಿಸಿ ತನಿಖೆ ಆರಂಭಿಸಿರುವ ಇ.ಡಿ, ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ(ಪಿಎಂಎಲ್‌ಎ) ವಿವಿಧ ಸೆಕ್ಷನ್‌ಗಳಡಿ ಇಸಿಐಆರ್(ಎಫ್‌ಐಆರ್) ದಾಖಲಿಸಿದೆ.

ಮಾಜಿ ಸಿಎಂ ಕೆ.ಚಂದ್ರಶೇಖರ ರಾವ್ ಅವರ ಪುತ್ರ, ಬಿಆರ್‌ಎಸ್ ಕಾರ್ಯಾಧ್ಯಕ್ಷರೂ ಆಗಿರುವ ಕೆ.ಟಿ.ರಾಮರಾವ್ ಜ.7ರಂದು ತನಿಖಾ ಸಂಸ್ಥೆ ಮುಂದೆ ಹಾಜರಾಗಿ ಹೇಳಿಕೆ ದಾಖಲಿಸಬೇಕಿದೆ ಎಂದು ಇ.ಡಿ. ಸಮನ್ಸ್‌ನಲ್ಲಿ ತಿಳಿಸಿರುವುದಾಗಿ ಮೂಲಗಳು ತಿಳಿಸಿವೆ. ಹಿರಿಯ ಐಎಎಸ್ ಅಧಿಕಾರಿ ಅರವಿಂದ್ ಕುಮಾರ್ ಮತ್ತು ಹೈದರಾಬಾದ್ ಮಹಾನಗರ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಮುಖ್ಯ ಎಂಜಿನಿಯರ್ ಬಿಎಲ್‌ಎನ್ ರೆಡ್ಡಿ ಅವರಿಗೂ ಕ್ರಮವಾಗಿ ಜ.2 ಮತ್ತು ಜ.3ರಂದು ಹಾಜರಾಗಲು ಸಮನ್ಸ್ ನೀಡಲಾಗಿದೆ.

ದೆಹಲಿ: 101 ವರ್ಷದಲ್ಲೇ ದಾಖಲೆ ಪ್ರಮಾಣದ ಮಳೆ

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಶನಿವಾರ ಧೋ ಎಂದು ಧಾರಾಕಾರವಾಗಿ ಸುರಿದ ಮಳೆ 101 ವರ್ಷಗಳ ದಾಖಲೆಯನ್ನೇ ಮುರಿದಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮಾಹಿತಿ ನೀಡಿದೆ. ದೆಹಲಿಯಲ್ಲಿ ಶುಕ್ರವಾರ ಬೆಳಗ್ಗೆ ಶುರುವಾದ ವರ್ಷಧಾರೆ ಶನಿವಾರ ಬೆಳಗ್ಗೆ 8.30ರವರೆಗೂ ಸುರಿದಿದೆ. 24 ಗಂಟೆಗಳಲ್ಲಿ 41.20 ಮಿಮೀ ಮಳೆಯಾಗಿದೆ. ಇದು ಡಿಸೆಂಬರ್‌ನಲ್ಲಿ ದಿನವೊಂದರಲ್ಲಿ ಕಳೆದ 101 ವರ್ಷಗಳಲ್ಲಿಯೇ ಸುರಿದ ಅತ್ಯಧಿಕ ಪ್ರಮಾಣದ ಮಳೆಯಾಗಿದೆ. 1923ರ ಡಿ.3ರಂದು ದೆಹಲಿಯಲ್ಲಿ 75.7 ಮಿಮೀ ಮಳೆಯಾಗಿತ್ತು.

ದೆಹಲಿಯ ಸಫ್ದರ್‌ಜಂಗ್ ಪ್ರದೇಶದಲ್ಲಿ ಅತ್ಯಧಿಕ ಪ್ರಮಾಣದ ಮಳೆ ಸುರಿದಿದೆ. ಇದು 1901ರ ನಂತರ ಸಫ್ದರ್‌ಜಂಗ್ ಭಾಗದಲ್ಲಿ ಸುರಿದ 2ನೇ ಅತಿ ಹೆಚ್ಚು ಪ್ರಮಾಣದ ಮಳೆಯಾಗಿದೆ ಎಂದು ಹವಾಮಾನ ಇಲಾಖೆ ದಾಖಲಿಸಿದೆ. ದೆಹಲಿಯ ಕನಿಷ್ಠ ತಾಪಮಾನ ಶನಿವಾರ ಬೆಳಗ್ಗೆ 12.7 ಡಿಗ್ರಿ ಸೆಲ್ಸಿಯಸ್‌ನಷ್ಟಿದ್ದು, ಇದು ಈ ಋತುವಿನಲ್ಲಿನ ಸರಾಸರಿಗಿಂತ 6 ಡಿ.ಸೆ. ಹೆಚ್ಚಿನ ಪ್ರಮಾಣವಾಗಿದೆ ಎಂದು ಇಲಾಖೆ ಮಾಹಿತಿ ನೀಡಿದೆ. ಈಗಿನ ಮಳೆಯಿಂದ ದೆಹಲಿಯಲ್ಲಿನ ಗಾಳಿ ಗುಣಮಟ್ಟ ತುಸು ಸುಧಾರಿಸಿದೆ. ಪ್ರಸ್ತುತ ಋತುವಿನಲ್ಲಿ 400 ಗಡಿ ದಾಟಿ ಅಪಾಯಕಾರಿ ಮಟ್ಟಕ್ಕೇರಿದ್ದ ಗಾಳಿಯ ಗುಣಮಟ್ಟ ಶನಿವಾರ ಬೆಳಿಗ್ಗೆ 9ರ ವೇಳೆ ಎಕ್ಯುಐ 152ಕ್ಕೆ ಇಳಿಕೆಯಾಗಿದೆ ಎಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಮಾಹಿತಿ ತಿಳಿಸಿದೆ.

ಟಿಕ್ ಟಾಕ್ ನಿಷೇಧ ತೆರವಿಗೆ ಟ್ರಂಪ್ ಮನವಿ

ವಾಷಿಂಗ್ಟನ್: ಅಮೆರಿಕದಲ್ಲಿ ಟಿಕ್‌ಟಾಕ್ ನಿರ್ಬಂಧ ಕಡ್ಡಾಯಗೊಳಿಸಿರುವ ಕಾನೂನನ್ನು 2025ರ ಜ.19ರೊಳಗೆ ತೆರವುಗೊಳಿಸುವಂತೆ ಅಥವಾ ಅಮೆರಿಕದಲ್ಲಿ ಕಾರ್ಯಾಚರಣೆ ನಡೆಸಲು ಬೇರೊಂದು ಕಂಪನಿಗೆ ಟಿಕ್ ಟಾಕ್ ಮಾರಾಟಕ್ಕೆ ಅವಕಾಶ ನೀಡುವಂತೆ ಅಮೆರಿಕದ ನಿಯೋಜಿತ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಇತ್ತೀಚೆಗೆ ಅಮೆರಿಕದ ಸುಪ್ರೀಂ ಕೋರ್ಟ್‌ಗೆ ಮನವಿ ಮಾಡಿದ್ದಾರೆ ಎಂದು ನ್ಯೂ ಯಾರ್ಕ್ ಟೈಮ್ಸ್ ವರದಿ ಮಾಡಿದೆ.

ನಿಷೇಧದ ಗಡುವಿನ ಸಮಯ ಸಮೀಪಿಸುತ್ತಿರುವಾಗ ಟಿಕ್ ಟಾಕ್ ವಿವಾದ ಬಗೆಹರಿಸಲು ಟ್ರಂಪ್ ಅವರೇ ಮುಂದಾಗಿದ್ದಾರೆ. ಜನವರಿಯಲ್ಲಿ ಈ ಪ್ರಕರಣ ನ್ಯಾಯಾಲಯದಲ್ಲಿ ವಿಚಾರಣೆಗೆ ಬರಲಿದೆ. ಅಮೆರಿಕದಲ್ಲಿ ಜನಪ್ರಿಯ ಟಿಕ್‌ಟಾಕ್ ನಿಷೇಧಗೊಳ್ಳುವುದನ್ನು ನಿಯೋಜಿತ ಅಧ್ಯಕ್ಷ ಟ್ರಂಪ್ ವಿರೋಧಿಸುತ್ತಾರೆ ಎಂದು ನ್ಯಾಯಾಲಯಕ್ಕೆ ಸಲ್ಲಿಸಿದ ಮನವಿಯಲ್ಲಿ ಉಲ್ಲೇಖಿಸಲಾಗಿದೆ. ಅಮೆರಿಕದಲ್ಲಿ 17 ಕೋಟಿ ಟಿಕ್‌ಟಾಕ್ ಬಳಕೆದಾರರಿದ್ದಾರೆ. ಅವರ ಹಿತಾಸಕ್ತಿ ಮತ್ತು ರಾಷ್ಟ್ರೀಯ ಭದ್ರತೆ ರಕ್ಷಣೆ ನಿಟ್ಟಿನಲ್ಲಿ ಈ ಸಮಸ್ಯೆ ಪರಿಹರಿಸಲು ಕೋರಲಾಗಿದೆ. ಸಾಮಾಜಿಕ ಜಾಲತಾಣ ಬಳಕೆದಾರರಲ್ಲಿ ಟ್ರಂಪ್ 1.47 ಕೋಟಿ ಫಾಲೋವರ್ಸ್ ಹೊಂದಿದ್ದು, ಸಕ್ರಿಯ ಸಂವಹನ ನಡೆಸುತ್ತಾರೆ. ರಾಜಕೀಯ ಭಾಷಣ, ಅಭಿವ್ಯಕ್ತಿ ಸ್ವಾತಂತ್ರ್ಯ ಪ್ರಸಾರದಲ್ಲಿ ಟಿಕ್‌ಟಾಕ್‌ನ ಪ್ರಾಮುಖ್ಯತೆ ಪರಿಗಣಿಸಿ ನಿಷೇಧ ತೆರವಿಗೆ ಟ್ರಂಪ್ ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ.

ವಿಮಾನ ಪತನಕ್ಕೆ ಕ್ಷಮೆ ಕೇಳಿದ ಪುಟಿನ್

ಮಾಸ್ಕೊ: ರಷ್ಯಾ ವಾಯು ಪ್ರದೇಶದಲ್ಲಿ ಹಾರುತ್ತಿದ್ದ ಅಜರ್‌ಬೈಜಾನ್ ವಿಮಾನ ಪತನಗೊಂಡು 38 ಜನರ ಸಾವಿಗೀಡಾಗಿ, 29 ಮಂದಿ ಗಾಯಗೊಂಡರು. ವಿಮಾನ ದುರಂತಕ್ಕೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಕ್ಷಮೆ ಕೋರಿದ್ದಾರೆ. ಅಜರ್‌ಬೈಜಾನ್ ಅಧ್ಯಕ್ಷ ಇಲ್ಹ್ಯಾಮ್ ಅಲಿಯೆವ್ ಅವರಿಗೆ ಶನಿವಾರ ಕರೆ ಮಾಡಿದ ಪುಟಿನ್ ಕ್ಷಮೆ ಯಾಚಿಸಿದ್ದಾರೆ ಎಂದು ವರದಿಯಾಗಿದೆ.



ಕಝಾಕಿಸ್ತಾನದಲ್ಲಿ ವಿಮಾನ ಅಪಘಾತಕ್ಕೀಡಾದ ಸಂದರ್ಭದಲ್ಲಿ ಉಕ್ರೇನ್‌ನ ಡ್ರೋನ್ ದಾಳಿ ವಿರುದ್ಧ ರಷ್ಯಾದ ವಾಯುಪಡೆ ಪ್ರತಿದಾಳಿಯ ಕಾರ್ಯಾಚರಣೆ ನಡೆಸುತ್ತಿತ್ತು. ದಕ್ಷಿಣ ರಷ್ಯಾದಿಂದ ಡ್ರೋನ್‌ಗಳನ್ನು ಹಾರಿಸಿದಾಗ 60ಕ್ಕೂ ಹೆಚ್ಚು ಮಂದಿಯಿದ್ದ ಅಜರ್‌ಬೈಜಾನ್‌ನ ಪ್ರಯಾಣಿಕ ವಿಮಾನಕ್ಕೆ ತಾಗಿ ಅದು ಕಝಾಕಿಸ್ತಾನ್‌ನ ಅಕ್ಟೌ ನಗರದ ಬಳಿ ಪತನಗೊಂಡಿತು.

ದುರಂತದಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬಗಳಿಗೆ ಸಂತಾಪ ಸೂಚಿಸುವೆ. ಗಾಯಗೊಂಡವರು ಶೀಘ್ರ ಚೇತರಿಸಿಕೊಳ್ಳಲೆಂದು ಹಾರೈಸುವೆ ಎಂದು ಪುಟಿನ್ ಹೇಳಿರುವುದಾಗಿ ಕ್ರೆಮ್ಲಿನ್ ಮಾಧ್ಯಮ ವರದಿ ಮಾಡಿದೆ.

ಸಮಾಚಾರ ಸಣ್ಣದಲ್ಲ

ಪುರಸಭೆ ಬಜೆಟ್ ಸಾರ್ವಜನಿಕ ಸಭೆ 31ಕ್ಕೆ

ಗುಳೇದಗುಡ್ಡ: 2025-26ನೇ ಸಾಲಿನ ಬಜೆಟ್ ತಯಾರಿಸುವ ಸಲುವಾಗಿ ಎರಡನೇ ಹಂತದ ಸಾರ್ವಜನಿಕ ಚರ್ಚಾ ಸಭೆಯನ್ನು ಪುರಸಭೆ ಅಧ್ಯಕ್ಷೆ ಜ್ಯೋತಿ ಗೋವಿನಕೊಪ್ಪ ಅಧ್ಯಕ್ಷತೆಯಲ್ಲಿ ಡಿ. 31ರ ರಂದು ಸಂಜೆ 4.00 ಗಂಟೆಗೆ ಪುರಸಭೆ ಆವರಣದಲ್ಲಿ ಆಯೋಜಿಸಲಾಗಿದೆ. ಪಟ್ಟಣದಲ್ಲಿರುವ ಗಣ್ಯರು, ಹಿರಿಯರು, ಎಲ್ಲ ಪಕ್ಷಗಳ ನಾಯಕರು, ಸಾರ್ವಜನಿಕರು, ಸಂಘ ಸಂಸ್ಥೆಗಳು ಹಾಗೂ ಇತರೆ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗವಹಿಸಿ, ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡುವಂತೆ ಪುರಸಭೆ ಮುಖ್ಯಾಧಿಕಾರಿ ಅಸ್ಲಾಂ ಮುಜಾವರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೊಸ ವರ್ಷ ಆಚರಣೆಗೆ ಮುತಾಲಿಕ್ ವಿರೋಧ

ಬಾಗಲಕೋಟೆ: ಪ್ರತಿ ವರ್ಷ ಡಿ.31 ಹೊಸ ವರ್ಷ ಆಚರಿಸುತ್ತಾರೆ. ಇದಕ್ಕೆ ನಮ್ಮ ವಿರೋಧವಿದೆ. ಹಿಂದು ಸಪ್ರದಾಯ ಸಂಸ್ಕೃತಿ ಪ್ರಕಾರ ಯುಗಾದಿ ಹೊಸ ವರ್ಷ. ಎಲ್ಲೆಲ್ಲಿ ಹೊಸ ವರ್ಷ ಆಚರಣೆ ಆಗುತ್ತದೆಯೋ ಅಲ್ಲಿ ಪ್ರತಿಭಟನೆ ಮಾಡುತ್ತೇವೆ ಎಂದು ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ ಮುತಾಲಿಕ ತಿಳಿಸಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಸೂರಲ್ಲಿ ಈಗಾಗಲೇ ಆಚರಣೆ ರದ್ದು ಮಾಡಿದ್ದಾರೆ. ಲೈಟಿಂಗ್, ಇಂಗ್ಲಿಷ್ ಬ್ಯಾಂಡ್ ಎಲ್ಲ ರದ್ದು ಮಾಡಿದ್ದಾರೆ. ಅದೇ ಪ್ರಕಾರ ಸರಕಾರ ಇಡೀ ರಾಜ್ಯದಲ್ಲಿ ಆಚರಣೆ ಬಂದ್ ಮಾಡಬೇಕು. ಡಿಸೆಂಬರ್ 30 ಹಾಗೂ 31 ಬಾರ್ ಬಂದ್ ಮಾಡಬೇಕು ಎಂದು ಒತ್ತಾಯಿಸಿದರು. ಡಿಸೆಂಬರ್ 31 ರಂದು ಹೊಸ ವರ್ಷ ಆಚರಿಸುವುದು ಕ್ರಿಶ್ಚಿಯನ್ ಹಾಗೂ ಇಂಗ್ಲೇಡ್ ಸಂಸ್ಕೃತಿ. ಹೊಸ ವರ್ಷ ಸ್ವಾಗತಕ್ಕಾಗಿ ಕುಡಿದು ಕುಪ್ಪಳಿಸಿ ಡ್ರಗ್ಸ್, ರೇಪ್ ಮರ್ಡರ್, ಹೊಡೆದಾಟ. ಹುಡುಗಿಯರು ಕೆಡಿಸೋದು ಅಶ್ಲೀಲ ಅಸಭ್ಯ ವರ್ತನೆ ನಿಲ್ಲಿಸಬೇಕು. ಡಿ.26 ರಿಂದ ಜನವರಿ 1ರ ವರೆಗೆ ಏಳು ದಿನ ಶೋಕಾಚರಣೆ ಇದೆ. ಮಾಜಿ ಪ್ರಧಾನಿ ನಿಧನ ಆಗಿದೆ. ಕೇಂದ್ರ ಹಾಗೂ ರಾಜ್ಯ ಶೋಕಾಚರಣೆ ಡಿಕ್ಲರ್ ಮಾಡಿವೆ. ಈ ವೇಳೆ ಬೆಂಗಳೂರಲ್ಲಾಗಲಿ. ರಾಜ್ಯದಲ್ಲಾಗಲಿ ಹೇಗೆ ಆಚರಣೆ ಮಾಡುತ್ತೀರಿ? ಕುಡಿದು ಕುಪ್ಪಳಿಸಿ ಆಚರಿಸುವುದನ್ನು ನಿಲ್ಲಿಸಿ, ಇಲ್ಲದಿದ್ದರೆ ಹೊಟೆಲ್ ಹೊಕ್ಕು ಹೊಡೆಯುತ್ತೇವೆ ಎಂದು ಎಚ್ಚರಿಕೆ ನೀಡಿದ್ದಾರೆ.

ಅಯ್ಯಪ್ಪಸ್ವಾಮಿಯ ಸಡಗರದ ಮೆರವಣಿಗೆ

ರಬಕವಿ-ಬನಹಟ್ಟಿ: ಪಟ್ಟಣದ ಅಯ್ಯಪ್ಪ ಸೇವಾ ಸಮಿತಿ ಆಶ್ರಯದಲ್ಲಿ ಅಯ್ಯಪ್ಪಸ್ವಾಮಿ ತಿರುವಾಭರಣ ಮೆರವಣಿಗೆ ಶುಕ್ರವಾರ ಶ್ರದ್ಧಾಭಕ್ತಿಯಿಂದ ನೆರವೇರಿತು. ಲಕ್ಷ್ಮೀ ನಗರದಿಂದ ಅಯ್ಯಪ್ಪಸ್ವಾಮಿ ತಿರುವಾಭರಣ ಇರುವ ಪೆಟ್ಟಿಗೆಗೆ ಶಾಸ್ತ್ರೋಕ್ತವಾಗಿ ಪೂಜೆ ಸಲ್ಲಿಸಿ ಮೆರವಣಿಗೆ ಮೂಲಕ ಕಾಡಸಿದ್ಧೇಶ್ವರ ದೇವಸ್ಥಾನವರೆಗೆ ಮೆರವಣಿಗೆ ಸಾಗಿತು. ನೂರಾರು ಹಿರಿಯ ಸ್ವಾಮಿಗಳು, ಅಯ್ಯಪ್ಪ ಸ್ವಾಮಿಯ ಘೋಷಣೆ ಕೂಗುತ್ತ ಭಕ್ತಿಯ ಪರಾಕಾಷ್ಠೆಗೆ ಕಾರಣವಾಯಿತು. ರಥದಲ್ಲಿನ ಅಯ್ಯಸ್ವಾಮಿ ಭಾವಚಿತ್ರ ಮೆರವಣಿಗೆಯುದ್ದಕ್ಕೂ ಭಕ್ತರು ಎಳೆದು ಹರ್ಷಿಸಿದರು. ಮಾಲಾಧಾರಿಗಳು ತಲೆ ಮೇಲೆ ತಿರವಾಭರಣ ಇರುವ ಪೆಟ್ಟಿಗೆಹೊತ್ತು ಭಕ್ತಿಭಾವದಿಂದ ಪಾಲ್ಗೊಂಡರು. ಬಸ್ ನಿಲ್ದಾಣ, ತಮ್ಮಣ್ಣಪ್ಪ ರಸ್ತೆ, ಮಂಗಳವಾರ ಪೇಟೆ, ಸೋಮವಾರ ಪೇಟೆ ನಂತರ ಗುಂಡಯ್ಯಸ್ವಾಮಿ ದೇವಸ್ಥಾನದವರೆಗೆ ಅಯ್ಯಪ್ಪ ಮಾಲಾಧಾರಿಗಳು ಮೆರವಣಿಗೆ ಸಮಾರೋಪಗೊಳಿಸಿದರು. ಪ್ರಶಾಂತ್ ನಾಯಕ, ಉಮೇಶ ಉಮದಿ, ರಾಚು ಶಿರೋಳ ಸೇರಿದಂತೆ ನೂರಾರು ಮಾಲಾಧಾರಿಗಳು ಭಾಗವಹಿಸಿದ್ದರು.

ಕಾಳಿದಾಸ ಕಾಲೇಜಿಗೆ ಉತ್ತಮ ಫಲಿತಾಂಶ

ಬಾದಾಮಿ: ಬೆಳಗಾವಿ ರಾಣಿ ಚನ್ನಮ್ಮ ವಿಶ್ವ ವಿದ್ಯಾಲಯದ 2023-24 ನೇ ಸಾಲಿನ ಬಿ.ಇಡಿ. ಎರಡನೇ ಸೆಮಿಸ್ಟರ್ ಫಲಿತಾಂಶ ಪ್ರಕಟವಾಗಿದ್ದು, ನಗರದ ಶ್ರೀ ಕಾಳಿದಾಸ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಉತ್ತೀರ್ಣರಾಗಿದ್ದಾರೆ. ಕಾಲೇಜಿಗೆ ವಿಜಯಲಕ್ಷ್ಮೀ ರಾಯನಗೌಡ್ರ 600 ಕ್ಕೆ 528(ಶೇ88) ಪಡೆದು ಪ್ರಥಮ, ಜ್ಯೋತಿಕಾ ಎಸ್.ವಿ 600 ಕ್ಕೆ 526(ಶೇ87.6) ಪಡೆದು ದ್ವಿತೀಯ, ಲಕ್ಷ್ಮೀಬಾಯಿ ವಜ್ರಮಟ್ಟಿ 600 ಕ್ಕೆ 515 (ಶೇ85.8) ಅಂಕ ಪಡೆದು ತೃತೀಯ ಸ್ಥಾನ ಪಡೆದುಕೊಂಡಿದ್ದು 100 ಪ್ರಶಿಕ್ಷಣಾರ್ಥಿಗಳಲ್ಲಿ 80 ಪ್ರಶಿಕ್ಷಣಾರ್ಥಿಗಳು ಡಿಸ್ಟಿಂಕ್ಷನ್ ನಲ್ಲಿಪಾಸಾಗಿದ್ದು ಕಾಲೇಜಿಗೆ ಕೀರ್ತಿ ತಂದಿದ್ದಾರೆ. ಅಭಿನಂದನೆ: ಉತ್ತಮ ಫಲಿತಾಂಶ ಮಾಡಿ ಕಾಲೇಜಿಗೆ ಕೀರ್ತಿ ತಂದಿರುವ ಎಲ್ಲ ಪ್ರಶಿಕ್ಷಣಾರ್ಥಿಗಳನ್ನು ಸಂಸ್ಥೆಯ ಅಧ್ಯಕ್ಷ, ಮಾಜಿ ಸಚಿವ ಬಿ.ಬಿ.ಚಿಮ್ಮನಕಟ್ಟಿ, ಸಂಸ್ಥೆಯ ಕಾರ್ಯದರ್ಶಿ ಶಾಸಕರಾದ ಭೀಮಸೇನ ಚಿಮ್ಮನಕಟ್ಟಿ, ಸಂಸ್ಥೆಯ ಸಂಪರ್ಕಾಧಿಕಾರಿ ಶರಣಗೌಡ ಪಾಟೀಲ, ಶೈಕ್ಷಣಿಕ ಆಡಳಿತಾಧಿಕಾರಿ ರಾಘವನ್ ಇದ್ದರು.

ವಚನ ಸಾಹಿತ್ಯ ಕನ್ನಡದ ಆಸ್ತಿ

ದತ್ತಿ ಉಪನ್ಯಾಸ ಕಾರ್ಯಕ್ರಮ। ವಿದ್ವಾಂಸ ಡಾ. ಶ್ರೀಧರ್ ಹೆಗಡೆ ಭದ್ರನ್

ಬಾಗಲಕೋಟೆ: ವಚನ ಚಳುವಳಿ ಮತ್ತು ವಚನ ಸಾಹಿತ್ಯ ಕನ್ನಡದ ಆಸ್ತಿ ಇದ್ದಂತೆ. 21ನೇ ಶತಮಾನದಲ್ಲಿ ವಚನವು ಶುದ್ಧಿಕರಣವಾಯಿತು. ಆನಂದದ ಅಭಿವ್ಯಕ್ತಿಯಲ್ಲೇ ಸಂತೋಷವನ್ನು ಕಾಣಬೇಕು ಎಂದು ಧಾರವಾಡದ ಹಿರಿಯ ವಿದ್ವಾಂಸ ಡಾ. ಶ್ರೀಧರ್ ಹೆಗಡೆ ಭದ್ರನ್ ಹೇಳಿದರು.

ನಗರದ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಘಟಕ, ಕನ್ನಡ ಸ್ನಾತಕೋತ್ತರ ವಿಭಾಗ, ತಾಲೂಕು ಶರಣ ಸಾಹಿತ್ಯ ಪರಿಷತ್, ತಾಲೂಕು ಕದಳಿ ಮಹಿಳಾ ವೇದಿಕೆ ಅವರ ಸಹಯೋಗದಲ್ಲಿ ಕನ್ನಡ ನುಡಿ ವೇದಿಕೆ ಉದ್ಘಾಟನೆ ಮತ್ತು ಎಂ.ಎ ಪ್ರಥಮ ವರ್ಷದ ವಿದ್ಯಾರ್ಥಿಗಳ ಸ್ವಾಗತ ಲಿಂ. ಎಸ್.ಟಿ ಬುಳ್ಳಾ ಶರಣ ದಂಪತಿಗಳ ಮತ್ತು ಲಿಂ.ಸಿದ್ರಾಮಪ್ಪ ಶೆಟ್ಟರ ಶರಣ ದಂಪತಿಗಳ ಸ್ಮರಣಾರ್ಥ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಅಲ್ಲಮಪ್ರಭು ಅವರ ವಚನ ಒದುವ ಮೂಲಕ ಉದ್ಘಾಟಿಸಿ ಅಲ್ಲಮನ ಆಧ್ಯಾತ್ಮ ವಿಷಯದ ಕುರಿತು ಮಾತನಾಡಿದರು.

ವಚನಕಾರರಲ್ಲಿ ವೈವಿಧ್ಯವನ್ನು ಕಾಣುತ್ತೇವೆ. ಸಮಾಜ ಮುಖಿಯಾಗಿರುದಕ್ಕಿಂತ ಹೆಚ್ಚು ಅಂತರ್ಮುಖಿಯಾಗಿದ್ದವರು ಅಲ್ಲಮಪ್ರಭುಗಳು. ಅಲ್ಲಮನ ಆಧ್ಯಾತ್ಮವು ಪರಿಸರದಲ್ಲಿ ಭಿನ್ನವಾಗಿದೆ. ಮನಸ್ಸಿನ ಪ್ರಕೃತಿ ಹಲವು ವೇಷ ರೂಪಗಳನ್ನು ಹೊಂದಿದೆ. ಆಧ್ಯಾತ್ಮಿಕ ತೃಷೆ ಪಾರಲೌಕಿಕ ಅಲ್ಲ. ಆಧ್ಯಾತ್ಮಿಕತೆ ಕಣ್ಣೊಳಗಿನ ರೂಪವಾಗಿದೆ ಎಂದರು.

ಕನ್ನಡ ವಿಭಾಗದ ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಜವಾಬ್ದಾರಿ ಇದೆ. ಮಾತನಾಡುವುದರಿಂದ ಸುಖ ದುಃಖಕ್ಕೆ ಗುರಿಯಾಗುತ್ತಾನೆ. ಆನಂದದ ಅಭಿವ್ಯಕ್ತಿಯಲ್ಲೇ ಸಂತೋಷ ಕಾಣುತ್ತದೆ. ಅನುಭವ, ಅನುಭೂತಿಯನ್ನು ಅನುಭವಿಸಿದಾಗ ತಿಳಿಯಲು ಸಾಧ್ಯ. ವಿದ್ಯಾರ್ಥಿಗಳು ಆಸಕ್ತಿಯಿಂದ ಅಧ್ಯಯನದಲ್ಲಿ ಪಾಲ್ಗೊಳ್ಳಿ ಎಂದರು.

ಬಾಗಲಕೋಟೆಯ ಬಿವಿವಿ ಸಂಘದ ಬಸವೇಶ್ವರ ಕಲಾ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಧಾರವಾಡದ ಹಿರಿಯ ವಿದ್ವಾಂಸ ಡಾ. ಶ್ರೀಧರ್ ಹೆಗಡೆ ಭದ್ರನ್ ಮಾತನಾಡಿದರು.

ಕೊಟ್ಟ ಕುದುರೆ ಏರದವನು ಶೂರನೂ, ಧೀರನೂ ಅಲ್ಲ

ಅಲ್ಲಮಪ್ರಭು ಅವರು ಹೊಸ ಸಂಗತಿಗಳನ್ನು ಕಟ್ಟಿಕೊಟ್ಟಿದ್ದಾರೆ. ಅದ್ವೈತ ಎಂಬುದು ಇವರ ಕಾಲಘಟ್ಟದಲ್ಲಿ ಚರ್ಚೆಗೆ ಗುರಿಯಾಗಿತ್ತು. ಅಲ್ಲಮಪ್ರಭು ತೀವ್ರ ಸ್ವರೂಪದ ಕವಿಯಾಗಿದ್ದರು. ಎರಡು ಅನ್ನುವುದನ್ನು ಅಳಿದು ಏಕತ್ವವನ್ನು ಗುರುತಿಸುವುದು. ವಾಕ್ ಆಡಂಬರಗಳಾಗಿರದೆ ಅದ್ವೈತದ ನೆಲೆಯನ್ನು ತಲುಪಬೇಕು. ಅಲ್ಲಮಪ್ರಭು ಹೇಳಿದ ಮಾತು, ಕೊಟ್ಟ ಕುದರೆಯನ್ನು ಏರದವನು ಶೂರನು, ಧೀರನು ಅಲ್ಲ ಎಂಬ ಮಾತು ನಿಜಕ್ಕೂ ಮಾರ್ಮಿಕವಾಗಿದೆ ಎಂದು ಧಾರವಾಡದ ಹಿರಿಯ ವಿದ್ವಾಂಸ ಡಾ. ಶ್ರೀಧರ್ ಹೆಗಡೆ ಭದ್ರನ್ ಹೇಳಿದರು.

ಕಾಲೇಜಿನ ಪ್ರಾಚಾರ್ಯ ಎಸ್.ಆರ್. ಮುಗನೂರಮಠ ಮಾತನಾಡಿ, ಧರ್ಮದ ನೆಲೆಗಟ್ಟಿನಲ್ಲಿ ವಚನಗಳನ್ನು ನೋಡಬಾರದು. ಹೊಸ ಆಲೋಚನೆಗಳಿಂದ ತಿಳಿದರೆ ಮನಸ್ಸುಗಳನ್ನು ಸ್ಪರ್ಶ ಮಾಡುವಂತವು ವಚನಗಳು. ಅಲ್ಲಮನ ಚರಿತ್ರೆ ತಿಳಿಯಲು ಸಂಸ್ಕೃತವಂತವರಾಗಬೇಕು ಧ್ಯಾನದಿಂದ ಆಧ್ಯಾತ್ಮದಲ್ಲಿ ಸಾಧನೆ ಮಾಡಬಹುದು. ಸ್ನಾತಕೋತ್ತರ ವಿದ್ಯಾರ್ಥಿಗಳು ಆಳವಾಗಿ ತಿಳಿದುಕೊಳ್ಳಬೇಕು. ಸಮಾಜದಲ್ಲಿ ಉತ್ತಮ ನಾಯಕರಾಗಬೇಕು. ಪ್ರತಿಯೊಬ್ಬರನ್ನು ಗೌರವಿಸಿ, ಎಲ್ಲರಲ್ಲಿಯೂ ಪ್ರಾಮಾಣಿಕತೆಯಿಂದ ಇರಬೇಕು ಎಂದರು.

ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕ ಎ.ಎಸ್.ಪಾವಟೆ ಪ್ರಾಸ್ತವಿಕವಾಗಿ ಮಾತನಾಡಿದರು. ಚಂದ್ರಶೇಖರ, ಶೆಟ್ಟರ್, ಅಶೋಕ ಬುಳ್ಳಾ, ಎಚ್.ಎಸ್.ಶೆಟ್ಟರ, ಡಾ. ವೀಣಾ ಕಲ್ಮಠ, ಡಾ. ಬಿ.ಪಿ.ಕುಂಬಾರ, ಶರಣಬಸವ ಪಲ್ಲೇದ, ಬಸವರಾಜ ಮುಕುಪ್ಪಿ ಇತರರಿದ್ದರು.

ಕನ್ನಡ ಸಾಹಿತ್ಯಕ್ಕೆ ವಿಶಿಷ್ಟ ಸ್ಥಾನಮಾನವಿದೆ: ಬಿದರಿ

ರಬಕವಿ-ಬನಹಟ್ಟಿ: ಕನ್ನಡ ಸಾಹಿತ್ಯಕ್ಕೆ ರಬಕವಿ-ಬನಹಟ್ಟಿ ತಾಲೂಕಿಗೆ ವಿಶಿಷ್ಟ ಸ್ಥಾನವಿದೆ. ಮಾನವ ಬದುಕಿನಲ್ಲಿ ಬಲದವಾದ ಆತ್ಮಬಲವನ್ನು ಹೆಚ್ಚಿಸುವ ಕಾರ್ಯದಲ್ಲಿ ವಿಭಿನ್ನ ಸಾಹಿತ್ಯಗಳು ಅರ್ಥಪೂರ್ಣವಾದ ಕೊಡುಗೆಗಳನ್ನು ನೀಡಿವೆ. ಅದರಲ್ಲಿ ರಬಕವಿ-ಬನಹಟ್ಟಿ ತಾಲೂಕಿನ ಸಾಹಿತಿಗಳದ್ದೂ ಸಿಂಹಪಾಲುವೆಂದು ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ, ವೀರಶೈವ ಮಹಾಸಭಾ ರಾಜ್ಯಾಧ್ಯಕ್ಷ ಡಾ. ಶಂಕರ ಬಿದರಿ ಹೇಳಿದರು.

ಬನಹಟ್ಟಿಯಲ್ಲಿ ಬಸವ ಸಂಪದ ಬಳಗದಿಂದ ಜರುಗಿದ ಸಾಹಿತ್ಯ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ವ್ಯಕ್ತಿತ್ವವು ಆದರ್ಶ, ಸದಾಚಾರ, ನಿಷ್ಠೆ, ದಕ್ಷತೆ, ಪ್ರಾಮಾಣಿಕತೆ, ಆತ್ಮಬಲಗಳ ಸಂಗಮವಾಗಿದೆ. ಸಾಹಿತ್ಯಗಳ ಅಧ್ಯಯನ ಹಾಗು ಅನುಕರಣೆಯಿಂದ ಜೀವನ ಮೌಲ್ಯ ಹೆಚ್ಚಿಸಿಕೊಳ್ಳಬಹುದಾಗಿದೆ. ಅವು ಆದರ್ಶ ವ್ಯಕ್ತಿತ್ವ ರೂಪಿಸಿಕೊಳ್ಳಲು ಪ್ರೇರಣೆಯೆಂದರು.

ಹಿರಿಯ ಸಾಹಿತಿ ಮಲ್ಲಿಕಾರ್ಜುನ ಹುಲಗಬಾಳಿ ಮಾತನಾಡಿ, ಸಾಹಿತ್ಯವು ಸಾಮಾಜಿಕ ಪ್ರಾಣಿಗಳಿಗೆ ಸಂಸ್ಕಾರ ನೀಡಿ ಮಾನವರಾಗಿ ಮಾಡಿದೆ.

ಇಂತಹ ಅಮೂಲ್ಯವಾದ ಸಾಹಿತ್ಯವನ್ನು ಜನರಿಗೆ ತಲುಪಿಸುವ ಕಾರ್ಯ ನಡೆಯಬೇಕೆಂದರು.

ಇದೇ ಸಂದರ್ಭದಲ್ಲಿ ಹಿರಿಯ ಸಾಹಿತಿ ಸಿದ್ದರಾಜ ಪೂಜಾರಿ, ಜಯವಂತ ಕಾಡದೇವರ, ಶಂಕರ ಜುಂಜಪ್ಪನವರ, ಸಿದ್ರಾಮಪ್ಪ ಸವದತ್ತಿ, ಸೋಮಶೇಖರ ಕೊಟ್ರಶೆಟ್ಟಿ, ಕಿರಣ ಆಳಗಿ, ಮಲ್ಲಣ್ಣ ಕಕಮರಿ, ಯಶವಂತ ವಾಜಂತ್ರಿ, ಸಿದ್ಧರಾಮ ಹಾವಿನಾಳ, ಚಿದಾನಂದ ಸೊಲ್ಲಾಪೂರ, ಆನಂದ ಕುಲಗೋಡ, ಮಹಾಶಾಂತ ಶೆಟ್ಟಿ, ಮಧುಕೇಶ್ವರ ಬೆಳಗಲಿ, ಆನಂದ ಕಾಡದೇವರ, ಆನಂದ ಕುಳ್ಳಿ, ವಿಶ್ವಜ ಕಾಡದೇವರ, ಬಸಯ್ಯ ವಸ್ತ್ರದ, ಜಿ.ಎಸ್. ವಡಗಾಂವಿ, ನೀಲಕಂಠ ದಾತಾರ, ಶರತ ಜಂಬಗಿ ಇದ್ದರು.

ಬನಹಟ್ಟಿಯಲ್ಲಿ ಜರುಗಿದ ಸಾಹಿತ್ಯ ಕಾರ್ಯಕ್ರಮದಲ್ಲಿ ಡಾ. ಶಂಕರ್ ಬಿದರಿ ಮಾತನಾಡಿದರು.

ಸತ್ಯಾತ್ಮತೀರ್ಥರ ಪೂಜೆ ಸಂಪನ್ನ

ಬಾಗಲಕೋಟೆ: ಉತ್ತರಾದಿಮಠಾಧೀಶ ಸತ್ಯಾತ್ಮತೀರ್ಥ ಶ್ರೀಪಾದಂಗಳವರು ಬಾಗಲಕೋಟೆಯಲ್ಲಿ ಕೈಗೊಂಡಿದ್ದ ಐದು ದಿನಗಳ ಕಾರ್ಯಕ್ರಮ ಶುಕ್ರವಾರ ಸಂಪನ್ನಗೊಂಡಿದೆ.

ಶ್ರೀಗಳ ಸುವರ್ಣಮಹೋತ್ಸವದ ಪ್ರಯುಕ್ತ ಬಾಗಲಕೋಟೆ ದಿಗ್ವಿಜಯ ಕಾರ್ಯಕ್ರಮ ಹಮ್ಮಿಕೊಂಡು ಐದು ದಿನಗಳ ಕಾಲ ಶ್ರೀಮೂಲರಾಮ ದೇವರು, ದಿಗ್ವಿಜಯರಾಮದೇವರ ಪೂಜೆ, ಪ್ರವಚನ, ತಪ್ತಮುದ್ರಧಾರಣೆ, ತೀರ್ಥಪ್ರಸಾದದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ನಿತ್ಯ ಸಹಸ್ರಾರು ಭಕ್ತರು ಶ್ರೀಗಳಿಂದ ಆಶೀರ್ವಾದ ಪಡೆದು ಪುನಿತರಾದರು.

ವಿದ್ಯಾಗಿರಿ ವಿಪ್ರಮಠ, ನವನಗರದ ಶ್ರೀಉತ್ತರಾದಿಮಠ, ಗದ್ದನಕೇರಿ, ಬಾಗಲಕೋಟೆಯ ಶ್ರೀಕೊತ್ತಲೇಶ ದೇವಸ್ಥಾನವೂ ಸೇರಿದಂತೆ ವಿವಿಧೆ ಶ್ರೀಗಳ ಸಾಮೂಹಿಕ ಪಾದಪೂಜೆಗೆ ಅವಕಾಶ ಮಾಡಿಕೊಡಲಾಗಿತ್ತು. ಮೊದಲ ದಿನ ಶ್ರೀರಾಮದೇವರ ಯಾತ್ರೆ ಕೈಗೊಂಡ ನಂತರ ಶ್ರೀಮಠದಲ್ಲಿ ಪ್ರವಚನ ಮರುದಿನದಿಂದ ಬವಿವ ಸಂಘದ ಬಿಇಸಿ ಸಭಾಂಗಣದಲ್ಲಿ ಶ್ರೀಗಳ ಪ್ರವಚನ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಶ್ರೀಗಳಿಗೆ ಬಾಗಲಕೋಟೆ ಭಕ್ತವೃಂದದಿಂದ ದೇಣಿಗೆಯನ್ನು ಸಂಗ್ರಹಿಸಿ ಸಮರ್ಪಿಸಲಾಯಿತು.

ಡಿ.26ರ ಗುರುವಾರ ಏಕಾದಶಿ ಹಿನ್ನೆಲೆಯಲ್ಲಿ ರಾಮದೇವರ ಪೂಜೆ, ತಪ್ತಮುದ್ರಧಾರಣೆ, ಸಂಜೆ ಪ್ರವಚನದ ನಂತರ ರಾತ್ರ ಪಂ. ಅನಂತ ಕುಲಕರ್ಣಿ ನೇತೃತ್ವದಲ್ಲಿ ನವನಗರದ ೯ಮಠದಲ್ಲಿ ಅಖಂಡ ಭಜನೆ ಜರುಗಿತು. ಶ್ರೀಗಳು ಉಪಸ್ಥಿತರಿದ್ದು, ದಾಸರ ಪದಗಳಿಗೆ ತಲೆದೂಗಿದರು. ನಂತರ ನಸುಕಿನ ಜಾವ 5 ಗಂಟೆಗೆ ಮೂಲರಾಮದೇವರ ಪೂಜೆ ಆರಂಭಗೊಂಡರು ದ್ವಾದಶಿ ಪ್ರಯುಕ್ತ ಬೆಳಗ್ಗೆಯೇ ತೀರ್ಥ ಪ್ರಸಾದದ ವ್ಯವಸ್ಥೆ ಕಲ್ಪಿಸಲಾಗಿತ್ತು. ನಂತರ ಶ್ರೀಗಳು ಕಮತಗಿ, ಅಮಿನಗಡ ಹಾಗೂ ಹುನಗುಂದದಲ್ಲಿ ಭಕ್ತರನ್ನು ಆಶೀರ್ವದಿಸಿ ಮೈಸೂರಿನ ಕಡೆಗೆ ಪ್ರಯಾಣ ಬೆಳೆಸಿದರು.

ಪಂ. ರಘೋತ್ತಮಾಚಾರ್ಯ ನಾಗಸಂಪಿಗೆ, ಪಂ.ಭೀಮಸೇನಾಚಾರ್ಯ ಪಾಂಡುರಂಗಿ, ಪಂ.ಬಿಂದುಮಾಧವಾಚಾರ್ಯ ನಾಗಸಂಪಿಗೆ, ಪಂಡಿತರು, ಸಮಾಜದ ಮುಖಂಡರ ನೇತೃತ್ವದಲ್ಲಿ ಐದು ದಿನಗಳ ಅದ್ದೂರಿ ಕಾರ್ಯಕ್ರಮ ಜರುಗಿ ಸಂಪನ್ನಗೊಂಡಿತು.

ಬಾಗಲಕೋಟೆಯ ನವನಗರದ ಉತ್ತರಾದಿಮಠದಲ್ಲಿ ಶ್ರೀಸತ್ಯಾತ್ಮತೀರ್ಥ ಶ್ರೀಪಾದಂಗಳವರು ಮೂಲರಾಮದೇವರ ಪೂಜೆ ನೆರವೇರಿಸಿದರು.

ಬಿಪಿಸಿಎಲ್ ಮುಂಬೈ ತಂಡಕ್ಕೆ ಪ್ರಥಮ ಸ್ಥಾನ

ಬೀಳಗಿ: ತಾಲೂಕಿನ ತೆಗ್ಗಿ ಗ್ರಾಮದಲ್ಲಿ ಸ್ಥಳೀಯ ಸೋಮಲಿಂಗೇಶ್ವರ ಸ್ಪೋರ್ಟ್ಸ್ ಕ್ಲಬ್ ಹಾಗೂ ಬಾಗಲಕೋಟೆ ಜಿಲ್ಲಾ ಅಮೆಚೂರ ಕಬಡ್ಡಿ ಅಸೋಸಿಯೇಷನ್ ಇವರ ಸಹಯೋಗದಲ್ಲಿ ಸೋಮಲಿಂಗೇಶ್ವರ ಜಾತ್ರಾ ಮಹೋತ್ಸವದ ನಿಮಿತ್ಯ ಜರುಗಿದ ಅಂತರ ರಾಜ್ಯ ಮಟ್ಟದ ಅಖಿಲ ಭಾರತ ಎ ಗ್ರೇಡ್ ಅವ್ಹಾನಿತ ಪುರಷರ ಪ್ರೊ ಕಬ್ಬಡ್ಡಿಯ ಪಂದ್ಯಾವಳಿಯಲ್ಲಿ ಅಡನ್ಸ ಪ್ಯಾಕ್ಟ್ರಿ ದೆಹಲಿ ತಂಡವನ್ನು 4 ಅಂಕಗಳಿಂದ ಸೋಲಿಸಿ ಬಿಪಿಸಿಎಲ್ ಮುಂಬೈ ತಂಡ ಪ್ರಥಮ ಸ್ಥಾನಗಳಿಸಿ ವಿಜಯಸಾದಿಸಿದೆ.

20 ಕ್ಕು ಅಧಿಕ ರಾಷ್ಟ್ರಮಟ್ಟದ ತಂಡಗಳು ಭಾಗವಹಿಸಿದವು.ಪ್ರೊ ಕಬಡ್ಡಿಯ ಬೆಂಗಳೂರು ಬುಲ್ಸ್, ಯು ಮುಂಬೈ, ಬೆಂಗಾಲ್ ವಾರಿಯರ್ಸ್ ,ಯುಪಿ ಯೋಧ ಸೇರಿ ಅನೇಕ ತಂಡದ ಆಟಗಾರರು ಪಾಲ್ಗೊಂಡಿದ್ದರು. ಕೊನೆಯ ಕ್ಷಣದವರೆಗೂ ಭಾರಿ ಪೈಪೋಟಿ ನೀಡಿದ ಆಡನ್ಸ್ ಫ್ಯಾಕ್ಟ್ರಿ ದೆಹಲಿ ದ್ವಿತೀಯ ಸ್ಥಾನವನ್ನು ಪಡೆದರೆ, ಆರ್ ಡಬ್ಲ್ಯೂ ಎಫ್ ಬೆಂಗಳೂರು ತೃತೀಯ ಸ್ಥಾನವನ್ನು ಪಡೆದರೆ, ಸೌತ್ ಸೆಂಟ್ರಲ್ ರೈಲ್ವೆ ಸಿಕಂದರಾಬಾದ್ ನಾಲ್ಕನೇ ಸ್ಥಾನವನ್ನು ಪಡೆದುಕೊಂಡಿತು. ವಿಜೇತ ಪ್ರಥಮ ತಂಡಕ್ಕೆ 2 ಲಕ್ಷ 1 ,ದ್ವಿತೀಯ 1.51 ಲಕ್ಷ ತೃತೀಯ 1.1 ಲಕ್ಷ ಚತುರ್ಥ ಬಹುಮಾನ 1.1 ಲಕ್ಷ ನಗದು ಬಹುಮಾನ ಹಾಗೂ ಟ್ರೋಪಿ ನೀಡಿ ಗೌರವಿಸಲಾಯಿತು.

ಈ ಪಂದ್ಯಾವಳಿಯ ಉತ್ತಮ ದಾಳಿಗಾರ ಶುಭಂ ಬಿಪಿಸಿಎಲ್ ಮುಂಬೈ. ಉತ್ತಮ ಹಿಡಿತಗಾರ ಆರ್ ಡಬ್ಲ್ಯೂ ಎಫ್ ಬೆಂಗಳೂರು ತಂಡದ ಅಜಿತ್, ಬೆಸ್ಟ್ ಆಲ್ ರೌಂಡರ ಆಡೆನ್ಸ್ ಫ್ಯಾಕ್ಟರಿ ದೆಹಲಿಯ ಅಂಕಿತ್ ವೈಯಕ್ತಿಕ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಮೂರು ದಿನಗಳಿಂದ ತೆಗ್ಗಿ ಗ್ರಾಮದಲ್ಲಿ ಆಯೋಜಿಸಿದ ಪಂದ್ಯಾವಳಿ ವೀಕ್ಷಣೆಗೆ ವಿಜಯಪುರ ಬಾಗಲಕೋಟೆ ಬೆಳಗಾವಿಗೆ ಸೇರಿದಂತೆ ವಿವಿಧ ಭಾಗದ ಅನೇಕ ಕ್ರೀಡಾಪಟುಗಳು ಹಾಗೂ ಕ್ರೀಡಾ ಅಭಿಮಾನಿಗಳು ಆಗಮಿಸಿದ್ದರು ಪ್ರೇಕ್ಷಕರಿಗೂ ಪಂದ್ಯಾವಳಿ ವೀಕ್ಷಣೆ ಮಾಡುವುದಕ್ಕೆ ಗ್ಯಾಲರಿ ವ್ಯವಸ್ಥೆಯನ್ನು ಮಾಡಲಾಗಿತ್ತು. ಈ ಸಂದರ್ಭದಲ್ಲಿ ರಮೇಶ್ ಜಕ್ಕರೆಡ್ಡಿ, ಕೃಷ್ಣ ಗೌಡ ಪಾಟೀಲ್,ಸೋಮನಗೌಡ ರಾ ಪಾಟೀಲ, ರವಿ ಮರಡಿ,ಸೋಮು ತ ಕೂಗಟಿ,ವಿಠ್ಠಲ ಸೋಮೇಟಿ, ರೆಫ್ರಿ ಬೋರ್ಡ್ ಚೇರ್ಮನ್ ಷಣ್ಮುಗಂ,ಎಸ್ ವಾಯ್ ಕಿರಸೂರ,ಸೋಮಲಿಂಗೇಶ್ವರ ಸ್ಪೋರ್ಟ್ಸ್ ಕ್ಲಬ್ ಸದಸ್ಯರು ಉಪಸ್ಥಿತರಿದ್ದರು.

ಬೀಳಗಿ ತಾಲೂಕಿನ ತೆಗ್ಗಿ ಗ್ರಾಮದಲ್ಲಿ ಜರುಗಿಂದ ಅಂತರರಾಜ್ಯ ಮಟ್ಟದ ಕಬಡ್ಡಿ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ ಪಡೆದ ಬಿಪಿಸಿಎಲ್ ಮುಂಬೈ ತಂಡಕ್ಕೆ ಎರಡು ಲಕ್ಷ ನಗದು ಬಹುಮಾನ ವಿತರಣೆ ಹಾಗೂ ಟ್ರೋಫಿ ನೀಡಿ ಗ್ರಾಮಸ್ಥರು ಗೌರವಿಸಿದರು.

ತೆಗ್ಗಿ ಗ್ರಾಮಸ್ಥರು ತಮ್ಮ ಗ್ರಾಮದಲ್ಲಿ ಸೋಮಲಿಂಗೇಶ್ವರ ಜಾತ್ರೆಯ ನೆಪವಾಗಿ ಇಟ್ಟುಕೊಂಡು ಅಂತರ ರಾಜ್ಯ ಮಟ್ಟದ ಮಟ್ಟದ ಪ್ರೋ ಕಬಡ್ಡಿ ಪಂದ್ಯಾವಳಿಯ ವ್ಯವಸ್ಥೆಯನ್ನು ಅಂತರರಾಷ್ಟ್ರೀಯ ಮಟ್ಟದ ವ್ಯವಸ್ಥೆಗಿಂತ ಅಚ್ಚುಕಟ್ಟಾಗಿ ಮಾಡಿ ಅಂತರರಾಷ್ಟ್ರೀಯ ಮಟ್ಟದ ಕಬಡ್ಡಿ ಕ್ರೀಡಾ ಪಟುಗಳನ್ನು ಕರೆಯಿಸಿ ಅದ್ದೂರಿಯ ಸ್ವಾಗತ ನೀಡುವ ಮೂಲಕ ಗ್ರಾಮೀಣ ಕ್ರೀಡೆಯನ್ನು ಉಳಿಸುವಲ್ಲಿ ಪ್ರಯತ್ನಿಸುತ್ತಿರುವ ಕಾರ್ಯ ಶ್ಲಾಘನೀಯವಾದುದು ಈ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದು ನನಗೆ ತುಂಬಾ ಖುಷಿ ತಂದಿದೆ.

- ಇಶಾಂಕ್ ದೇವಾಡಿಗ, ಕಬಡ್ಡಿ ಆಟಗಾರ

ಹೂಲಗೇರಿ:ಪ್ರಕೃತಿ ಪರೀಕ್ಷಣಾ ಅಭಿಯಾನ

ಇಳಕಲ್ಲ: ಉತ್ತರ ಕರ್ನಾಟಕದಲ್ಲಿ ಪ್ರತಿಷ್ಠಿತಾ ವಿದ್ಯಾಸಂಸ್ಥೆಯಲ್ಲಿ ಒಂದಾದ ಶ್ರೀ ವಿಜಯ ಮಹಾಂತೇಶ ವಿದ್ಯಾವರ್ಧಕ ಸಂಘದ ಅಡಿಯಲ್ಲಿ ಭಾರತ ಸರಕಾರದ ಆಯುಷ್ಯ ಸಚಿವಾಲಯ ಎನ್‌ಸಿಆಯ್‌ಸಿಎಂ ಅಡಿಯಲ್ಲಿ ದೇಶದ ಪ್ರಕೃತಿ ಪರೀಕ್ಷಣಾ ಅಭಿಯಾನವನ್ನು ಮಹಾವಿದ್ಯಾಲಯದ ದತ್ತು ಗ್ರಾಮದ ಹೂಲಗೇರಿ ಗ್ರಾಮದಲ್ಲಿ ಆಯೋಜಿಸಲಾಗಿತ್ತು.

ಕಾರ್ಯಾಕ್ರಮದಲ್ಲಿ ವಿಶ್ವ ಏಡ್ಸ್ ದಿನಾಚರಣೆಯ ಅರಿವಿನ ಜಾಥಾವನ್ನು ಗ್ರಾಮದ ಪಂಚಾಯತಿ ಅಧ್ಯಕ್ಷರಾದ ಕವಿತಾ ರವಿ ಚವ್ಹಾಣ ಹಾಗೂ ಇನ್ನುಳಿದ ಸದಸ್ಯರು, ಮಹಾವಿದ್ಯಾಲಯದ ಉಪಪ್ರಾಚಾರ್ಯ ಡಾ. ಪ್ರಕಾಶ ತಾರಿವಾಳ, ಆಸ್ಪತ್ರೆ ಆಡಳಿತಾಧಿಕಾರಿ ಡಾ. ಸಿದ್ಧಲಿಂಗಮೂರ್ತಿ, ಪ್ರಕೃತಿ ಪರೀಕ್ಷಣಾ ಅಭಿಯಾನದ ಸಂಯೋಜಕ ಡಾ. ಎನ್. ಎಮ್. ಬಿಜಾಪೂರ, ಶಾಲ್ಯಕ್ಯ ತಂತ್ರ ವಿಭಾಗದ ಡಾ. ವಿನೋದ ಜೆ. ಬಿ. , ಕಾಯಚಿಕಿತ್ಸ ವಿಭಾಗದ ವೈದ್ಯ ಡಾ. ಪ್ರವೀಣ ಸಜ್ಜನ, ಶಲ್ಯ ತಂತ್ರದ ವಿಭಾಗದ ವೈದ್ಯ ಡಾ. ಹೊರಗಿನಮಠ ಕಾರ್ಯಕ್ರಮದಲ್ಲಿ ಹಾಜರಿದ್ದು ಪ್ರಕೃತಿ ಪರೀಕ್ಷದ ಮಹತ್ವವನ್ನು ನೀಡುವದರೊಂದಿಗೆ ದತ್ತು ಗ್ರಾಮದಲ್ಲಿ ತೃತೀಯ ವರ್ಷದ ವಿದ್ಯಾರ್ಥಿಗಳೊಂದಿಗೆ ಮನೆ-ಮನೆಗೆ ತೆರಳಿ ಆರೋಗ್ಯ ಸರ್ವೆಯನ್ನು ಮಾಡಿದರು.

ಗ್ರಾಮದ ಶ್ರೀ ಗುಂಡು ಮಲ್ಲೇಶ್ವರ ಶಾಲೆಯ ವಿದ್ಯಾರ್ಥಿಗಳಿಗೆ ವಿಶ್ವಧ್ಯಾನ ದಿನಾಚರಣೆ ಅಂಗವಾಗಿ ಡಾ. ರಮ್ಯ ಬದಾಮಿ, ಡಾ. ಪ್ರಶಾಂತ ಕಲ್ಯಾಣಶೆಟ್ಟಿ ಇವರ ನೇತೃತ್ವದಲ್ಲಿ ಯೋಗ ಮತ್ತು ಧ್ಯಾನದ ಅರಿವುವನ್ನು ನೀಡಿ, ನಂತರ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಹಮ್ಮಿಕೊಳ್ಳಲಾಯಿತು. ತಪಾಸಣಾ ಶಿಬಿರದಲ್ಲಿ ಶಾಲ್ಯಕ್ಯ ತಂತ್ರ ವಿಭಾಗದ ಡಾ. ವಿನೋದ ಜಾಧವ, ಡಾ. ಲಕ್ಷ್ಮೀ ಮೈತ್ರಿ, ಡಾ. ದ್ರಾಕ್ಷಯಿಣಿ ಹಿರೇಮಠ, ಡಾ. ಅವಿನಾಶ ಗುಳೇದ, ಡಾ. ಸಿ. ಎಂ. ಬುದ್ನಿ, ಡಾ. ಸುಪ್ರೀಯಾ ಗುಡ್ಡದ ಹಾಗೂ ಇನ್ನಿತರ ತಜ್ಞವೈದ್ಯರು ಭಾಗವಹಿಸಿದ್ದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಗ್ರಾಮದ ನೀಲಾಂಬಿಕಾ ಅಶೋಕ ಕುಂಟಗೌಡ್ರರವರು ವಿದ್ಯಾರ್ಥಿಗಳನ್ನುದ್ದೇಶಿಸಿ ಭಾವಿ ವೈದ್ಯರು ಶಿಸ್ತು ಮತ್ತು ಸಂಯಮದಿಂದ ನಿಶ್ವಾರ್ಥ ಸೇವೆ ಮಾಡಬೇಕು ಎಂದು ಹೇಳಿದರು.

ಮುಖ್ಯ ಅಥಿತಿಯಾಗಿ ಶ್ರೀ ಬಸವರಾಜ ಪಿ. ಮಾಚಿ ಇವರು ವಹಿಸಿದ್ದರು. ವಿದ್ಯಾರ್ಥಿನಿಯರಾದ ಶ್ರೀನಿಧಿ, ಹಾಗೂ ಸಹನಾ ಇವರು ಪ್ರಾರ್ಥಿಸಿದರು. ಶ್ರವಣಾ ವಂದಿಸಿದರು. ಉಮಾಶ್ರೀ ಕಾರ್ಯಮವನ್ನು ನಿರೂಪಿಸಿದರು.

ವಿಶ್ವ ಏಡ್ಸ್ ದಿನಾಚರಣೆಯ ಅರಿವಿನ ಜಾಥಾ ನಡೆಸಿ ಉಚಿತ ಆರೋಗ್ಯ ತಪಾಸಣೆ ನಡೆಸಿದರು.

ವಾಜಪೇಯಿ ಅಪ್ರತಿಮ ನಾಯಕ

ರಬಕವಿ-ಬನಹಟ್ಟಿ: ದೇಶದ ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ದೇಶ ಕಂಡ ಅಪ್ರತಿಮ ನಾಯಕ ಮತ್ತು ಭಾರತ ದೇಶದ ಅಭಿವೃದ್ಧಿಯ ಹರಿಕಾರರು ಎಂದು ಶಾಸಕ ಸಿದ್ದು ಸವದಿ ಹೇಳಿದರು.

ಬನಹಟ್ಟಿಯ ಕೆಎಚ್‌ಡಿಸಿ ಕಾಲನಿಯಲ್ಲಿ ವಾಜಪೇಯಿ ಜನ್ಮದಿನಾಚರಣೆ ನಿಮಿತ್ತ ನಡೆದ ಸಮಾರಂಭದಲ್ಲಿ ವಾಜಪೇಯಿ ಭಾವಚಿತ್ರಕ್ಕೆ ಪೂಜೆ ಸಲ್ಲಿಸಿ ಮಾತನಾಡಿದರು. ಪ್ರಮಾಣಿಕವಾಗಿ ಪಕ್ಷ ಸಂಘಟನೆ ಮಾಡುವುದು ಕೂಡಾ ನಮ್ಮ ರಾಷ್ಟ್ರದ ಅಳಿಲು ಸೇವೆ ಮಾಡಿದಂತೆ ಪಕ್ಷದ ಬಗ್ಗೆ ಅಭಿಮಾನವನ್ನು ಬೆಳೆಸಿಕೊಂಡು. ಪಕ್ಷದ ಬೆಳವಣಿಗೆಗೆ ಕೆಲಸ ಮಾಡಿ. ಹಿರಿಯರ ಆದರ್ಶಗಳನ್ನು ಪಾಲಿಸಿ, ಅವರು ಹಾಕಿ ಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯಿರಿ. ಪಕ್ಷ ಸಂಘಟನೆಗೆ ತಾವೆಲ್ಲರೂ ಕಂಕಣ ಬದ್ದರಾಗಿರಿ ಎಂದರು.

ಇಂದಿನ ಬಿಜೆಪಿ ಕಾರ್ಯಕರ್ತರಿಗೆ ವಾಜಪೇಯಿ ಅವರ ತತ್ವ, ಆದರ್ಶಗಳು ಮಾದರಿಯಾಗಬೇಕು. ರಸ್ತೆಗಳ ಅಭಿವೃದ್ಧಿಯಿಂದ ದೇಶದ ಪ್ರಗತಿ ಸಾಧ್ಯ ಎಂಬುದನ್ನು ತಿಳಿದುಕೊಂಡು ದೇಶದ ರಸ್ತೆಗಳನ್ನು ಅಭಿವೃದ್ಧಿಗೊಳಿಸಿದ ಕೀರ್ತಿ ಶ್ರೇಯಸ್ಸು ವಾಜಪೇಯಿ ಅವರದು. ಅದೇ ರೀತಿಯಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯನ್ನು ಸಾಧಿಸಿದ್ದರು ಎಂದು ಸವದಿ ತಿಳಿಸಿದರು.

ಶಿವಾನಂದ ಬುದ್ನಿ, ಅಶೋಕ ರಾವಳ, ವೀರಭದ್ರಪ್ಪ ಕುಂಚನೂರ, ಸುರೇಶ ಮಠದ, ನಾಗಯ್ಯ ಬಕ್ಕಯ್ಯಗೋಳ, ಹುಚ್ಚಪ್ಪ ಕಡ್ಲಿಮಟ್ಟಿ, ಮಹಾಂತೇಶ ಜವರೇ, ನವೀನ ಪೋರೆ, ಕಾಡಪ್ಪ ಮಳಲಿ, ರವಿ ಕೊರ್ತಿ, ರಾಜು ಹೂಗಾರ, ಶ್ರೀಶೈಲ ಬೀಳಗಿ, ಅಕ್ಷಯ ಗೆದ್ದಪ್ಪನವರ ಸೇರಿದಂತೆ ಅನೇಕರಿದ್ದರು.

ಬನಹಟ್ಟಿ ಕೆಎಚ್‌ಡಿಸಿ ಕಾಲನಿಯಲ್ಲಿ ಶಾಸಕ ಸಿದ್ದು ಸವದಿ ನೇತೃತ್ವದಲ್ಲಿ ಬಿಜೆಪಿ ಕಾರ್ಯಕರ್ತರು ವಾಜಪೇಯಿ ಜನ್ಮ ದಿನಾಚರಣೆ ಮಾಡಿದರು.

ಚಿಗಳಿ- ತಿರುಗಾಟ ಗ್ರಂಥ ಲೋಕಾರ್ಪಣೆ

ರಬಕವಿ-ಬನಹಟ್ಟಿ: ವರ್ತಮಾನದ ಅನುಭವವನ್ನು ಸೃಷ್ಟಿಸುವ ಸಾಹಿತ್ಯ ಎಷ್ಟೇ ಪ್ರಾಚೀನವಾದರೂ ಅದು ಸಮಕಾಲೀನವಾಗುತ್ತದೆ ಎಂದು ಹಿರಿಯ ಸಾಹಿತಿ ಎಂ.ಎನ್. ರಾಮನಾಥ ಹೇಳಿದರು. ನಗರದ ಬಸವೇಶ್ವರ(ಬಿದರಿ) ಸಮುದಾಯ ಭವನದಲ್ಲಿ ಬಸವ ಸಂಪದ ಬಳಗದಿಂದ ಜರುಗಿದ ಸಾಹಿತಿ ಮಲ್ಲಿಕಾರ್ಜುನ ಹುಲಗಬಾ ಳಿಯವರ 'ಚಿಗಳಿ ಹಾಗು 'ತಿರುಗಾಟ ಗ್ರಂಥ ಲೋಕಾರ್ಪಣೆ ಸಮಾರಂಭದ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಅವರು ಮಾತನಾಡಿದರು. ಹುಲಗಬಾಳಿಯವರು ಜ್ಞಾನ ಭಂಡಾರ ಹಾಗು ಆರೋಗ್ಯಕರ ಸಂವೇದನೆಗಳೊಂದಿಗೆ ಸಾಹಿತ್ಯದ ಕೃಷಿ ಮಾಡುತ್ತ ಸಮನ್ವಯ ಅನನ್ಯತೆಯನ್ನು ಬರಹ ಬದುಕಾಗಿಸಿಕೊಂಡವರು. ಇತ್ತೀಚಿನ ದಿನಗಳಲ್ಲಿ ಸಾಹಿತ್ಯದ ಗತಿ ಹಲವು ಆಯಾಮಗಳನ್ನು ಪಡೆದುಕೊಂಡಿದ್ದು, ಮೊಬೈಲ್ ವಾಟ್ಸಪ್ ಮಿಂಚಿನಂತೆ ಸಂಚರಿಸುತ್ತಿವೆ. ತಂತ್ರಜ್ಞಾನವನ್ನು ಸಾಹಿತ್ಯ ಬೆಳವಣಿಗೆಗೆ ಸಕಾರಾತ್ಮಕವಾಗಿ ಬಳಕೆ ಮಾಡಿಕೊಳ್ಳುವ ಅಗತ್ಯವಿದೆಯೆಂದರು. ವೀರಶೈವ ಮಹಾಸಭಾದ ರಾಜ್ಯಾಧ್ಯಕ್ಷ, ನಿವೃತ್ತ ಹಿರಿಯ ಪೊಲೀಸ್ ಅಧಿಕಾರಿ ಶಂಕರ ಬಿದರಿ ಮಾತನಾಡಿ, ಕಾಲ ಕಾಲಕ್ಕೆ ಸಾಹಿತ್ಯದ ಪ್ರಕಾರಗಳು ಬದಲಾಗಿರಬಹುದು. ಆಯಾ ಕಾಲದ ಸಂವೇದನೆಗಳನ್ನು ಸೃಜನ ಶೀಲಗೊಳಿಸುವದು ಸಾಹಿತಿಯ ಜವಾಬ್ದಾರಿ. ಹುಲಗಬಾಳಿಯವರು 74ನೇ ಇಳಿ ವಯಸ್ಸಿನಲ್ಲಿಯೂ ಸಾಹಿತ್ಯದೊಂದಿಗೆ ಬದುಕು ಸವೆಸುತ್ತ ಗ್ರಂಥಗಳನ್ನು ಹೊರ ತರುವಲ್ಲಿ ಯುವಕರಿಗೆ ಸ್ಫೂರ್ತಿಯಾಗಿದೆ ಎಂದರು. ಸಾಹಿತಿಗಳಾದ ಡಾ. ಲಲಿತಾ ಹೊಸಪ್ಯಾಟಿ ಹಾಗು ಶೀಲಾ ಅರಕಲಗೂಡರು 'ಚಿಗಳಿ ಹಾಗು 'ತಿರುಗಾಟ ಗ್ರಂಥ ಲೋಕರ್ಪಾಣೆ ಮಾಡಿದರು. ನ್ಯಾಯಾಧೀಶ ಜಿ.ಆರ್. ಶೆಟ್ಟರ, ಡಾ. ಎ.ಕೆ. ನಾಡಗೌಡ ಪಾಟೀಲ, ಸಿದ್ಧರಾಜ ಪೂಜಾರಿ, ಐ.ಆರ್. ಮಠಪತಿ, ಪಿ.ಎಂ. ಧೂಪದಾಳ, ಡಾ. ಉಮಾಶೇಖರ ಹಿರೇಮಠ ವೇದಿಕೆ ಮೇಲಿದ್ದರು.

ಕರ್ನಾಟಕ ಸರ್ಕಾರ
ಜಿಲ್ಲಾ ಪಂಚಾಯತ ಬಾಗಲಕೋಟ ತಾಲೂಕ ಪಂಚಾಯತ ರಬಕವಿ-ಬನಹಟ್ಟಿ
ಗ್ರಾಮ ಪಂಚಾಯತ ಗೊಲಬಾವಿ
ಇ-ಮೇಲ್ : rdprpdogolabavi@gmail.com
ಸಂ:ಗ್ರಾಪಂಗೋ/ಟೆಂಡರ/ 03/2024-25 ದಿನಾಂಕ:27/12/2024
ಇ-ಪ್ರೋಕ್ಯೂರಮೆಂಟ್ ದ್ವಿ-ಲಕೋಟೆ ಟೆಂಡರ ಪ್ರಕಟಣೆ
ಕೆಜಿ-1&2 ಬಿಡ್ ಡಾಕ್ಯೂಮೆಂಟ್
ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ಗ್ರಾಮ ಪಂಚಾಯತ ಗೊಲಬಾವಿ ಇವರು 2024-25ನೇ ಸಾಲಿನ MGNREGA ಯೋಜನೆ ಅಡಿ ಈ ಕಛೇರಿ ಟೆಂಡರ ಪ್ರಕಟಣೆ ಸಂಖ್ಯೆ/ ದಿನಾಂಕ: 27/12/2024 ರಂದು ಪ್ರಕಟವಾದ ಗೊಲಬಾವಿ ಗ್ರಾಮ ಪಂಚಾಯತ ವ್ಯಾಪ್ತಿಯಡಿ 3 ಕಾಮಗಾರಿಗಳ ರೂ.21.58 ಲಕ್ಷಗಳಿಗೆ ಸಾಮಗ್ರಿ ಸರಬರಾಜುದಾರರಿಗೆ ಇ-ಟೆಂಡರನ್ನು ಮರು ಟೆಂಡರ ಆಹ್ವಾನಿಸಿದ್ದು ಟೆಂಡರ ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ : www.kppp.karnataka.gov.in ನಲ್ಲಿ ಅಥವಾ ಸದರಿ ಕಛೇರಿ ಸಮಯದಲ್ಲಿ ಸದರಿ ಗ್ರಾಮ ಪಂಚಾಯತ ಗೊಲಬಾವಿ ಕಾರ್ಯಾಲಯಕ್ಕೆ ಬೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು
ಸಹಿ/- ಪಂಚಾಯತ ಅಭಿವೃದ್ಧಿ ಅಧಿಕಾರಿಗಳು
ಗ್ರಾಮ ಪಂಚಾಯತ ಗೊಲಬಾವಿ

ಬಾದಾಮಿ ಮತಕ್ಷೇತ್ರದ ಶಾಸಕ ಭೀಮಸೇನ ಚಿಮ್ಮನಕಟ್ಟಿ ಅವರ 42ನೇ ವರ್ಷದ ಹುಟ್ಟುಹಬ್ಬದ ಅಂಗವಾಗಿ ನಾಗರಾಳ ಎಸ್.ಪಿ. ಗ್ರಾಮದ ಸರಕಾರಿ ಮಾದರಿ ಪ್ರೌಢಶಾಲೆಯ ಸುಮಾರು 200 ಮಕ್ಕಳಿಗೆ ಪಂಚಗ್ಯಾರಂಟಿ ಯೋಜನೆಯ ತಾಲೂಕು ಸದಸ್ಯ ದ್ಯಾವಪ್ಪಮಾಗಿ ಅವರು ಹೋಳಿಗೆಯ ಊಟ ಉಣಬಡಿಸಿ, ಹುಟ್ಟು ಹಬ್ಬ ಆಚರಿಸಿದರು. ಗ್ರಾಪಂ ಅಧ್ಯಕ್ಷ ರಾಮಪ್ಪ ವಾಲೀಕಾರ, ಸದಸ್ಯರಾದ ಕರಿಯಪ್ಪ ನರಹಟ್ಟಿ, ಗ್ರಾಪಂ ಮಾಜಿ ಅಧ್ಯಕ್ಷ ಹಿರೇಕುರುಬರ ಹಾಗೂ ಶಾಲಾ ಶಿಕ್ಷಕರು ಇದ್ದರು.

ಮನಮೋಹನ್ ಸಿಂಗ್ ಕೊಡುಗೆ ಅಪಾರ

ಜಮಖಂಡಿ: ಪ್ರಭಾವಿ ನಾಯಕ ಆರ್ಥಿಕ ತಜ್ಞ ದೇಶದ ಆರ್ಥಿಕ ಸಚಿವರಾಗಿ ಪ್ರಧಾನಿಯಾಗಿದ್ದ ಮನಮೋಹನ್ ಸಿಂಗರು ಇನ್ನಿಲ್ಲ. ಅವರ ಕೊಡುಗೆ ಮಾತ್ರ ಅಪಾರವಾಗಿದೆ ಎಂದು ರೈತ ಮುಖಂಡ ಕಾಂಗ್ರೆಸ್ ನಾಯಕ ಬಸವರಜ ಸಿಂಧೂರ ಹೇಳಿದರು. ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮನಮೋನಸಿಂಗ್ ಅವರು ಅರ್ಥ ಸಚಿವರಗಿದ್ದಾಗ ಉದಾರೀಕರಣ ಖಾಸಗೀಕರಣ ಜಾಗತೀಕರಣಕ್ಕೆ ಹೆಚ್ಚು ಒತ್ತು ನೀಡಿ ದೇಶದ ಆರ್ಥಿಕತೆಗೆ ಸುಭದ್ರ ದುನಾದಿ ಹಾಕಿದ ಧೀಮಂತ ನಾಯಕರಾಗಿದ್ದರು ಎಂದರು.

ಪ್ರಧಾನಿಯಾಗಿದ್ದಾಗ ಅನೇಕ ಯೊಜನೆಯನ್ನು ಜಾರಿ ಮಾಡಿದರು. ದೇಶದ ಆರ್ಥಿಕತೆ ಹೆಚ್ಚಿಸಲು ಉದ್ಯಮಿಗಳಿಗೆ ಮುಕ್ತ. ಅವಕಾಶ ನೀಡಿದ್ದರು. ರೈತರ ಸಾಲ ಮನ್ನಾ ಮಾಡಿದ ಮೊದಲು ಪ್ರಧಾನಿಯಾಗಿದ್ದರು. ಹಿಂದೊಂದು ದಿನ ದೇಶ ಅತೀ ಬಡವ ರಾಷ್ಟ್ರವಾಗಿತ್ತು ಅದನ್ನು ಸರಿದೂಗಿಸಿ ಭಾರತದ ಆರ್ಥಿಕತೆ ಉತ್ತುಂಗಕ್ಕೇರಿದೆ. ಅವರ 10 ವರ್ಷದ ಅವಧಿಯಲ್ಲಿ ಸಂಪನ್ಮೂಲ ಕ್ರೋಢಿಕರಣ ಮಾಡಿದ್ದರು. ಅವರ ಯೋಜನೆಗೆ ವ್ಯಾಪಕ ಪ್ರಚಾರ ಸಿಗಲಿಲ್ಲ ಅದು ಪಕ್ಷದ ವೈಫಲ್ಯವಾಗಿದೆ. ಗ್ರಾಮ ಪಂಚಾಯತಿಗಳನ್ನು ಉನ್ನತ ಸ್ಥಿತಿಗೇರಿಸಿದ್ದರು. ನರೇಗಾ ಯೋಜನೆಯಲ್ಲಿ ಸಮೃದ್ಧಿ ಹಣಕಾಸು ನೆರವು ನೀಡಿದ್ದರು. ಇದೊಂದು ಗ್ರಾಮೀಣಾಭಿವೃದ್ದಿಯಾಗಿದೆ. ಇಂತಹ ವ್ಯಕ್ತಿಯ ಅಗಲಿಕೆಯಿಂದ ದೇಶ ಬಡವಾಗಿದೆ ಎಂದು ಹೇಳಿದರು.

ಸಮಾಚಾರ ಸಣ್ಣದಲ್ಲ

ಪಂತ್‌ಗೆ ಚಳಿ ಬಿಡಿಸಿದ ಸುನಿಲ್ ಗವಾಸ್ಕರ್

ಮೆಲ್ಬರ್ನ್: ತಂಡ ಸಂಕಷ್ಟದಲ್ಲಿರುವ ಅನಗತ್ಯ ಹೊಡೆತಕ್ಕೆ ಮುಂದಾಗಿ ವಿಕೆಟ್ ಕಳೆದುಕೊಂಡ ರಿಷಭ್ ಪಂತ್ ವಿರುದ್ಧ ಮಾಜಿ ಆಟಗಾರ ಸುನೀಲ್ ಗವಾಸ್ಕರ್ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ. ನೇರ ಪ್ರಸಾರದಲ್ಲೇ 'ನೀನೊಬ್ಬ ಮೂರ್ಖ' ಎಂದು ಹೇಳುವ ಮೂಲಕ ಕಿಡಿ ಕಾರಿದ್ದಾರೆ. ಮೂರನೇ ದಿನದಾಟದಲ್ಲಿ ಬ್ಯಾಟಿಂಗ್ ನಡೆಸುತ್ತಿದ್ದ ರಿಷಭ್ ಪಂತ್ 28 ರನ್ ಗಳಿಸಿದ್ದ ವೇಳೆ ತಮ್ಮ ಎಂದಿನ ಶಾಟ್ ಹೊಡೆಯಲು ಹೋಗಿ ವಿಕೆಟ್ ಒಪ್ಪಿಸಿದರು. ಸ್ಕಾಟ್ ಬೊಲ್ಯಾಂಡ್ ಎಸೆತದಲ್ಲಿ ನಾಥನ್ ಲಿಯಾನ್‌ಗೆ ಕ್ಯಾಚಿತ್ತು ಪಂತ್ ಪೆವಿಲಿಯನ್ ಕಡೆಗೆ ಹೆಜ್ಜೆಹಾಕಿದರು. ಈ ವೇಳೆ ಕಾಮೆಂಟ್ರಿ ಮಾಡುತ್ತಿದ್ದ ಹರ್ಷ ಭೋಗ್ಲೆ, ತಂಡ ಸಂಕಷ್ಟದಲ್ಲಿರುವಾಗ ಪಂತ್ ಈ ರೀತಿ ಆಡುವ ಅಗತ್ಯವಿರಲಿಲ್ಲ. ನಿಧಾನವಾಗಿ ಆಡಬಹುದಿತ್ತು ಎಂದರು. ಇದೇ ವೇಳೆ ಕಾಮೆಂಟ್ರಿ ಮಾಡುತ್ತಿದ್ದ ಸುನೀಲ್ ಗವಾಸ್ಕರ್ ಪಿತ್ತ ನೆತ್ತಿಗೇರಿದಂತೆ 'ಪಂತ್, ನೀನೊಬ್ಬ ಮೂರ್ಖ, ನಿನಗೆ ಸರಿಯಾಗಿ ಆಡಲು ಬರುವುದಿಲ್ಲ' ಎಂದು ಹೇಳಿದರು.

ವಿಶ್ವ ಬ್ಲಿಟ್ಸ್ ಚಾಂಪಿಯನ್ಸ್ ಮೂವರಿಗೆ ಅಗ್ರಸ್ಥಾನ

ನ್ಯೂಯಾರ್ಕ್: ವಿಶ್ವ ರ‍್ಯಾಪಿಡ್ ಮತ್ತು ಬ್ಲಿಟ್ಸ್ ಚಾಂಪಿಯನ್‌ಶಿಪ್‌ನ ಎರಡನೇ ದಿನವೂ ಸ್ಫೂರ್ತಿಯುತ ಪ್ರದರ್ಶನ ನೀಡಿದ ಭಾರತದ ಅರ್ಜುನ್ ಇರಿಗೇಶಿ, ಇತರ ಮೂವರು ಆಟಗಾರರೊಂದಿಗೆ ಅಗ್ರಸ್ಥಾನ ಹಂಚಿಕೊಂಡಿದ್ದಾರೆ. ಅರ್ಜುನ ಜೊತೆ ರಷ್ಯಾದ ವೊಲೊಡರ್ ಮರ್ಝಿನ್, ಅಲೆಕ್ಸಾಮಡರ್ ಗ್ರಿಸ್ಚುಕ್, ಪೋಲೆಂಡ್‌ನ ಯಾನ್ ಕ್ರಿಸ್ಟೋಫ್ ತಲಾ ಏಳು ಪಾಯಿಂಟ್ಸ್ ಸಂಗ್ರಹಿಸಿ ಮುನ್ನಡೆ ಹಂಚಿಕೊಂಡಿದ್ದಾರೆ. ಅರ್ಜುನ್ ಹತ್ತನೇ ಸುತ್ತಿನಲ್ಲಿ ಗ್ರಿಸ್ಚುಕ್ ಅವರನ್ನು ಎದುರಿಸಲಿದ್ದಾರೆ. ಅರ್ಜುನ್ ಮೊದಲು ಅಮೆರಿಕಾದ ರಾಬ್ಸನ್ ರೇ ಅವರನ್ನು ಸೋಲಿಸಿದರು. ನಂತರ ಅರ್ಮೇನಿಯಾದ ಶಾಂತ್ ಸರ್ಗೇಸಿನ್ ಅವರನ್ನು ಸೋಲಿಸಿದರು. ಮರ್ಝಿನ್ ಮತ್ತು ಡೂಡಾ ಜೊತೆ ಡ್ರಾ ಮಾಡಿಕೊಮಡರು. ಮಹಿಳಾ ವಿಭಾಗದಲ್ಲೂ ಭಾರತಕ್ಕೆ ಪದಕ ಸಾಧ್ಯತೆ ಉಜ್ವಲವಾಗಿದೆ.

ಫಾಲೋ ಆನ್ ಭೀತಿಯಿಂದ ಪಾರಾದ ಭಾರತ | ನಿತೇಶ್-ಸುಂದರ್ 127 ರನ್‌ಗಳ ಜತೆಯಾಟ

ನಿತೀಶ್ ರೆಡ್ಡಿ ಶತಕ: ಭಾರತ ದಿಟ್ಟ ಹೋರಾಟ

ಮೆಲ್ಬರ್ನ್: ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಬಾರಿಸಿದ ಅಮೋಘ ಶತಕ ಮತ್ತು ವಾಷಿಂಗ್ಟನ್ ಸುಂದರ್ ಸಿಡಿಸಿದ ಅರ್ಧಶತಕದ ನೆರವಿನಿಂದ ಆಸ್ಟ್ರೇಲಿಯಾ ವಿರುದ್ಧದ ನಾಲ್ಕನೇ ಟೆಸ್ಟ್ ಪಂದ್ಯದ ತೃತೀಯ ದಿನವಾದ ಶನಿವಾರ ಭಾರತ ತಂಡವು ದಿಟ್ಟ ಬ್ಯಾಟಿಂಗ್ ಹೋರಾಟ ಪ್ರದರ್ಶಿಸಿದೆ. ದಿನದಾಟದ ಅಂತ್ಯಕ್ಕೆ 9 ವಿಕೆಟ್‌ಗೆ 358 ರನ್ ಬಾರಿಸಿದ್ದು, ಆಸ್ಟ್ರೇಲಿಯಾ ಗಳಿಸಿರುವ ಸ್ಕೋರ್ ತಲುಪಲು ಇನ್ನೂ 116 ರನ್ ಗಳಿಸಬೇಕಿದೆ. ಮಳೆ ಮತ್ತು ಮಂದ ಬೆಳಕಿನ ಅಡಚಣೆಯ ಕಾರಣದಿಂದ ಮೂರನೇ ದಿನದಾಟವನ್ನು ನಿಗದಿತ ಸಮಯಕ್ಕಿಂತ ಮುಂಚಿತವಾಗಿ ಕೊನೆಗೊಳಿಸಲಾಯಿತು.

ದ್ವಿತೀಯ ದಿನದಾಟದಲ್ಲಿ 64 ರನ್‌ಗೆ 5 ವಿಕೆಟ್ ಕಳೆದುಕೊಂಡು ಫಾಲೋಆನ್ ಭೀತಿಗೆ ಸಿಲುಕಿದ್ದ ಭಾರತ ತಂಡಕ್ಕೆ ಆಲ್ ರೌಂಡರ್‌ಗಳಾದ್ದ ನಿತೀಶ್ ಕುಮಾರ್ ರೆಡ್ಡಿ ಮತ್ತು ವಾಷಿಂಗ್ಟನ್ ಸುಂದರ್ ಶನಿವಾರ ಆಸರೆಯಾದರು. ಉಭಯ ಆಟಗಾರರು ಸೇರಿಕೊಂಡು ದಿಟ್ಟ ಬ್ಯಾಟಿಂಗ್ ಪ್ರದರ್ಶಿಸಿ ಆಸೀಸ್ ಬೌಲರ್‌ಗಳ ಬೆವರಿಳಿಸಿದರು. ಭಾರತವನ್ನು ಬೇಗನೇ ಆಲ್‌ಔಟ್ ಮಾಡಿ ಭಾರೀ ಇನಿಂಗ್ಸ್ ಮುನ್ನಡೆ ಸಾಧಿಸಬಹುದೆಂದು ಲೆಕ್ಕಾಚಾರ ಹಾಕಿಕೊಂಡಿದ್ದ ಆಸೀಸ್‌ನ ಎಲ್ಲಾ ಯೋಜನೆ ಅವರಿಬ್ಬರಿಂದಾಗಿ ತಲೆ ಕೆಳಗಾಯಿತು. ಒಂದು ಹಂತದಲ್ಲಿ 221ರನ್‌ಗೆ 7 ವಿಕೆಟ್ ಕಳೆದುಕೊಂಡಿದ್ದ ವೇಳೆ ಎಂಟನೇ ಕ್ರಮಾಂಕದಲ್ಲಿ ಕ್ರೀಸಿಗಿಳಿದ ನಿತೀಶ್ ಕುಮಾರ್ ಸಹ ಆಟಗಾರ ವಾಷಿಂಗ್ಟನ್ ಅವರೊಂದಿಗೆ 127 ರನ್‌ಗಳ ಅಮೂಲ್ಯ ಜತೆಯಾಟದಲ್ಲಿ ಭಾಗಿಯಾದರು, ಆ ಮೂಲಕ ಆಸ್ಟ್ರೇಲಿಯಾದಲ್ಲಿ 8 ವಿಕೆಟ್‌ಗೆ ಅತ್ಯಧಿಕ ಜತೆಯಾಟ ನಡೆಸಿದ 2ನೇ ಜೋಡಿ ಎನಿಸಿಕೊಂಡರು.

ಚೊಚ್ಚಲ ಶತಕ ಬಾರಿಸಿದ ನಿತೀಶ್: ದಿಟ್ಟ ಬ್ಯಾಟಿಂಗ್ ಪ್ರದರ್ಶನ ತೋರಿದ ನಿತೀಶ್ ಕುಮಾರ್ ರೆಡ್ಡಿ ಚೊಚ್ಚಲ ಶತಕ ಬಾರಿಸಿ, ಮೆಲ್ಬರ್ನ್ ಅಂಗಳದಲ್ಲಿ ಮೆರೆದಾಡಿದರು. ಬೌಂಡರಿ ಮೂಲಕ ಅರ್ಧಶತಕ ಪೂರ್ತಿಗೊಳಿಸಿದ ಅವರು, ಶತಕವನ್ನು ಕೂಡ ಬೌಂಡರಿ ಮೂಲಕವೇ ಪೂರ್ತಿಗೊಳಿಸಿದ್ದು ವಿಶೇಷ. ನಿತೀಶ್ 99 ರನ್ ಗಳಿಸಿದ್ದ ವೇಳೆ ಮತ್ತೊಂದು ತುದಿಯಲ್ಲಿ ಬ್ಯಾಟಿಂಗ್ ನಡೆಸುತ್ತಿದ್ದ ವಾಷಿಂಗ್ಟನ್ ಸುಂದರ್ ವಿಕೆಟ್ ಪತನಗೊಂಡಿತು. ಆ ಬಳಿಕ ಬಂದ ಬುಮ್ರಾ ಕೂಡ ಬಹುಬೇಗ ವಿಕೆಟ್ ಕಳೆದುಕೊಂಡರು. ಆದರೆ ಕೊನೆಯ ವಿಕೆಟ್‌ಗೆ ಬ್ಯಾಟಿಂಗ್‌ಗೆ ಬಂದ ಮೊಹಮ್ಮದ್ ಸಿರಾಜ್ ಆತಂಕಗೊಳ್ಳದೆ ಕಮಿನ್ಸ್‌ನ ಎಸೆತಗಳಿಗೆ ತಡೆಯೊಡ್ಡಿ, ವಿಕೆಟ್ ಉಳಿಸಿಕೊಂಡು ನಿತೇಶ್ ರೆಡ್ಡಿ ಶತಕ ಬಾರಿಸುವಲ್ಲಿ ನೆರವಾದರು.

ಮೂರನೇ ದಿನದಾಂತ್ಯಕ್ಕೆ 176 ಎಸೆತ ಎದುರಿಸಿದ ನಿತೀಶ್ 10 ಬೌಂಡರಿ ಮತ್ತು 1 ಸಿಕ್ಸರ್ ನೆರವಿನಿಂದ ಅಜೇಯ 105 ರನ್ ಬಾರಿಸಿದ್ದಾರೆ. ಅವರ ಜತೆಗಾರ ಸಿರಾಜ್ 2 ರನ್ ಬಾರಿಸಿ ಕ್ರೀಸ್‌ನಲ್ಲಿದ್ದಾರೆ. ಆಸೀಸ್ ಪರ ಸ್ಕಾಟ್ ಬೋಲ್ಯಾಂಡ್ ಮತ್ತು ಪ್ಯಾಟ್ ಕಮಿನ್ಸ್ ತಲಾ 3 ವಿಕೆಟ್ ಪಡೆದಿದ್ದಾರೆ.

ನಿತೇಶ್ ರೆಡ್ಡಿ ತಂದೆ ಭಾವುಕ, ಆನಂದ ಭಾಷ್ಪ

ಐತಿಹಾಸಿಕ ಮೆಲ್ಬರ್ನ್ ಅಂಗಳದಲ್ಲಿ ಆಸೀಸ್ ಬೌಲರ್‌ಗಳನ್ನು ದಂಡಿಸಿದ ನಿತೀಶ್ ಕುಮಾರ್ ತಮ್ಮ ಚೊಚ್ಚಲ ಅಂತಾರಾಷ್ಟ್ರೀಯ ಶತಕದ ಖಾತೆ ತೆರೆದರು. ತನ್ನ ಮಗನ ಸಾಧನೆಯನ್ನು ಕಂಡು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತಿದ್ದ ತಂದೆ ಮುತ್ಯಾಲ ರೆಡ್ಡಿ ಭಾವುಕರಾಗಿ, ಆನಂದಭಾಷ್ಪ ಸುರಿಸಿದ ವಿಡಿಯೊ ಶನಿವಾರ ವೈರಲ್ ಆಗಿದೆ. ಬಿಸಿಸಿಐ ನಡೆಸಿದ ವಿಶೇಷ ಸಂದರ್ಶನದಲ್ಲಿ ಈ ಹಿಂದೆ ಮಾತನಾಡಿದ್ದ ನಿತೀಶ್, ತಾನು ಕ್ರಿಕೆಟಿಗನಾಗಲು ತನ್ನ ತಂದೆಯೇ ಕಾರಣ ಮತ್ತು ತನಗಾಗಿ ಅವರು ಪಟ್ಟ ಕಷ್ಟದ ದಿನಗಳನ್ನು ಹೇಳಿಕೊಂಡಿದ್ದರು. ತಾನು ಚಿಕ್ಕ ಹುಡುಗನಿದ್ದಾಗ ಕ್ರಿಕೆಟ್‌ನಲ್ಲಿ ಅಷ್ಟೊಂದು ಆಸಕ್ತಿಯನ್ನು ಹೊಂದಿರಲಿಲ್ಲ. ಆದರೂ ತನಗಾಗಿ ತಂದೆ ಕೆಲಸವನ್ನು ಬಿಟ್ಟಿದ್ದರು ಮಾತ್ರವಲ್ಲದೆ, ಕ್ರಿಕೆಟ್ ತಂಡಕ್ಕೆ ತಾನು ಆಯ್ಕೆಯಾಗುವುದರ ಹಿಂದೆ ತನ್ನ ತಂದೆಯವರ ಸಾಕಷ್ಟು ತ್ಯಾಗವಿದೆ ಎಂದಿದ್ದರು. ನಿತೀಶ್ ಕುಮಾರ್ ರೆಡ್ಡಿ ಕಳೆದ ತಿಂಗಳ 22ರಂದು ಪರ್ತ್ ಮೈದಾನದಲ್ಲಿ ನಡೆದಿದ್ದ ಮೊದಲ ಟೆಸ್ಟ್ ಪಂದ್ಯದಲ್ಲಿ ಕಣಕ್ಕಿಳಿಯುವ ಮೂಲಕ ಭಾರತ ಟೆಸ್ಟ್ ತಂಡಕ್ಕೆ ಪದಾರ್ಪಣೆ ಮಾಡಿದ್ದರು.

25 ಲಕ್ಷ ರು. ಘೋಷಿಸಿದ ಎಸಿಎ

ವಿಶಾಖಪಟ್ಟಣಂ: ಮೆಲ್ಬರ್ನ್ ಮೈದಾನದಲ್ಲಿ ಚೊಚ್ಚಲ ಶತಕ ಬಾರಿಸಿ ಮೆರೆದಾಡಿ, ಭಾರತೀಯ ಕ್ರಿಕೆಟ್ ಅಭಿಮಾನಿಗಳ ಪಾಲಿಗೆ ಶನಿವಾರ ಸೂಪರ್ ಸ್ಟಾರ್ ಆದ 21 ವರ್ಷದ ನಿತೀಶ್ ಕುಮಾರ್ ರೆಡ್ಡಿಗೆ ಆಂಧ್ರ ಕ್ರಿಕೆಟ್ ಸಂಸ್ಥೆ (ಎಸಿಎ) 25 ಲಕ್ಷ ರು. ನಗದು ಪ್ರೋತ್ಸಾಹಧನ ನೀಡುವುದಾಗಿ ಘೋಷಿಸಿದೆ. ಎಸಿಎ ಅಧ್ಯಕ್ಷ ಹಾಗೂ ವಿಜಯವಾಡ ಸಂಸದ ಕೇಶಿನೇನಿ ಶಿವನಾಥ್ ಅವರು ನಗದು ಪ್ರೋತ್ಸಾಹಧನ ಘೋಷಿಸಿದ್ದು ಈ ಪುರಸ್ಕಾರವನ್ನು ಶೀಘ್ರದಲ್ಲೇ ಸಿ.ಎಂ ಚಂದ್ರಬಾಬು ನಾಯ್ಡು ಅವರ ಕೈಯಿಂದ ಕ್ರಿಕೆಟಿಗನಿಗೆ ಹಸ್ತಾಂತರಿಸಲಾಗುವುದು ಎಂದು ತಿಳಿಸಿದ್ದಾರೆ. ಕಳೆದ ಮೂರು ಟೆಸ್ಟ್‌ಗಳಲ್ಲಿ ಕ್ರಮವಾಗಿ 41, 38, 42, 42 ಮತ್ತು 16 ರನ್‌ಗಳಿಸಿದ್ದ ನಿತೀಶ್ ಕುಮಾರ್ ರೆಡ್ಡಿ ಇದೀಗ ನಾಲ್ಕನೇ ಟೆಸ್ಟ್ ಪಂದ್ಯದಲ್ಲಿ ಶತಕ ಬಾರಿಸಿ ಶನಿವಾರದಂದು ಭಾರತ ತಂಡವನ್ನು ಫಾಲೋಆನ್ ಭೀತಿಯಿಂದ ಪಾರು ಮಾಡಿದ್ದಾರೆ.

ಮಯಾಂಕ್ ಶತಕ ಕರ್ನಾಟಕಕ್ಕೆ ಜಯ

ಅಹಮದಾಬಾದ್: ವಿಜಯ್ ಹಜಾರೆ ಟ್ರೋಫಿ ಪಂದ್ಯಾವಳಿಯಲ್ಲಿ ಕರ್ನಾಟಕ ತಂಡವು ಸತತ ನಾಲ್ಕನೇ ಜಯದೊಂದಿಗೆ ತನ್ನ ಅಜೇಯ ಅಭಿಯಾನವನ್ನು ಮುಂದುವರಿಸಿದೆ. ಶನಿವಾರ ಅರುಣಾಚಲ ಪ್ರದೇಶ ವಿರುದ್ಧದ ಪಂದ್ಯದಲ್ಲಿ ಕರ್ನಾಟಕವು ಭರ್ಜರಿ 10 ವಿಕೆಟ್‌ಗಳ ಗೆಲುವು ಸಾಧಿಸಿದೆ. ನಾಯಕ ಮಾಯಾಂಕ್ ಅಗರ್ವಾಲ್ ಬಾರಿಸಿದ ಅಜೇಯ ಶತಕ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರವಹಿಸಿತು.

ಇಲ್ಲಿನ ನರೇಂದ್ರ ಮೋದಿ ಕ್ರಿಕೆಟ್ ಸ್ಟೇಡಿಯಂನಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಬೌಲಿಂಗ್ ಆಯ್ದುಕೊಂಡ ಕರ್ನಾಟಕ ತಂಡವು ಬೌಲರ್‌ಗಳ ಸಂಘಟಿತ ಪ್ರದರ್ಶನದ ನೆರವಿನಿಂದ ಎದುರಾಳಿ ಅರುಣಾಚಲ ಪ್ರದೇಶವನ್ನು 166ರನ್‌ಗೆ ಕಟ್ಟಿಹಾಕಿತು. ಸಣ್ಣ ಮೊತ್ತವನ್ನು ಬೆನ್ನಟ್ಟಿದ್ದ ಕರ್ನಾಟಕ ತಂಡದ ನಾಯಕ ಮಯಾಂಕ್ ಅಗರ್ವಾಲ್ ಮತ್ತು ಅಭಿನವ್ ಮನೋಹರ್ ಜಿದ್ದಿಗೆ ಬಿದ್ದವರಂತೆ ಬ್ಯಾಟಿಂಗ್ ನಡೆಸಿ ವಿಕೆಟ್ ನಷ್ಟವಿಲ್ಲದೆ 14.2 ಓವರ್‌ಗಳಲ್ಲಿ 171 ರನ್ ಬಾರಿಸಿ ಗೆಲುವು ತನ್ನದಾಗಿಸಿಕೊಂಡಿತು.

ಮೊದಲ ಮೂರು ಪಂದ್ಯಗಳಲ್ಲಿ ಅವಕಾಶ ಪಡೆಯುವಲ್ಲಿ ವಿಫಲವಾಗಿದ್ದ ಅಭಿನವ್ ಮನೋಹರ್ ಈ ಪಂದ್ಯದಲ್ಲಿ ಆಡುವ ಅವಕಾಶ ಪಡೆದರು. ನಿಕಿನ್ ಜೋಸ್ ಸ್ಥಾನದಲ್ಲಿ ಆಡಿದ ಮನೋಹರ್ ನಿರೀಕ್ಷಿತ ಬ್ಯಾಟಿಂಗ್ ಪ್ರದರ್ಶನ ತೋರುವ ಮೂಲಕ ಅರ್ಧ ಶತಕ ಬಾರಿಸಿ, ತನಗೆ ಸಿಕ್ಕ ಅವಕಾಶವನ್ನು ಸರಿಯಾಗಿ ಬಳಸಿಕೊಂಡರು. ಬಿರುಸಿನ ಬ್ಯಾಟಿಂಗ್ ನಡೆಸಿ 4 ಸಿಕ್ಸರ್ ಮತ್ತು 4 ಬೌಂಡರಿ ನೆರವಿನಿಂದ ಅಜೇಯ 66 ರನ್ ಬಾರಿಸಿದರು.

ಅಭಿನವ್ ಮನೋಹರ್‌ಗೆ ಮತ್ತೊಂದು ತುದಿಯಲ್ಲಿ ಉತ್ತಮ ಸಾಥ್ ನೀಡಿದ ನಾಯಕ ಮಯಾಂಕ್ ಅಗರ್ವಾಲ್ ಬಿರುಸಿನ ಆಟದ ಮೂಲಕ ಕೇವಲ 45 ಎಸೆತಗಳಿಂದ ಭರ್ತಿ 100 ರನ್ ಚಚ್ಚಿದರು. ಅವರ ಈ ಆಕ್ರಮಣಕಾರಿ ಬ್ಯಾಟಿಂಗ್ ಇನಿಂಗ್ಸ್‌ನಲ್ಲಿ ತಲಾ 7 ಸಿಕ್ಸರ್ ಮತ್ತು ಬೌಂಡರಿ ಸಿಡಿಯಿತು. ಬೌಂಡರಿ ಮತ್ತು ಸಿಕ್ಸರ್ ಮೂಲಕವೇ 70 ರನ್ ಕಲೆಹಾಕಿದರು.

ಮೊದಲು ಬ್ಯಾಟಿಂಗ್ ನಡೆಸಿದ ಅರುಣಾಚಲ ಪ್ರದೇಶದ ಪರ ಕೇವಲ ಮೂರು ಮಂದಿ ಬ್ಯಾಟರ್‌ಗಳು ಮಾತ್ರ ಎರಡಂಕಿ ಮೊತ್ತ ಕಲೆಹಾಕುವಲ್ಲಿ ಯಶಸ್ಸು ಕಂಡರೆ, ಮೂರು ಮಂದಿ ಶೂನ್ಯ ಸಂಕಟಕ್ಕೆ ಸಿಲುಕಿದರು.

ಫಿಡೆಯ ವಸ್ತ್ರ ಸಂಹಿತೆ ನಿಯಮ ಉಲ್ಲಂಘನೆಯ ಆರೋಪದ ಹಿನ್ನೆಲೆ

ಜೀನ್ಸ್ ಧರಿಸಿದ್ದಕ್ಕಾಗಿ ಕಾರ್ಲಸನ್ ಅನರ್ಹ

ನ್ಯೂಯಾರ್ಕ್: ಅಂತಾರಾಷ್ಟ್ರೀಯ ಚೆಸ್ ಫೆಡರೇಷನ್‌ನ (ಫಿಡೆ) ವಸ್ತ್ರ ಸಂಹಿತೆ ನಿಯಮ ಉಲ್ಲಂಘನೆಯ ಆರೋಪದಲ್ಲಿ ಐದು ಬಾರಿಯ ವಿಶ್ವ ಚಾಂಪಿಯನ್ ನಾರ್ವೆಯ ಮ್ಯಾಗ್ನಸ್ ಕಾರ್ಲಸನ್ ಅವರು ವಿಶ್ವ ರ‍್ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಚಾಂಪಿಯನ್‌ಶಿಪ್‌ನಿಂದ ಅನರ್ಹಗೊಂಡಿದ್ದಾರೆ.

ಜೀನ್ಸ್ ಪ್ಯಾಂಟ್ ಧರಿಸಿದ್ದ ವಿಶ್ವದ ಅಗ್ರಮಾನ್ಯ ಚೆಸ್ ಆಟಗಾರ ಕಾರ್ಲಸನ್ ಅವರಿಗೆ ಮೊದಲು 200 ಅಮೆರಿಕನ್ ಡಾಲರ್ ದಂಡ ವಿಧಿಸಲಾಯಿತು. ಆದರೆ ಬಳಿಕ ಪಂದ್ಯಾವಳಿಯ ನಿಯಮಾವಳಿಗಳಿಗೆ ಅನುಗುಣವಾಗಿ ಅನರ್ಹಗೊಳಿಸಲಾಯಿತು.

ಉಡುಪು ಬದಲಿಸುವಂತೆ ಕಾರ್ಲಸನ್‌ಗೆ ವಿನಂತಿಸಿದರೂ ಅದನ್ನು ಪಾಲಿಸಲಿಲ್ಲ ಎಂದು ಆಯೋಜಕರು ತಿಳಿಸಿದ್ದಾರೆ.

ವಾಲ್‌ಸ್ಟ್ರೀಟ್‌ನಲ್ಲಿ ನಡೆಯುತ್ತಿರುವ ರ‍್ಯಾಪಿಡ್ ಚಾಂಪಿಯನ್‌ಶಿಪ್‌ನ 9ನೇ ಸುತ್ತಿನ ಪಂದ್ಯದಲ್ಲಿ ಕಾರ್ಲಸನ್‌ಗೆ ಅವಕಾಶ ನಿರಾಕರಿಸಲಾಯಿತು. ವಸ್ತ್ರ ಸಂಹಿತೆಯನ್ನು ಭಾನುವಾರದಿಂದ ಪಾಲಿಸುವುದಾಗಿ ಕಾರ್ಲಸನ್ ತಿಳಿಸಿದ್ದರೂ, ತಕ್ಷಣವೇ ಜೀನ್ಸ್ ಬದಲಿಸಲು ತಯಾರಿರಲಿಲ್ಲ ಎನ್ನಲಾಗಿದೆ. ಈ ಕುರಿತು ಸ್ಪಷ್ಟನೆ ನೀಡಿದ ಫಿಡೆ, ವಸ್ತ್ರ ಸಂಹಿತೆಯ ಬಗ್ಗೆ ಸ್ಪರ್ಧಾಳುಗಳಿಗೆ ಮೊದಲೇ ತಿಳಿಸಲಾಗುತ್ತದೆ, ಆಟದಲ್ಲಿ ವೃತ್ತಿಪರತೆ ಖಚಿತಪಡಿಸಲು ಇದು ಅವಶ್ಯಕವಾಗಿದೆ ಎಂದೂ ಹೇಳಿದೆ. ಫಿಡೆ ನಿರ್ಣಯಕ್ಕೆ ಕಾರ್ಲಸನ್ ತೀವ್ರ ಅಸಮಾಧಾನ ವ್ಯಕ್ತಪಡಿಸಿ, ಕೂಟದಿಂದ ಹೊರ ನಡೆದಿದ್ದಾರೆ.

ವಿಟಾಕೀಸ್

ಚಂದನವನದಲ್ಲಿ ನಾಗವಲ್ಲಿ ಬಂಗಲೆ

ಕನ್ನಡದಲ್ಲಿ ವಿಭಿನ್ನ ಶೀರ್ಷಿಕೆಯ ಜತೆಗೆ ಉತ್ತಮ ಕಂಟೆಂಟ್‌ವುಳ್ಳ ಚಿತ್ರಗಳು ಸಿದ್ಧವಾಗುತ್ತಿವೆ. ಈಗ ಆ ಸಾಲಿಗೆ ನಾಗವಲ್ಲಿ ಬಂಗಲೆ ಸೇರಿದೆ. ನಾಗವಲ್ಲಿ ಬಂಗಲೆಯಲ್ಲಿ ಅಪರೂಪದ ಕಥೆಯೂ ಅಡಕವಾಗಿದೆ. ನಮ್ಮನ್ನು ಆವರಿಸಿರುವ ಕಾಮ, ಕ್ರೋಧ, ಲೋಭ, ಮೋಹ, ಮದ, ಮತ್ಸರ ಹೀಗೆ ಅರಿಷಡ್ವರ್ಗಗಳ ಸುತ್ತ ಚಿತ್ರದ ಕಥೆ ಸಾಗುತ್ತದೆ. ಈ ಆರು ಗುಣಗಳನ್ನು ಪ್ರತಿನಿಧಿಸುವ ಆರು ಹುಡುಗಿಯರು ನಾಗವಲ್ಲಿ ಬಂಗಲೆಯನ್ನು ಪ್ರವೇಶಿಸುತ್ತಾರೆ. ಈ ಆರು ಪಾತ್ರಗಳ ಜತೆಗೆ ಮತ್ತೊಂದು ವಿಶೇಷ ಪಾತ್ರವೂ ಸಹ ಇದೆ. ಈ ಆರು ಪಾತ್ರಗಳ ಪ್ರವೇಶದ ನಂತರ ನಾಗವಲ್ಲಿ ಬಂಗಲೆಯಲ್ಲಿ ಏನೆಲ್ಲಾ ಆಗುತ್ತದೆ ಎಂಬುದೆ ಚಿತ್ರದ ಸಸ್ಪೆನ್ಸ್. ನೆ.ಲ.ನರೇಂದ್ರಬಾಬು, ತೇಜಸ್ವಿನಿ, ನೇವಿ ಮಂಜು, ರೂಪಶ್ರೀ ಮುಂತಾದವರು ತಾರಾಗಣದಲ್ಲಿದ್ದಾರೆ.

ಪ್ರಹ್ಲಾದ್ ಅವರು ಚಿತ್ರದ ಕಥೆ, ಚಿತ್ರಕಥೆ, ಸಂಭಾಷಣೆ ಬರೆದಿದ್ದು ಕವಿ ರಾಜೇಶ್ ನಿರ್ದೇಶನ ಮಾಡಿದ್ದಾರೆ. ಹಂಸ ವಿಷನ್ಸ್ ಲಾಂಛನದಲ್ಲಿ ನಾಗವಲ್ಲಿ ಬಂಗಲೆ ನಿರ್ಮಾಣವಾಗಿದ್ದು, ನೆಲ ಮಹೇಶ್ ಮತ್ತು ನೇವಿ ಮಂಜು ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ರೋಹನ್ ದೇಸಾಯಿ ಸಿನಿಮಾದ ಹಾಡುಗಳಿಗೆ ಸಂಗೀತ ಸಂಯೋಜಿಸಿದ್ದಾರೆ. ಬೆಂಗಳೂರು, ನೆಲಮಂಗಲದ ಸುತ್ತಮುತ್ತ ಚಿತ್ರೀಕರಣ ನಡೆಸಲಾಗಿದೆ. ಈಗಾಗಲೇ ಚಿತ್ರೀಕರಣ ಮುಗಿಸಿರುವ ನಾಗವಲ್ಲಿ ಬಂಗಲೆಯನ್ನು ಸೆನ್ಸಾರ್ ಮಂಡಳಿ ವೀಕ್ಷಿಸಿದ್ದು, ಯು/ಎ ಪ್ರಮಾಣ ಪತ್ರ ನೀಡಿದೆ. ಎಲ್ಲವೂ ಅಂದುಕೊಂಡಂತೆ ಆದರೆ ನಾಗವಲ್ಲಿ ಬಂಗಲೆ ಫೆಬ್ರವರಿಯಲ್ಲಿ ದರ್ಶನಕ್ಕೆ ಸಿಗದೆ.

ಮ್ಯಾಕ್ಸ್ ವಿಜಯ ಪತಾಕೆ

ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಭರ್ಜರಿ ಪ್ರದರ್ಶನ ಕಾಣುತ್ತಿದ್ದು ಗಲ್ಲಾಪೆಟ್ಟಿಯನ್ನು ಕೊಳ್ಳೆಹೊಡೆದಿದೆ. ಬಿಡುಗಡೆಯಾದ ಮೂರೇ ದಿನದಲ್ಲಿ ಮೂವತ್ತು ಕೋಟಿಗೂ ಹೆಚ್ಚು ಗಳಿಕೆ ಕಂಡಿದೆ. ಕನ್ನಡದಲ್ಲಿ ಕಮಾಲ್ ಮಾಡಿದ್ದ ಮ್ಯಾಕ್ಸ್ ತಮಿಳು ಹಾಗೂ ತೆಲುಗು ಭಾಷೆಯಲ್ಲಿಯೂ ಅದ್ದೂರಿಯಾಗಿ ತೆರೆಕಂಡಿದೆ. ಮೊದಲ ದಿನವೇ ಕಾಲಿವುಡ್, ಟಾಲಿವುಡ್‌ನಲ್ಲಿಯೂ ಮ್ಯಾಕ್ಸ್ ಮೋಡಿ ಮಾಡಿದೆ. ಆ ಮೂಲಕ ನಿರ್ದೇಶಕ ಕಾರ್ತಿಕೇಯಾ ವಿಜಯ ಪತಾಕೆ ಹಾರಿಸಿದ್ದಾರೆ. ಮ್ಯಾಕ್ಸ್ ಮಾಸ್ ಆಗಿ ಮೂಡಿಬಂದಿದ್ದು, ಪರಭಾಷೆಯ ಸಿನಿಪ್ರಿಯರೂ ಕಿಚ್ಚನ ನಟನೆ ನೋಡಿ ಬಹುಪರಾಕ್ ಎಂದಿದ್ದಾರೆ. ಮ್ಯಾಕ್ಸ್ ಇನ್ನೇನು ನೂರು ಕೋಟಿ ಕ್ಲಬ್ ಸೇರಲಿದೆ.

ವಿಜಯ್ ಕಾರ್ತಿಕೇಯ ಮೊದಲ ಚಿತ್ರದಲ್ಲಿಯೇ ವಿಜಯ ಸಾಧಿಸಿದ್ದು ಕನ್ನಡ ಮಾತ್ರವಲ್ಲ, ತಮಿಳಿನಲ್ಲಿಯೂ ಬೇಡಿಕೆಯ ನಿರ್ದೇಶಕರಾಗಿ ಗುರುತಿಸಿಕೊಂಡಿದ್ದಾರೆ. ವಿಶೇಷ ಎಂದರೆ ವಿಜಯ್, ಸುದೀಪ್ ಅವರಿಗೆ ಮತ್ತೊಂದು ಸಿನಿಮಾ ನಿರ್ದೇಶನ ಮಾಡಲು ಉತ್ಸುಕರಾಗಿದ್ದಾರೆ. ವಿಜಯ್ ಕಾರ್ತಿಕೇಯ ಹೆಣೆದಿದ್ದ ಕಥೆ, ಅದಕ್ಕೆ ನಿರ್ದೇಶಕರು ಮಾಡಿಕೊಂಡಿದ್ದ ತಯಾರಿಯ ಪರಿಯನ್ನು ಕಂಡು ಸುದೀಪ್ ಮೆಚ್ಚಿದ್ದರು. ನಟಿಸಲು ಸಂತಸದಿಂದಲೇ ಸಮ್ಮತಿಸಿದ್ದರು. ಆ ಮೇಲೆ ಮ್ಯಾಕ್ಸ್ ಹೊಸ ದಾಖಲೆಯನ್ನೇ ಬರೆದಿದೆ. ಹಾಗಾಗಿ ವಿಜಯ್ ಜತೆಗೆ ಕಿಚ್ಚ ಸುದೀಪ್ ಮತ್ತೊಂದು ಸಿನಿಮಾ ಮಾಡುವುದು ಬಹುತೇಕ ಖಚಿತವಾಗಿದೆ.

ಸದ್ಯ ಮ್ಯಾಕ್ಸ್ ತಮಿಳಿನಲ್ಲಿಯೂ ತೆರೆಕಂಡಿದ್ದು, ನಿರ್ದೇಶಕರು ತಮಿಳುನಾಡಿನಲ್ಲಿ ಬೀಡುಬಿಟ್ಟಿದ್ದಾರೆ. ಪ್ರೇಕ್ಷಕರಿಂದ ಪ್ರಶಂಸೆಯನ್ನೂ ಪಡೆಯುತ್ತಿದ್ದಾರೆ. ವಿಜಯ್ ಮುಂದಿನ ವಾರ ಬೆಂಗಳೂರಿಗೆ ಬರಲಿದ್ದು ಸುದೀಪ್ ಅವರ ಜತೆಗೆ ಹೊಸ ಸಿನಿಮಾದ ಬಗ್ಗೆ ಚರ್ಚಿಸಲಿದ್ದಾರೆ. ಸದ್ಯ ಸುದೀಪ್, ಬಿಲ್ಲ ರಂಗ ಭಾಷಾ ಚಿತ್ರದಲ್ಲಿ ನಟಿಸಲು ತಯಾರಿ ಮಾಡಿಕೊಂಡಿ ದ್ದಾರೆ. ಆ ಬಳಿಕ ತಾವೇ ಕೆಕೆ ಚಿತ್ರವನ್ನು ನಿರ್ದೇಶನ ಮಾಡಲಿದ್ದಾರೆ. ಅದಾದ ಬಳಿಕ ವಿಜಯ್ ಕಾರ್ತಿಕೇಯಾ ನಿರ್ದೇಶನ ಮಾಡಲಿರುವ ಸಿನಿಮಾದಲ್ಲಿ ನಟಿಸಲಿದ್ದಾರೆ.

ಇದು ಕನ್ನಡದಲ್ಲಿ ನನ್ನ ಮೊದಲ ಸಿನಿಮಾ. ಕಿಚ್ಚ ಸುದೀಪ್ ಅವರಂತಹ ಸ್ಟಾರ್ ನಟರಿಗೆ ನಿರ್ದೇಶನ ಮಾಡುತ್ತೇನೆ ಎಂದು ಅಂದುಕೊಂಡಿರಲಿಲ್ಲ. ಚಿತ್ರತಂಡದ ಶ್ರಮದಿಂದ ಮ್ಯಾಕ್ಸ್ ಅದ್ಭುತವಾಗಿ ಮೂಡಿಬಂದಿದೆ. ಮ್ಯಾಕ್ಸ್‌ಗೆ ಕನ್ನಡ ಸಿನಿ ಪ್ರೇಕ್ಷಕರು ತೋರಿದ ಪ್ರೀತಿಗೆ ನಾನು ಚಿರಋಣಿ. ಮ್ಯಾಕ್ಸ್ ನನ್ನ ಜವಾಬ್ದಾರಿ ಹೆಚ್ಚಿಸಿದ್ದು, ಮುಂದೆಯೂ ಒಳ್ಳೆಯ ಸಿನಿಮಾಗಳನ್ನು ನಿರ್ದೇಶನ ಮಾಡಲಿದ್ದೇನೆ. ನಿಮ್ಮ ಪ್ರೀತಿ ಹೀಗೆ ಇರಲಿ.

-ವಿಜಯ್ ಕಾರ್ತಿಕೇಯಾ ನಿರ್ದೇಶಕ

ಫಿಲಂ ಸಿಟಿಯಲ್ಲಿ ವರ್ಣವೇದಂ

ನಾನು ಮತ್ತು ಗುಂಡ ಚಿತ್ರವನ್ನು ನಿರ್ದೇಶಿಸಿ ಸೈ ಎನಿಸಿಕೊಂಡಿರುವ ನಿರ್ದೇಶಕ ಶ್ರೀನಿವಾಸ್ ತಿಮ್ಮಯ್ಯ ವರ್ಣವೇದಂ ಶೀರ್ಷಿಕೆಯಲ್ಲಿ ಮೂಡಿಬರುತ್ತಿರುವ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಈ ಚಿತ್ರದ ವರ್ಣವೇ ವರ್ಣವೇ... ಎಂಬ ಹಾಡನ್ನು ಬೆಂಗಳೂರು ಫಿಲಂ ಸಿಟಿ ಸ್ಟುಡಿಯೋದಲ್ಲಿ ಚಿತ್ರೀಕರಿಸಲಾಯಿತು. ನಾಯಕ ನೈಋತ್ಯ ಹಾಗೂ ನಾಯಕಿ ಪ್ರತೀಕ್ಷಾ ಈ ಹಾಡಿನಲ್ಲಿ ಅಭಿನಯಿಸುತ್ತಿದ್ದು, ಮೋಯಿನ್ ನೃತ್ಯ ನಿರ್ದೇಶನ ಮಾಡಿದ್ದಾರೆ. ಪ್ರತಾಪ್ ಭಟ್ ಸಾಹಿತ್ಯದ ಈ ಹಾಡಿಗೆ ಗಗನ್ ಭಡೇರಿಯಾ ಸಂಗೀತ ಸಂಯೋಜಿಸಿದ್ದು, ರಜತ್ ಹೆಗಡೆ ಹಾಗೂ ತನುಷಾ ಗೀತೆಗೆ ದನಿಯಾಗಿದ್ದಾರೆ.

ಈಗಾಗಲೇ ಚಿತ್ರೀಕರಣ ಮುಕ್ತಾಯ ಹಂತ ತಲುಪಿದ್ದು, ಇನ್ನೆರೆಡು ಹಾಡು ಹಾಗೂ ಒಂದು ಸಾಹಸ ಸನ್ನಿವೇಶದ ಚಿತ್ರೀಕರಣ ಮಾತ್ರ ಬಾಕಿಯಿದೆ.

ವರ್ಣವೇದಂ ಬಣ್ಣದ ಬಗ್ಗೆಗಿನ ಸಿನಿಮಾವಾಗಿದ್ದು, ಕಲರ್ ಮಾಫಿಯಾ ಚಿತ್ರದ ಪ್ರಮುಖ ಕಥಾಹಂದರವಾಗಿದೆ. ಚಿತ್ರದಲ್ಲಿ ನಾಯಕಿಯ ವರ್ಣಾ ಎಂಬ ಪಾತ್ರದಲ್ಲಿ ನಟಿಸಿದರೆ ನಾಯಕ ವೇದಾಂತ್ ಪಾತ್ರದಲ್ಲಿ ಅಭಿನಯಿಸಿದ್ದು, ಮ್ಯುಸಿಷಿಯನ್ ಆಗಿ ಕಾಣಸಿಕೊಳ್ಳುತ್ತಿದ್ದಾರೆ. ಶ್ರೀನಿವಾಸ್ ತಿಮ್ಮಯ್ಯ ಫಿಲಂ ಫ್ಯಾಕ್ಟರಿ ಲಾಂಛನದಲ್ಲಿ ಚಂದ್ರಶೇಖರ್, ವಿಶ್ವನಾಥ್, ಶೈಜು ಹಾಗೂ ರಾಜೇಶ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ನಾನು ಮತ್ತು ಗುಂಡ ಸಿನಿಮಾದ ಬಳಿಕ ನಾನು ನಿರ್ದೇಶಿಸುತ್ತಿರುವ ಚಿತ್ರವಿದು. ನೋಡುಗನಿಗೆ ಬೇಕಾದ ಎಲ್ಲಾ ಅಂಶಗಳನ್ನೊಳಗೊಂಡ ಸದಭಿರುಚಿಯ ಚಿತ್ರವಿದು ಎಂದು ನಿರ್ದೇಶಕರು ತಿಳಿಸಿದರು.



ವಿರಾಮ
ಓಡುವ ಲೋಕಕ್ಕೆ ಒಂದು ನಿಲ್ದಾಣ

ವಿಶ್ವವಾಣಿ
29.12.2024
ಭಾನುವಾರ

ಯಾವ ವಿಮಾನ ಹತ್ತಿದರೂ ಇವರಿಬ್ಬರಿಗೇ ಲಾಭ!

ಇಂದು ವಿಮಾನಯಾನ ಸಾರ್ವತ್ರಿಕ. ಜನಸಾಮಾನ್ಯರೂ ವಿಮಾನದಲ್ಲಿ ಪಯಣಿಸುವ ಕ್ರಾಂತಿ ನಡೆದದ್ದು ಇಪ್ಪತ್ತೊಂದನೆಯ ಶತಮಾನದಲ್ಲಿ. ನಮ್ಮ ದೇಶದ ಬಹಳಷ್ಟು ಜನರು, ದೇಶದ ಒಳಗೂ, ಹೊರದೇಶಕ್ಕೂ ವಿಮಾಯಯಾನ ಮಾಡುತ್ತಿದ್ದಾರೆ. ಇಲ್ಲೊಂದು ಸ್ವಾರಸ್ಯವಿದೆ. ಪ್ರಯಾಣಿಕರು ಹಾರಿಹೋಗಬಲ್ಲ ಯಾವುದೇ ವಿಮಾನದಲ್ಲಿ ಪಯಣಿಸಿದರೂ, ಕೇವಲ ಎರಡೇ ಎರಡು ಸಂಸ್ಥೆಗಳಿಗೆ ಪರೋಕ್ಷ ಲಾಭ; ಏಕೆಂದರೆ, ಜಗತ್ತಿನಲ್ಲಿ ದೊಡ್ಡ ಮಟ್ಟದಲ್ಲಿ ಪ್ರಯಾಣಿಕ ವಿಮಾನಗಳನ್ನು ತಯಾರಿಸುವ ಕಂಪೆನಿಗಳು ಕೇವಲ ಎರಡು!

» ವಿಕ್ರಮ ಜೋಶಿ

ನೂರು ವರ್ಷಗಳ ಹಿಂದಿನ ಮಾತಿದು. ಆಗ ಅಮೆರಿಕದವರ ತುಕಡಿಯಲ್ಲಿ ಕೇವಲ 23 ಯುದ್ಧ ವಿಮಾನಗಳಿದ್ದವು. ಅದೇ ಯುರೋಪಿನ ದೇಶಗಳಾದ ಫ್ರಾನ್ಸ್, ಜರ್ಮನಿ ಹಾಗೂ ಬ್ರಿಟನ್‌ಗಳ ಪಾಳಯದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಯುದ್ಧವಿಮಾನಗಳು. ಇವತ್ತು ಅದೇ ಕಾಲವು ಹೇಗೆ ಮಗುಚಿ ಬಿದ್ದಿದೆ ನೋಡಿ! ಇಂದು ಇಡೀ ಯುರೋಪಿಯನ್ ದೇಶಗಳ ಸೈನ್ಯಗಳಲ್ಲಿ ಇರುವುದಕ್ಕಿಂತ ಹೆಚ್ಚು ಯುದ್ಧ ವಿಮಾನಗಳು ಅಮೆರಿಕದ ಅಧೀನದಲ್ಲಿವೆ. ಮನುಷ್ಯನ ಜೀವನಮಟ್ಟದ ಬೆಳವಣಿಗೆ ಹಾಗೂ ದೇಶದ ಅಭಿವೃದ್ಧಿಯನ್ನು ಆ ದೇಶದ ಬಾಹ್ಯಾಕಾಶ ಸಂಶೋಧನೆ ಮತ್ತು ವಿಮಾನಗಳ ಲೆಕ್ಕದಲ್ಲಿ ಅಳೆಯುವುದುಂಟು. ಇಂದು ಮನುಷ್ಯನ ಜೀವನಮಟ್ಟದಲ್ಲಿ, ದೇಶದ ಅಭಿವೃದ್ಧಿಯಲ್ಲಿ, ಅಂತರಿಕ್ಷಯಾನದಲ್ಲಿ, ವಿಮಾನದ ಅಂಕೆ ಸಂಖ್ಯೆಯಲ್ಲಿ ಎಲ್ಲದರಲ್ಲೂ ಅಮೆರಿಕದ ಒಂದು ಹತ್ತು ಹೆಜ್ಜೆ ಮುಂದೆಯೇ ಇದೆ. ಸಮಕಾಲೀನವಾಗಿ ಅಮೆರಿಕದ ಮುಕುಟದ ರತ್ನಗಳಾಗಿ ನಾಸಾ, ಎನ್ವಿಡಿಯಾ, ಮೈಕ್ರೋಸಾಫ್ಟ್, ಗೂಗಲ್, ಅದು, ಇದು ಅಂತ ನೂರು ಕಂಪನಿಗಳಿವೆ. ಮೊದಲೋ ಬೋಯಿಂಗ್ ತರಹದ ಒಂದೋ ಎರಡೋ ರತ್ನಗಳು ಮಾತ್ರ ಅದರ ಕಿರೀಟದಲ್ಲಿತ್ತು! ಅಮೆರಿಕವು ವೈಮಾನಿಕ ಕ್ಷೇತ್ರದಲ್ಲಿ ಜಗತ್ತಿನ ಸೂಪರ್ ಪವರ್ ಆಗುವುದಕ್ಕೆ ಮುಖ್ಯ ಕಾರಣ ಬೋಯಿಂಗ್ ಎನ್ನುವ ವಿಮಾನ ತಯಾರಿಕೆಯ ಕಂಪನಿ.

1916ರಲ್ಲಿ ಶುರುವಾದ ಈ ಕಂಪನಿ 1960ರೊಳಗೆ ಜಗತ್ತಿನ ಅತೀ ದೊಡ್ಡ ವಿಮಾನ ವ್ಯಾಪಾರದ ಕಂಪನಿಯಾಗಿ ಬೆಳೆದು ನಿಂತಿತ್ತು. ಆ ಸಮಯದಲ್ಲಿ ನಾಸಾದ ಪ್ರಮುಖವಾದ ಯೋಜನೆಗಳಿಗೆ ಬೇಕಾದ ರಾಕೆಟ್‌ಗಳನ್ನು ತಯಾರಿಸಿದ್ದೂ ಇದೇ ಕಂಪನಿ. ಮನುಜನು ಚಂದ್ರನ ಮೇಲೆ ಮೊದಲ ಬಾರಿಗೆ ಕಾಲಿಟ್ಟಿದ್ದು ಕೂಡ ಈ ಬೋಯಿಂಗ್ ಕಂಪನಿಯು ವಿನ್ಯಾಸಗೊಳಿಸಿದ ರಾಕೆಟ್ ಮೂಲಕವೇ! ಯುದ್ಧ ವಿಮಾನ, ರಾಕೆಟ್ ಅಷ್ಟೇ ಅಲ್ಲ ಪ್ರಯಾಣಿಕ ವಿಮಾನ ಮತ್ತು ಹೆಲಿಕಾಪ್ಟರ್‌ಗಳನ್ನು ಕೂಡ ಅದು ತಯಾರಿಸುತ್ತದೆ. ವಿಮಾನ ತಯಾರಿಕೆಯ ರಂಗದಲ್ಲಿ ಬೋಯಿಂಗ್ ಕಂಪನಿಯ ಭಾಯಿಗಿರಿಯನ್ನು ತಡೆಯಲು ಯುರೋಪಿಯನ್ ದೇಶಗಳ ಒಕ್ಕೂಟವು ಸಿದ್ಧಪಡಿಸಿದ ಇನ್ನೊಂದು ಪ್ರತಿಸ್ಪರ್ಧಿ ಏರ್‌ಬಸ್. ಇವತ್ತು ಜಗತ್ತಿನ ಅತೀ ದೊಡ್ಡ ವಿಮಾನ ಕಂಪನಿಗಳಲ್ಲಿ ಇವೆರಡೂ ಮೊದಲ ಸ್ಥಾನದಲ್ಲೇ ಬರುತ್ತವೆ!

ಇಬ್ಬರಿಗೂ ಪೈಪೋಟಿ

ಈಗ ಬೋಯಿಂಗ್ ಕಂಪನಿಯು ಜಗತ್ತಿನ ಅತೀ ದೊಡ್ಡ ಪ್ರಯಾಣಿಕ ವಿಮಾನ ತಯಾರಿಕೆಯ ಕಂಪನಿ. ಇದಕ್ಕೆ ಹೋಲಿಸಿದರೆ ಏರ್‌ಬಸ್ ಏನು ಕಡಿಮೆಯಲ್ಲ; ವಿಮಾನವನ್ನು ಸರಬರಾಜು ಮಾಡುವಲ್ಲಿ ಅದರದ್ದೇ ಎತ್ತಿದ ಕೈ. ಒಬ್ಬರಿಗೊಬ್ಬರು ಕಣ್ಣಲ್ಲಿ ಕಣ್ಣಿಟ್ಟುಕೊಂಡು ಪೈಪೋಟಿಯಲ್ಲಿದ್ದಾರೆ. ಇಬ್ಬರ ಬೊಕ್ಕಸದಲ್ಲೂ ಆರ್ಡರ್‌ಗಳಿಗೇನು ಕಡಿಮೆಯಿಲ್ಲ. ಆದರೆ ಬೇಡಿಕೆಗೆ ತಕ್ಕ ವೇಗದಲ್ಲಿ ವಿಮಾನವನ್ನು ತಯಾರಿಸಲು ಇವರಿಬ್ಬರೂ ಹಿಂದೆ ಬಿದ್ದಿದ್ದಾರೆ. ಬೋಯಿಂಗ್ ಕಂಪನಿಯದ್ದಂತೂ ದಿನಬೆಳಗಾದರೆ ಒಂದಲ್ಲಾ ಇನ್ನೊಂದು ಸಮಸ್ಯೆ. ಏರ್ ಬಸ್‌ನ ಪರಿಸ್ಥಿತಿ ಕೊಂಚ ಒಳಿತಾಗಿದ್ದರೂ ಕೂಡ ಅದೂ ಬಿಡಿಭಾಗಗಳ ಸರಬರಾಜಿಲ್ಲದೆ ಒದ್ದಾಡುತ್ತಿದೆ. ವಿಮಾನಯಾನದ ಕ್ಷೇತ್ರದಲ್ಲಿ ನೂರಾರು ಕಂಪನಿಗಳಿರಬಹುದು, ಅತ್ಯಂತ ಬಿರುಸಿನ ಸ್ಪರ್ಧೆಯಿರಬಹುದು.

ಆದರೆ ವಿಮಾನ ತಯಾರಿಕೆಯಲ್ಲಿ ಮಾತ್ರ ಈ ಇಬ್ಬರದ್ದೇ ದರ್ಬಾರು! ಅವರು ಮಾಡಿಕೊಟ್ಟಾಗ ಗ್ರಾಹಕರು ವಿಮಾನವನ್ನು ತಗೆದುಕೊಳ್ಳಬೇಕು. ಇದನ್ನೇ ಏಕಸ್ವಾಮ್ಯತೆ ಎನ್ನುವುದು. ನೆನಪಿರಲಿ, ನಾವು ಈ ಪ್ರಥ್ವಿಯಲ್ಲಿ ಯಾವುದೇ ಪ್ರಯಾಣಿಕ ವಿಮಾನವನ್ನು ಹತ್ತಿದರೂ ಕೂಡ ಅದು ಒಂದೇ ಅಮೆರಿಕ ಇಲ್ಲವೇ ಫ್ರಾನ್ಸ್ ದೇಶದಲ್ಲಿ ತಯಾರಾಗಿದ್ದು. ವಿಮಾನಯಾನಕ್ಕೆ ನಾವು ತೆರುವ ಹಣದ ಕಿಂಚಿತ್ತು ಪಾಲು ಈ ಎರಡು ಕಂಪನಿಗಳಿಗೇ ತಲುಪುತ್ತದೆ ಎನ್ನಬಹುದು. ಏಕೆಂದರೆ ಇವೆರಡು ದೇಶದ ಈ ಎರಡು ಕಂಪೆನಿಗಳನ್ನು ಬಿಟ್ಟರೆ ಬೇರೆ ಯಾವ ದೇಶವೂ ಪ್ರಯಾಣಿಕ ವಿಮಾನಗಳನ್ನು ತಯಾರಿಸುವುದಿಲ್ಲ ಇಲ್ಲ ಎನ್ನಬಹುದು. ಎಲ್ಲೋ ಒಂದೆರಡು ಸಣ್ಣ ಪುಟ್ಟ ಗಾತ್ರದ ವಿಮಾನಗಳನ್ನು ಕೆಲವೊಂದು ಕಂಪನಿಗಳು ತಯಾರಿಸುತ್ತವೆ. ಆದರೆ ಅದರ ಷೇರು ನಗಣ್ಯ. ಕೆಲವು ವರ್ಷಗಳ ಹಿಂದೆ ಚೀನಾದ ಒಂದು ಕಂಪನಿಯು ತನ್ನದೇ ಸ್ವಂತ ಪರಿಶ್ರಮದಿಂದ ಪ್ರಯಾಣಿಕ ವಿಮಾನವನ್ನು ತಯಾರಿಸಿ ಪ್ರಯೋಗ ನಡೆಸುತ್ತಿದೆ. ಆದರೆ ಅದು ಬೋಯಿಂಗ್ ಹಾಗೂ ಏರ್‌ಬಸ್ ಜೊತೆ ಕುಸ್ತಿಗಿಳಿಯಲು ಇನ್ನೂ ಒಂದು ದಶಕವು ಬೇಕಾದೀತು. ಭಾರತವೂ ಈ ನಿಟ್ಟಿನಲ್ಲಿ ಅಂಬೆಗಾಲನಿಡುತ್ತಿದೆ!

ಅದೇನೇ ಇದ್ದರೂ ಈ ಜಗತ್ತಿಗೆ ವಿಮಾನ ಸರಬರಾಜು ಮಾಡುವವರು ಹಾಲಿಯಲ್ಲಿ ಇಬ್ಬರೇ. ನಾವು ಯಾವುದೇ ಏರ್ಲೈನ್ಸ್ ಬಳಸಿದರೂ ಅದಲ್ಲಿಷ್ಟು ಭಾಗ ಲಾಭವು ಬೋಯಿಂಗ್ ಅಥವಾ ಏರ್‌ಬಸ್‌ಗೆ ಹೋಗುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

ಉಳಿದ ದೇಶಗಳು ವಿಮಾನ ತಯಾರಿಕೆಯ ಸಾಮರ್ಥ್ಯವನ್ನು ಯಾಕೆ ಹೊಂದಿಲ್ಲ? ಎನ್ನುವ ಪ್ರಶ್ನೆ ಮೂಡಬಹುದು. ಕಳೆದ ನೂರು ವರ್ಷಗಳಲ್ಲಿ ಅರ್ಧ ಭಾಗ ಅಮೆರಿಕ ಹಾಗೂ ಯುರೋಪಿಯನ್ ದೇಶಗಳನ್ನು ಬಿಟ್ಟರೆ ಬಹುತೇಕ ರಾಷ್ಟ್ರಗಳು ಗುಲಾಮಗಿರಿಯಲ್ಲೇ ಕಳೆದವು. ಸ್ವಾತಂತ್ರ್ಯ ಸಿಕ್ಕನಂತರ ಅವರಿಗೆ ವಸತಿ, ಆಹಾರ ಹಾಗೂ ಇತರೆ ಮೂಲಭೂತ ಸೌಕರ್ಯಗಳನ್ನು ಪೂರೈಸುವುದೇ ಮುಖ್ಯವೆನಿಸಿತು ವಿನಾ ವಿಮಾನ ತಯಾರಿಕೆಯಲ್ಲ. ವಿಮಾನ ತಯಾರಿಕೆಯು ಅತ್ಯಾಧುನಿಕ ತಂತ್ರಜ್ಞಾನದ ರಂಗ, ಅದರಲ್ಲಿ ಹೂಡಿಕೆಯು ಅತಿ ಹೆಚ್ಚು. ಮುಂದಿನ ನೂರು ವರ್ಷಗಳ ದೃಷ್ಟಿಕೋನವನ್ನು ಇಟ್ಟುಕೊಂಡು ಅದರ ಬೆಳವಣಿಗೆಗೆ ಕೈ ಹಾಕಬೇಕಾಗುತ್ತದೆ. ಹೀಗಾಗಿ ಯಾರೂ ಆ ಕಡೆ ನುಸುಳಲಿಲ್ಲ. ಇನ್ನೊಂದು ಗಂಭೀರವಾದ ವಿಷಯವೆಂದರೆ ಅಮೆರಿಕ ಹಾಗೂ ಯುರೋಪ್ ದೇಶಗಳು ವಿಮಾನ ತಯಾರಿಕೆಯ ಕುರಿತಾದ ರಹಸ್ಯಗಳನ್ನು ಎಲ್ಲರಿಗೂ ಬಿಟ್ಟುಕೊಡಲಿಲ್ಲ. ಹಾಗೆಯೇ ಅಲ್ಲಿ ಬೇಕಾದ ವಿನ್ಯಾಸದ ಪರಿಭಾಷೆಗಳನ್ನು ಕೂಡ ತಮಗೆ ಪೂರಕವಾಗುವಂತೆ ಇಟ್ಟುಕೊಂಡಿದ್ದಾರೆ. ಇವೆಲ್ಲ ಕಾರಣಗಳಿಂದ ಇಂದು ನಾವು ಹತ್ತುವ ವಿಮಾನಗಳು ಕೇವಲ ಎರಡೇ ರಾಷ್ಟ್ರಗಳಲ್ಲಿ ತಯಾರಾಗಿರುವಂತಹದ್ದು!

ನಮ್ಮ ದೇಶ ಬಹು ದೊಡ್ಡ ಗ್ರಾಹಕ

ಇವತ್ತಿನ ಮಟ್ಟಿಗೆ ಬೋಯಿಂಗ್ ಕಂಪನಿಯ ಹತ್ತಿರ ಸುಮಾರು 5700 ವಿಮಾನಗಳ ಮತ್ತು ಏರ್‌ಬಸ್‌ಗೆ ಅಜಮಾಸು 8500 ಕ್ಕೂ ಹೆಚ್ಚು ವಿಮಾನಗಳ ಆರ್ಡರ್‌ಗಳು ಸಿಕ್ಕಿವೆ. ಒಂದು ವಿಮಾನದ ಬೆಲೆ ಸರಾಸರಿ ನೂರು ಮಿಲಿಯನ್ ಡಾಲರ್ ಅಂದುಕೊಂಡರೂ ಒಟ್ಟೂ ವಹಿವಾಟಿನ ಮೌಲ್ಯ ಒಂದು ಟ್ರಿಲಿಯನ್ ಡಾಲರ್‌ಗಳಷ್ಟು! ಅದರ ನಂತರ ಆ ವಿಮಾನಗಳ ದೇಖರೇಕೆ ಮಾಡುವುದು, ತರಬೇತಿ, ಅದು, ಇದು ಅಂತ ಇನ್ನಷ್ಟು ವ್ಯಾಪಾರ. ಇವೆಲ್ಲವೂ ಎರಡೇ ದೇಶದ ಕೈಯಲ್ಲಿದೆಯಲ್ಲ! ಭಾರತದ ಏರ್ಲೈನ್ಸ್ ಕಂಪನಿಗಳದ್ದೇ ಸಾವಿರಕ್ಕೂ ಹೆಚ್ಚು ವಿಮಾನಗಳ ಆರ್ಡರ್ ಇದೆ. ಭಾರತಕ್ಕೆ ಎಂತಹ ನಷ್ಟ! ಆಗಿದ್ದು ಆಗಿ ಹೋಯಿತು, ಮಿಂಚಿದ ಕಾಲಕ್ಕೆ ತುಂಬಾ ಚಿಂತಿಸಿ ಫಲವಿಲ್ಲ. ಇವತ್ತಿನದು ತಂತ್ರಜ್ಞಾನ ಲೋಕ, ಭವಿಷ್ಯದಲ್ಲಿ ಭಾರತದ ಪರಿಸ್ಥಿತಿ ಮತ್ತೆ ಹೀಗಾಗಬಾರದು. ವಿಶೇಷವಾಗಿ ಸೃಷ್ಟಿಶೀಲ ಕೃತಕ ಬುದ್ಧಿಮತ್ತೆಯ ಯುಗದಲ್ಲಂತೂ ಭಾರತವು ಮುಂಚೂಣಿಯಲ್ಲಿರಬೇಕು. ಹಾಗೆಯೇ ಆಗಿತ್ತಿದೆ. ನಾವು, ನೂರಾ ನಲವತ್ತು ಕೋಟಿ ಜನರು ಸೇರಿ, ಜಗತ್ತಿನ ಕೃತಕ ಬುದ್ಧಿಮತ್ತೆಯ ರಥವನ್ನು ಎಳೆಯುತ್ತಿದ್ದೇವೆ!

ನಮ್ಮ ದೇಶದ ಎ ಐ

ಇವತ್ತು ಏರ್‌ಇಂಡಿಯಾದ ಏಐಗೆ ಜಗತ್ತಿನಾದ್ಯಂತ ಬೇಡಿಕೆ ಹೆಚ್ಚಿದೆ. ಏರ್ ಇಂಡಿಯಾದ ಏಐ.ಜಿ ಎನ್ನುವುದು ಗ್ರಾಹಕರ ಸೇವೆಯಲ್ಲಿ ತೊಡಗಿಕೊಂಡಿರುವ ಒಂದು ಚಾಟ್‌ಬಾಟ್. 2023ರಲ್ಲಿ ಬಿಡುಗಡೆಯಾದ ಈ ಸೃಷ್ಟಿಶೀಲ ಕೃತಕ ಬುದ್ಧಿಮತ್ತೆಯ ಮೇಲೆ ತಯಾರಾದ ಚಾಟ್‌ಬಾಟ್ ಇಲ್ಲಿಯ ತನಕ ಸುಮಾರು ನಾಲ್ಕು ಕೋಟಿ ಗ್ರಾಹಕರ ಸವಾಲುಗಳನ್ನು ಸ್ವೀಕರಿಸಿ ಅದಕ್ಕೆ ಉತ್ತರಿಸಿದೆ. ಪ್ರತಿದಿನವೂ ಸುಮಾರು ಮೂವತ್ತು ಸಾವಿರ ಗ್ರಾಹಕರ ಪ್ರಶ್ನೆಗಳನ್ನು ಇದು ಬಗೆಹರಿಸುತ್ತದೆ. ಏರ್‌ಇಂಡಿಯಾದ 97% ಗೂ ಹೆಚ್ಚು ಗ್ರಾಹಕರ ಸಮಸ್ಯೆಗಳು ಯಾವುದೇ ಗ್ರಾಹಕ ಪ್ರತಿನಿಧಿಗಳ ಸಹಾಯವಿಲ್ಲದೇ ಕೇವಲ ಏಐ.ಜಿಯ ಮೂಲಕ ಬಗೆಹರಿಯುತ್ತವೆ. ಇಂತಹ ಒಂದು ಅದ್ಭುತ ತಂತ್ರಜ್ಞಾನವನ್ನುಸೃಷ್ಟಿಸುವುದು ಸುಲಭವಲ್ಲ. ಈ ಸೇವೆಗೆ ಮನಸೋತು ಜಗತ್ತಿನ ಪ್ರಮುಖ ಏರ್ಲೈನ್ಸ್‌ಗಳು ಒಂದೇ ಸವನೆ ತಮಗೂ ಒದಗಿಸಿಕೊಡಬೇಕೆಂದು ಬೇಡಿಕೆಯಿಟ್ಟಿವೆ. ಮುಂದೆ ಏರ್‌ಇಂಡಿಯಾವು ವಿಮಾನಯಾನ ಕ್ಷೇತ್ರದ ಗ್ರಾಹಕರ ಸೇವೆಯಲ್ಲಿ ಬಳಸಬಹುದಾದ ಜಗತ್ತಿನ ಅತೀ ದೊಡ್ಡ ಚಾಟ್ ಬಾಟ್ ಸೇವೆಯನ್ನು ನೀಡುವ ಸಾಧ್ಯತೆಯಿದೆ. ಆಗ ನಾವು ಜಗತ್ತಿನ ಯಾವುದೇ ಏರ್ ಲೈನ್ಸ್ ಆಗಿರಲಿ ಅದರಲ್ಲಿ ಬಳಸುವ ಏಐ ಭಾರತದ್ದು ಎಂದು ಹೆಮ್ಮೆ ಪಡಬಹುದು!

ಆತ್ಮಾವಲೋಕನದ ಸಮಯ!

» ಗುಂಡೂ ಶಂಕರ್, ನ್ಯೂಜೆರ್ಸಿ

ಅಮೆರಿಕದಲ್ಲಿ ಚಳಿಗಾಲ ಅಡಿಯಿಟ್ಟು ತಿಂಗಳು ಕಳೆದಿದೆ. ಡಿಸೆಂಬರ್ 21ರಂದು ಚಳಿಗಾಲದ ಅಧಿಕೃತ ಅರಂಭವಾದರೂ ಅದಕ್ಕೆ ಮುಂಚೆಯೇ ದೇಶದಲ್ಲಿ ಭಯಂಕರ ಶೀತಲ ಹವೆಯ ಹೊಡೆತ, ಜೊತೆಗೆ ಅಲ್ಲಲ್ಲಿ ಹಿಮಪಾತವೂ ಪ್ರಾರಂಭವಾಗಿರುತ್ತದೆ. ಇನ್ನೀಗ ಕೆಲವು ತಿಂಗಳು ಹಗಲಿನ ಅವಧಿ ಕಡಿಮೆಯಾಗುತ್ತದೆ. ಪ್ರತಿ ಶಿಶಿರದಲ್ಲೂ ಇಲ್ಲಿಯ ವಾತಾವರಣದಲ್ಲಿ ಗಾಢ ಬದಲಾವಣೆಯ ಮೋಡಿ ನಮ್ಮನ್ನು ಆವರಿಸುತ್ತದೆ. ಈ ಬಾರಿಯೂ ಅದಕ್ಕೆ ಹೊರತೇನಲ್ಲ. ಇನ್ನೇನು ಈ ವರ್ಷ ಮಗ್ಗಲು ಬದಲಾಯಿಸುತ್ತಿದ್ದಂತೆ ಕಾಲವು ಆಗಲೇ ಹೊಸವರ್ಷದ ತಿರುವಿನಲ್ಲಿ ನಿಂತಿದೆ. ದೇಶವೆಲ್ಲ ಕ್ರಿಸ್ಮಸ್ ಮತ್ತು ಹೊಸ ವರ್ಷದ ಸಂಭ್ರಮಾಚರಣೆಗೆ ಸಜ್ಜುಗೊಂಡಿದೆ.

ಈ ದಿನಗಳಲ್ಲಿ ಹಗಲುಗಳನ್ನು ದೀರ್ಘರಾತ್ರಿಗಳು ಬಹುಬೇಗ ಆವರಿಸಿಕೊಳ್ಳುತ್ತವೆ. ಶಿಶಿರದ ನೀರವ ರಾತ್ರಿಗಳೆಂದರೆ ಗಾಢ ನಿಶ್ಚಲತೆಯೊಂದು ಮೈದಾಳುವ ಅಪೂರ್ವ ಸಮಯ. ಹಿಮಪಾತವಾದರಂತೂ ಎಲ್ಲೆಲ್ಲೂ ಹರಡಿಕೊಂಡ ದಟ್ಟ ಮಂಜಿನ ಚಾದರ ಸುತ್ತಲಿನ ಶಬ್ದಗಳನ್ನೆಲ್ಲ ಹೀರಿಕೊಂಡಂತೆ ಭಾಸವಾಗುತ್ತದೆ. ಆಕಾಶದುದ್ದಕ್ಕೂ ಹರಡಿದ ತಾರೆಗಳ ಮಿನುಗಿನ ಅಡಿಯಲ್ಲಿ ಆ ಬಿಳಿಯ ಚಾದರ ಬೆಳದಿಂಗಳ ಕೋಮಲ ಪ್ರಕಾಶದಲ್ಲಿ ಮೀಯುತ್ತಿದ್ದಾಗ ದಿವ್ಯ ಪ್ರಶಾಂತತೆಯ ವಾತಾವರಣವನ್ನು ಸೃಷ್ಟಿಸಿಬಿಡುತ್ತದೆ. ಕೆಲ ರಾತ್ರಿಗಳಲ್ಲಿ ಹೆಪ್ಪುಗಟ್ಟಿದ ಮಳೆ ಸುರಿವಾಗ ಫಳಫಳ ಹೊಳೆಯುವ ಹಿಮಮಣಿಗಳ ನವಿರಾದ ಪದರವೊಂದು ಗಿಡಕಂಟಿಗಳ ಮೇಲೆಲ್ಲ ನಿಂತು ಬೆಳದಿಂಗಳಿನಲ್ಲಿ ಸ್ಫಟಿಕಗಳಂತೆ ಕಂಗೊಳಿಸುತ್ತವೆ. ಒಮ್ಮೊಮ್ಮೆ ಶೀತಲ ಗಾಳಿಯ ಅಲೆಯೊಂದು ಗಿಡಗಳಲ್ಲಿ ಸುಳಿದಾಡಿ ನವಿರಾದ ಕಂಪನವನ್ನುಂಟುಮಾಡಿದ ಕ್ಷಣದಲ್ಲಿ ಪ್ರಕೃತಿ ಆ ಚಳಿಗಾಲದ ರಾತ್ರಿಯಲ್ಲಿ ಕ್ಷಣಮಾತ್ರಕ್ಕೆ ದೀರ್ಘಶ್ವಾಸ ತೆಗೆದುಕೊಳ್ಳಲು ನಿಂತುಬಿಟ್ಟಿತೇನೋ ಎಂದು ಭಾಸವಾಗುತ್ತದೆ. ಆ ಅದ್ಭುತ ಕ್ಷಣ ಸೃಷ್ಟಿಸುವ ಮಾಯಾಲೋಕದ ಮೋಡಿಗೆ ನಾವು ಮಂತ್ರಮುಗ್ಧರಾಗುತ್ತೇವೆ.

ಮೂಲ ನಿವಾಸಿಗಳ ನಂಬಿಕೆ

ಇಲ್ಲಿನ ಮೂಲನಿವಾಸಿಗಳ ಪರಂಪರೆಯ ಪ್ರಕಾರ ಚಳಿಗಾಲವೆಂದರೆ ಆತ್ಮಾವಲೋಕನದ, ಚಿಂತನೆಯ ಸಮಯ. ಹಿಮ ಬಿದ್ದು ಎಲ್ಲೆಡೆ ವಾತಾವರಣ ಮೌನವಾಗಿರುವಾಗ, ರಾತ್ರಿಗಳ ಅವಧಿ ಹೆಚ್ಚಾಗಿ ಜಗತ್ತು ಮಂದಗತಿಯಲ್ಲಿ ಸಾಗುವಾಗ ಅವರ ಮಟ್ಟಿಗೆ ಅದು ಚಿಂತನೆ, ಧ್ಯಾನಗಳಲ್ಲಿ ತೊಡಗಿಕೊಳ್ಳುವ ಮತ್ತು ಪುನರುಜ್ಜೀವನಗೊಳ್ಳುವ ಕಾಲ. ಬಹುತೇಕ ಎಲ್ಲ ಬುಡಕಟ್ಟಿನವರೂ ಈ ಸಮಯದಲ್ಲಿ ಸೂರ್ಯನ ಆರಾಧನೆ ಮತ್ತು ನವವರ್ಷವನ್ನು ಸ್ವಾಗತಿಸುವ ವಿಧಿಗಳನ್ನು ಆಚರಿಸುತ್ತಾರೆ.

ಐರೋಪ್ಯ ದೇಶಗಳಿಂದ ಬಂದ ಮೊದಲ ವಲಸಿಗರು ಮತ್ತವರ ಮುಂದಿನ ಪೀಳಿಗೆಯವರಿಗೆಲ್ಲ ಇದು ಕ್ರಿಸ್ತನ ಜನ್ಮವನ್ನು ಕೊಂಡಾಡುವ ಕ್ರಿಸ್ಮಸ್ ಹಬ್ಬದ ಸಡಗರದ ಸಮಯ. ಇಡೀ ದೇಶವೇ ಈ ಸಂಭ್ರಮದಲ್ಲಿ ಮುಳುಗಿರುತ್ತದೆ. ಕ್ರಿಸ್ಮಸ್ ಆಚರಣೆಯ ಸಿದ್ಧತೆ ತಿಂಗಳುಗಳ ಮುನ್ನವೇ ಪ್ರಾರಂಭವಾಗುತ್ತದೆ. ಕುಟುಂಬ ಮತ್ತು ಸ್ನೇಹಿತರೊಂದಿಗೆ ಸೇರಿ ಆಚರಿಸುವ ಹಬ್ಬ ಇದು.

ನನಗಂತೂ ಇದು ಕಾಲ್ನಡಿಗೆಯಲ್ಲಿ ದೀರ್ಘ ವಿಹಾರ ಮಾಡುವುದಕ್ಕೆ ಅಚ್ಚುಮೆಚ್ಚಿನ ಕಾಲ. ಬೇಗ ಕತ್ತಲು ಆವರಿಸುವುದರಿಂದ ಕೇರಿಯ ಬೀದಿಗಳೆಲ್ಲ ಶಾಂತವಾಗಿರುತ್ತವೆ. ನಿಃಶಬ್ದ ವಾತಾವರಣದಲ್ಲಿ ವಾಕಿಂಗ್ ಒಂದು ಹಿತವಾದ ಅನುಭವ. ಹೆಚ್ಚೂಕಡಿಮೆ ಎಲ್ಲರ ಮನೆಗಳನ್ನೂ ಸುಂದರವಾದ, ತರಹೇವಾರಿ ವಿದ್ಯುದ್ದೀಪಗಳನ್ನು ಬೆಳಗಿಸಿ ಸಿಂಗರಿಸುತ್ತಾರೆ. ಎಲ್ಲೆಡೆ ಹಬ್ಬದ ಛಾಯೆ.

ನೇಟಿವಿಟಿ ಸೀನ್

ಇದರಲ್ಲಿ ವಿಶೇಷವೆಂದರೆ ಅಲಂಕಾರದ ವಿನ್ಯಾಸಗಳ ಪುನರಾವರ್ತನೆ. ಕೆಲವು ವಿನ್ಯಾಸಗಳು ಎಲ್ಲ ಕಡೆ ಕಂಡುಬರುತ್ತವೆ. ಮುಖ್ಯವಾಗಿ ಕ್ರಿಸ್ತನ ಜನ್ಮದೃಶ್ಯದ ಅಲಂಕಾರ. ನೇಟಿವಿಟಿ ಸೀನ್ ಎಂದು ಕರೆಸಿಕೊಳ್ಳುವ ಇದು ಕ್ರಿಶ್ಚಿಯನ್ನರ ಧಾರ್ಮಿಕ ಸಂಕೇತಗಳಲ್ಲಿ ಅತಿ ಮುಖ್ಯವಾದುದು. ತಾಯಿ ಮೇರಿ ಆಗತಾನೇ ಹುಟ್ಟಿದ ಬಾಲ ಯೇಸುವನ್ನು ದೊಡ್ಡಿಯಲ್ಲಿ ಪ್ರಾಣಿಗಳ ಮೇವಿನ ತೊಟ್ಟಿಯಲ್ಲಿಡುತ್ತಾಳಂತೆ. ಅದರ ಅರ್ಥ ತಿನ್ನಲಿಕ್ಕಾಗಿ ಎಂದು. ರೈತರು ಸಾಕುಪ್ರಾಣಿಗಳಿಗಾಗಿ ಅದರಲ್ಲಿ ಒಣ ಹುಲ್ಲನ್ನು ಶೇಖರಿಸಿಡುತ್ತಿದ್ದರು. ಹಸು ಮತ್ತಿತರ ಪ್ರಾಣಿಗಳು ಬೇಕೆಂದಾಗಲೆಲ್ಲ ಮೇವನ್ನು ಬಾಯಾಡಿಸುವುದಕ್ಕೆ ಈ ವ್ಯವಸ್ಥೆ.

ಮೇರಿ ಮತ್ತು ಜೋಸೆಫ್ ಬೆತ್ಲೆಹೆಮ್‌ಗೆ ಬಂದಾಗ ಅವರಿಗೆ ಉಳಿದುಕೊಳ್ಳಲು ವಸತಿಗೃಹದಲ್ಲಿ ಜಾಗ ದೊರೆಯಲಿಲ್ಲ. ಹಾಗಾಗಿ ವಿಧಿಯಿಲ್ಲದೆ ಬೇರೆ ನೆಲೆಯೊಂದನ್ನು ಹುಡುಕಬೇಕಾಯಿತು. ಬಹುಶಃ ಪ್ರಾಣಿಗಳನ್ನು ಕಟ್ಟುವ ಲಾಯ ಅಥವಾ ದೊಡ್ಡಿಯಲ್ಲಿ ರಾತ್ರಿ ಕಳೆಯಬೇಕಾಯಿತು. ಜೀಸಸ್ ಹುಟ್ಟಿದಾಗ ಆ ಮಗುವನ್ನು ತಣ್ಣಗೆ ಕೊರೆಯುವ ನೆಲದ ಮೇಲೆ ಮಲಗಿಸುವುದಕ್ಕೆ ತಾಯಿ ಮೇರಿಯ ಮನಸ್ಸು ಒಪ್ಪಿರಲಿಕ್ಕಿಲ್ಲ. ಹಾಗಾಗಿ ಅಲ್ಲಿ ಆ ಸಮಯಕ್ಕೆ ದೊರೆತ ವಸ್ತುಗಳಲ್ಲಿಯೇ ಆಕೆ ಮಗುವಿಗೊಂದು ವ್ಯವಸ್ಥೆ ಮಾಡಬೇಕಿತ್ತು. ಮೃದುವಾದ ಹುಲ್ಲಿನ ಹಾಸು, ಸುತ್ತಲೂ ಇದ್ದ ಎತ್ತರವಾದ ಬದಿಗಳು, ಎಲ್ಲವೂ ಮಗುವನ್ನು ಸುರಕ್ಷಿತವಾಗಿ ಮಲಗಿಸಲು ಅನುಕೂಲವಾಗಿತ್ತು. ಮಗುವನ್ನು ಅಲ್ಲಿ ಮಲಗಿಸಿದ ಕೂಡಲೇ ದೇವತೆಯೊಬ್ಬಳು ಪ್ರತ್ಯಕ್ಷವಾಗಿ ಅಲ್ಲಿದ್ದ ಕುರಿ ಕಾಯುವವರಲ್ಲಿಗೆ ಹೋಗಿ ಮನುಕುಲದ ಉದ್ಧಾರಕನ ಜನುಮವಾಗಿದೆಯೆಂಬ ಸುವಾರ್ತೆ ತಿಳಿಸುತ್ತಾಳೆ. ಅವರೆಲ್ಲರೂ ದೊಡ್ಡಿಗೆ ಬಂದು ಆ ದೇವನನ್ನು ನೋಡಿ ಕಣ್ತುಂಬಿಸಿಕೊಳ್ಳುತ್ತಾರೆ.

ಸಾಂತಾ ಕ್ಲಾಸ್ ಬಹುಶಃ ಪ್ರಪಂಚದಲ್ಲಿ ಅತ್ಯಂತ ಹೆಸರುವಾಸಿಯಾದ ಕ್ರಿಶ್ಚಿಯನ್ ಸಂಕೇತವೆನ್ನಬಹುದು. ಮಕ್ಕಳಿಗೆ ಪ್ರಿಯವಾಗುವುದು ಸದಾ ನಗುನಗುತ್ತಿರುವ, ತಮ್ಮದೇ ತಾತನನ್ನು ನೆನಪಿಸುವ ಇವನ ಉರುಟುರುಟಾದ ರೂಪ, ಉದ್ದನೆಯ ಬಿಳಿ ಗಡ್ಡ. ಒಳ್ಳೆಯ ಮಕ್ಕಳು ಸಾಂತಾನಿಂದ ಉಡುಗೊರೆ ಪಡೆದುಕೊಳ್ಳುತ್ತಾರೆ ಎಂದು ಚಿಕ್ಕ ವಯಸ್ಸಿನಿಂದಲೇ ಮಕ್ಕಳು ಪಾಠ ಕಲಿಯುತ್ತಾರೆ. ಕ್ರಿಸ್ಮಸ್ ದಿನ ಬೆಳಗಿನಲ್ಲಿ ಮನೆಯವರೆಲ್ಲರ ಜೊತೆ ಉಡುಗೊರೆಗಳ ಪೊಟ್ಟಣ ಬಿಚ್ಚಿ ಸಂಭ್ರಮಿಸುವುದು ಆ ದಿನದ ವಿಶಿಷ್ಟ ಆಚರಣೆ.

ಆಧ್ಯಾತ್ಮಿಕ ಸಂಕೇತ

ಕ್ರಿಶ್ಚಿಯನ್ನರು ಜೀಸಸ್‌ನನ್ನು ಹುಲ್ಲುಹಾಸಿನ ಮೇಲೆ ಮಲಗಿಸಿದ್ದು ಆಕಸ್ಮಿಕವಲ್ಲ ಎಂದೇ ನಂಬುತ್ತಾರೆ. ಪ್ರಾಣಿಗಳು ಮೇವಿನ ತೊಟ್ಟಿಗೆ ಹೊಟ್ಟೆ ತುಂಬಿಸಿಕೊಳ್ಳಲು ಹೋದರೆ ಜೀಸಸ್ ಮಲಗಿರುವ ತೊಟ್ಟಿಗೆ ಭಕ್ತರು ತಮ್ಮ ಆತ್ಮದ ಮೇವಿಗಾಗಿ ಹೋಗುತ್ತಾರೆ. ಹಾಗಾಗಿ ಇದೊಂದು ಶ್ರೇಷ್ಠವಾದ ಆಧ್ಯಾತ್ಮಿಕ ಸಂಕೇತ. ಈ ಧಾರ್ಮಿಕ ಸಾಂಕೇತಿಕತೆಯ ಸರಳತೆ ಮನಸ್ಸಿಗೆ ಹಿತವೆನ್ನಿಸುತ್ತದೆ. ಚಳಿಗಾಲದ ರಾತ್ರಿಯಲ್ಲಿ ಈ ದೃಶ್ಯ ನೋಡಲು ಬಹಳ ಮನೋಹರವೆನ್ನಿಸುತ್ತದೆ. ಇದನ್ನು ಸವಿಯಲು ನೀವು ಕ್ರಿಶ್ಚಿಯನ್ ಆಗಬೇಕೆಂದೇನೂ ಇಲ್ಲ,

ಮತ್ತೊಂದು ಸಾಮಾನ್ಯ ಅಲಂಕಾರವೆಂದರೆ ತನ್ನ ಬಂಡಿಯಲ್ಲಿ ಹಿಮಸಾರಂಗಗಳೊಡನೆ ಕುಳಿತ ಸಾಂತಾ ಕ್ಲಾಸ್. ಸುಮಾರು 4ನೆಯ ಶತಮಾನದವನು ಎನ್ನಲಾದ ಸಂತ ನಿಕೋಲಾಸ್‌ನ ಮೇಲೆ ಕಲ್ಪಿತವಾದವನು ಸಾಂತಾ ಕ್ಲಾಸ್. ಆತ ಮಕ್ಕಳ ಸಂತ, ದಯಾಮಯಿ. ಮಕ್ಕಳಿಗೆ ಗುಟ್ಟಾಗಿ ಉಡುಗೊರೆ ಕೊಡುವುದಕ್ಕೆ ಪ್ರಸಿದ್ಧನಾದವನು. ಈ ಸಂಕೇತ ಯೂರೋಪಿನಿಂದ 19ನೆಯ ಶತಮಾನದಲ್ಲಿ ಅಮೆರಿಕಕ್ಕೆ ಆಮದಾಯಿತು. ಸಾಂತಾ ಕ್ಲಾಸ್ ಬಹುಶಃ ಪ್ರಪಂಚದಲ್ಲಿ ಅತ್ಯಂತ ಹೆಸರುವಾಸಿಯಾದ ಕ್ರಿಶ್ಚಿಯನ್ ಸಂಕೇತವೆನ್ನಬಹುದು. ಮಕ್ಕಳಿಗೆ ಪ್ರಿಯವಾಗುವುದು ಸದಾ ನಗುನಗುತ್ತಿರುವ, ತಮ್ಮದೇ ತಾತನನ್ನು ನೆನಪಿಸುವ ಇವನ ಉರುಟುರುಟಾದ ರೂಪ, ಉದ್ದನೆಯ ಬಿಳಿ ಗಡ್ಡ. ಒಳ್ಳೆಯ ಮಕ್ಕಳು ಸಾಂತಾನಿಂದ ಉಡುಗೊರೆ ಪಡೆದುಕೊಳ್ಳುತ್ತಾರೆ ಎಂದು ಚಿಕ್ಕ ವಯಸ್ಸಿನಿಂದಲೇ ಮಕ್ಕಳು ಪಾಠ ಕಲಿಯುತ್ತಾರೆ. ಕ್ರಿಸ್ಮಸ್ ದಿನ ಬೆಳಗಿನಲ್ಲಿ ಮನೆಯವರೆಲ್ಲರ ಜೊತೆ ಉಡುಗೊರೆಗಳ ಪೊಟ್ಟಣ ಬಿಚ್ಚಿ ಸಂಭ್ರಮಿಸುವುದು ಆ ದಿನದ ವಿಶಿಷ್ಟ ಆಚರಣೆ.

ಸಂಭ್ರಮದ ವ್ಯಾಪಾರೀಕರಣ!

ಇದಲ್ಲದೆ ಪಾಪ್ ಸಂಸ್ಕೃತಿಯ ಅನೇಕ ತಾರೆಗಳೂ ಈ ಕ್ರಿಸ್ಮಸ್ ಅಲಂಕಾರದಲ್ಲಿ ಪಾಲು ಪಡೆದುಕೊಳ್ಳುತ್ತಾರೆ. ಸೂಪರ್‌ಮ್ಯಾನ್, ಸ್ಪೈಡರ್‌ಮ್ಯಾನ್, ಸೂಪರ್ ವುಮನ್‌ನಂತಹ ಹೀರೋಗಳ ದೊಡ್ಡ ಬಲೂನಿನ ಆಕೃತಿಗಳು ಬಹುಶಃ ಮಕ್ಕಳಿಗೆ ಪ್ರಿಯವಾದ ಕಾರಣ ಅವೂ ಧಾರ್ಮಿಕ ಸಂಕೇತಗಳ ಜೊತೆ ರಾರಾಜಿಸುತ್ತವೆ. ಆದರೆ ಇವುಗಳಿಂದ ಕ್ರಿಸ್ಮಸ್‌ನ ವ್ಯಾಪಾರೀಕರಣ ಅತಿಯಾಗಿದೆಯೆಂಬುದೂ ಅಷ್ಟೇ ನಿಜ. ಸಂಪ್ರದಾಯವಾದಿಗಳು ಈ ಬಗ್ಗೆ ದನಿಯೆತ್ತುತ್ತಲೇ ಇರುತ್ತಾರೆ. ಕ್ರಿಸ್ತನನ್ನು ಕ್ರಿಸ್ಮಸ್‌ಗೆ ಮರಳಿ ತನ್ನಿ ಎಂಬುದು ಬಹಳವಾಗಿ ಕೇಳಿಬರುವ ಘೋಷಣೆ.

ಇದಕ್ಕಿಂತ ಖೇದಕರ ಸಂಗತಿಯೆಂದರೆ ಇತ್ತೀಚಿನ ಕೆಲವು ವರ್ಷಗಳಲ್ಲಿ ರಾಜಕೀಯ ಮತ್ತು ಧಾರ್ಮಿಕ ಸಂಕೇತಗಳ ಪರಸ್ಪರ ಮಿಳಿತ. ಧಾರ್ಮಿಕ ಅಲಂಕಾರಗಳೊಂದಿಗೇ ರಾರಾಜಿಸುವ ರಾಜಕೀಯ ಅಭ್ಯರ್ಥಿಗಳ ಸಮರ್ಥನೆ ಮತ್ತು ತಾವು ನಂಬುವ ರಾಜಕೀಯ ನಿಲುವುಗಳ ಬೆಂಬಲದ ಅಲಂಕಾರಗಳು. ಇತ್ತೀಚಿನ ದಿನಗಳಲ್ಲಿ ಸರ್ವೇಸಾಮಾನ್ಯ ಎನ್ನಿಸುವ ಇಂತಹ ಪ್ರದರ್ಶನ ಕೆಲವು ವರ್ಷಗಳ ಹಿಂದೆ ಬಹಳ ಅಪರೂಪವಾಗಿತ್ತು. ರಾಜಕೀಯ ಮತ್ತು ಧಾರ್ಮಿಕತೆ ಅಷ್ಟೊಂದು ಸರಾಗವಾಗಿ ಬೆರೆಯುತ್ತಿರಲಿಲ್ಲ. ಅಮೆರಿಕಾದಲ್ಲಿ ಇವೆರಡನ್ನೂ ಪ್ರತ್ಯೇಕವಾಗಿಡುವ ಪದ್ಧತಿ ಇತ್ತು.

ವಲಸೆ ಬಂದವರು ಕಟ್ಟಿದ ದೇಶ

ಯುರೋಪಿನಲ್ಲಿ ತಮ್ಮ ಮೇಲೆ ನಡೆಯುತ್ತಿದ್ದ ಧಾರ್ಮಿಕ ಕಿರುಕುಳದಿಂದ ಪಾರಾಗಲು ಅಲ್ಲಿಂದ ಪಲಾಯನಗೈದು, ವಲಸೆಬಂದ ಜನರಿಂದ ರೂಪುಗೊಂಡ ರಾಷ್ಟ್ರ ಈ ಅಮೆರಿಕ. ಹಾಗಾಗಿ ಇಲ್ಲಿ ಚರ್ಚ್ ಮತ್ತು ಸರಕಾರದ ಪ್ರತ್ಯೇಕತೆಗೆ ಮೊದಲಿನಿಂದಲೂ ಸಶಕ್ತ ಬೆಂಬಲವಿದೆ. ಥಾಮಸ್ ಜೆಫರ್ಸನ್ ಚರ್ಚ್ ಮತ್ತು ಆಡಳಿತಗಳನ್ನು ಪ್ರತ್ಯೇಕಿಸುವ ಗೋಡೆಯಿರಬೇಕು ಎಂದು ಬಲವಾಗಿ ನಂಬಿದವರು. ಆಡಳಿತ ಚರ್ಚಿನ ವ್ಯವಹಾರಗಳಲ್ಲಿ ತೊಡಗಿಸಿಕೊಂಡರೆ ಚರ್ಚ್ ಭ್ರಷ್ಟವಾಗುವ ಅಪಾಯವಿದೆ. ಅದಕ್ಕಾಗಿ ಆಡಳಿತ ಧಾರ್ಮಿಕ ಚಟುವಟಿಕೆಗಳಲ್ಲಿ ತೊಡಗಬಾರದು ಎಂಬ ವಾದ.

ನಾನು ರಾತ್ರಿ ವಾಯುವಿಹಾರದಲ್ಲಿದ್ದಾಗ ಈ ವಿಚಾರಗಳನ್ನು ಕುರಿತು ಚಿಂತಿಸುತ್ತೇನೆ. ಮೂಲನಿವಾಸಿ ಸಂಸ್ಕೃತಿ ಮತ್ತು ಕ್ರಿಶ್ಚಿಯನ್ ಧರ್ಮಗಳು ಈ ಸಮಯವನ್ನು ತತ್ತ್ವಚಿಂತನೆ ಮತ್ತು ಪ್ರಾರ್ಥನೆಗೆ ಮೀಸಲಾಗಿಡಬೇಕೆಂದು ಬೋಧಿಸುತ್ತವೆ. ಈ ನವವರ್ಷ ಕಟ್ಟಿಕೊಡಲಿರುವ ಸನ್ನಿವೇಶಗಳ ಸಾಧ್ಯತೆಗಳ ಬಗ್ಗೆ ಮನಸ್ಸು ನೆನಪಿಸುತ್ತದೆ. ಅಮೆರಿಕದ ಅನೇಕ ಸಾಮಾಜಿಕ ವಲಯಗಳಲ್ಲಿ ಈ ಚಿಂತನೆಯನ್ನು ಭಯ, ಆತಂಕಗಳು ಮುಸುಕಾಗಿಸಿವೆ. ಧಾರ್ಮಿಕತೆ ಮತ್ತು ಆಡಳಿತದ ನಡುವಿನ ಗೆರೆ ಮತ್ತಷ್ಟು ಅಳಿಸಿಹೋಗಬಹುದೆಂದು ನಾನು ಅಳುಕುತ್ತಿದ್ದೇನೆ. ಈ ಬದಲಾವಣೆ ಹಲವರಿಗೆ ಅಪಾಯಗಳನ್ನೂ ತಂದೊಡ್ಡಬಹುದು.

ಟ್ರಂಪ್ ಬಹಳ ಪರಿಣಾಮಕಾರಿಯಾದ ಧಾರ್ಮಿಕ ಬದಲಾವಣೆಗಳಿಗೆ

ಕಾರಣವಾಗಿದ್ದಾನೆ. ಅನೇಕ ವಲಯಗಳಲ್ಲಿ ಆತನನ್ನು ಕ್ರಿಶ್ಚಿಯನ್ನರ ರಕ್ಷಕ ಎಂದೇ ಭಾವಿಸಲಾಗುತ್ತಿದೆ. ಆತನ ಗೆಲುವಿನ ಒಂದು ಪ್ರಮುಖ ಕಾರಣವೇ ಸೌವಾರ್ತಿಕರು (ಇವಂಗ್ಯಾಲಿಕಲ್ಸ್) ನೀಡಿದ ಅಪಾರ ಬೆಂಬಲ. ಅಮೆರಿಕವನ್ನು ಕ್ರಿಶ್ಚಿಯನ್ ದೇಶವನ್ನಾಗಿ ಮಾಡಲು ಟ್ರಂಪ್‌ನನ್ನು ದೇವರೇ ಕಳಿಸಿದ್ದಾನೆಂದು ಕೆಲವರ ನಂಬಿಕೆ. ಅವರ ಋಣ ತೀರಿಸುವ ಬಾಧ್ಯತೆಯೂ ಆತನ ಹೆಗಲ ಮೇಲಿದೆ. ತನ್ನ ಮಂತ್ರಿಮಂಡಲವನ್ನು ರಚಿಸುವ ವಿಷಯದಲ್ಲಿ ಈ ಸೌಜನ್ಯ ಹಿಂತಿರುಗಿಸುವಿಕೆಯ ಕೆಲವು ಸೂಚನೆಗಳು ಕಾಣತೊಡಗಿವೆ ಕೂಡ. ಹೊಸ ಆಡಳಿತದಲ್ಲಿ ರಕ್ಷಣಾ ಮಂತ್ರಿಯ ಸ್ಥಾನಕ್ಕೆ ಸೂಚಿಸಲಾದ ಅಭ್ಯರ್ಥಿಯೋ ಧರ್ಮಯುದ್ಧದಲ್ಲಿ (ಕ್ರುಸೇಡ್) ನಂಬಿಕೆ ಇಟ್ಟವನು. ಇಂತಹ ಯುದ್ಧಗಳಲ್ಲಿ ಹೋರಾಡಿ ಪವಿತ್ರ ಭೂಮಿಯನ್ನು ವಶಪಡಿಸಿಕೊಳ್ಳುವುದಕ್ಕೆ ದೇವರೇ ತಮ್ಮನ್ನು ನೇಮಿಸಿದ್ದಾನೆಂದು ಧರ್ಮಯುದ್ಧದ ವೀರರು ನಂಬಿದ್ದರು. ಕೆಲವರ ಅಭಿಪ್ರಾಯದಲ್ಲಿ ಈ ಯುದ್ಧಗಳು ಕೊನೆಯಾಗುವುದೇ ಇಲ್ಲ, ಸ್ವರೂಪ ಮಾತ್ರ ಬದಲಾಗುತ್ತಿರುತ್ತದೆ ಅಷ್ಟೆ.

ಹೊಸ ಆಡಳಿತದ ವಿದೇಶಾಂಗ ನೀತಿಯೂ ಬದಲಾವಣೆಗಳನ್ನು ತರಬಹುದು. ಅಮೆರಿಕದ ಪ್ರಾಶಸ್ತ್ಯವೇ ಮುಖ್ಯ ಗುರಿಯಾಗುವುದೇ ಹೊರತು ಮುಂಚಿನಂತೆ ರಾಜಕೀಯ ಮತ್ತು ಇತರ ಸ್ವಾತಂತ್ರ್ಯಗಳಿಗೆ ಮಹತ್ತ್ವ ಸಿಗಲಾರದು. ವಲಸೆ ನೀತಿಯಲ್ಲಿಯೂ ಮೂಲಭೂತ ಬದಲಾವಣೆಗಳನ್ನು ನಿರೀಕ್ಷಿಸಬಹುದು. ಆರ್ಥಿಕ ನೀತಿಗಳೂ ಇವೇ ಆಧಾರಗಳ ಮೇಲೆ ರೂಪಿತವಾಗಬಹುದು.

ಭಾರತದಂತೆಯೇ ಇಲ್ಲೂ ರಾಜ್ಯ ಸರಕಾರಗಳಿಗೆ ಅನೇಕ ಆಡಳಿತ ವಿಷಯಗಳಲ್ಲಿ ಸ್ವಾಯತ್ತತೆ ಇದೆ. ಆದರೆ 27 ರಾಜ್ಯಗಳಲ್ಲಿ ಇರುವ ರಿಪಬ್ಲಿಕನ್ ರಾಜ್ಯಪಾಲರುಗಳು ಅಧ್ಯಕ್ಷರೊಂದಿಗೆ ಸಹಮತದಿಂದ ಕೆಲಸ ಮಾಡುತ್ತಾರೆ. ಈಗಾಗಲೇ ಹಲವು ಸರ್ಕಾರಿ ಶಾಲೆಗಳಲ್ಲಿ ಬೈಬಲ್ ಕಲಿಕೆಯನ್ನು ಹೇರುತ್ತಿದ್ದಾರೆ. ವಿಜ್ಞಾನ ಮತ್ತು ಇತಿಹಾಸಗಳ ಕಲಿಸುವಿಕೆ ಸಹ ಧಾರ್ಮಿಕ ಪ್ರಭಾವಕ್ಕೆ ಒಳಗಾಗುತ್ತಿವೆ.ಈ ಪ್ರಭಾವ ಮುಂಬರುವ ದಿನಗಳಲ್ಲಿ ಮತ್ತಷ್ಟು ತೀವ್ರವಾಗಬಹುದು. ಜಾಗತಿಕವಾಗಿ, ಪ್ರಮುಖ ಯುರೋಪಿಯನ್ ಮತ್ತು ಏಷ್ಯಾದ ದೇಶಗಳಲ್ಲಿಯೂ ರಾಜಕೀಯ ಬದಲಾವಣೆಗಳ ಅಲೆ ಎದ್ದಿದೆ. ಹಲವು ಕಡೆ ಬಲಪಂಥೀಯ ಪಕ್ಷಗಳು ಅಧಿಕಾರಕ್ಕೆ ಬರುತ್ತಿವೆ.

ಒಂದಂತೂ ನಿಜ. ಜನವರಿ 20ಕ್ಕೆ ಟ್ರಂಪ್ ಸರಕಾರ ಅಧಿಕಾರ ವಹಿಸಿಕೊಳ್ಳಲಿದೆ. ಮುಂದಿನ ಕ್ರಿಸ್ಮಸ್ ಹೊತ್ತಿಗೆ ಈ ಪ್ರಪಂಚದಲ್ಲಿ ಸಾಕಷ್ಟು ಬದಲಾವಣೆಗಳಾಗಿರಬಹುದು! ಆಗ ಚಿಂತನೆಗೆ ಸಾಕಷ್ಟು ಹೊಸ ವಿಚಾರಗಳಿರುತ್ತವೆ. ಇಂತಹ ದಿನಗಳಲ್ಲಿ ನಾನು ಎಲ್ಲರಿಗೂ ಹೊಸವರ್ಷ ಒಳ್ಳೆಯದಾಗಲಿ ಎಂದೇ ಹಾರೈಸುತ್ತೇನೆ.

ಪುಸ್ತಕ ವಿಮಾನ

ಬಯಲುಸೀಮೆ ಬದುಕಿನ ಸ್ಥಿತ್ಯಂತರಗಳು

» ಡಾ.ರವಿಶಂಕರ ಜಿ.ಕೆ.

ವಿಮರ್ಶಕರಾಗಿ, ಕಥೆಗಾರರಾಗಿ ಗುರುತಿಸಿಕೊಂಡಿರುವ ಹಳೆಮನೆ ರಾಜಶೇಖರ ಅವರ ಮೊದಲ ಕಾದಂಬರಿ 'ಒಡಲುಗೊಂಡವರು'. ಬಿಸಿಲನಾಡು ರಾಯಚೂರಿನ ಮಣ್ಣಿನಲ್ಲಿ ಅರಳಿರುವ ಈ ಕಾದಂಬರಿಯು ಮಳೆಗಾಗಿ ಕಾಯುತ್ತಿರುವ ಊರೊಂದರ ಬದುಕು ಮತ್ತು ಅಲ್ಲಿನ ಜನಜೀವನದಲ್ಲಿನ ಪಲ್ಲಟಗಳನ್ನು ಚಿತ್ರಿಸುತ್ತದೆ. ಕಾದಂಬರಿಯು ಮುಖ್ಯವಾಗಿ ನೆಲ ಮತ್ತು ಮಳೆಯನ್ನು ನಂಬಿಕೊಂಡು ಅನಿಶ್ಚಿತತೆಯಲ್ಲೇ ಬದುಕುತ್ತಿರುವ ಗ್ರಾಮೀಣ ಶ್ರಮಿಕವರ್ಗದ ಕಥನವಾಗಿದ್ದರೂ, ಹಳ್ಳಿಯ ಬದುಕನ್ನು ತಿರಸ್ಕರಿಸಿ ನಗರಕ್ಕೆ ವಲಸೆ ಹೋಗಿರುವ ಮತ್ತು ನಗರಕ್ಕೆ

ಮಳೆಗಾಗಿ ಕಾಯುತ್ತಿರುವ ಹಳ್ಳಿಯೊಂದು, ನಗರೀಕರಣದ ಪ್ರಭಾವಗಳಿಗೆ ಒಳಗಾಗಿ ಅನುಭವಿಸುವ ಸ್ಥಿತ್ಯಂತರಗಳನ್ನು ದಾಖಲಿಸುವ ಕಾದಂಬರಿ 'ಒಡಲುಗೊಂಡವರು'.

ಒಗ್ಗಿಕೊಳ್ಳಲಾಗದೆ ತ್ರಿಶಂಕು ಪರಿಸ್ಥಿತಿಯಲ್ಲಿರುವವರ ಕಥನವೂ ಆಗುತ್ತದೆ. ಅದರ ಜೊತೆಗೆ ಹಳ್ಳಿಗಳನ್ನು ನುಂಗಿ ಹಾಕಲು ಕಾತರಿಸುತ್ತಿರುವ ಕಾರ್ಪೋರೇಟ್ ಕಂಪನಿಗಳ, ಸ್ವಾರ್ಥ ರಾಜಕಾರಣದ ಹುನ್ನಾರಗಳನ್ನು ಬಯಲು ಮಾಡುವ ಕಥಾನಕವಾಗಿಯೂ ಕಾಣಿಸುತ್ತದೆ. ಹಾಗಾಗಿ ಇದು ಹಳ್ಳಿಯೊಂದರ ಏಳುಬೀಳಿನ ಚಿತ್ರಣವನ್ನು ಕಟ್ಟಿಕೊಡುವುದಲ್ಲದೆ ನೆಲಸಂಸ್ಕೃತಿ ಮತ್ತು ಆಧುನಿಕತೆಗಳ ನಡುವೆ ನಡೆಯುತ್ತಿರುವ ಸಂಘರ್ಷದ ಕಥೆಯನ್ನು ಹೇಳುತ್ತದೆ.

ಕಾದಂಬರಿಯಲ್ಲಿ ಊರು ಮತ್ತು ಕೇರಿಯಲ್ಲಿ ವಾಸಿಸುತ್ತಿರುವವರ ಬದುಕಿನ ಚಿತ್ರಣವಿದೆ. ರಾಯಚೂರಿನ ಬನ್ನಿಪುರದ ನೀಲಮ್ಮ ಗೌಡಸಾನಿ, ಆಕೆಯ ಆಶ್ರಯದಲ್ಲಿರುವ ಸಿದ್ದಮ್ಮ, ಆಳಾಗಿರುವ ಭೀಮ, ಅವನ ಪ್ರೇಯಸಿಯಾದ ಶಿವಬಸವ್ವ, ಊರಿಗೆ ಆಗಾಗ ಬಂದುಹೋಗುವ ಸಂಚಾರಿ ತತ್ವಪದಕಾರ ಬಸಯ್ಯ ತಾತ, ನೀಲಮ್ಮಳ ಮಗ ಬಸವರಾಜಪ್ಪ, ನಾಗಪ್ಪ ಗೌಡ-ಸರಸಮ್ಮ ದಂಪತಿ, ಇವರ ಮಗ ಪ್ರಕಾಶ ಮುಂತಾದವು ಪ್ರಮುಖ ಪಾತ್ರಗಳಾಗಿವೆ. ಇವುಗಳಲ್ಲದೆ ನಾಗಪ್ಪ ಗೌಡನ ತಾಯಿ ದೊಡ್ಡವ್ವ, ಕೂಲಿಯಾಳು ಭರಮ, ಮಲ್ಲಯ್ಯ, ಸಾಬಯ್ಯ, ಬರಗಾಲದ ಬಿಸಿಲಿಗೆ ತನ್ನ ಕೂಸನ್ನು ಕಳೆದುಕೊಳ್ಳುವ ಚೌಡಯ್ಯ, ಅಡುಗೆ ಕಾಯಕ ನಿರ್ವಹಿಸುವ ದ್ಯಾಮಪ್ಪ, ಸೂಗಯ್ಯ, ಬಡಗಿತನದ ಆದಯ್ಯ, ಕಬ್ಬಿಣದ ಕೆಲಸ ಮಾಡುವ ಕುಲುಮೆಯ ಮಹಾದೇವಯ್ಯ, ಕೇರಿಯ ಮುಖಂಡ ದುರುಗಪ್ಪ ಮುಂತಾಗಿ ಊರು-ಕೇರಿಯ ಹತ್ತು ಹಲವು ಮುಖಗಳು ಆಗಾಗ ಕಾಣಿಸಿಕೊಳ್ಳುತ್ತವೆ.

ನೀಲಮ್ಮ ಗೌಡಸಾನಿಯ ಪಾತ್ರ ಉದಾತ್ತವಾದುದು. ಆಕೆಯ ಮಾತೃವಾತ್ಸಲ್ಯ, ಹೃದಯ ವೈಶಾಲ್ಯತೆ, ಜನರು ಹಸಿದಿರಬಾರದೆನ್ನುವ ಕಾಳಜಿ, ಬರಗಾಲದ ಬವಣೆಯಲ್ಲಿಯೂ ಊರು-ಕೇರಿಯ ಸಂಕಷ್ಟಗಳಿಗೆ ಆಕೆ ಸ್ಪಂದಿಸುವ ಪರಿ, ಹೊಲಗದ್ದೆಗಳಲ್ಲಿ ನಡೆಯುವ ಕೃಷಿಕಾಯಕಗಳ ವರ್ಣನೆ ಮುಂತಾದವುಗಳು ಹಳ್ಳಿಯ ಹಿರಿಯ ತಲೆಮಾರಿನ ಸಹಜ ಸ್ವಭಾವ ಮತ್ತು ಬದುಕಿನ ಸ್ವರೂಪವನ್ನು ಸಮರ್ಥವಾಗಿ ಪ್ರತಿಬಿಂಬಿಸುತ್ತವೆ.

ನೀಲಮ್ಮಳ ಮಗನಾಗಿರುವ ಬಸವರಾಜ ಮತ್ತು ನಾಗಪ್ಪ ಗೌಡ-ಸರಸಮ್ಮ ದಂಪತಿಗಳ ಮಗನಾಗಿರುವ ಪ್ರಕಾಶ ಆಧುನಿಕ ಶಿಕ್ಷಣವನ್ನು ಪಡೆದು ಹಳ್ಳಿಯಿಂದ ನಗರಕ್ಕೆ ಹೋದವರು. ಪ್ರಕಾಶ ಕಾರ್ಪೋರೇಟ್ ಕಂಪನಿಯ ಉದ್ಯೋಗಿಯಾಗಿ ಪಟ್ಟಣದ ಐಷಾರಾಮಿ ಜೀವನಕ್ಕೆ ಹೊಂದಿಕೊಳ್ಳುತ್ತಾನೆ. ಆದರೆ ಅವನ ಸ್ನೇಹಿತನಾಗಿರುವ ಬಸವರಾಜ ಸಾಹಿತ್ಯದ ಅಧ್ಯಾಪಕನಾಗಿ ಆತನಿಗೆ ಶ್ರೀಮಂತಿಕೆಯ ಬದುಕು ದಕ್ಕುವುದಿಲ್ಲ. ಹಾಗಾಗಿ ಕಾರ್ಪೋರೇಟ್ ಜಗತ್ತು ಒಡ್ಡುವ ಆಮಿಷ ಮತ್ತು ಸ್ನೇಹಿತ ಪ್ರಕಾಶನ ಒತ್ತಾಯದಿಂದಾಗಿ ಇಡೀ ಹಳ್ಳಿಯ ಬದುಕಿನ ಸ್ವರೂಪವೇ ಬದಲಾಗುವುದಕ್ಕೆ ಕಾರಣನಾಗುತ್ತಾನೆ. ಬಸವರಾಜನ ಪಾತ್ರವು ತನ್ನತನವನ್ನು ಕಳೆದುಕೊಂಡು ಗೊಂದಲಕ್ಕೊಳಗಾಗಿ ದೃಢನಿರ್ಧಾರಕ್ಕೆ ಬರಲು ಕಷ್ಟಪಡುತ್ತಿರುವ ಹೊಸ ತಲೆಮಾರಿನ ಪ್ರತಿನಿಧಿ. ಆತ ಪಟ್ಟಣದ ಐಷಾರಾಮಗಳು ಸಿಗದಿರುವುದರಿಂದ ಹಳ್ಳಿಗೆ ಮರಳಲು ಯೋಚಿಸುತ್ತಾನೆ. ಆದರೆ ಕೃಷಿ, ಹಳ್ಳಿಯ ಬಗ್ಗೆ ತೀವ್ರ ತಿರಸ್ಕಾರವಿರುವುದರಿಂದ ಅವನಿಗೆ ಆ ಬದುಕಿಗೆ ಮರಳುವ ಯೋಚನೆಯಿಲ್ಲ. ಹಾಗಾಗಿ ಅವನಿಗೆ ತನ್ನ ಜಮೀನಿನಲ್ಲಿರುವ ಕೆರೆಯ ನೀರನ್ನು ಶುದ್ಧೀಕರಿಸಿ ವಿಕ್ರಯಿಸುವ ಕಾರ್ಪೋರೇಟ್ ಕಂಪನಿಯ ಯೋಜನೆಯ ಹಿಂದಿನ ಕುತಂತ್ರಗಳು ಅರಿವಿಗೆ ಬಂದಾಗಲೂ ಅದನ್ನು ತಿರಸ್ಕರಿಸುವುದಿಲ್ಲ. ತಾಯಿಯ ಮಾತುಗಳಿಗೆ ಕಿವಿಯಾಗುವುದಿಲ್ಲ. ಆಧುನಿಕತೆಯ ಮೋಡಿ ಮತ್ತು ಐಷಾರಾಮದ ಮೋಹಗಳ ಮುಂದೆ ಹಿಂದಿನ ತಲೆಮಾರಿನ ಬದುಕಿನ ಕ್ರಮ, ಕೌಟುಂಬಿಕ ಸಂಬಂಧಗಳು, ಮಾನವೀಯ ಅಂತಃಕರಣಗಳು ಸಂಪೂರ್ಣವಾಗಿ ಅರ್ಥ ಕಳೆದುಕೊಳ್ಳುತ್ತವೆ.



ಒಡಲುಗೊಂಡವರು
ಲೇ: ಹಳೆಮನೆ ರಾಜಶೇಖರ
ಪ್ರ: ಕ್ರಿಯೇಟಿವ್ ಪುಸ್ತಕ ಮನೆ, ಕಾರ್ಕಳ
ಬೆಲೆ: ರು.235/-
ಫೋ: 9606474289

ಕಾದಂಬರಿಯು ಕೃಷಿಬದುಕಿಗೆ ಸಂಬಂಧಿಸಿದಂತೆ ದೈನಂದಿನ ಚಟುವಟಿಕೆಗಳು, ಜಾನುವಾರುಗಳೊಂದಿಗಿನ ಒಡನಾಟ, ಕೃಷಿ ಸಲಕರಣೆಗಳು, ಅವುಗಳನ್ನು ತಯಾರಿಸುವ ವಿವರಗಳು, ಉಳುಮೆ, ಬಿತ್ತನೆ, ಮನುಷ್ಯನ ಜೀವನಾವರ್ತನಗಳ ಆಚರಣೆ ಮುಂತಾಗಿ ಸಮಗ್ರ ವಿವರಗಳನ್ನು ಕಟ್ಟಿಕೊಡುತ್ತದೆ. ಬರಗಾಲದ ದಾರುಣತೆಯನ್ನು, ಬವಣೆಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುತ್ತದೆ ಮತ್ತು ಮಳೆ ಸುರಿಯುವುದನ್ನು ಅಷ್ಟೇ ಸಂಭ್ರಮದಿಂದ ಚಿತ್ರಿಸುತ್ತದೆ.

ಭೀಮನ ಕನಸಿನ ಮೂಲಕವಾಗಿ ಆರಂಭವಾಗುವ ಕಾದಂಬರಿಯುದ್ದಕ್ಕೂ ಭೀಮನ ಪಾತ್ರಕ್ಕೆ ವಿಶೇಷವಾದ ಪ್ರಾಮುಖ್ಯತೆಯಿದೆ. ಶ್ರಮಜೀವಿಯಾಗಿರುವ ಭೀಮನಲ್ಲಿ ಸಹಜ ಮುಗ್ಧತೆಯ ಜೊತೆಗೆ ತನ್ನ ಗೌಡತಿಯ ಮೇಲೆ ಅಪಾರವಾದ ನಿಷ್ಠೆ, ವಿಧೇಯತೆಗಳಿವೆ. ಪ್ರತಿಯೊಬ್ಬರ ಮೇಲೂ ಅವನಿಗೆ ಪ್ರೀತಿ ಕಾಳಜಿಗಳಿರುವುದರಿಂದ ಆತ ಎಲ್ಲರ ಸಂಕಷ್ಟಗಳಿಗೂ ಸ್ಪಂದಿಸುತ್ತಾನೆ. ಅವಿವಾಹಿತನಾಗಿರುವ ಭೀಮನನ್ನು ಎಡೆಬಿಡದೆ ಕನಸುಗಳು ಕಾಡುವುದರ ಜೊತೆಗೆ ಹದ್ದು ಅವನನ್ನು ನಿರಂತರವಾಗಿ ಹಿಂಬಾಲಿಸುತ್ತಿರುತ್ತದೆ. ಶಿವಬಸವ್ವನ ಜೊತೆಗಿನ ಅವನ ಪ್ರಣಯದ ಉತ್ಕಟತೆಯು ಕೂಡ ಅಲ್ಲಲ್ಲಿ ಕಾಣಿಸುತ್ತದೆ.

ಭೀಮನ ಕನಸುಗಳು, ಹದ್ದಿನ ಹಿಂಬಾಲಿಸುವಿಕೆ, ಭೀಮ-ಶಿವಬಸವ್ವರ ಪ್ರಣಯದ ಚಿತ್ರಗಳು ಎಲ್ಲವೂ ಕಾದಂಬರಿಯ ಸಾಂಕೇತಕವಾದ ಅಭಿವ್ಯಕ್ತಿಗಳು. ಕಾದಂಬರಿಯಲ್ಲಿ ಬಳಕೆಯಾಗಿರುವ ವರ್ಣನಾತ್ಮಕ ಶಬ್ದಚಿತ್ರಗಳು ಕೂಡ ಗಮನಾರ್ಹ. ರಕ್ತಚೆಲ್ಲಿದಂತಿರುವ ಬಾನು, ಬಂಗಾರದಂತಿರುವ ಸೂರ್ಯನ ಕಿರಣಗಳು, ಬೆಂಕಿಕಿಡಿಯಂತಹ ನಕ್ಷತ್ರಗಳು, ಸೂರ್ಯನ ನುಂಗಿದ ಬೆಳದಿಂಗಳು, ಬೆಳದಿಂಗಳೆಂಬ ತೊಟ್ಟಿಲು, ಬೆಂಕಿ ಮಳೆ, ಅಗ್ನಿಯಲ್ಲಿ ಬೆಂದ ಭೂಮಿ, ಮೋಡದಲ್ಲಿ ತೇಲುತ್ತಿರುವ ಚಂದಿರ, ಹೆಣದಂತಾಗಿರುವ ಗಿಡಗಳು ಇಂತಹ ಹಲವು ವಿಶಿಷ್ಟ ಶಬ್ದಪ್ರಯೋಗಗಳನ್ನು ಗುರುತಿಸಬಹುದು. ಇವುಗಳಲ್ಲೆವೂ ಕಾದಂಬರಿಯನ್ನು ಸಶಕ್ತವಾಗಿ ನಿರೂಪಿಸಿ ಕೊಡಲು ಸಹಾಯಕವಾಗಿವೆ.

ದಟ್ಟವಾದ ಪ್ರಾದೇಶಿಕ ಘಮದೊಂದಿಗೆ ಅರಳಿರುವ ಈ ಕಾದಂಬರಿಯು ನೆಲ-ಜಲ-ಪರಿಸರಗಳ ಸೂಕ್ಷ್ಮ ಚಿತ್ರಣದ ಮೂಲಕ ಗ್ರಾಮೀಣ ಬದುಕಿನ ಸ್ವರೂಪವನ್ನು ಕಟ್ಟಿಕೊಡುತ್ತದೆ. ಆಧುನಿಕತೆಯ ಪ್ರವೇಶವು ಮಾನವೀಯ ಸಂಬಂಧಗಳಲ್ಲಿ ಮತ್ತು ಬದುಕಿನ ಮೌಲ್ಯಗಳಲ್ಲಿ

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ಪೂರ್ಣಚಂದ್ರ ತೇಜಸ್ವಿ
(ಸಂವಾದ- ಸಂದರ್ಶನ - ಪರಿಸರ ಸಂಕಥನ)
ಲೇ: ನರೇಂದ್ರ ರೈ ದೇರ್ಲ
ಪ್ರ: ಕನಸು ಪ್ರಕಾಶನ, ಪುತ್ತೂರು
ಬೆಲೆ : ರೂ 180/-



2
ಇಮ್ಮಡಿ ಪುಲಿಕೇಶಿ
(ಐತಿಹಾಸಿಕ ಕಾದಂಬರಿ)
ಲೇ: ಡಾ। ಲಕ್ಷ್ಮಣ ಕೌಂಟೆ
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 425/-



3
ಕನಕನ ಕಿಂಡಿ
(ಕನಕದಾಸರ ಆಯ್ದ ಕೀರ್ತನೆಗಳಿಗೆ, ಮುಂಡಿಗೆಗಳಿಗೆ ಪ್ರಾಯೋಗಿಕ ವಿಮರ್ಶೆ)
ಆಯ್ಕೆ ಸಂಪಾದನ : ಪ್ರೊ. ಎ.ವಿ. ನಾವಡ
ಪ್ರ: ಕನಕದಾಸ ಅಧ್ಯಯನ ಸಂಶೋಧನ ಪೀಠ, ಉಡುಪಿ
ಬೆಲೆ : ರೂ 240/-



4
ತತ್ರಾಣಿ
(ಗತ ಶತಮಾನದ ಉತ್ಕ್ರಾಂತಿಯ ಕಥೆ - ಕಾದಂಬರಿ)
ಲೇ: ದೀಪಾ ಜೋಶಿ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 395/-



5
ಮಾಗಧ
(ಅಶೋಕನ ಕಾಲದ ಸ್ಥಿತಿಗತಿಗಳ ಚಿತ್ರಣ)
ಲೇ: ಸಹನಾ ವಿಜಯಕುಮಾರ್
ಪ್ರ: ಸಾಹಿತ್ಯ ಭಂಡಾರ, ಬೆಂಗಳೂರು
ಬೆಲೆ : ರೂ 915/-



6
ಕುಡಿಯೋಣು ಬಾರಾ
(ಗುಂಡಿನ ಕುರಿತ 'ಸಾಂಸ್ಕೃತಿಕ'ಹರಟೆ)
ಲೇ: ವಿಶ್ವೇಶ್ವರ ಭಟ್
ಪ್ರ: ವಿಶ್ವವಾಣಿ ಪುಸ್ತಕ, ಬೆಂಗಳೂರು
ಬೆಲೆ : ರೂ 300/-



7
ವಿಶೇಷ ಕರ್ನಾಟಕ
(ನೀವು ತಿಳಿದಿರಲೇ ಬೇಕಾದ ಕನ್ನಡನಾಡು)
ಲೇ: ಜಿ. ಆನಂದ್
ಪ್ರ: ಟೋಟಲ್ ಕನ್ನಡ. ಬೆಂಗಳೂರು
ಬೆಲೆ : ರೂ 599/-

8
ಹಿಮಾಲಯದ ಋಷಿಗಳ ದಿವ್ಯ ಸಂದೇಶಗಳು
(ಸಕಾಲಿಕ ಮತ್ತು ಕಾಲಾತೀತ)
ಲೇ: ಗುರು ಸಕಲಮಾ
ಪ್ರ: ಸಕಲಮಾ ಪ್ರಕಾಶನ, ಬೆಂಗಳೂರು
ಬೆಲೆ : ರೂ 399/-

9
ಎತ್ತಿನ ಹೊಳೆ
(ಕಾದಂಬರಿ)
ಲೇ: ಹೃದ್ಯ
ಪ್ರ: ಕಾಂಕ್ಲೇವ್ ಮಾಧ್ಯಮ ಮತ್ತು ಪ್ರಕಾಶನ, ಬೆಂಗಳೂರು
ಬೆಲೆ : ರೂ 150/-

10
ವೈಷ್ಣವ ಸಂತರು
(ಶ್ರೀ ಚೈತನ್ಯ ಮಹಾಪ್ರಭುಗಳ ಭಕ್ತಪರಂಪರೆ)
ಲೇ: ಶ್ರೀಧರ ಬನವಾಸಿ
ಪ್ರ: ಪಂಚಮಿ ಮೀಡಿಯಾ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 300/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ಬೈಜಿಕ ಭೌತವಿಜ್ಞಾನದ ಪಕ್ಷಿನೋಟ

» ಬೇದ್ರೆ ಮಂಜುನಾಥ, ಮೈಸೂರು



ನ್ಯೂಕ್ಲಿಯಸ್ - ಒಂದು ಪರಿಚಯ
ಲೇ: ಡಾ. ಪಾಲಹಳ್ಳಿ ವಿಶ್ವನಾಥ್
ಪ್ರ: ನವಕರ್ನಾಟಕ ಬೆಂಗಳೂರು
ಬೆಲೆ ರು.250/-

ನ್ಯೂಕ್ಲಿಯರ್ ಫಿಸಿಕ್ಸ್ ಅಂದರೆ ಬೈಜಿಕ ಭೌತವಿಜ್ಞಾನದ ಆಳ ಅಗಲಗಳನ್ನು ಪರಿಚಯ ಮಾಡಿಕೊಡುವ ಈ ಕೃತಿಯನ್ನು ಮುಂಬೈನ ಟಿ.ಐ.ಎಫ್.ಆರ್.ನ ವಿಶ್ರಾಂತ ಪ್ರಾಧ್ಯಾಪಕ ಡಾ. ಪಾಲಹಳ್ಳಿ ವಿಶ್ವನಾಥ್. ಒಟ್ಟು 10 ಅಧ್ಯಾಯಗಳಿರುವ ಈ ಕೃತಿಯಲ್ಲಿ ಹಲವು ವಿಜ್ಞಾನಿಗಳು ಮತ್ತು ಅವರ ಸಂಶೋಧನೆ, ಆವಿಷ್ಕಾರ, ಸಾಧನೆ, ಯಶಸ್ಸು ಮತ್ತು ಯಶಸ್ಸಿನ ಪಯಣದಲ್ಲಿ ಅನುಭವಿಸಿದ ಏಳು-ಬೀಳು ಎಲ್ಲವನ್ನೂ ವಿವರಿಸಲಾಗಿದ್ದು, ಪಠ್ಯಪುಸ್ತಕಕ್ಕೆ ಮಾದರಿಯಾಗಿರುವಂತೆ ರಚಿಸಲಾಗಿದೆ. ಇಲ್ಲಿ ಗಣಿತ-ಬೈಜಿಕ -ಭೌತ-ಖಭೌತ-ರಸಾಯನ-ಜೀವ ವಿಜ್ಞಾನ ವಿಷಯಗಳ ಅಂತರ್ ಸಂಬಂಧವನ್ನು ಸೂಕ್ಷ್ಮವಾಗಿ ಹಿಡಿದಿಡಲಾಗಿದೆಯೇನೋ ಎನಿಸುತ್ತದೆ. ಇಂದು ವಿಜ್ಞಾನ ಮತ್ತು ತಂತ್ರಜ್ಞಾನದ ವಿಷಯದಲ್ಲಿ ಯಾವುದೂ ಪ್ರತ್ಯೇಕ ಶಾಖೆಯಾಗಿ ಉಳಿದಿಲ್ಲ. ಬದಲಾಗಿ ಒಂದು ಇನ್ನೊಂದರೊಂದಿಗೆ ಮಿಳಿತವಾಗಿ ಹೊಸ ಶಾಖೆಗಳೇ ಉದ್ಭವಿಸುತ್ತಿವೆ. ಅಂತಹ ಹಲವು ಹೊಸ ಸಂಗತಿಗಳು ಇಲ್ಲಿವೆ.

ಕ್ರಿಸ್ತಪೂರ್ವ ಆರನೆಯ ಶತಮಾನದ ಭಾರತದ ಪಂಡಿತ ಕಣಾದನ ಪರಮಾಣು ಪರಿಕಲ್ಪನೆಯಿಂದ ಹಿಡಿದು ರಾಬರ್ಟ್ ಬಾಯ್ಲ್, ಹೆನ್ರಿ ಕ್ಯಾವೆಂಡಿಶ್, ಜಾನ್ ಡಾಲ್ಟನ್, ಲೆವಾಸಿಯೆ, ಮೆಂಡಲೆಫ್, ಮಾಕ್ ಮುಂತಾದವರ ಹೊಸ ಪರಮಾಣು ಸಿದ್ಧಾಂತಗಳು, ಮೆಂಡಲೆಫ್‌ನ ಆವರ್ತ ಕೋಷ್ಟಕದ ಧಾತುಗಳು, ಬೆಳಕು - ಕಣ ಸಿದ್ಧಾಂತ ಮತ್ತು ತರಂಗ ಸಿದ್ಧಾಂತ, ಎಕ್ಸ್-ಕಿರಣಗಳು, ಕ್ವಾಂಟಮ್ ಪರಿಕಲ್ಪನೆಗಳು, ದ್ಯುತಿ ವಿದ್ಯುತ್ ಪರಿಣಾಮ, ವಿಶೇಷ ಸಾಪೇಕ್ಷ ಸಿದ್ಧಾಂತ, ಹೊಸ ರಾಶಿ/ಶಕ್ತಿಯ ಅಳತೆಗಳು ಹೀಗೆ ಪರಮಾಣುವಿನ ಸಮಗ್ರ ಪರಿಚಯ ಮಾಡಿಸುತ್ತದೆ ಮೊದಲ ಅಧ್ಯಾಯ ಹಿನ್ನೆಲೆ.

ಹತ್ತನೆಯ ಅಧ್ಯಾಯ, ಅನುಬಂಧದಲ್ಲಿ ಸ್ಥಿರ ವಿಶ್ವ ಸಿದ್ಧಾಂತ ಮತ್ತು ಮಹಾಸ್ಫೋಟ ಸಿದ್ಧಾಂತಗಳ ತುಲನಾತ್ಮಕ ಪರಿಚಯ, ವಿಶೇಷ ನಕ್ಷತ್ರಗಳು - ಶ್ವೇತಕುಬ್ಜ, ಸೂಪರ್‌ನೋವಾ, ನ್ಯೂಟ್ರಾನ್ ನಕ್ಷತ್ರಗಳ ಬಗ್ಗೆ ಹಾಗೂ ಹಿರೋಶಿಮಾದ ಮೇಲೆ ನಡೆಸಲಾದ ಪರಮಾಣು ದಾಳಿಯ ವಿವರಗಳಿವೆ. ಹಿರೋಶಿಮಾದ ಮೇಲೆ ಹಾಕಲಾದ ಬಾಂಬ್ ಯುರೇನಿಯಂನಿಂದಲೂ, ನಾಗಸಾಕಿಯ ಮೇಲೆ ಹಾಕಲಾದ ಬಾಂಬ್ ಪ್ಲುಟೋನಿಯಂನಿಂದಲೂ ಮಾಡಲಾಗಿತ್ತು, ಎರಡೂ ದಾಳಿಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಜನ ಆಹುತಿಯಾಗಿದ್ದರು, ಅಲ್ಲದೆ ವಿಕಿರಣದಿಂದ ಲಕ್ಷಾಂತರ ಜನ ನರಳುತ್ತಿದ್ದಾರೆ ಎಂಬ ಮಾಹಿತಿ ಕಲ್ಲೆದೆಯನ್ನೂ ಕರಗಿಸುವಂಥದ್ದು.

ವೈದ್ಯರು ದಾಖಲಿಸಿದ ಕೋವಿಡ್ ಕಥೆ

» ಡಾ.ರಮೇಶ ಎಸ್. ಕತ್ತಿ

ಪಿ.ಎಚ್.ಸಿ. ಕವಲಗುಡ್ಡ 24/7
ಕಾದಂಬರಿ
ಲೇ: ಡಾ. ಲಕ್ಷ್ಮಣ ವಿ.ಎ.
ಪ್ರ: ಕ್ರಿಯೇಟಿವ್ ಪುಸ್ತಕ ಮನೆ, ಕಾರ್ಕಳ
ಬೆಲೆ ರು.250/-

ಡಾ.ಲಕ್ಷ್ಮಣ ವಿ. ಎ. ಅವರ 'ಪಿ.ಎಚ್.ಸಿ. ಕವಲುಗುಡ್ಡ' ಕಾದಂಬರಿಯು ಕೋವಿಡ್ ಕಾಲದ ಸಾವು ಬದುಕಿನ ಹೋರಟದ ಸಂಧರ್ಭದಲ್ಲಿ ಮನುಷ್ಯನ ವರ್ತನೆಯನ್ನು ಒರೆಗೆ ಹಚ್ಚುವ ಒಂದು ಪ್ರಯತ್ನದಂತೆ ಕಾಣುತ್ತದೆ. ತನ್ನ ಅಸ್ತಿತ್ವದ ಪ್ರಶ್ನೆ ಎದುರಾದಾಗ ಮನುಷ್ಯನ ವಿಕಾರಗಳನ್ನು ಸಾಮಾಜಿಕ ಸ್ಥಿತ್ಯಂತರವನ್ನು ಕ್ಷುದ್ರ ರಾಜಕೀಯವನ್ನು ಈ ಕಾದಂಬರಿಯು ಡಾ.ಸುಹಾಸ್‌ನ ಪಾತ್ರದ ಮೂಲಕ ಅನಾವರಣಗೊಳಿಸುತ್ತದೆ. ಇಂತಹ ಸಂಕಷ್ಟದ ಕಾಲದಲ್ಲಿ ಆಸ್ಪತ್ರೆಯ ಒಳಗೆ ಏನೇನು ನಡೆಯಿತು ಎಂದು ಸ್ವತಃ ಅನುಭವಿಸಿ ಅನುಭವಿಸಿ ಬರೆದ ಕಾರಣಕ್ಕೆ ಕಾದಂಬರಿಯು ಕೋವಿಡ್ ಚರಿತ್ರೆಯನ್ನು ದಾಖಲಿಸುವ ಕನ್ನಡದ ಅಪರೂಪದ ಕಾದಂಬರಿ.

'ಈ ಲೋಕದಲ್ಲಿ ಪ್ರತಿಯೊಬ್ಬರೂ ದಣಿದವರಂತೆ ಕಾಣುತ್ತಾರೆ. ಯಾಕೆಂದರೆ ಎಲ್ಲರನ್ನೂ ಪ್ಲೇಗು ಆವರಿಸಿಕೊಂಡಿದೆ. ಆದ್ದರಿಂದಲೇ ನಮ್ಮಲ್ಲಿ ಕೆಲವರು ಈ ಪ್ಲೇಗು ನಮ್ಮಿಂದ ಆಚೆ ಯಾವಾಗಲೂ ಪ್ರಯತ್ನಿಸುತ್ತಿರುವವರು ಅಪಾರವಾದ ಹತಾಶೆ ಹುಟ್ಟಿಸುವ ದಣಿವನ್ನು ಅನುಭವಿಸುತ್ತಾರೆ.ಸಾವನ್ನು ಹೊರತುಪಡಿಸಿ ಬೇರೆ ಯಾವುದೂ ಈ ದಣಿವಿನಿಂದ ಬಿಡುಗಡೆ ನೀಡುವುದಿಲ್ಲ. ಊರ ಜನ ಪ್ಲೇಗಿನೊಂದಿಗೆ ಸಹಜೀವನವನ್ನು ಕಲಿತುಕೊಂಡಿದ್ದರು, ವಿಧೇಯರಾಗಿ ಬಿಟ್ಟಿದ್ದರು. ಅವರಿಗೆ ಬೇರೇನು ತಾನೇ ಸಾಧ್ಯವಿತ್ತು ? ಕೆಲವರು ಇದೇ ತಮ್ಮ ದುರದೃಷ್ಟವೆಂದು ಭಾವಿಸಿದ್ದರು. ಹತಾಶೆಯನ್ನು ಹೇಗೋ ನಿರ್ವಹಿಸಬಹುದು, ಅದನ್ನು ಮೀರಬಹುದು. ಆದರೆ, ಅನೇಕರಿಗೆ ಹತಾಶೆಯೇ ಒಂದು ಮನೋಧರ್ಮವಾಗಿ ಬಿಡುತ್ತದೆ. ಅವರು ಹಾಗಿರುವ ಅಭ್ಯಾಸವನ್ನು ಬೆಳೆಸಿಕೊಳ್ಳುತ್ತಾರೆ. ಎಲ್ಲ ಸನ್ನಿವೇಶಗಳಿಗೂ ಅದೊಂದೇ ಅವರ ಪ್ರತಿಕ್ರಿಯೆಯಾಗುತ್ತದೆ.'

ಈ ಮಾತುಗಳನ್ನು ಅಲ್ಬರ್ಟ್ ಕಮೂ ಪ್ಲೇಗ್ ಕಾದಂಬರಿಯಲ್ಲಿ ಹೇಳುತ್ತಾನೆ. ಎಚ್ .ಎಸ್. ರಾಘವೇಂದ್ರ ರಾವ್ ಈ ಕಾದಂಬರಿಯನ್ನು ಕನ್ನಡಕ್ಕೆ ಭಾವಾನುವಾದ ಮಾಡಿದ್ದಾರೆ. ಈಗ ಪ್ಲೇಗ್ ಇರುವಲ್ಲೆಲ್ಲಾ ನೀವು ಕೋವಿಡ್ ಎಂದು ಸೇರಿಸಿ ಓದಿದರೆ ಅಂದಿನ ಮತ್ತು ಇಂದಿನ ಪರಿಸ್ಥಿತಿಗೂ ಕಾಲವೊಂದನ್ನು ಬಿಟ್ಟರೆ ಎಲ್ಲಾ ಒಂದೇ ರೀತಿಯಾಗಿ ಮನುಷ್ಯನ ಸಂಕಟ ಹತಾಶೆಗಳು ಗೋಚರವಾಗುತ್ತವೆ.

ಹೀಗಾಗಿ ಈ ಶತಮಾನದ ಸಂಕಟವೊಂದರ ಕ್ರಾಸ್ ಸೆಕ್ಷನ್ನನ್ನು ವೈದ್ಯ ವೃತ್ತಿಯಲ್ಲಿರುವ ಲೇಖಕರು ತಮ್ಮ ಸೂಕ್ಷ್ಮ ಮಸೂರದ ಮೂಲಕ ಕಂಡುಂಡು ಬರೆದ ಈ ಕಾದಂಬರಿಯು ಆ ಯಾತನೆ, ಹತಾಶೆಯನ್ನು ಓದುಗರಿಗೂ ದಾಟಿಸುತ್ತದೆ.

ಮಕ್ಕಳ ಸಾಹಿತ್ಯಕ್ಕೆ ಹೊಸ ಸೇರ್ಪಡೆ

» ಮನೀಷಾ, ಮೈಸೂರು

ಇಂದಿನ ಜಗತ್ತು ಹಿಂದಿನ ಜಗತ್ತಿನಂತಿಲ್ಲ. ಇಂದಿನ ಮಕ್ಕಳು ಹಿಂದಿನ ಮಕ್ಕಳಂತಿಲ್ಲ. ಮಕ್ಕಳಿಗೆ ಬೇಕಾಗಿರುವ ವಿದ್ಯೆಯ ಸ್ವರೂಪ ಇಂದಿನ ವೈಜ್ಞಾನಿಕ ಜಟಿಲ ನಾಗರಿಕ ಜೀವನಕ್ಕೆ ಹೊಂದಿಕೊಳ್ಳುವ ಪ್ರಕ್ರಿಯೆಗೆ ಅವಶ್ಯವಾಗುವ ಲಕ್ಷಣದಿಂದ ಕೂಡಿರಬೇಕು, ಎಂಬ ಮಾತನ್ನು ಗಮನಿಸಿದಾಗ ಇಂದಿನ ಮಕ್ಕಳಿಗೆ ಹಳೆಯ ಕಥೆಗಳನ್ನು ಹೇಳಲು ಹೋದರೆ ರುಚಿಸದೇ ಇರಬಹುದು. ಅದಕ್ಕಾಗಿ ಹೊಸದೇನಾದರೂ ಮಕ್ಕಳಿಗೆ ಕೊಡಬೇಕು. ಚಾಟ್ ಜಿ.ಪಿ.ಟಿ., ಗೂಗಲ್ ಬಾರ್ಡ್, ಗೂಗಲ್ ಸರ್ಚ್ ಮೂಲಕ ಕ್ಷಣಾರ್ಧದಲ್ಲಿ ಮಾಹಿತಿ ಕೈಗೆಟಕುತ್ತಿರುವಾಗ ಈ ಮಾಹಿತಿ ಸಂಗ್ರಹದ ಪುಸ್ತಕಗಳನ್ನು ಯಾರು ತೆಗೋತಾರೆ? ಸುಮ್ಮನೇ ಶ್ರಮ ಎನ್ನುವ ಈ ದಿನಗಳಲ್ಲಿ ಕನ್ನಡದ ಮಕ್ಕಳ ಸಾಹಿತ್ಯಕ್ಕೆ ಹೊಸ ರೀತಿಯ ಪ್ರಯತ್ನವೊಂದು ಸೇರ್ಪಡೆಯಾಗಿದೆ. ಅದೇ 'ಫ್ಯಾಕ್ಷನ್'.



ಡೂಡಲ್
ಗೂಗಲ್ ಅಂಕಲ್ ಜೊತೆ ಮಾತು-ಕತೆ
ಲೇ: ಬೇದ್ರೆ ಮಂಜುನಾಥ
ಪ್ರ:ನವಕರ್ನಾಟಕ ಬೆಂಗಳೂರು
ಬೆಲೆ ರು.160/-

ನೈಜ ಘಟನೆಗಳ ಸುತ್ತ ಹೆಣೆಯಲಾದ ಕಾಲ್ಪನಿಕ ಚಿತ್ರಣಕ್ಕೆ ಫ್ಯಾಕ್ಷನ್ ಎನ್ನುತ್ತಾರೆ. ಇದು ಫ್ಯಾಕ್ಟ್ + ಫಿಕ್ಷನ್ ಸೇರಿ ಆಗಿರುವ ಪದ. ಈ ಪ್ರಕಾರದ ಸಾಹಿತ್ಯ ಕೃತಿಗಳು ಮಕ್ಕಳಿಗೆ ತುಂಬಾ ಹತ್ತಿರವಾಗುತ್ತವೆ. ಕಾರಣ ಇಂತಹ ಕೃತಿಗಳಲ್ಲಿ ನೈಜ ಘಟನೆಗಳು ಕಾಲ್ಪನಿಕ ಮೂಸೆಯಲ್ಲಿ ಮೂಡಿಬಂದು, ಓದಿನ ರುಚಿ ಹತ್ತಿಸಿ ಸಾಹಿತ್ಯ ಲೋಕವನ್ನು ಪ್ರವೇಶಿಸುವಂತೆ ಮಾಡುತ್ತವೆ. ವಿದೇಶಗಳಲ್ಲಿ ಈ ಪ್ರಕಾರದ ಸಾಹಿತ್ಯ ಕೃತಿಗಳು ಇತ್ತೀಚಿನ ದಿನಗಳಲ್ಲಿ ಮಕ್ಕಳನ್ನು ಓದಿನ ಲೋಕಕ್ಕೆ ಸೆಳೆಯುತ್ತಿವೆ. ಇಂತಹ ಕೆಲವು ಕೃತಿಗಳ ಕನ್ನಡ ಅನುವಾದ ಈಗಾಗಲೇ ಪ್ರಕಟವಾಗಿದ್ದು, ಇದೀಗ ಡೂಡಲ್ ಗೂಗಲ್ ಅಂಕಲ್ ಜೊತೆ ಮಾತು-ಕತೆ ಮಕ್ಕಳ ಕೈ ತಲುಪಿದೆ.

ಕಲ್ಲುಗಳು ನೀರು ಕುಡಿಯುತ್ತವೆಯೇ? ಎವರೆಸ್ಟ್ ಪರ್ವತದ ಎತ್ತರ ಅಳೆಯುವುದಕ್ಕೂ ಟಿಪ್ಪುಸುಲ್ತಾನನೊಡನೆ ನಡೆದ ಶ್ರೀರಂಗಪಟ್ಟಣದ ಯುದ್ಧಕ್ಕೂ ಸಂಬಂಧವಿದೆಯೇ? ಈಸ್ಟರ್ ದ್ವೀಪದ ಪ್ರತಿಮೆಗಳಿಗೆ ಕೈಕಾಲುಗಳಿವೆಯೇ? ಟೆಲಿಸ್ಕೋಪ್ ಮಾಡಿ ಗ್ರಹತಾರೆಗಳನ್ನು ನೋಡಬಹುದೇ? ರೆಪೆಷಾಜ್ ಎಂದರೇನು? ರಾಬಿನ್‌ಹುಡ್ ಇದ್ದನೇ? ಕಿಂದರಿ ಜೋಗಿ ಘಟನೆ ನಡೆದದ್ದು ನಿಜವೇ? ಹೀಗೆ ಹತ್ತು ಹಲವು ಕುತೂಹಲಕರ ಪ್ರಶ್ನೆಗಳ ಬೆನ್ನುಹತ್ತಿದ ಬಾಲಕಿಯೊಬ್ಬಳು ಹಿರಿಯ ಪ್ರೊಫೆಸರ್ ಜೊತೆ ಮಾತುಕತೆ ನಡೆಸುತ್ತಾ, ಸೂಕ್ತ ಉತ್ತರಗಳನ್ನು ಕಂಡುಕೊಳ್ಳುವ ಬೌದ್ಧಿಕ ಪಯಣವೇ ಈ ಡೂಡಲ್ - ಗೂಗಲ್ ಅಂಕಲ್ ಜೊತೆ ಮಾತು-ಕತೆ.

ಕೇಂದ್ರೀಯ ವಿದ್ಯಾಲಯಗಳಲ್ಲಿ ಗ್ರ್ಯಾಂಡ್ ಪೇರೆಂಟ್ಸ್ ಡೇ ಎಂಬ ವಿಶೇಷ ದಿನಾಚರಣೆ ಇದೆ. ಅಂದು ಮಕ್ಕಳು ತಮ್ಮ ಅಜ್ಜ-ಅಜ್ಜಿಯರನ್ನು ಶಾಲೆಗೆ ಕರೆದುಕೊಂಡು ಬರಬೇಕು. ಎಳೆಯರು ಮತ್ತು ಹಿರಿಯರ ನಡುವಿನ ಸ್ನೇಹ ಸೇತುವೆ ಈ ಕಾರ್ಯ ಕ್ರಮದ ಮೂಲಕ ಕಟ್ಟಲಾಗಿರುತ್ತದೆ. ಅಂತಹದ್ದೇ ಒಂದು ಎಳೆಯರ-ಹಿರಿಯರ ಚಿತ್ರಣ ಇಲ್ಲಿ ಸಂಭಾಷಣೆ ರೂಪದಲ್ಲಿ ಮೂಡಿದೆ. ನೈಜ ಘಟನೆಗಳ ಸುತ್ತ ಹೆಣೆಯಲಾದ ಕಾಲ್ಪನಿಕ ಚಿತ್ರಣ ಇದು. ಹೊಸ ವರ್ಷಕ್ಕೆ ಹೊಸದೇನನ್ನೋ ಮಕ್ಕಳಿಗೆ ತೆಗೆಸಿ ಕೊಡಬೇಕು ಎನ್ನುವವರು 'ಡೂಡಲ್ - ಗೂಗಲ್ ಅಂಕಲ್ ಜೊತೆ ಮಾತು-ಕತೆ' ಫ್ಯಾಕ್ಷನ್ ಪುಸ್ತಕ ಕೊಡಿಸಬಹುದು.

ಒಡೆದು ಕಾಣುವ ಭಾವದೀಪ್ತಿ

» ಪ್ರೊ. ಜಿ. ಎನ್. ಉಪಾಧ್ಯ. ಮುಂಬೈ

ತಮ್ಮ ಬರವಣಿಗೆಯ ಮೂಲಕ ಪ್ರಸಕ್ತ ಕೊಡಗು ಜಿಲ್ಲೆಗೆ ಒಂದು ಬಗೆಯ ಸಾಂಸ್ಕೃತಿಕ ಚೈತನ್ಯವನ್ನು ತಂದು ಕೊಡುತ್ತಿರುವ ಸ್ಮಿತಾ ಅಮೃತರಾಜ್ ಅವರ ಹೊಸ ಕವಿತಾಸಂಕಲನ 'ಅವರೆ ಚಪ್ಪರದ ಹಾಡು' ಅನೇಕ ದೃಷ್ಟಿಯಿಂದ ಗಮನ ಸೆಳೆಯುತ್ತದೆ. ಇದು ಅವರ ನಾಲ್ಕನೆಯ ಕವನ ಸಂಕಲನ. ತಣ್ಣಗಿನ ದನಿಯಲ್ಲಿ ತಾವು ನೆಲೆನಿಂತ ಪರಿಸರದ, ಜಗದ ವಿದ್ಯಮಾನಗಳನ್ನು, ವ್ಯವಹಾರಗಳನ್ನು, ತಮ್ಮದೇ ಆತ್ಮವೃತ್ತಾಂತಗಳನ್ನು ಲೋಕವೃತ್ತಾಂತಗಳನ್ನಾಗಿ ಪರಿಣಾಮಕಾರಿಯಾಗಿ ಚಿತ್ರಿಸಿರುವುದು ಇಲ್ಲಿನ ರಚನೆಗಳ ಬಲ್ಮೆ.



ಅವರೆ ಚಪ್ಪರದ ಹಾಡು
ಲೇ: ಸ್ಮಿತಾ ಅಮೃತರಾಜ್, ಸಂಪಾಜೆ
ಪ್ರ: ನಿವೇದಿತ ಪ್ರಕಾಶನ, ಬೆಂಗಳೂರು
9448733323
ಬೆಲೆ ರು.150/-

'ಕಾವ್ಯವೊಂದು ಮಾತನಾಡುವ ಚಿತ್ರ ಮತ್ತು ಚಿತ್ರವೊಂದು ಮೂಕ ಕಾವ್ಯ' ಎಂಬ ಪಾಶ್ಚಾತ್ಯ ಚಿಂತಕ ಸಿಮೊನೈಕ್‌ನ ಹೇಳಿಕೆ ಬಹಳ ಅರ್ಥಗರ್ಭಿತವಾಗಿದೆ. ಕಾವ್ಯ ಬದುಕಿನ ಕಲಾತ್ಮಕ ನಿರೂಪಣೆ. ದೈನಂದಿನ ಬದುಕಿನಲ್ಲಿ ಶ್ರೀಸಾಮಾನ್ಯರು ಅನುಭವಿಸುವ, ಗ್ರಹಿಸುವ, ಆಲೋಚಿಸುವ ಏನೆಲ್ಲ ವಿದ್ಯಮಾನಗಳಿಗೆ ಮೂರ್ತರೂಪ ಕೊಡುವ ಪ್ರತಿಮಾತ್ಮಕ ಕ್ರಿಯೆಯೂ ಕಾವ್ಯವೇ ಆಗಿದೆ. ಲೋಕದ ಪರಿಸರ ನೀಡದ್ದನ್ನು ಕಾವ್ಯ ನೀಡುತ್ತದೆ ಎಂಬುದು ಮೀಮಾಂಸಕರ ಮತ. ಸಾಂಪ್ರತ ಸಂಕಲನದಲ್ಲಿ ಸ್ಮಿತಾ ಅಮೃತರಾಜ್ ಮಾಡಿರುವ ಕುಸುರಿ ಕೆಲಸ ಸಹ ಇದೇ ಬಗೆಯದು. ಬದುಕಿನ ನಿತ್ಯ ಸತ್ಯಗಳಿಗೆ ಸಶಕ್ತವಾಗಿ ಸ್ಪಂದಿಸಿ ಹೊಸಹೊಸ ಸೋಜಿಗವನ್ನು ಅನ್ವೇಷಿಸುವ ಕುಶಲ ಕರ್ಮದಲ್ಲಿ ಅವರು ಸಫಲರಾಗಿದ್ದಾರೆ.

ನಿಂತ ಪರಿಸರದಲ್ಲೇ ಸಾರ್ವತ್ರಿಕತೆಯನ್ನು ಮನಗಾಣಿಸಿಕೊಡುವುದು ಸ್ಮಿತಾ ಅವರ ಕವಿತೆಗಳ ಅತಿಶಯತೆ. ಜೀವ ಸೃಷ್ಟಿಯ ಕುರಿತು ಅವರಿಗೆ ಇರುವ ಕುತೂಹಲ, ದೈನಂದಿನ ಸರಳ ಸಾಧಾರಣ ಸಂಗತಿಗಳನ್ನು ಅತ್ಯಂತ ಸೂಕ್ಷ್ಮವಾಗಿ ನೋಡುವ ಜೀವನ ಪ್ರೀತಿ, ನಿಸರ್ಗದ ವಿಸ್ಮಯವನ್ನು ಕಂಡು ಅಲ್ಲಿ ಕವಿ ನಡೆಸುವ ಭಾವಸಂವಾದ, ಪರಿಭಾವಿಸುವ ಏಕಾಂತ ಅಖಂಡವಾಗಿ ಸಾಗಿ ಬಂದಿರುವುದು ಉಲ್ಲೇಖನೀಯ ಅಂಶ. ಅವರು ಆಶಾವಾದಿ ಕವಿ, ಜೀವ ಚೈತನ್ಯದ ಭರವಸೆಯನ್ನು ಎತ್ತಿಹಿಡಿಯುತ್ತಾ ಬಂದಿದ್ದಾರೆ. ಪ್ರಸ್ತುತ ಸಂಕಲನದಲ್ಲಿ ವೈವಿಧ್ಯ ಮಯವಾದ ನಲವತ್ತಾರು ಕವಿತೆಗಳಿದ್ದು ಇವು ಅವರ ಸೃಜನಶೀಲತೆಯ ಪ್ರತಿಭಾವಿಕಾಸೋನ್ನತಿಯ ಪ್ರತೀಕವೂ ಆಗಿದೆ.

ಸ್ಮಿತಾ ಅವರ ಬಹುತೇಕ ಕವಿತೆಗಳಲ್ಲಿ ಕಾಣಿಸುವ ಇನ್ನೊಂದು ಅಂಶವೆಂದರೆ ಕಾವ್ಯ ಮೀಮಾಂಸೆ. ಕಾವ್ಯ ಕಟ್ಟುವ ಕ್ರಿಯೆಯ ಬಗೆಗೆ ಅವರು ಸಾಕಷ್ಟು ಜಿಜ್ಞಾಸೆ ನಡೆಸಿದ್ದಾರೆ. ಕಾವ್ಯ ಒಂದು ಸಾವಯವ ಸಂಬಂಧವಿರುವ ಶಿಲ್ಪ ಎಂಬ ಅಂಶ ಅವರಿಗೆ ಚೆನ್ನಾಗಿ ಗೊತ್ತಿದೆ. ಕಾವ್ಯದ ವ್ಯವಸಾಯ ಅವರಿಗೆ ಧ್ಯಾನಸ್ಥ ಸ್ಥಿತಿಯೂ ಹೌದು. ಕಾವ್ಯದ ಕುರಿತ ಚಿಂತನೆಯನ್ನ ಒಳಗೊಂಡ ಸಾಲುಗಳಲ್ಲಿ ಈ ಕವಿ ಕಾಯ್ದುಕೊಳ್ಳುವ ಸೂಚ್ಯತೆ ಭಿನ್ನ ಅರ್ಥಸಾಧ್ಯತೆಯನ್ನು ತೆರೆಯುತ್ತದೆ.

ನೂರಾರು ನೆನಪುಗಳ ಖಜಾನೆ

ಅಧ್ಯಾತ್ಮದ ಒಲವಿದ್ದ ಅವರು ಸಂಪ್ರದಾಯಸ್ಥರಾಗಿರಲಿಲ್ಲ, ಆಧುನಿಕ ಚಿಂತನೆಗಳಿಗೆ ಸದಾ ತೆರೆದುಕೊಂಡಿದ್ದರು. ತಮ್ಮ ದೇಹದಾನವನ್ನು ಮಾಡಿದ್ದೇ ಇದಕ್ಕೆ ಒಂದು ನಿದರ್ಶನ.



ಒಡನಾಟ

» ಶ್ರೀಧರಮೂರ್ತಿ ಎನ್.ಎಸ್.

ಕೆ.ಎಸ್.ಎಲ್.ಸ್ವಾಮಿ(ರವೀ)ಯವರನ್ನು ನಾನು ಮೊದಲು ನೋಡಿದ್ದು ''ಮಲಯ ಮಾರುತ'' ಚಿತ್ರದ ಚಿತ್ರೀಕರಣದಲ್ಲಿ. ಆಗ ನಾನು ಶೃಂಗೇರಿಯಲ್ಲಿ ವಿದ್ಯಾರ್ಥಿಯಾಗಿದ್ದೆ. ಚಿತ್ರೀಕರಣದ ಸಂದರ್ಭದಲ್ಲಿನ ಅವರ ಕೋಪ ತಾಪಗಳು ನಮಗೆ ಭಯ ಮತ್ತು ಗೌರವದ ಭಾವನೆಗಳನ್ನು ಮೂಡಿಸಿದ್ದವು. ಇಂತಹ ಕಾರಣದಿಂದಲೇ ನಾನು ಬೆಂಗಳೂರಿಗೆ ಬಂದ ಬಹಳ ದಿನ ಅವರನ್ನು ಮಾತನಾಡಿಸಲೂ ಹೆದರುತ್ತಿದ್ದೆ. ವಾಹಿನಿಯೊಂದಕ್ಕೆ ಚಿತ್ರಗೀತೆಗಳ ಕುರಿತ ಕಾರ್ಯಕ್ರಮ ಸರಣಿ ರೂಪಿಸಲು ಮೂಲಕ ಅವರೊಡನೆ ಒಡನಾಡಲೇ ಬೇಕಾದ ಅನಿವಾರ್ಯತೆ ಬಂದಿತು. ಒಂದು ಸೀರಿಯಲ್‌ನಲ್ಲಿ ಅವರ ಜೊತೆ ಕೆಲಸ ಮಾಡಿದೆ. ಅಲ್ಲಿಂದ ಮುಂದೆ ಅವರು ನನಗೆ ಬಹುಬೇಗ ಆತ್ಮೀಯರಾದರು. ಪದೇ ಪದೇ ಭೇಟಿ, ಗಂಟೆಗಟ್ಟಲೆ ಮಾತು ನನ್ನ ಭಾಗ್ಯವೆನ್ನುವಂತೆ ದೊರಕಿತು. ಭೇಟಿಯಾದಾಗಲೆಲ್ಲ ಅವರು ಇತಿಹಾಸದ ಪುಟಗಳನ್ನೇ ಬಿಚ್ಚಿಡುತ್ತಿದ್ದರು.

ಹಾಗೆ ನೋಡಿದರೆ ನನ್ನನ್ನು ಚಲನಚಿತ್ರ ಇತಿಹಾಸದ ಕುರಿತು ಬರೆಯುವಂತೆ ಮಾಡಿದವರೇ ಅವರು. ಇತಿಹಾಸ ಕುರಿತು ಏನೇ ಮಾಹಿತಿ ಬೇಕಿದ್ದರೂ ಅವರಿಗೆ ದೂರವಾಣಿ ಕರೆ ಮಾಡುತ್ತಿದ್ದೆ. ಅವರು ಸುಂದರವಾದ ಕಥೆಗಳೊಂದಿಗೆ ಮಾಹಿತಿ ನೀಡುತ್ತಿದ್ದರು. ''ವಿವಿಧ ಭಾರತಿ''ಗಾಗಿ ''ಸುವರ್ಣ ಚಿತ್ರ ಭಾರತಿ'' ಎನ್ನುವ ಮಾಲಿಕೆಯನ್ನು ರೂಪಿಸುವಾಗ ರವೀ ಮತ್ತು ಅವರ ಮಡದಿ ಬಿ.ವಿ.ರಾಧಾ ಇಬ್ಬರನ್ನೂ ಸಂದರ್ಶಿಸಿದ್ದೆ. ಅವರು ಚಿತ್ರರಂಗ ಪ್ರವೇಶಿಸಿದಾಗಿನಿಂದ ಹಿಡಿದು ಹಲವು ಅನುಭವಗಳನ್ನು ಅಲ್ಲಿ ಸುದೀರ್ಘವಾಗಿ ಹಂಚಿಕೊಂಡಿದ್ದರು. ನನಗೆ ಆಗಲೇ ಅವರ ಜೀವನ ಚರಿತ್ರೆ ಬರೆಯಬೇಕು ಎನ್ನುವ ಕನಸು ಹುಟ್ಟಿದ್ದು. ಮುಂದಿನ ಹತ್ತು ವರ್ಷಗಳಲ್ಲಿ ಅವರನ್ನು ಅದಕ್ಕಾಗಿ ಇನ್ನಿಲ್ಲದಂತೆ ಕಾಡಿದ್ದೇನೆ. ''ಖಂಡಿತ ಇದು ಆಗ ಬೇಕಾದ ಕೆಲಸ'' ಎಂದೇನೋ ಅವರು ಹೇಳುತ್ತಿದ್ದರು. ಆದರೆ ಹಲವಾರು ಕಾರಣಗಳಿಂದ ಅದು ಮುಂದಕ್ಕೆ ಹೋಗಿ ಕೊನೆಗೆ ಕೈಗೂಡಲೇ ಇಲ್ಲ. ಬಹುಷ: ಅದು ನನ್ನನ್ನು ಜೀವನ ಪೂರ್ತಿ ಕಾಡುವ ಕೊರಗು.

ಮೇಲ್ನೋಟಕ್ಕೆ ಕೋಪಿಷ್ಠರಂತೆ ಕಾಣುತ್ತಿದ್ದ ಸ್ವಾಮಿಯವರು ಅಂತರಂಗದಲ್ಲಿ ಅಪಾರ ವಿನಯವಂತರಾಗಿದ್ದರು. ಜಿ.ಕೆ.ವೆಂಕಟೇಶ್ ಅವರ ಕುರಿತು ಕೃತಿಯೊಂದು ರೂಪುಗೊಂಡಾಗ ಅದಕ್ಕೆ ಕೆ.ಎಸ್.ಎಲ್.ಸ್ವಾಮಿಯವರೇ ಮನ್ನುಡಿಯನ್ನು ಬರೆಯಬೇಕು ಎಂದು ನಾವು ನಿರ್ಧರಿಸಿ ಕೇಳಿದಾಗ ''ವೆಂಕಟೇಶ್ ಸಂಗೀತ ನಿರ್ದೇಶಕ, ಅವನ ಕುರಿತು ಸಂಗೀತ ಬಲ್ಲವರು ಬರೆದರೆ ಚೆನ್ನಾಗಿರುತ್ತದೆ, ನನಗೆ ಆ ಯೋಗ್ಯತೆ ಇಲ್ಲ'' ಎಂದು ಬಿಟ್ಟಿದ್ದರು. ''ಸಾರ್ ನೀವು ಬರೆಯದಿದ್ದರೆ ಇನ್ಯಾರು ಅದನ್ನು ಬರೆಯಲಾರರು'' ಎಂದು ಬಹಳ ಒತ್ತಾಯಿಸಿದ ಮೇಲೆ ಒಪ್ಪಿಕೊಂಡರು. ಅದರಲ್ಲಿ ಜಿ.ಕೆ.ವೆಂಕಟೇಶ್ ಅವರ ಸ್ವರ ಸಾರ್ವಭೌಮತೆಯ ಬಗ್ಗೆ ಅನೇಕ ಅಪರೂಪದ ಮಾಹಿತಿಗಳನ್ನು ನೀಡಿದ್ದಾರೆ. ಸ್ವಾಮಿಯವರು ಸಹಾಯಕ ನಿರ್ದೇಶಕರಾಗಿದ್ದ ''ಬಂಗಾರಿ''ಚಿತ್ರದಲ್ಲಿ ಸಾವಿನ ಕುರಿತ ಗೀತೆಗೆ ಪೂರ್ವಿ ಕಲ್ಯಾಣಿ ರಾಗದಲ್ಲಿ ಜೀವಸ್ವರ ಪಂಚಮವನ್ನು ಬಿಟ್ಟು ಸಂಯೋಜಿಸಿದ ''ಯಾರೇನ ಮಾಡಿದರೋ'' ಗೀತೆಯ ಮಾಹಿತಿ ಅವುಗಳಲ್ಲಿ ಮುಖ್ಯವಾದದ್ದು. ಜಿ.ಕೆ.ವಿಯವರ ರಾಗಗಳ ಕುರಿತ ಪ್ರಯೋಗಗಳ ಬಗ್ಗೆ ಕೂಡ ಸ್ವಾಮಿ ಮಾತನಾಡಿದ್ದರು. ಪೀಲ್ ವೆಂಕಟೇಶ್‌ಗೆ ಬಹಳ ಪ್ರಿಯವಾದ ರಾಗ. ಇದರಲ್ಲಿ ಆತ ನನ್ನ ಚಿತ್ರದಲ್ಲಿ ಒಂದು ಗೀತೆ ಸಂಯೋಜಿಸಲಿ ಎನ್ನುವ ಆಸೆ ಇತ್ತು ಕೊನೆಗೆ ''ಭೂಮಿಗೆ ಬಂದ ಭಗವಂತ''ಚಿತ್ರದಲ್ಲಿ ''ಭೂಮಿಗೆ ಬಂದ ದೇವಕಿ ಕಂದ'' ಎನ್ನುವ ಗೀತೆಯನ್ನು ಆ ರಾಗದಲ್ಲಿ ಆತನಿಂದ ಪಡೆದೆ ಎಂದು ಸ್ವಾಮಿ ನೆನಪು ಮಾಡಿಕೊಂಡಿದ್ದರು.

ಚಿತ್ರ ನಿರ್ದೇಶಕರಾಗಿ ಕೆ.ಎಸ್.ಎಲ್.ಸ್ವಾಮಿ ಪ್ರಸಿದ್ಧರು, ಕಿರುತೆರೆಯ ಮೂಲಕ ಕಲಾವಿದರಾಗಿ ಜನಪ್ರಿಯರಾದರು.ಅದು ಅವರ ಜೀವನದ ಹೊಸ ತಿರುವಿಗೆ ಕಾರಣವಾಯಿತು. ಆದರೆ ಬೆಳಕಿಗೆ ಬಾರದ ಅವರ ಪ್ರತಿಭೆಯ ಮುಖಗಳು ಇನ್ನೂ ಹಲವಿದ್ದವು. ಕೊನೆಯ ದಿನಗಳಲ್ಲಿ ಅನಿವಾರ್ಯತೆಗಾಗಿ ಯಾರ ಯಾರ ಹೆಸರಿನಲ್ಲಿಯೋ ಚಿತ್ರಕಥೆ–ಸಂಭಾಷಣೆ ಬರೆದು ಕೊಟ್ಟರು ಎನ್ನುವುದನ್ನು ಹತ್ತಿರದಿಂದ ನೋಡಿದ್ದ ನಾನು ಸಂಕಟ ಪಟ್ಟಿದ್ದೆ. ಅವರು ಕನ್ನಡ, ಸಂಸ್ಕೃತ ಸಾಹಿತ್ಯವನ್ನು ಆಳವಾಗಿ ಓದಿಕೊಂಡಿದ್ದರು. ಪದ ಪ್ರಯೋಗದಲ್ಲಿಯೂ ಹೊಸತನ ತರುತ್ತಿದ್ದರು. ಶರಚ್ಚಂದ್ರ ಚಟರ್ಜಿಯವರ ''ಚಂದ್ರನಾಥ'' ಕಥೆಯಲ್ಲಿ ಬರುವ ಎತ್ತಿನ ಗಾಡಿಯ ಹಿಂದೆ ಕಟ್ಟಿದ ಲಾಟೀನಿನ ರೂಪಕವನ್ನು ''ತೂಗುದೀಪ'' ಎಂದು ಕರೆದು ತಮ್ಮ ಚಿತ್ರದ ಶೀರ್ಷಿಕೆಯಾಗಿಸಿದ್ದರು. ಅವರ ಮನೆಯ ಹೆಸರು ''ಇಂಗಡಲು'' ಅಚ್ಚಕನ್ನಡದ ಈ ಪದ ಸೂಚಿಸಿದ್ದು ವಿಷ್ಣುವಿನ ವಾಸಸ್ಥಳವಾದ ಹಾಲಿನ ಕಡಲನ್ನು. ಇದರಲ್ಲಿನ ಆಧ್ಯಾತ್ಮಿಕ ರೂಪಕವನ್ನು ಅವರು ಸೊಗಸಾಗಿ ವಿವರಿಸುತ್ತಿದ್ದರು. ಅವರ ಈ ವ್ಯಕ್ತಿತ್ವ ಬಹುಮಟ್ಟಿಗೆ ಬೆಳಕಿಗೆ ಬಾರದೆ ಹೋಯಿತು.

ಕೆ.ಎಸ್.ಎಲ್.ಸ್ವಾಮಿ ಅಧ್ಯಾತ್ಮ ಕ್ಷೇತ್ರದಲ್ಲಿ ಸಾಕಷ್ಟು ಚಿಂತನೆ ನಡೆಸಿದ್ದರು. ಶ್ರೀಕೃಷ್ಣನ ಪರಿಕಲ್ಪನೆಯ ಬಗ್ಗೆ ಒಂದು ಬಹಳ ಒಳ್ಳೆಯ ಒಳನೋಟಗಳಿರುವ ಲೇಖನವನ್ನು ಪತ್ರಿಕೆಗೆ ಬರೆದು ಕೊಟ್ಟಿದ್ದರು. ಕೊನೆಯ ದಿನಗಳಲ್ಲಿ ಅವರು ಹೆಚ್ಚಾಗಿ ಚಿಂತಿಸುತ್ತಿದ್ದದ್ದು ಶಂಕರಾಚಾರ್ಯರ ಕುರಿತು. ಅನುಭಾವದ ವಿವಿಧ ನೆಲೆಗಳನ್ನು ಶಂಕರ ಚಿಂತನೆಯಲ್ಲಿ ಅವರು ಹುಡುಕಿಕೊಂಡ ರೀತಿ ಬೆರಗು ಮೂಡಿಸುವಂತಿತ್ತು. ನಾನು ಅವರನ್ನು ಕೊನೆಯ ಸಲ ಭೇಟಿಯಾಗಿದ್ದು ''ಸುಚಿತ್ರ ಫಿಲಂ ಸೊಸೈಟಿ''ಯವರು ಆಯೋಜಿಸಿದ್ದ ನರಸಿಂಹ ರಾಜು ಅವರ ಸ್ಮರಣಾ ಕಾರ್ಯಕ್ರಮದಲ್ಲಿ ಅವತ್ತು ಅವರು ಶಂಕರ ಚಿಂತನೆಗಳನ್ನು ಸಾಕಷ್ಟು ವಿವರಿಸಿದ್ದರು. ಅಥವಾ ಅದೇ ಗುಂಗಿನಲ್ಲಿದ್ದರು. ಕಾರ್ಯಕ್ರಮ ಮುಗಿದ ನಂತರ ಕೂಡ ಸರಿ ಸುಮಾರು ಒಂದು ಗಂಟೆಗಳ ಕಾಲ ಅವರ ಜೊತೆ ಕಳೆಯುವ ಅವಕಾಶ ಸಿಕ್ಕಿತು.

ಸಂಗೀತರ ಪ್ರಯೋಗಗಳು

ಆಗ ಮಾತು ''ಮಲಯ ಮಾರುತ'' ಚಿತ್ರದ ಕುರಿತು ಅದರಲ್ಲಿನ ಸಂಗೀತದ ಪ್ರಯೋಗಗಳ ಕುರಿತು ಬಂದಿತು. ಈ ಚಿತ್ರಕ್ಕೆ ಪ್ರೇರಣೆಯಾಗಿದ್ದು ಚೆಂಬೈ ವೈದ್ಯನಾಥ ಭಾಗವತರ್ ಅವರ ಕುರಿತ ಕಥೆ ಎನ್ನುವ ಮಾತನ್ನೂ ಅವರು ಹೇಳಿದ್ದರು. ನೇಪಾಳದಲ್ಲಿ ಚಿತ್ರೀಕರಣ ನಡೆಸಿದ ಅನುಭವಗಳ ಕುರಿತು ಮಾತು ಬಂದಾಗ ''ಇತ್ತೀಚೆಗೆ ಚಿತ್ರವೊಂದರಲ್ಲಿ ಪಾತ್ರಧಾರಿಯಾಗಿ ನೇಪಾಳಕ್ಕೆ ಹೋಗಿದ್ದೆ ಎಲ್ಲಾ ಬದಲಾಗಿದೆ. ಆಧುನಿಕತೆಯ ವಿರೂಪ ಅಲ್ಲಿಗೂ ಕಾಲಿಟ್ಟಿದೆ'' ಎಂದಿದ್ದರು.

ಕೆ.ಎಸ್.ಎಲ್.ಸ್ವಾಮಿಯವರು ನಿರ್ದೇಶಿಸಿದ ಚಿತ್ರಗಳಲ್ಲಿ ಇವರು ವಸ್ತು ವೈವಿಧ್ಯ, ಗಮನ ಸೆಳೆಯುವಂತಿದೆ. ಲಗ್ನಪತ್ರಿಕೆ, ಭಲೇ ಅದೃಷ್ಟವೋ ಅದೃಷ್ಟದಂತಹ ಕಾಮಿಡಿ ಚಿತ್ರಗಳಂತೆ ಕಳ್ಳ ಏಜೆಂಟ್ 000, ಸಿಐಡಿ 72ದಂತಹ ಮಾರಾಮಾರಿ ಥ್ರಿಲ್ಲರ್‌ಗಳೂ ಇವೆ. ಗಾಂಧಿನಗರ, ಅಣ್ಣತಮ್ಮ, ದೇವರು ಕೊಟ್ಟ ತಂಗಿ, ತುಳಸಿ, ಮತ್ತೆ ವಸಂತದಂತಹ ಮೆಲೋಡ್ರಾಮಗಳಿವೆ. ಜಾತಿ ಪದ್ಧತಿ ಕುರಿತ ಭಾಗ್ಯಜ್ಯೋತಿ ಇದ್ದಂತೆ ಸಂಗೀತಮಯ ಚಿತ್ರ ಮಲಯ ಮಾರುತ ಇದೆ. ಪ್ರಯೋಗಶೀಲ ಚಿತ್ರ, ಆರು ಮೂರು ಒಂಭತ್ತುದಂತೆ ಮಕ್ಕಳ ಚಿತ್ರ ಜಂಬೂ ಸವಾರಿ ಇದೆ. ನನಗೆ ಮಹತ್ವದ್ದು ಎನ್ನಿಸುವುದು ಸ್ವಾಮಿಯವರು ಚಲನಚಿತ್ರ ಮಾಧ್ಯಮದ ಮೂಲಕ ಅಧ್ಯಾತ್ಮವನ್ನು ಹಿಡಿಯಲು ಮಾಡಿದ ಪ್ರಯತ್ನಗಳು. ಶ್ರೀಕೃಷ್ಣ ರುಕ್ಮಿಣಿ ಸತ್ಯಭಾಮ ಚಿತ್ರದಲ್ಲಿ ಪೌರಾಣಿಕ ಕಥೆಯ ಮೂಲಕವೇ ಈ ಎಳೆಗಳನ್ನು ಅವರು ಹಿಡಿದಿದ್ದರು. ದೇವರ ದುಡ್ಡು, ಭೂಮಿಗೆ ಬಂದ ಭಗವಂತ ಚಿತ್ರಗಳಲ್ಲಿ ಸಾಮಾಜಿಕ ನೆಲೆಯಲ್ಲಿ ಹಿಡಿದಿದ್ದರು. ಕ್ರಾಂತಿಯೋಗಿ ಬಸವಣ್ಣದಲ್ಲಿ ಚಾರಿತ್ರಿಕ ನೆಲೆಯಲ್ಲಿ ಹಿಡಿದಿದ್ದರು. ಬನಶಂಕರಿಯಂತಹ ಚಿತ್ರದಲ್ಲಿ ಪರಿಕಲ್ಪನೆಯ ನೆಲೆಯಲ್ಲಿ ಹಿಡಿದಿದ್ದರು. ಅವರ ಎಲ್ಲಾ ಚಿತ್ರಗಳಲ್ಲಿಯೂ ಇಂತಹ ಪ್ರಯತ್ನವನ್ನು ಕಾಣ ಬಹುದು.

ಅಧ್ಯಾತ್ಮದ ಒಲವಿದ್ದ ಅವರು ಸಂಪ್ರದಾಯಸ್ಥರಾಗಿರಲಿಲ್ಲ, ಆಧುನಿಕ ಚಿಂತನೆಗಳಿಗೆ ಸದಾ ತೆರೆದುಕೊಂಡಿದ್ದರು. ದೇಹದಾನವನ್ನು ಮಾಡಿದ್ದೇ ಇದಕ್ಕೆ ನಿದರ್ಶನ. ಕೆ.ಎಸ್.ಎಲ್.ಸ್ವಾಮಿ(ರವೀ)ಯವರ ಕೊಡುಗೆಗಳ ಕುರಿತು ಇಂದಿಗೂ ಕಾರ್ಯಕ್ರಮಗಳಾಗಿಲ್ಲ. ಅವರ ಚಿತ್ರಗಳ ಸಿಂಹಾವಲೋಕನ ಕಾರ್ಯಕ್ರಮ ನಡೆದಿಲ್ಲ. ಅವರು ನಿರ್ದೇಶಿಸಿದ ಕೊನೆಯ ಚಿತ್ರಗಳಾದ ಮಹಾಎಡಬಿಡಂಗಿ ಮತ್ತು ಪ್ರಬೋಧ ಚಂದ್ರಿಕೆಗಳು ಬಿಡುಗಡೆಯಾಗಿಲ್ಲ. ನನಗೆ ಮುಖ್ಯ ಅವರು ಕೊಟ್ಟು ಹೋದ ನೆನಪುಗಳನ್ನು ದಾಖಲಿಸ ಬೇಕು ಎಂದು ಇತ್ತೀಚೆಗೆ ಬಹಳ ತೀವ್ರವಾಗಿ ಅನ್ನಿಸುತ್ತಿದೆ.

ಹೊಸ ವರ್ಷ

ಕವಿ ಕಣ

» ಎಚ್. ಆನಂದರಾಮ ಶಾಸ್ತ್ರೀ

‘ಹೊಸ ವರ್ಷ’ದಲ್ಲಿ ಹೊಸತೇನುಂಟೆಂದು
ಹುಡುಕುತ್ತಿದ್ದೇನೆ ಪ್ರತಿ ವರ್ಷ
ಕಾಣುತ್ತಿದ್ದೇನೆ
ಅವೇ ಅಂಕಿ, ಅದೇ ಕ್ಯಾಲೆಂಡರು
ಅದೇ ಅಂಕೆ, ಅದೇ ಶಂಕೆ
ಅದೇ ಬಾಳು, ಅದೇ ಗೋಳು
ಅದೇ ಶಪಥ, ಅವೇ ಶತಪಥ
ಅದೇ ಜನ, ಅದೇ ಮನ
ಅವೇ ಮಾತು, ಅದೇ ನಟನ

ಆದದ್ದು
ದೇಹ ಇನ್ನಷ್ಟು ಹಳತು
ದೇವರು ಇನ್ನಷ್ಟು ಹಳಬ
ಜಗ ಇನ್ನಷ್ಟು ಹಳತು
ಮಗ ಇನ್ನಷ್ಟು ಹಳಬ

ಹೊಸತೇನಿಲ್ಲ
ಇನ್ನಷ್ಟು ಹಳತಾಗುವುದೇ ಎಲ್ಲ
ಹೊಳೆಯುತ್ತಿದೆ ಈಗ ಸತ್ಯ
ಹೊಸ ವರ್ಷವೆಂದರೆ
ಇನ್ನಷ್ಟು, ಮತ್ತಷ್ಟು
ಮಾಗುವುದು, ಬಾಗುವುದು,
‘ಅಂತಿಮ’ ಗುರಿಯತ್ತ
ಸಾಗುವುದು

ಸದ್ಗುರು ಗುರುಕುಲ ಸಾಧನಪಾದ : ಅನುಭವಕಥನ

(ಭಾಗ-11)

» ಅನುಪಮಾ ಮಂಗಳವೇಢೆ, ಶಿಕಾಗೊ



ಇತ್ತೀಚಿನ ವರ್ಷಗಳಲ್ಲಿ ಈಶ ಸಂಸ್ಥೆಯ ಶಿವರಾತ್ರಿಯ ಆಚರಣೆ ಹಲವಾರು ಚ್ಯಾನಲ್‌ಗಳಲ್ಲಿ ಲೈವ್ ಪ್ರಸಾರಗೊಳ್ಳುತ್ತದೆ. ಆದಿಯೋಗಿಯ ಸಮ್ಮುಖದಲ್ಲಿ, ಸದ್ಗುರುಗಳ ಉಪಸ್ಥಿತಿಯಲ್ಲಿ ಶಿವರಾತ್ರಿಯ ಜಾಗರಣೆ ವಿಶೇಷವಾಗಿರುತ್ತದೆ. ಜನಸಾಗರವೇ ಸೇರಿರುತ್ತದೆ. ಸಿದ್ಧತೆಗಳೂ ಸಾಗರದಷ್ಟು. ಅದರಲ್ಲಿ ನನ್ನ ಪಾತ್ರ ಹನಿಯಷ್ಟು ಎಂದರೆ, ಅದೂ ಹೆಚ್ಚಾಗುತ್ತದೆ. ಸಾವಿರಾರು ಸ್ವಯಂಸೇವಕರು ಪ್ರಪಂಚದ ಮೂಲೆಮೂಲೆಗಳಿಂದ ತಿಂಗಳ ಮುಂಚಿತವಾಗಿಯೇ ಬರುತ್ತಾರೆ. ಅವರಿಗೆ ಅಡುಗೆ ಮಾಡಲು ಅಕ್ಷಯವೊಂದೇ ಸಾಲದೆ, ಬೃಹತ್ ಟೆಂಟ್‌ಗಳು ರೂಪಗೊಳ್ಳುತ್ತವೆ.

ಶಿವರಾತ್ರಿಯಂದು ಸಂಜೆ 6ಕ್ಕೆ ಪ್ರಾರಂಭವಾಗುವ ಕಾರ್ಯಕ್ರಮ ಮಾರನೆಯದಿನ ಬೆಳಗ್ಗೆ 6ಕ್ಕೆ ಪೂರ್ಣಗೊಳ್ಳುತ್ತದೆ. ಭಾರತೀಯ ಕಲಾವಿದರು ಮಾತ್ರವಲ್ಲದೆ ವಿದೇಶಿ ಕಲಾವಿದರಿಂದಲೂ ಸಾಂಸ್ಕೃತಿಕ ಕಾರ್ಯಕ್ರಮಗಳಿರುತ್ತವೆ. ಈಶ ಆಶ್ರಮವಾಸಿಗಳಿಂದಲೂ ಕಾರ್ಯಕ್ರಮಗಳಿರುತ್ತವೆ. ಈಶ ಸೌಂಡ್ಸ್ ಆಫ್ ಮ್ಯೂಸಿಕ್ ತಂಡದ ಸಂಗೀತಾಭ್ಯಾಸದ ಜೊತೆಗೆ ಈಶ ಸಂಸ್ಕೃತಿ ಮಕ್ಕಳ ಕಲರಿಪಯಟ್ಟು, ನೃತ್ಯ ಮತ್ತು ಸಂಗೀತಾಭ್ಯಾಸ ಭರದಲ್ಲಿ ನಡೆಯುತ್ತದೆ. ಈ ಬಾರಿ, ಸದ್ಗುರುಗಳ ಮಗಳು ರಾಧೆ, ಸಾಧನಪಾದದ ಕೆಲವರಿಗೆ ನೃತ್ಯವನ್ನು ಸಂಯೋಜಿಸಿ ಕಲಿಸಿ, ಶಿವರಾತ್ರಿಯಂದು ಸ್ವಾಗತನೃತ್ಯವಾಗಿ ಪ್ರಸ್ತುತಪಡಿಸಿದ್ದು ಸ್ಮರಣೀಯ. ಪ್ರತಿದಿನ ರಾತ್ರಿ ಊಟದ ನಂತರ ನಾವು ಸುಮಾರು ನಲವತ್ತು ಜನ ಒಟ್ಟುಸೇರಿ, ಸೂರ್ಯಕುಂಡ ಮಂಟಪದ ಬಳಿ ಅಭ್ಯಾಸ ಮಾಡುತ್ತಿದ್ದೆವು.

ಅನುವಾದ ಸೇವೆ

ಸಾಧನಪಾದದಲ್ಲಿ ನನ್ನ ಸೇವೆಯಿದ್ದದ್ದು ಪಬ್ಲಿಕೇಶನ್ಸ್ ಇಲಾಖೆಯಲ್ಲಿ ಆಂಗ್ಲಭಾಷೆಯಿಂದ ಕನ್ನಡಕ್ಕೆ ಅನುವಾದಕಾರ್ಯ. ನಮ್ಮ ವಿಭಾಗದಲ್ಲಿ ಸೋಶಿಯಲ್ ಮೀಡಿಯಾ, ಆರ್ಕೈವ್ಸ್‌ನಂತಹ ಇನ್ನೂ ಹಲವಾರು ಇಲಾಖೆಗಳಿದ್ದವು. ಶಿವರಾತ್ರಿಗೆ ಮುನ್ನ ಒಮ್ಮೆ ತುರ್ತು ಸಭೆ ಕರೆದು ನಮ್ಮೆಲ್ಲರನ್ನೂ ಒಟ್ಟುಗೂಡಿಸಿ, ‘ನಾಡಿದ್ದು ನಿಮಗೆಲ್ಲಾ ಸ್ಪರ್ಧೆಯೊಂದನ್ನು ಏರ್ಪಡಿಸಿದ್ದೇವೆ. ಒತ್ತಡದ ಸಂದರ್ಭಗಳನ್ನು ಸಂತೋಷದಿಂದ ನಿರ್ವಹಿಸುವುದು ಎಂಬ ವಿಷಯ. ನೀವು ಸೃಜನಾತ್ಮಕವಾಗಿ ಯೋಚಿಸಿ ಐದಾರು ನಿಮಿಷದಲ್ಲಿ ಪ್ರಸ್ತುತಪಡಿಸಬೇಕು. ನಿಮಗೆ ಒಂದೂವರೆ ದಿನ ಸಮಯವಿದೆ’ ಎಂದು ಹೇಳಿ ನಮ್ಮನ್ನು ತಲಾ ಹತ್ತು ಮಂದಿಯ 15

ತಂಡಗಳನ್ನಾಗಿ ವಿಂಗಡಿಸಿದರು. ಒಂದೊಂದು ತಂಡಕ್ಕೂ ಸ್ವಾರಸ್ಯಕರ ಹೆಸರಿಟ್ಟರು. ನಾವೆಲ್ಲ ಒಟ್ಟುಗೂಡಿ ಒಂದು ದಿನದಲ್ಲಿ ತಯಾರಾಗಬೇಕಿತ್ತು.

ನನ್ನ ಸಲಹೆಯಿದ್ದದ್ದು ಭರತನಾಟ್ಯ ಅದರಲ್ಲಿರಬೇಕು ಎಂಬುದಾಗಿ. ಎಲ್ಲರ ಸಲಹೆಗಳನ್ನು ಆದಷ್ಟು ಅಳವಡಿಸಿ, ಅರ್ಧ ದಿನದಲ್ಲಿ ಸ್ಕಿಟ್ ತಯಾರಾಯಿತು. ಮುಖ್ಯ ಪಾತ್ರವನ್ನು ನನಗೇ ಮಾಡಲು ಒಮ್ಮತದಿಂದ ನನ್ನ ತಂಡ ಹೇಳಿತ್ತು. ಇನ್ನರ್ಧ ದಿನದಲ್ಲಿ ನಾವೆಲ್ಲರೂ ಅದನ್ನು ಅಭ್ಯಸಿಸಿ, ಮಾರನೆಯ ದಿನ ಬೆಳಗ್ಗೆ ಸ್ಪರ್ಧೆಯಲ್ಲಿ ಪ್ರಸ್ತುತಪಡಿಸಿದೆವು. ತೀರ್ಪುಗಾರರಾಗಿ ಸ್ವಾಮಿಯೊಬ್ಬರು, ಮತ್ತು ಈಶ ಸಂಸ್ಕೃತಿಯಲ್ಲಿ ಪಾಠ ಮಾಡುವ ಶಿಕ್ಷಕರಿಬ್ಬರಿದ್ದರು. ಸ್ಪರ್ಧೆಯಲ್ಲಿ ನಮ್ಮ ತಂಡಕ್ಕೆ ಮೊದಲ ಬಹುಮಾನ ಸಿಕ್ಕಿದ್ದು ನಮಗೆಲ್ಲಾ ಹೆಮ್ಮೆಯ ವಿಷಯವಾಗಿತ್ತು.

ರಾಧೆಯ ಸಾರಥ್ಯದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಭಾಗಿಯಾದದ್ದು ಅತ್ಯಂತ ಖುಷಿಕೊಟ್ಟಿತ್ತು.

ಸಾಧನಪಾದದವರು ನೀಡಿದ ಇನ್ನೊಂದು ಕಾರ್ಯಕ್ರಮವೆಂದರೆ ಅಗ್ನಿನೃತ್ಯ. ಈ ಕಾರ್ಯಕ್ರಮದ ತಯಾರಿ ಇನ್ನೂ ತೀವ್ರವಾಗಿತ್ತು. ಶಿವರಾತ್ರಿಯ ಮುನ್ನ, ಆಶ್ರಮದಲ್ಲಿ ಎಲ್ಲೆಲ್ಲೂ ಸಂಗೀತ ಮತ್ತು ನೃತ್ಯ. ಗಂಧರ್ವಲೋಕವೇ ಸೃಷ್ಟಿಯಾದಂತಿತ್ತು. ಆಶ್ರಮವು ಎಂದಿಗಿಂತಲೂ ಹೆಚ್ಚು ಚೈತನ್ಯಯುತವಾಗಿ ಪುಟಿದೆದ್ದಿತ್ತು.

ಕಳೆದ ಮಹಾಶಿವರಾತ್ರಿಗೆ ಮುಖ್ಯ ಅತಿಥಿಯಾಗಿ ಬಂದವರು ಉಪರಾಷ್ಟ್ರಪತಿ ಜಗದೀಪ್ ಧನ್ಕರ್. ಮನೋರಂಜನಾ ಕಾರ್ಯಕ್ರಮಗಳಿಂದ ಜಾಗರಣೆಯನ್ನು ಸುಲಭಸಾಧ್ಯ ಮಾಡಿದ ಕಲಾವಿದರಲ್ಲಿ ಶಂಕರ ಮಹಾದೇವನ್, ಗುರುದಾಸ್ ಮಾನ್ ಮುಂತಾದವರು. ಸದ್ಗುರು ಮಾತನಾಡುವಾಗ ಮತ್ತು ಧ್ಯಾನ ಮಾಡಿಸುವಾಗಷ್ಟೇ ನಾವು ಕುಳಿತುಕೊಳ್ಳುತ್ತಿದ್ದದ್ದು. ಹಾಡಿನ ಕಾರ್ಯಕ್ರಮ ಪ್ರಾರಂಭವಾದೊಡನೆ ಎಲ್ಲರೂ ಎದ್ದು ಕುಣಿಯುತ್ತಿದ್ದರು. ನಾನು ಸುಮಾರು ಹದಿನೈದು ವರ್ಷಗಳಿಂದ ಶಿವರಾತ್ರಿ ಜಾಗರಣೆ ಮಾಡುತ್ತಾ ಬಂದಿದ್ದೇನೆ. ಆದರೆ, ಈಶ ಆಶ್ರಮದಲ್ಲಿರುವ ಚೈತನ್ಯಯುತ ಕಾರ್ಯಕ್ರಮಗಳಿಂದಾಗಿ ಮತ್ತು ಸದ್ಗುರುಗಳ ಉಪಸ್ಥಿತಿಯಿಂದಾಗಿ, ಕೇವಲ ಎಚ್ಚರದಿಂದಿರುವುದು ಮಾತ್ರವಲ್ಲದೆ, ಜಾಗೃತ ಸ್ಥಿತಿಯನ್ನು ತಲುಪಲಿಕ್ಕೆ ಸಾಧ್ಯವಾಗುತ್ತದೆ. ಜನರು ಎದ್ದು ಕುಣಿಯುತ್ತಿದ್ದರೆ, ಎಲ್ಲರ ಶಕ್ತಿ ಒಂದುಗೂಡಿ ಅಲ್ಲಿಯ ಪರಿಸರದಲ್ಲಿ ತೀವ್ರತೆಯನ್ನು ಉಂಟುಮಾಡುತ್ತದೆ. ರಾತ್ರಿಯುದ್ದಕ್ಕೂ ಅನ್ನದಾನ ನಡೆಯುತ್ತಲೇ ಇರುತ್ತದೆ. ಶಿವರಾತ್ರಿಯನ್ನು ಈಶದಲ್ಲಿ ಆಚರಿಸಲು ಅವಕಾಶ ಸಿಕ್ಕಿದರೆ ಬಿಡಬೇಡಿ. ಸ್ವಯಂಸೇವಕರಾಗಿ, ಶಿವರಾತ್ರಿಯ ಸಿದ್ಧತೆಗಳಲ್ಲಿ ನೆರವಾಗಲು ಮುಂಚಿತವಾಗಿಯೇ ಹೋಗಲಿಕ್ಕೆ ಅವಕಾಶ ಸಿಕ್ಕರೆ, ಖಂಡಿತ ಬಿಡಬೇಡಿ!

ಆಧ್ಯಾತ್ಮಿಕ ಜೀವನವೆಂದರೆ ಕೇವಲ ಆಸನ ಮತ್ತು ಧ್ಯಾನದ ಸಾಧನೆ ಮಾಡುವುದಲ್ಲ. ಜೀವನ ಎಷ್ಟೇ ಕಷ್ಟಗಳನ್ನು ಒತ್ತಡಗಳನ್ನು ನೀಡಿದರೂ, ನಾವು ನಮ್ಮ ಮನಃಸ್ಥಿತಿಯನ್ನು ಹೇಗಿಟ್ಟುಕೊಳ್ಳುತ್ತೇವೆ ಎಂಬುದು ಮುಖ್ಯ. ಅದೂ ಒಂದು ಸಾಧನೆಯೇ. ಎಂತಹದೇ ಪರಿಸ್ಥಿತಿ ಎದುರಾದರೂ ಸಂತೋಷದಿಂದ ನಿಭಾಯಿಸುವ ರೀತಿಯನ್ನು ನಮಗಿದು ಕಲಿಸಿತ್ತು. ಆತಂಕ ಪಡದೆ ಸಕಾರಾತ್ಮಕವಾಗಿ ನೋಡುವುದು ಹೇಗೆಂದು ತಿಳಿಸಿತ್ತು. ಎಲ್ಲರಿಗೂ ನಮ್ಮದೇ ಆದ ಅಭಿಪ್ರಾಯಗಳಿರುತ್ತವೆ. ಆದರೆ, ಒಟ್ಟುಗೂಡಿ ಕೆಲಸ ನಿರ್ವಹಿಸುವಾಗ, ನಮ್ಮ ಅಭಿಪ್ರಾಯವೇ ಮುಖ್ಯವಲ್ಲ. ಯಾವುದು ಆ ಸಮಯಕ್ಕೆ ಒಳ್ಳೆಯದು, ಆ ಪರಿಸ್ಥಿತಿಗೆ ಯಾವುದು ವರ್ಕ್ ಆಗುತ್ತದೆ ಎಂಬುದು ಮುಖ್ಯ. ಒಂದು ದಿನದಲ್ಲಿ, ಅಪರಿಚಿತರೊಡನೆ ಸೇರಿ, ಯೋಜನೆಯನ್ನು ಯಶಸ್ವಿಯಾಗಿ ಸಂತೋಷದಿಂದ ನಿರ್ವಹಿಸಿದ್ದು ಜೀವನದ ಪಾಠವಾಗಿತ್ತೇ ವಿನಾ ಪೈಪೋಟಿಯ ಸ್ಪರ್ಧೆಯಾಗಿರಲಿಲ್ಲ.

anu2nitin@gmail.com

(ಮುಂದುವರಿಯುವುದು).

ಸಹಸ್ರ ಚಂದ್ರ ದರ್ಶನ

ಅಮೆರಿಕದಲ್ಲಿದ್ದ ಮಕ್ಕಳು ಮಡದಿ, ಈ ವರ್ಷ ಜನವರಿಯಲ್ಲಿ ಬರುವುದಿಲ್ಲ ಎಂದಾಗ ರಾಯರಿಗೆ ಏನೂ ಅನಿಸಲಿಲ್ಲ. ತಮ್ಮ ಪಾಡಿಗೆ ತಾವಿದ್ದರು. ಆದರೆ, ಅವರಿಗೆ ಒಂದು ಅಚ್ಚರಿ ಕಾದಿತ್ತು!

ಹೊಸ ಕಥೆ

» ಬಿ. ಎನ್. ಯಳಮಳ್ಳೀ, ಬೆಂಗಳೂರು

ಅಪೂರ್ವ ರಾವ ಅವರಿಗೆ ಬೆಳಿಗ್ಗೆ 6 ಗಂಟೆಗೆ ಎಚ್ಚರಿಕೆ ಆಗಿಯೇ ಬಿಡುತ್ತದೆ, ರಾತ್ರಿ ಮೂತ್ರಕ್ಕೆಂದು ಎಷ್ಟೇ ಸಲ ಎದ್ದಿದ್ದರೂ. ಫ್ಲಾಸ್ಕನಿಂದ ಬಿಸಿನೀರು ಕುಡಿದು ಸ್ಯಾಚೆಯಿಂದ ಕಷಾಯದ ಪಾವ್ಡರ್ ಅದೇ ಕಪ್ಪಿಗೆ ಸುರಿದು ಉಗುರುಬೆಚ್ಚನೀರು ಹಾಕಿ ಕಷಾಯ ಕುಡಿಯುತ್ತಾರೆ. ಖಾಲೀ ಹೊಟ್ಟೇಲಿ ಬೆಡ್ ಟೀ ಕುಡಿದು ವರ್ಷಗಳೇ ಆಯಿತು. ಗ್ಯಾಸ್ ಟ್ರಬಲ್ ಆಗುತ್ತದೆ. ಬ್ರಷ್ ಮಾಡಿ ಟಾಯ್ಲೆಟ್ ಮುಗಿಸಿಕೊಂಡು ಜಾಗಿಂಗ್ ಟ್ರ್ಯಾಕ್ ಸೂಟ್ ತೊಡುತ್ತಾರೆ. ಶ್ಯೂಸ್ ತೊಟ್ಟು ವಾಕಿಂಗ್ ಸ್ಟಿಕ್ ಹಿಡಿದುಕೊಂಡು ವನ್ ಬೀಎಚ್ಕೆ ಫ್ಲ್ಯಾಟ್‌ನ ಬೀಗ ಹಾಕಿ ಹೊರಡುತ್ತಾರೆ ವಾಕಿಂಗ್‌ಗೆ. ಡೇಲೀ 5 ಕಿಲೊಮೀಟರ್. ಈ ಪರಿಪಾಠ ಅವರ ಬಾಲ್ಯದಲ್ಲಿ ಒಂದು ಹಳ್ಳಿಯ ಸ್ಕೂಲಿನಲ್ಲಿ ಒಂದನೇ ಕ್ಲಾಸ್ ಸೇರಿದಾಗಿನಿಂದ ಇದೆ. ಆಗ ಕಿಂಡರ್ ಗಾರ್ಟನ್ ಇರಲಿಲ್ಲ. ಬಸ್ಸೂ ಇರಲಿಲ್ಲ. ಹೋಗಲಿಕ್ಕೆ ಎರಡೂವರೆ ಕಿಲೋಮೀಟರು ಬರಲಿಕ್ಕೂ ಅಷ್ಟೇ. ಮುಂದೆ ಟೌನ್‌ಗೆ ಬಂದು ಹೈಸ್ಕೂಲು, ಪೀಯೂಸಿ ಮಾಡಿದರೂ, ಸಿಟಿಗೆ ಬಂದು ಎಂಜಿನಿಯರಿಂಗ್ ಮಾಡಿದರೂ ದೂರ ಅಷ್ಟೇ. ಕಾಲ್ನಡಿಗೆಯಲ್ಲೇ. ಆ ಜೆನೆರೆಶನ್ನೇ ಬೇರೆ. ಮುಂದೆ ಕೆಲಸಕ್ಕೆ ಸೇರಿದ ಮೇಲೆ ಅದು ಮಾರ್ನಿಂಗ್ ವಾಕ್ ರೂಪ ಧರಿಸಿತು.

ವಿಶ್ವೇಶ್ವರಯ್ಯನವರಿಗೆ 100 ವರ್ಷ ವಯಸ್ಸಾದಾಗ ರಾಯರ ಪೀಯೂಸಿ ಕಾಲೇಜಿಗೆ ಭಾಷಣ ಕೊಡಲು ಬಂದಿದ್ದರು. ‘ಏನ್ ಸರ್, ನಿಮ್ಮ ದೀರ್ಘಾಯುಸ್ಸಿನ ಸೀಕ್ರೆಟ್?’ ಎಂದು ಕೇಳಿದ್ದಾಗ ಅವರು ಹೇಳಿದ್ದ ನೆನಪು. ‘ನನ್ನ ಬ್ರೇಕ್ಫಾಸ್ಟ್ ಉದ್ದಿನ ವಡೆ. ಅದರ ಮಧ್ಯಭಾಗವನ್ನು ಮಾತ್ರ ತಿನ್ನುತ್ತೇನೆ’ ಎಂದಿದ್ದರು ನಗುತ್ತ. ಎವೆರಿಥಿಂಗ್ ಮಾಡರೇಟ್ ಅಂತ ಅರ್ಥ ಇರಬಹುದು. ವಿಶೇಷ ಪ್ಲ್ಯಾನ್ ಮಾಡದೆಯೇ ಅನಾಯಾಸವಾಗಿ ಎಲ್ಲವೂ ಮಿತವಾಗಿ ಎಂಬುದೇ ರಾಯರ ದೀರ್ಘ ಆರೋಗ್ಯದ ಗುಟ್ಟಾಗಿತ್ತು.

ವಾಕಿಂಗ್ ಮುಗಿಸಿ ಬಂದವರೇ ಸೀದಾ ಡೈನಿಂಗ್ ಹಾಲ್. ತುಂಬಿ ಗುಜು ಗುಜು. ಸುತ್ತ ನೋಡಿ ಆಪ್ತರು ಇರುವ ಟೇಬಲ್ಲಿಗೆ ಹೋಗಿ ಕುಳಿತುಕೊಳ್ಳುತ್ತಾರೆ. ಈವತ್ತೇನ್ ಸಾರ್ ಆರ್ಡರು? ಕಾಂಟಿನೆಂಟಲ್, ಅಮೇರಿಕನ್, ನಾರ್ಥ್ ಇಂಡಿಯನ್? ಎಲ್ಲ ಗತವೈಭವ! ಸೌಥ್ ಇಂಡಿಯನ್‌ಗೆ ಆರ್ಡರು ಮಾಡುತ್ತಾರೆ. ಬಿಫೋರ್ ಫೂಡ್, ಆಫ್ಟರ್ ಫೂಡ್ ಮಾತ್ರೆಗಳ ಶೀಷೆಗಳು ಜೋಬಿನಿಂದ ಆಚೆ ಬರುತ್ತವೆ. ಸ್ನಾನ ನಿಧಾನಕ್ಕೆ, ಮಧ್ಯಾಹ್ನ ಊಟಕ್ಕೆ ಮೊದಲು.

ಸಾರೀ, ನಿಮಗೆ ಹೇಳಲಿಲ್ಲ ಅಂತ ಕಾಣುತ್ತದೆ. ರಾಯರು ಇರುವದು ಬೆಂಗಳೂರು ವಿಮಾನ ನಿಲ್ದಾಣದ ಹತ್ತಿರದ ಒಂದು ಪಾಷ್ ಒಲ್ಡ್ ಏಜ್ ಹೋಮಿನಲ್ಲಿ. ಇಬ್ಬರು ಹೆಣ್ಮಕ್ಕಳು. ಇಬ್ಬರೂ ಸಾಫ್ಟವೇರ್ ಇಂಜಿನಿಯರ್ಸು. ಅಳಿಯಂದರಿಬ್ಬರೂ ಅಷ್ಟೆ. ಟೆಕಿಗಳು. ಎಲ್ಲರಿಗೂ ಯೂಎಸ್ ನಲ್ಲಿ ಕೆಲಸ. ರಾಯರು ಮೆಕ್ಯಾನಿಕಲ್ ಇಂಜಿನಿಯರ್. ಅವರ ಅರ್ಧ ಸರ್ವೀಸು ಕನ್ಸಲ್ಟಿಂಗ್ ಇಂಜಿನಿಯರ್ ಆಗಿ ವಿದೇಶದಲ್ಲೇ ಕಳೆದರೂ 67 ವಯಸ್ಸಿಗೇ ರಿಟೈರ್ ಆಗಿ ಇಂಡಿಯಾಗೆ ವಾಪಸ್ಸು ಬಂದರು. ಸುಮಾರು ವರ್ಷ ರಾಯರೂ ಶ್ರೀಮತಿಯವರೂ ಬೆಂಗಳೂರಿನ ಸ್ವಂತ ಮನೆಯಲ್ಲಿ ವಾಸವಾಗಿದ್ದರು. ಹಾಗೂ ಸ್ವಲ್ಪ ವರ್ಷ ಮಕ್ಕಳ ಜತೆ ಯೂಎಸ್‌ನಲ್ಲೂ ಇದ್ದರು. ರಾಯರಿಗೆ ಯೂಎಸ್ ಲೈಫ್ ಅಷ್ಟು ಸರಿ ಬರಲಿಲ್ಲ. ವಾಪಸ್ ಬಂದು ಬಿಟ್ಟರು. ಶ್ರೀಮತಿ ಅಲ್ಲೀಯೇ ಮಕ್ಕಳ ಹತ್ತಿರ ಉಳಿದರು. ಸ್ವಂತ ಮನೆಯಲ್ಲಿ ಕೇರ್ ಟೇಕರ್ಸ್ ಇಟ್ಟುಕೊಂಡು ಕೆಲ ಕಾಲ ಒಬ್ಬರೇ ಇದ್ದರು. ವೃದ್ಧಾಪ್ಯದ ಆರೋಗ್ಯ ಸಮಸ್ಯೆಗಳು ಶುರು ಆಗಿ ಒಲ್ಡ್ ಏಜ್ ಹೋಮ್ ಸೇರಬೇಕಾಯ್ತು. ಮಕ್ಕಳು ‘ಬಾ ಪಪ್ಪ ನಮ್ಮ ಜತೆಲೇನೇ ಇರು’ ಅಂತ ಗೋಗರೆದರು. ಹೋಗಲಿಲ್ಲ. ಕ್ರಿಸ್ಮಸ್ ರಜೆಯಲ್ಲಿ ಅವರೆಲ್ಲ ಬರ್ತಾರೆ. ರಾಯರೂ ಮಧ್ಯೆ ಸ್ವಲ್ಪ ದಿನ ಹೋಗಿ ಬರ್ತಾರೆ. ಆ ಇಪ್ಪತ್ನಾಲ್ಕು ಗಂಟೆ ಅವಧಿಯ ಫ್ಲೈಟ್ ಅಂದರೆ ಇವರಿಗಾಗಲ್ಲ.

ಈ ಒಲ್ಡ್ ಏಜ್ ಹೋಮ್ ಗಳಲ್ಲಿ ಎಲ್ಲ ಸಹವಾಸಿಗಳು ಒಂಥರ ಅಸಹನೀಯರೂ, ನನ್ನದೇ ಸರಿ ಅಂತ ತಮ್ಮ ಕಥೆಗಳನ್ನ, ವಾದಗಳನ್ನೇ ಮಂಡಿಸುವವರಾಗಿದ್ದರೂ, ಹೇಳಿದ್ದೇ ಹೇಳುವವರಾಗಿದ್ದರೂ ಟ್ಯಾಕ್ಟ ಫುಲೀ ನಮಗೆ ಬೇಡವಾದಾಗ ದೂರ ಇಡುವದನ್ನು ಕಲಿತರೆ ಆಯಿತು. ರಾಯರಿಗೊಂದು ಎಲ್ಲರೂ ಅರ್ಥಮಾಡಿಕೊಂಡು ಒಪ್ಪುವಂಥ ನೆಪವೂ ಸಿಕ್ಕಿತು. ರಾಯರು ಇಂಜಿನಿಯರ್ ಆದರೂ ಸಾಹಿತ್ಯದ ಕಡೆಗೆ ಒಲವು ಇರುವವರು. ಸ್ಟೂಡಂಟ್ ಇದ್ದಾಗ ಬರೀತಿದ್ದರು ಕನ್ಸಲ್ಟಂಟ್ ಕೆಲಸದಲ್ಲಿ ವಿಷಯ ಸಂಗ್ರಹಣೆಗೆ ಸುಮಾರು ಅವಕಾಶಗಳು, ಅವಧಿಗಳು ಸಿಕ್ಕುತ್ತಿದ್ದವು. ರಿಟಾಯರ್ ಆದ ಮೇಲೆ ಬುಕ್ಸ ಬರೆಯೋಣ ಅಂತ ನಿರ್ಧರಿಸಿದ್ದರು. ರೈಟಿಂಗ್ ರಿಕ್ವಾಯರ್ಸ್ ಅ ಲಾಟ್ ಒಫ್ ರಿಸರ್ಚ್ ಅಂತ ಮೂರೂ ಹೊತ್ತು ಬಾಗಿಲು ಹಾಕಿಕೊಂಡು ಇರುತ್ತಿದ್ದರು. ಸಾಹಿತ್ಯದ ಮಾರ್ಕೆಟ್ ಬದಲಾಗಿತ್ತು. ಮುದ್ರಿತ ಪುಸ್ತಕಗಳ ಓದುಗರು ಕಡಿಮೆಯಾಗಿದ್ದರು. ಇಂಟರ್ನೆಟ್ ಬ್ರೌಸಿಂಗ್ ಪ್ರಸ್ತುತವಾಗಿತ್ತು. ಅಮೇಜಾನ್ ಮೇಲೆ ಈ– ಬುಕ್ ಪ್ರಕಟಿಸಲು ಉದ್ಯುಕ್ತರಾದರು. ಕನ್ಸಲ್ಟಂಟ್ ಅನುಭವದ ವಿಷಯಗಳಾದ ಕ್ವಾಲಿಟಿ ಮ್ಯಾನೆಜ್ಮೆಂಟ್, ದಿ ವರ್ಲ್ಡ್ ಟ್ರೇಡ್, ಮೇಕ್ ಇನ್ ಇಂಡಿಯ ಮುಂತಾದ ಈ –ಬುಕ್ಸ್ ಪ್ರಕಟಿಸಿದರು. ಮಾರ್ಕೆಟಿಂಗ್ ಸರೀ ಮಾಡಲಿಲ್ಲ. ಮಾರಾಟ ಈ– ಬುಕ್ಸ್‌ಗಳ ಅಪೇಕ್ಷಿತ ಗುರಿ ತಲುಪಲಿಲ್ಲ. ಮಾತೃಭಾಷೆ ಕನ್ನಡಕ್ಕೆ ಬಂದರು. ಮುದ್ರಿತ ಪುಸ್ತಕಗಳ ಮಾರುಕಟ್ಟೆ ತುಂಬಾ ಸೀಮಿತವಾಗಿತ್ತು. ಮೂರು ಪುಸ್ತಕಗಳನ್ನು ಬರೆಯುವದರಲ್ಲೇ ಆರೋಗ್ಯ ಕೈಕೊಟ್ಟಿತು. ಕುಳಿತುಕೊಂಡು ಲ್ಯಾಪ್ ಟಾಪ್ ಮೇಲೆ ಟೈಪಿಸುವದು ದುಸ್ತರವಾಯಿತು.

ರಾಯರು ರಿಟೈರ್ ಆದಾಗ ಅದೀಗ ಭಾರತದಲ್ಲಿ ಸೋಷಿಯಲ್ ಮೀಡಿಯ ಹುಟ್ಟಿತ್ತು. ಸಮಯ ಕಳೆಯಲು ಒಳ್ಳೆಯ ಸಾಧನ. ಫೇಸ್ ಬುಕ್, ಟ್ವಿಟ್ಟರ್ ಮತ್ತು ವಾಟ್ಸಪ್ ಗಳ ಹಿಂದೆ ಮೋಬಾಇಲ್ ಮೇಲೆ ಕೈಯಾಡಿಸುತ್ತ ಕಾಲಹರಣವಾಗುತ್ತಿತ್ತು. ಸೋಷಿಯಲ್ ಮೀಡಿಯ ಮೇಲೆ ದೊಡ್ಡ ರಾಜಕೀಯ ಯುದ್ಧ. ರಾಜಕೀಯ ಪಾತಳಿಯಲ್ಲೇ ಆದರೆ ಪರವಾ ಇಲ್ಲ. ಇದು ಸಾಂಸ್ಕೃತಿಕ , ಸಾಮಾಜಿಕ ಕ್ಷೇತ್ರಗಳಿಗೂ ಪಸರಿಸುತ್ತಿತ್ತು. ರಾಯರದು ಸ್ವಲ್ಪ ವಿಶೇಷ ವ್ಯಕ್ತಿತ್ವ. ನಂಬುವ, ನಂಬದಿರುವ ಮಿಶ್ರ ವ್ಯಕ್ತಿತ್ವ. ತರ್ಕಕ್ಕೆ ನಿಲುಕದ್ದನ್ನು ಒಪ್ಪಿಕೊಳ್ಳಲು ಮನಸ್ಸು ಕೇಳುತ್ತಿರಲಿಲ್ಲ. ದೇವರು, ಭಕ್ತಿ ಅಂದರೆ ಅವರ ಅಮ್ಮ ಅಪ್ಪ ಹೇಳಿಕೊಟ್ಟ ಮಿತಿಯಲ್ಲಷ್ಟೇ. ರಾಯರ ಪ್ರಕಾರ ದೇವರು ಅಂದರೆ ಒಂದು ಸ್ಥಿರತ್ವ. ಮಾರ್ಗದರ್ಶಿ ಪ್ರತೀಕ. ಧರ್ಮ ಬೇರೆ. ಧರ್ಮ ಕ್ರಿಯಾತ್ಮಕ. ಅದು ದಿನ ನಿತ್ಯದ ನಡೆನುಡಿಗಳಲ್ಲಿ ಬರುವಂಥದು. ಪೂಜೆ ಪುನಸ್ಕಾರಗಳ, ವ್ರತಾಚರಣೆಗಳ ಆಚೆಗಿನದು. ಸತ್ಯಮ್ ವದ. ಧರ್ಮಮ್ ಚರ, ಸರ್ವೇ ಜನ ಸುಖಿನೋ ಭವಂತು. ಇದು ಅಘೋಷಿತ ಖಾಸಗಿ ನಡೆ. ಸರ್ವ ಧರ್ಮ ಸಮಾನ. ರಾಯರು ಪರಂಪರೆ ಶಿಷ್ಟಾಚಾರಗಳನ್ನು ಅಷ್ಟಾಗಿ ನಂಬುವವರಲ್ಲ. ಈಗ ಅತ್ತ ಕಡೆಗೂ ಒಲವು ಬರ್ತಾ ಇದೆ.

ಅವರು 9 ನೆಯ ಕ್ಲಾಸ್ ಓದುವಾಗಲೇ ಅವರ ಸಾಯನ್ಸ ಟೀಚರ್ ಒಬ್ಬರು ಎಮ್ ಕೆ ಗಾಂಧಿ, ನೆಹರು ಅವರುಗಳ ಅನೇಕ ವೈಪರೀತ್ಯಗಳ ಬಗೆಗೆ ಹೇಳುತ್ತಿದ್ದುದು ಸ್ವಲ್ಪ ಔಟ್ ಒಫ್ ಬಾಕ್ಸ್ ಯೋಚನೆ ಮಾಡುವದನ್ನು ಕಲಿಸಿಕೊಟ್ಟಿತ್ತು. ಆದರೆ ಈಗ ಪ್ರಸ್ತುತ ಅಪಪ್ರಚಾರವು ಫ್ರೀ ಆಗಿರುವ ರಾಯರಿಗೆ ಭಾರತದ ಇತಿಹಾಸದ ಸತ್ಯಾಸತ್ಯತೆಗಳ ವಿವರವಾದ ಅಭ್ಯಾಸ ಮಾಡುವ ಪ್ರೇರಣೆ ಕೊಟ್ಟಿತು. ಕನ್ನಡದಲ್ಲಿ ಮೂರು ಪುಸ್ತಕಗಳನ್ನು ಬರೆದರು. ರಿಸರ್ಚ್ ಮಾಡಿ ಎತ್ತಿಕೊಂಡ ಎಲ್ಲ ಮಾಹಿತಿಗೂ ಸಾಕ್ಷಾಧಾರ, ಉಲ್ಲೇಖಗಳ ಲಿಂಕ್‌ಗಳನ್ನು ಪುಸ್ತಕದ ಕೊನೆಗೆ ಪಟ್ಟಿ ಮಾಡುವದು. ಯಾವ ಹುಬ್ಬುಗಳನ್ನೂ ಏರಲಿಕ್ಕೆ ಬಿಡುವ ಹಾಗಿಲ್ಲ. ಸತ್ಯಾನ್ವೇಶಣೆಯ ಬಗೆಗೆ ಧನ್ಯತಾ ಭಾವ ಬಂದಿತು. ದೇಶಕ್ಕೆ ಅವರು ಸಲ್ಲಿಸುವ ಅಳಿಲು ಸೇವೆ ಅಂತ ಸೋಷಿಯಲ್ ಮೀಡಿಯಾದಲ್ಲಿ ಆಳವಾಗಿ ತೊಡಗಿಕೊಂಡರು.

ತುಂಬು ಫ್ಯಾಮಿಲೀ ಇದ್ದುಕೊಂಡು ಅವರು ಒಂಟಿ ಪಿಶಾಚಿ ಥರ ಇರಲು ಹೇಗೆ ಸಾಧ್ಯವಾಯಿತು ಎಂದು ನೋಡಬೇಕು. ಅವರು ಚಿಕ್ಕಂದಿನಿಂದಲೂ ಗುಂಪಿನಲ್ಲಿ ಒಬ್ಬಂಟಿ. ಅವರದು ಒಂಬತ್ತು ಮಕ್ಕಳಿರುವ ಮನೆ. ಪ್ರಾಥಮಿಕ, ಮಾಧ್ಯಮಿಕ ಶಾಲೆಗಳಲ್ಲಿ ಮೊದಲ ಸ್ಥಾನ. ಮಿಕ್ಸಿಂಗ್ ಸ್ವಭಾವ ಕಡಿಮೆ. ಪೀಯೂಸಿಯಲ್ಲಿ, ಇಂಜಿನಿಯರಿಂಗನಲ್ಲಿ ಪುಸ್ತಕದ ಹುಳು. ಅವರು ಒಂಥರ ಅಂತರ್ಮುಖಿ. ಎಲೆಮರೆಯ ಕಾಯಿಯಂತೆ ನೇಪಥ್ಯದಲ್ಲೇ ಇರಬಯಸುವವರು. ಉತ್ಸವಮೂರ್ತಿಯಾಗಲಂತೂ ಅಲಭ್ಯ. ಸ್ವಂತ ಗೆಲುವುಗಳನ್ನು ಆಚರಿಸುವದರಲ್ಲಿ ಹಿಂದೆ ಹಿಂದೆ. ಅದೇ ಉದ್ಯೋಗದಲ್ಲಿದ್ದಾಗ ತನ್ನ ಟೀಮಿನ ಚಿಕ್ಕ ಪುಟ್ಟ ಯಶಸ್ಸುಗಳನ್ನು ಸ್ಮಾಲ್ ಸೆಲೆಬ್ರೇಷನ್ಸ್ ಅಂತ ಆಚರಿಸಿದ್ದಿದೆ. ಬರ್ಥ್ ಡೇ ವಿಷಯದಲ್ಲೂ ಅಷ್ಟೇ. ಚಿಕ್ಕಂದಿನಲ್ಲೂ ಅಷ್ಟೇ. 11 ನೇ ವಯಸ್ಸಿನಲ್ಲಿ ಮಾಡಿದ್ದ ನೆನಪು. ಅದೂ ಅಷ್ಟು ಮಕ್ಕಳಿರುವಾಗ ಏನು ಸೆಲೆಬ್ರೇಟ್ ಮಾಡಿಯಾರು? ಮನೆಯ ದಿನನಿತ್ಯದ ಅಡಿಗಯಲ್ಲಿಯೇ ಒಂದು ಸ್ವೀಟ್ ಮಾಡಿದರೆ ಬರ್ಥ್ ಡೇ ಸೆಲೆಬ್ರೇಟ್ ಆಗಿ ಹೋಯ್ತು. ಅದೇ ಒಟ್ಟಿಗೆ ಇದ್ದಾಗ ಶ್ರೀಮತಿಯದು, ಮಕ್ಕಳದು, ಅಳಿಯಂದರದು, ಮೊಮ್ಮಕ್ಕಳದು ಫುಲ್ ಸ್ಕೇಲ್ ಸೆಲೆಬ್ರೇಷನ್. ಒಟ್ಟಿಗಿರುವಾಗ ರಾಯರ ಬರ್ಥ್ ಡೇಗೆ ಮಕ್ಕಳು ಬಲವಂತ ಮಾಡುತ್ತಾರೆ. ರಾಯರ ಕಂಡೀಷನ್ಸ್ ಹಲವಾರು. ನೋ ಕೇಕ್ ಕಟಿಂಗ್. ಯಾವದೋ ರೆಸ್ಟಾರಂಟನಲ್ಲಿ ಡಿನ್ನರ್ ಅಷ್ಟೇ.

ರಾಯರ ಬರ್ಥ್ ಡೇ ಜನವರಿಯಲ್ಲಿ ಬರುತ್ತದೆ. ಕ್ರಿಸ್ಮಸ್ ವೇಕೇಷನ್‌ಗೆ ಫ್ಯಾಮಿಲಿ ಎಲ್ಲಾ ಇಂಡಿಯಾಗೆ ಬಂದಿರ್ತಾರೆ. ಬಲವಂತವಾಗಿ ರಾಯರ ಬರ್ಥಡೆ ಸೆಲೆಬ್ರೇಟ್ ಮಾಡಿ ಹೋಗ್ತಾರೆ. ಆದರೆ ಈ ಸಾರೆ ಕ್ರಿಸ್ಮಸ್ ವೇಕೇಷನ್‌ಗೆ ಕಾರಣಾಂತರಗಳಿಂದ ಬರೋದಕ್ಕೆ ಆಗ್ತಾ ಇಲ್ಲವಂತೆ. ಆಗಸ್ಟನಲ್ಲಿ ಬರಬಹುದಂತೆ.

ಕ್ರಿಸ್ಮಸ್ ವೇಕೆಶನ್ ಕಳೆದಿತ್ತು. ಅದೊಂದು ರಾತ್ರಿ, ಬೆಂಗಳೂರಿನಲ್ಲಿ ಚಳಿ ಆಗ್ತಿದೆ. ಬೆಳಗಿನ 4 ಗಂಟೆಗೇ ಎಚ್ಚರಿಕೆ ಆಗಿದೆ. ನಿದ್ರೆ ಬರ್ತಾ ಇಲ್ಲ. ಆರೋಗ್ಯ ಚೆನ್ನಾಗಿಯೇ ಇದೆ, ಮಾಮೂಲು ಸಮಸ್ಯೆಗಳನ್ನು ಬಿಟ್ಟರೆ. ಈ ಜನೆವರೀಲಿ ರಾಯರಿಗೆ ಎಂಬತ್ತು ವರ್ಷ. ಅವರ ಸಮವಯಸ್ಕರಿಗೆ ಕಂಪೇರ್ ಮಾಡಿದರೆ ಅವರು ಫಿಟ್ ಅಂಡ್ ಫೈನ್. ಸಾವಿಗೆ ಎಂದಿಗೂ ಹೆದರಿದವರಲ್ಲ. ಏನೂ ವಿಷಾದಗಳು ಇಲ್ಲ. ಯಾವ ನಿರೀಕ್ಷೆಗಳು ಇಲ್ಲ. ಫ್ಯಾಮಿಲಿ ಎಲ್ಲಾ ಸೆಟಲ್ ಆಗಿದೆ. ಮೊಮ್ಮಕ್ಕಳ ಜೀವನದ ಮೈಲಿಕಲ್ಲುಗಳು ಬರೋದಕ್ಕೆ ಸುಮಾರು ವರ್ಷಗಳೇ ಇದೆ. ಕಾಯುವಿಕೆ ಅಸಾಧ್ಯ. ರಾಯರ ಬರವಣಿಗೆ ಕೂಡ ಬತ್ತಿಹೋಗಿವೆ. ಮುಖ್ಯವಾಗಿ ಕುಳಿತು ಲ್ಯಾಪ್ಟಾಪ್ ಮೇಲೆ ಟೈಪ್ ಮಾಡಕ್ಕಾಗಲ್ಲ. ಡಿಕ್ಟೇಟ್ ಮಾಡಿ ಯಾರದೋ ಕೈಲಿ ಬರೆಸೋವಷ್ಟು ಕಂಪೆಲ್ಲಿಂಗ್ ಥೀಮೇ ಇಲ್ಲಾ. ಮುಂದೆ ಏನು? ಸಾವಿನ ಹೆದರಿಕೆ ಇಲ್ಲದಿದ್ದರೂ ಸಾವಿನ ಯೋಚನೆ ಬಂದೇ ಬರುತ್ತದೆ. ಯಾಕೆಂದರೆ ಹೆಚ್ಚಿನ ದೀರ್ಘಾಯುಷಿಗಳಲ್ಲಿ ಎಂಬತ್ತು ಒಂದು ಸ್ಟೇಜು. ಅದು ಕಳೆದರೆ ಮತ್ತೆ ಗೊತ್ತಿಲ್ಲ.

ಕಾಲಿಂಗ್ ಬೆಲ್ ರಿಂಗ್ ಆಗುತ್ತದೆ. ಆರು ಗಂಟೆ ಆಗ್ತಾ ಇದೆ. ‘ಯಾರೂ ಬರಲ್ಲವಲ್ಲ ಹೀಗೆ ಬಾಗಿಲು ತಟ್ಟಿಕೊಂಡು! ಯಾರಿಗಾದರೂ ಹುಶಾರ್ ಇರಲಿಕ್ಕಿಲ್ಲವಾ’ ಸಾವರಿಸಿಕೊಂಡೆದ್ದು ಬಾಗಿಲು ತೆರೆದರೆ ಓ ವಾಟ್ ಎ ಪ್ಲೆಸಂಟ್ ಸಪ್ರ್ರಾಇಸ್! ಇಬ್ಬರೂ ಮಕ್ಕಳೂ ಬಾಗಿಲಲ್ಲಿ!

‘ಎದ್ದಿದ್ದೆಯ ಪಪ್ಪಾ! ಡಿಸ್ಟರ್ಬ್ ಆಯ್ತಾ? ಫ್ಲೈಟ್ ಟೂ ಏ ಎಮ್‌ಗೆ ಲ್ಯಾಂಡ್ ಆಯ್ತು. ಇಲ್ಲಿಗೆ ಬಂದು ವಿಸಿಟರ್ಸ್ ರೂಮ್‌ಗಳಲ್ಲಿ ಚೆಕ್ ಇನ್ ಮಾಡಬೇಕಾದರೆ ಫೋರ್ ಏಮ್ ಆಗಿತ್ತು. ಇಷ್ಟೊತ್ತು ಕಾಯ್ದು ನೀನು ಸಿಕ್ಸ ಏಮ್‌ಗೆ ಏಳ್ತೀಯ ಅಂತ ಈಗ ಬಂದ್ವಿ. ರಾಯರು ಗದ್ಗದರಾದರು. ‘ಬಾಕಿಯವರೆಲ್ಲ ಎಲ್ಲಿ?’ ಸುಧಾರಿಸಿಕೊಂಡು ಕೇಳಿದರು.

‘ಅಮ್ಮಾ ಸ್ನಾನ ಮಾಡ್ತಾ ಇದಾಳೆ. ಬಾಕಿಯವರೆಲ್ಲ ಮಲಗೀದಾರೆ. ಬ್ರೆಕ್ಫಾಸ್ಟ್‌ಗೆ ಎಲ್ಲಾ ಸೇರೋಣ’

‘ಪಪ್ಪಾ, ನಿಮ್ಮ 80 ನೆಯ ಬರ್ಥಡೇಯನ್ನ ಹಿಮಾಚಲದ ಸ್ಪಿಟಿ ವ್ಯಾಲೀಲಿ ಚಂದ್ರ ತಾರೆಗಳನ್ನ ನೋಡುತ್ತ ಆಚರಿಸೋಣ. ಅದಾಗಲೇ ಬುಕಿಂಗ್ಸ್ ಎಲ್ಲ ಆಗಿದೆ ಪಪ್ಪಾ’ ಮಕ್ಕಳಿಬ್ಬರೂ ಉಸಿರು ಬಿಡದೇ ಒಪ್ಪಿಸಿದರು.

‘ಏನೂ? ನಿಮಗೆ ಗೊತ್ತಿಲ್ಲದೇ ನೀವು ಏನು ಮಾಡಿದೀರ ಗೊತ್ತಾ? ಇಂಡಿಯನ್ಸ್ ತಮ್ಮ ಎಂಬತ್ತನೇ ಬರ್ಥ್ ಡೇಯನ್ನ ಸಹಸ್ರ ಚಂದ್ರ ಶಾಂತಿಯೊಂದಿಗೆ ಆಚರಿಸುತ್ತಾರೆ. 80 ವರ್ಷದ ವದ್ಧ ಅದಾಗಲೇ ಸಾವಿರ ಹುಣ್ಣಿಮೆಗಳನ್ನ ನೋಡಿರ್ತಾನೆ ಅಂತ ಲೆಕ್ಕ. ಸಧ್ಯ ನನಗೆ ಅದರಲ್ಲೆಲ್ಲ ನಂಬಿಕೆಯಿಲ್ಲ.’

‘ಗೊತ್ತಿಲ್ಲದೇ?’ ಅನ್ನುತ್ತ ಇಬ್ಬರೂ ಮಕ್ಕಳು ಮುಖ ಮುಖ ನೋಡಿಕೊಂಡರು! ನಕ್ಕಂಗಿತ್ತು.

ರಾಯರು ಗಮನಿಸಿದರೂ ಗಮನಿಸದವರ ಥರ ಇದ್ದರು. ಅವರ ಮುಖಚಂದ್ರವೇನೋ ಅರಳಿತ್ತು, ಪ್ರಕಾಶಮಾನವಾಗಿತ್ತು!

ಚಳಿಗಾಲದಲ್ಲಿ ಬದಲಾಗುವ ಪಕ್ಷಿ ಲೋಕ



ಚಳಿಗಾಲ ಬಂತೆಂದರೆ ಪರಿಸರದಲ್ಲಿ ಆಗುವ ಬದಲಾವಣೆಗಳು ಹಲವು; ಜತೆಯಲ್ಲೇ, ನಮ್ಮ ಸಂಗಾತಿಗಳಾದ ಹಕ್ಕಿಗಳ ಲೋಕವೂ ಹೊಸ ರೂಪ, ಹೊಸ ಬಣ್ಣವನ್ನು ಪಡೆಯುತ್ತದೆ. ತಣ್ಣನೆಯ ವಾತಾವರಣವು ಪಕ್ಷಿಲೋಕದಲ್ಲಿ ಹುಟ್ಟುಹಾಕಿದ ಮಹಾ ವಿಸ್ಮಯವೆಂದರೆ ಪಕ್ಷಿಗಳ ವಲಸೆ. ಹಿಮಪಾತವಾ ಗುವ ಪ್ರದೇಶದಿಂದ ದಕ್ಷಿಣದ ಬೆಚ್ಚನೆಯ ಜಾಗಕ್ಕೆ ಪ್ರತಿವರ್ಷ ಲಕ್ಷಾಂತರ ಹಕ್ಕಿಗಳು ಬರುತ್ತವೆ. ಇವುಗಳ ಲ್ಲದೇ, ಸ್ಥಳೀಯವಾಗಿ ವಲಸೆ ಹೋಗುವ ಹಕ್ಕಿಗಳೂ ಇವೆ. ನಮ್ಮ ರಾಜ್ಯದಲ್ಲಿ ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ, ಒಂದು ಸ್ತರದಿಂದ ಇನ್ನೊಂದು ಸ್ತರಕ್ಕೆ ಹೋಗುವ ಹಕ್ಕಿಗಳು ಮನೆಯ ಸುತ್ತಮುತ್ತ ಕಾಣಿಸಿಕೊಂಡಾಗ, ಅದೇನೋ ಬೆರಗು, ವಿಸ್ಮಯ, ಉಲ್ಲಾಸ! ಇಷ್ಟು ದಿನ ಇಲ್ಲದ ಈ ಹಕ್ಕಿಗಳು ಒಮ್ಮೆಗೇ ಹೇಗೆ ಬಂದವು ಎಂಬ ಅಚ್ಚರಿ. ಅಂತಹ ಅಚ್ಚರಿಯನ್ನು ಗಮನಿಸಿ, ದಾಖಲಿಸಿದ ಅನುಭವ ಇಲ್ಲಿದೆ.

• **ನವೀನಕೃಷ್ಣ ಎಸ್. ಉಪ್ಪಿನಂಗಡಿ**

ಅದೊಂದು ದಿನ ಮಧ್ಯಾಹ್ನ. ಕೊಂಚ ಬಿಸಿಲಿದ್ದರೂ ಸೆಖೆ ಇರಲಿಲ್ಲ. ಹದವಾದ ವಾತಾವರಣ. ಚಳಿಗಾಲ ಆಗಲೇ ಆವರಿಸಿಬಿಟ್ಟಿದೆ ಎಂಬುದು ಹವೆಯಿಂದಲೇ ಗೊತ್ತಾಗುತ್ತಿತ್ತು. ಇತ್ತೀಚೆಗೆ ನಮ್ಮ ಪರಿಸರದ ಪಕ್ಷಿಲೋಕ ನನಗೆ ಭಿನ್ನವಾಗಿ ಕಾಣಲಾರಂಭಿಸಿದೆ. ಪಕ್ಷಿಗಳಿಗೆ ಮೊದಲಿದ್ದ ಅಂಜಿಕೆ, ಭೀತಿ ಈಗ ಇಲ್ಲ. ಈಚೆಗೆ ನನ್ನ ಇರವನ್ನು ಕಂಡರೂ ಮನೆಯ ಸುತ್ತಲೇ ಹುಳು ಹುಪ್ಪಟೆಗಳಿಗೆ ಹೊಂಚು ಹಾಕುತ್ತಲೋ ಅಥವಾ ಹಾಯಾಗಿ ವೈಮಾನಿಕ ವೀಕ್ಷಣೆ ನಡೆಸುತ್ತಲೋ ಇರುತ್ತವೆ. ಇದನ್ನೆಲ್ಲಾ ನೋಡುವಾಗ ನನ್ನ ಮನಸ್ಸಿಗೆ ರಾಶಿ ಸಮಾಧಾನ.

ಶಿಶಿರ ಋತುವಿನ ಮುಂಜಾನೆಯ ನಿಶ್ಶಬ್ದದಲ್ಲಿ ಸೂರ್ಯರಶ್ಮಿ ಧರೆಯನ್ನು ಸೋಕಲು ಆರಂಭವಾಗುತ್ತಿದ್ದಂತೆ ಕೋಗಿಲೆಯ ಮಧುರ ನಾದ ಗಾಳಿಯಲ್ಲಿ ತೇಲಿ ಕರ್ಣಾನಂದವನ್ನು ಉಂಟುಮಾಡುತ್ತದೆ. ಬೆಳಗ್ಗೆ ಏಳಲು ಅಲಾರ್ಮ್ ಇಡಬೇಕೆಂದಿಲ್ಲ. ಕೋಗಿಲೆಯ ಹಾಡನ್ನು ಕೇಳುವುದರೊಂದಿಗೆ ದಿನಚರಿ ಆರಂಭ. ಮನೆಯಿಂದ ಹೊರಬಂದರೆ ಟಪ್...ಟಪ್... ಟಪ್... ಎಂದು ಎಲೆಗಳಿಗೆ ಬೀಳುವ ಇಬ್ಬನಿಯ ಶಬ್ದದೊಂದಿಗೆ ಕಾಜಾಣ, ಹಸಿರು ಕುಟ್ರ, ಬುಲ್ ಬುಲ್ ಹಕ್ಕಿಗಳ ಕಲರವ... ಬೆಳಗ್ಗಿನ ಈ ಆಹ್ಲಾದಕರ ವಾತಾವರಣ ದಿನವಿಡೀ ಸಕ್ರಿಯವಾಗಿರಲು ಬುನಾದಿ. ಇದೆಲ್ಲಾ ನೋಡುತ್ತಿದ್ದಾಗ ಪಕ್ಕದ ಮನೆಯ ಹುಲ್ಲಿನ ಛಾವಣಿಗಳ ಮೇಲೆ ರಾಟವಾಳಗಳು ಹಾರುವ ದೃಶ್ಯ ಕಾಣುತ್ತದೆ. ಬಳಿಕ ಅವುಗಳು ಇಬ್ಬನಿಯಿಂದ ತುಂಬಿದ ಧಾನ್ಯಗಳನ್ನು ಸವಿಯಲು ಮುನ್ನುಗ್ಗುತ್ತವೆ. ಅವುಗಳ ಚಿಲಿಪಿಲಿ ಗಾನ ಪ್ರಕೃತಿಯ ಸ್ವರಮೇಳದಲ್ಲಿ ಪಾಲುಪಡೆಯುತ್ತದೆ.

ನಮ್ಮ ಮನೆಯ ಕೆಳಗಿರುವ ನಾಗಬನದಲ್ಲಿ ಪುಟ್ಟದಾದ ಕೊಳವಿದೆ. ಅಲ್ಲಿ ತಗ್ಗಿನ ಪ್ರದೇಶದಲ್ಲಿರುವ ಮರದ ಕೊಂಬೆಯ ಮೇಲೆ ನೀಲಿ ಬಣ್ಣದ

ರತ್ನದಂತೆ ಕುಳಿತಿರುವ ಮಿಂಚುಳ್ಳಿಯು ಸುತ್ತಲಿನ ಹಸುರಿನಿಂದ ಪ್ರತ್ಯೇಕಗೊಂಡು ವಿಶೇಷವಾಗಿ ಪ್ರಜ್ವಲಿಸುತ್ತದೆ. ಅದರ ತೀಕ್ಷ್ಣವಾದ ಕಣ್ಣುಗಳು ನಿಶ್ಚಲವಾದ ನೀರನ್ನು ದಿಟ್ಟಿಸುತ್ತವೆ. ಮೀನಿಗಾಗಿ ನೀರಿಗೆ ಡೈವ್ ಹೊಡೆದಾಗ ಪುಟ್ಟದಾಗಿ ಕೇಳುವ ಶಬ್ದ... ಮಿಂಚುಳ್ಳಿಗೆ ಮೀನು ಸಿಕ್ಕಾಗ ಅಂದಿನ ಮುಂಜಾನೆಯ ಉಪಾಹಾರದ ಕಾರ್ಯಕ್ರಮಕ್ಕೊಂದು ಮುಕ್ತಾಯ! ಏತನ್ಮಧ್ಯೆ, ಹೆಚ್ಚು ಆಳವಿರದ ಜಾಗದಲ್ಲಿ ಕಬ್ಬಾರೆ ಹಕ್ಕಿ ತನ್ನ ಜಳಕವನ್ನು ಪೂರೈಸುತ್ತಿರುತ್ತದೆ. ಅದು ಸ್ನಾನವಾದಮೇಲೆ ಪಾಲಾಶ ಮರದ ಕೊಂಬೆಯಲ್ಲಿ ಕುಳಿತು ಬಿಸಿಲಿಗೆ ಮೈಯ್ಯೊಡ್ಡುವ ಚಂದ ನೋಡಬೇಕು. ಕಬ್ಬಾರೆ ಹಕ್ಕಿ ತನ್ನ ದೇಹವನ್ನು ಗಂಟೆಗಟ್ಟಲೆ ಸ್ವಚ್ಛಗೊಳಿಸುವ ಪರಿಯನ್ನು ಕಣ್ತುಂಬಿಸಿಕೊಳ್ಳಬೇಕು. ಆಹಾ! ಈ ಪಕ್ಷಿಗಳು ಎಷ್ಟು ನೀಟ್ ಅಲ್ವಾ!

ಇಷ್ಟೆಲ್ಲಾ ಆದಮೇಲೆ ಪ್ರಕೃತಿಯ ಹೊರಾವರಣದಲ್ಲಿ ಒಂದೊಂದೇ ಪಕ್ಷಿಗಳ ದರ್ಶನವಾಗುತ್ತದೆ. ದಾಸವಾಳದ ಗಿಡದಲ್ಲಿ ಬಾಳೆ ಗುಬ್ಬಿ, ಖಗರತ್ನ, ದರ್ಜಿ ಹಕ್ಕಿ, ಪೊದೆಗಳೆಡೆಯಲ್ಲಿ ಕಿತ್ತಳೆ ತಲೆಯ ನೆಲ ಸಿಳ್ಳಾರ, ರಾಟವಾಳಗಳು, ಗುಬ್ಬಚ್ಚಿಗಳು, ಮಡಿವಾಳ ಹಕ್ಕಿ ಹುಳು ಹುಪ್ಪಟೆಗಳನ್ನು ಅರಸುತ್ತಿರುತ್ತವೆ. ಪಿಕಳಾರಗಳು, ಎಲೆಹಕ್ಕಿ, ಕಾಜಾಣಗಳು ಹೀಗೆ ನಮ್ಮಲ್ಲಿ 30ಕ್ಕೂ ಹೆಚ್ಚು ಪ್ರಭೇದದ ಹಕ್ಕಿಗಳು ನಿತ್ಯವೂ ಕಾಣಸಿಗುತ್ತವೆ.

ನಮ್ಮ ತುಳಸಿಕಟ್ಟೆಯ ಸಮೀಪ ಪುಟ್ಟದಾಗಿ ಹೊಸ ಪಪ್ಪಾಯದ ಮರ ಬೆಳೆಯಲಾರಂಭಿಸಿದೆ. ಅದರಲ್ಲಿ ಹಣ್ಣು ಬಿಡುವ ಮೊದಲೇ ಹಸಿರು ಕುಟ್ರಗಳ ಸಂಭ್ರಮ ಮುಗಿಲುಮುಟ್ಟಿದೆ. ಆ ದಿನ ಸಿಟ್ ಔಟ್‌ನಲ್ಲಿದ್ದ ನನ್ನನ್ನು ನೋಡಿಯೂ ನೋಡದಂತೆ ಪಪ್ಪಾಯ ಮರದ ರೆಂಬೆಯಲ್ಲಿ ಕುಳಿತು ಆಟವಾಡುತ್ತಿದ್ದವು. ಅದರಾಚೆಗೆ ಇದ್ದ ಪಾಲಾಶ ಮರದಲ್ಲಂತೂ ಮರಕೋಗಿಲೆಗಳ ಆಳ್ವಿಕೆ. ಕಂದು ಬಣ್ಣದ ಹಕ್ಕಿಗಳನ್ನು ನೋಡುವಾಗ ನನಗೇನೋ ಒಂದು ಬಗೆಯ ಆಕರ್ಷಣೆ. ಮೊದಲಿನಿಂದಲೂ ಹಾಗೆ. ಮರಕೋಗಿಲೆಗಳೆಂದರೆ ನನಗೆ ತುಂಬಾ ಪ್ರೀತಿ. ನಮ್ಮ ಪರಿಸರದಲ್ಲಿ ಮೊದಮೊದಲು 4–5ರಷ್ಟಿದ್ದ ಮರಕೋಗಿಲೆಗಳು ಈಗ 12–14ರಷ್ಟಿವೆ.

ಬಾಲದಂಡೆಯ ಸೊಬಗು

ಚಳಿಗಾಲದಲ್ಲಿ ನಮ್ಮ ಪರಿಸರವನ್ನು ಕ್ರಿಯಾಶೀಲವಾಗಿಡುವುದು ಬಾಲದಂಡೆ ಹಕ್ಕಿ ಜೋಡಿ. ನವೆಂಬರ್ ಅಂತ್ಯದಲ್ಲಿಯೇ ನಮ್ಮ ಮನೆಯ ಸುತ್ತ ಮುತ್ತಿ ಇರುವ ಪರಿಸರಕ್ಕೆ ಆಗಮಿಸುವ ಈ ಜೋಡಿ ಹಕ್ಕಿಗಳ ಶೃಂಗಾರದ ವೈಭವವನ್ನು ನೋಡುವುದು ಕಣ್ಣಿಗೊಂದು ಹಬ್ಬವಿದ್ದಂತೆ. ಪೊದೆಗಳೆಡೆಯಲ್ಲಿ ನಾಚಿಕೊಂಡು ಮೆಲುನಗು ಸೂಸಿದಂತೆ ಭಾಸವಾಗುವ ಹೆಣ್ಣು ಹಕ್ಕಿಯ ಭಂಗಿ, ಅದನ್ನು ದೂರದ ಚೇರೆ ಮರದಲ್ಲಿ ಕುಳಿತುಕೊಂಡು ನೋಡುವ ಗಂಡು ಹಕ್ಕಿ.. ತತ್‌ಕ್ಷಣ ಗಂಡು ಹಕ್ಕಿ ಹೆಣ್ಣು ಹಕ್ಕಿಯ ಸಮೀಪ ಬರಲು ಹಾರಿಕೊಂಡು ಬಂದರೆ ಸತಾಯಿಸುವ ಹೆಣ್ಣು ಹಕ್ಕಿ. ಆಮೇಲೆ ಒಬ್ಬರನ್ನೊಬ್ಬರು ಅಟ್ಟಿಸಿಕೊಂಡು ಹೋಗುವ ಆಟ! ಮರೆಯಲ್ಲಿ ನಿಂತು ಇದನ್ನು ನೋಡುತ್ತಿದ್ದರೆ ಹೊತ್ತು ಹೋಗುವುದು ಗೊತ್ತಾಗದು ಬಿಡಿ.

ಸಂಜೆಯ ಸೊಬಗು

ಇದು ಮುಂಜಾನೆಯ ಕಥೆಯಾದರೆ ಸಾಯಂಕಾಲದ ಕಥೆ ಬೇರೆಯೇ. ಸಂಜೆ ಕಾಲೇಜಿನಿಂದ ಬಂದು ಕ್ಯಾಮೆರಾ ಹೆಗಲಿಗೇರಿಸಿ ನನ್ನ ಸಾರಥಿಯೊಂದಿಗೆ ಹೊರಟರೆ ಸೀದಾ 1.5 ಕಿ.ಮೀ. ದೂರದಲ್ಲಿರುವ ನಮ್ಮ ತೋಟಕ್ಕೆ! ರಾಟವಾಳಗಳು, ಚೋರೆ ಹಕ್ಕಿಗಳು, ಜೇನ್ನೊಣಬಾಕಗಳು, ಮರಕುಟಿಕಗಳು ಗೂಡಿಗೆ ಹಿಂದಿರುಗುವ ಸನ್ನಾಹದಲ್ಲಿರುತ್ತವೆ. ಚಿನ್ನದ ವರ್ಣದ ಸೂರ್ಯನು ದಿಗಂತದಲ್ಲಿ ಮುಳುಗುತ್ತಿದ್ದಂತೆ ಪಕ್ಷಿ ಪ್ರಪಂಚವು ವಿದಾಯಗಳ ಸ್ವರಮೇಳದೊಂದಿಗೆ ಬೆಚ್ಚಗಿನ ತಾಣದತ್ತ ಪಯಣ ಬೆಳೆಸುತ್ತದೆ.

ನಮ್ಮ ತೋಟದ ಸನಿಹದಲ್ಲಿರುವ ಅಣ್ಣನ ಮನೆಯ ಹೆಂಚಿನ ಛಾವಣಿಗಳಡಿಯಲ್ಲಿ ಅಥವಾ ಬೃಹತ್ತಾದ ಮರಗಳ ರೆಂಬೆಗಳಲ್ಲಿ ರಾತ್ರಿಯ ಸಮಯವನ್ನು ಕಳೆಯಲು ನಾನಾ ವಿಧದ ಪಕ್ಷಿಗಳು ಸಿದ್ಧವಾಗುತ್ತವೆ. ಕಾಗೆಗಳು ಆಲದ ಮರದ ಕೊಂಬೆಗಳ ಮೇಲೆ ಒಟ್ಟುಗೂಡುತ್ತವೆ. ಗಾಢಾಂಧಕಾರವು ಜಗವನ್ನಾವರಿಸುವ ಮೊದಲು ಪರಸ್ಪರ ಸಂಭಾಷಿಸುತ್ತವೆ. ಮುಂದುವರಿದು ಹೊಸ ಅಡಿಕೆ ಗಿಡಗಳು ಹಾಕಿದ ಜಾಗಕ್ಕೆ ಬಂದಾಗ 8–10 ನವಿಲುಗಳು ಬಹಳ ಲವಲವಿಕೆಯಿಂದ ಇರುವುದನ್ನು ಕಾಣಬಹುದು. ಅವುಗಳಿಗೆ ನಮ್ಮ ಹೆದರಿಕೆಯೇ ಇಲ್ಲ! ಈಗೀಗಂತೂ ನವಿಲುಗಳ ಸಂಖ್ಯೆಯಲ್ಲಿ ಸಾಕಷ್ಟು ವೃದ್ಧಿಯಾಗಿದೆ. ಅಡಿಕೆ ಗಿಡಗಳನ್ನು ದಾಟಿ ಮುಂದೆಬಂದಾಗ ಸೀಮೆ ಹುಲ್ಲಿನ ನಡುವಿನಿಂದ ಪ್ರತ್ಯಕ್ಷಗೊಂಡ ನವಿಲಿನ ರೋಮಾಂಚಕ ಪುಕ್ಕಗಳು ಮುಸ್ಸಂಜೆಯ ಸೂರ್ಯನ ಚಿನ್ನದ ವರ್ಣದೊಂದಿಗೆ ಮುತ್ತಿಕ್ಕಿದಂತೆ ಭಾಸವಾಗುತ್ತದೆ. ಇದು ನಿಸರ್ಗವೆಂಬ ವರ್ಣಚಿತ್ರಕಾರನ ಚಾಕಚಕ್ಯತೆ!

ನಿಸರ್ಗದ ಕಲಾತ್ಮಕತೆ ಕುಂಚ ಕೆತ್ತಿದ ಜೀವಂತ ಶಿಲ್ಪವೊಂದು ಕ್ಷಣಕಾಲ ಅಲುಗಾಡದೆ ನಿಲ್ಲುತ್ತದೆ. ಇದು ಬೀಸುವ ತಂಗಾಳಿ, ಪ್ರಶಾಂತ ವಾತಾವರಣಕ್ಕೆ ಪುಷ್ಟಿನೀಡುತ್ತದೆ. ಆನಂದದ ಅನುಭವ ನಮ್ಮದಾಗುತ್ತದೆ. ಹಗಲು ಕಳೆದು ನಿಶೆ ಆವರಿಸಿದಾಗ ಮತ್ತೆ ನನ್ನ ಸಾರಥಿಯೊಂದಿಗೆ ಮನೆಯತ್ತ ಪಯಣ.

ಮನುಷ್ಯರಾದ ನಾವು ಪ್ರಕೃತಿಯ ಒಂದು ಭಾಗ ಮಾತ್ರವಷ್ಟೇ. ಈ ಭೂಮಿಯಲ್ಲಿ ಬದುಕಲು ನಮಗೆಷ್ಟು ಹಕ್ಕಿದೆಯೋ, ಅಷ್ಟೇ ಹಕ್ಕು ಪಕ್ಷಿಗಳಿಗೂ ಇದೆ. ಇದನ್ನರಿತು ಪಕ್ಷಿಗಳನ್ನೂ ನಮ್ಮವರೆಂಬಂತೆ ಕಂಡರೆ ನಮ್ಮ ಮನಸ್ಸಿಗೆ ಅವುಗಳು ಹತ್ತಿರವಾಗುವುದರಲ್ಲಿ ಒಂದಿನಿತೂ

ಸಂಶಯವಿಲ್ಲ ಎಂಬುದು ನನ್ನ ಪುಟ್ಟ ಅನುಭವದಿಂದ ಕಂಡುಕೊಂಡ ವಿಷಯ.

ಪ್ರಕೃತಿ ವಿಸ್ಮಯ ಎಡಕ್ಕಲ್ ಗುಹೆಗಳು

• **ಡಾ.ಕಾರ್ತಿಕ ಜೆ.ಎಸ್**

ಎರಡು ವಿಶಾಲವಾದ ಬಂಡೆಗಳ ನಡುವೆ ಬೃಹತ್ ಬಂಡೆಯೊಂದು ಸಿಲುಕಿಕೊಂಡಿದೆ. ಬಂಡೆಗಳ ಮೇಲ್ಮೈಯಲ್ಲಿ ಆಕರ್ಷಕ ವಿಭಿನ್ನ ರೇಖಾಚಿತ್ರಗಳು ಕೆತ್ತಲ್ಪಟ್ಟಿದೆ! ನೋಡಲು ವಿಸ್ಮಯಕಾರಿಯಾಗಿ ಗೋಚರಿಸುವ ಈ ಭೂದೃಶ್ಯವಿರುವ ತಾಣವೇ ವಯನಾಡಿನ 'ಎಡಕ್ಕಲ್ ಗುಹೆಗಳು'. ಎಡಕ್ಕಲ್ ಅಂದರೆ ಮಲಯಾಳಂನಲ್ಲಿ 'ನಡುವೆ ಕಲ್ಲು' ಎಂದರ್ಥ. ಕೇರಳದ ಇತಿಹಾಸ ಮತ್ತು ಪ್ರಾಗೈತಿಹಾಸ ಪರಂಪರೆಗೆ ಸಾಕ್ಷಿಯಾಗಿ ನಿಂತ ಹಿರಿಮೆ ಈ ಗುಹೆಗಳದ್ದು.

ಸಮುದ್ರ ಮಟ್ಟದಿಂದ 1200 ಮೀಟರ್ ಎತ್ತರದಲ್ಲಿರುವ ಎಡಕ್ಕಲ್ ಗುಹೆಗಳು ಕೇರಳದ ವಯನಾಡು ಜಿಲ್ಲೆಯ ಸುಲ್ತಾನ್ ಬತ್ತೇರಿಯಿಂದ 12 ಕಿ.ಮೀ ದೂರದಲ್ಲಿದೆ. ಕಾಫಿ ತೋಟದ ನಡುವಿರುವ ಕಡಿದಾದ ಕಾಂಕ್ರೀಟ್ ರಸ್ತೆಯನ್ನು ಏರುತ್ತಾ ಒಂದು ಕಿ.ಮೀ. ಮುಂದೆ ಸಾಗಿದರೆ ಟಿಕೆಟ್ ಕೌಂಟರ್ ಸಿಗುತ್ತದೆ. ಅಲ್ಲಿಂದ ಮುಂದೆ ಇರುವ ಕಪ್ಪು ಕಲ್ಲಿನ ಮೆಟ್ಟಿಲುಗಳನ್ನು ಹತ್ತುತ್ತಾ ಮುಂದೆ ನಡೆದರೆ ಮೊದಲನೇ ಗುಹೆಯನ್ನು ತಲುಪಬಹುದು. ಗುಹೆಯೊಳಗೆ ತೆರಳಲು ಇರುವ ಮಾರ್ಗ ಇಕ್ಕಟ್ಟಾಗಿದೆ. ದೊಡ್ಡ ಬಂಡೆಯೊಂದರ ಮೇಲೆ ಒರಗಿ ನಿಧಾನವಾಗಿ ಮೇಲೆ ಸಾಗಿದರೆ ಮೊದಲನೇ ಗುಹೆಯ ಪ್ರವೇಶ ದ್ವಾರ ಕಾಣಸಿಗುತ್ತದೆ. ಗುಹೆಯು ಚಿಕ್ಕದಾಗಿದ್ದು ಓರ್ವ ವ್ಯಕ್ತಿ ನಿಲ್ಲುವಷ್ಟು ಸ್ಥಳಾವಕಾಶ ಹೊಂದಿದೆ. ಮುಂದೆ ಸುಮಾರು 80 ಡಿಗ್ರಿ ಕೋನದಲ್ಲಿರುವ 300 ಉಕ್ಕಿನ ಮೆಟ್ಟಿಲುಗಳ ಆರೋಹಣ ಮಾಡಿದರೆ ಎರಡನೇ ಗುಹೆಯ ಪ್ರವೇಶ ದ್ವಾರ ಕಾಣಸಿಗುತ್ತದೆ. ಮೆಟ್ಟಿಲುಗಳ ನಡುವೆ ಅಲ್ಲಲ್ಲಿ ವಿಶ್ರಾಂತಿ ತೆಗೆದುಕೊಳ್ಳಲು ಸ್ಥಳಾವಕಾಶ ಇದೆ. ಎರಡನೇ ಗುಹೆಯನ್ನು ಪ್ರವೇಶಿಸಲು ಮೆಟ್ಟಿಲುಗಳ ಕೆಳಗೆ ಇಳಿಯಬೇಕು. ಎರಡು ಬಂಡೆಗಳ ನಡುವೆ ಬೃಹತ್ ಬಂಡೆಯೊಂದು ಬಂದು ಸಿಲುಕಿದಾಗ ರೂಪುಗೊಂಡ ಗುಹೆಯಿದು. ಕಲ್ಲಿನ ಕಿಂಡಿಯಿಂದ ಬೀಳುವ ಬೆಳಕು ಗುಹೆಯ ಅಂದವನ್ನು ಹೆಚ್ಚಿಸಿದೆ.

ಈ ಗುಹೆಗಳಲ್ಲಿ ಕ್ರಿ.ಪೂ 6000 ವರ್ಷಗಳ ಹಿಂದೆಯೇ ಮಾನವನ ಚಟುವಟಿಕೆ ಇತ್ತು ಎಂದು ಪುರಾತತ್ವಶಾಸ್ತ್ರಜ್ಞರು ಅಭಿಪ್ರಾಯಪಡುತ್ತಾರೆ. ಎರಡು ಬಂಡೆಗಳ ಮೇಲ್ಮೈ ಮೇಲೆ ಇರುವ ಮಾನವ ಮತ್ತು ಪ್ರಾಣಿಗಳ ಆಕೃತಿಗಳು, ಚಿಹ್ನೆಗಳು, ಶಿಲಾಲಿಪಿಗಳ ಕೆತ್ತನೆಗಳು ಸಂದರ್ಶಕರ ಮನದಲ್ಲಿ ಕುತೂಹಲ ಮೂಡಿಸಬಲ್ಲವು. ಈ ಕೆತ್ತನೆಗಳು ನವಶಿಲಾಯುಗ ಮತ್ತು ಮಧ್ಯ ಶಿಲಾಯುಗದ ಕಾಲದವುಗಳು ಎಂದು ಇತಿಹಾಸ ತಜ್ಞರು ಅಂದಾಜಿಸಿದ್ದಾರೆ. 1890 ನೇ ಇಸವಿಯಲ್ಲಿ ಮಲಬಾರ್ ಜಿಲ್ಲೆಯ ಪೊಲೀಸ್ ಅಧೀಕ್ಷಕರಾಗಿದ್ದ ಫ್ರೆಡ್ ಫಾಸೆಟ್ ಬೇಟೆಯಾಡಲು ವಯನಾಡಿಗೆ ತೆರಳುತ್ತಾನೆ. ಅರಣ್ಯದ ಮಧ್ಯೆ ಇದ್ದ ಈ ಗುಹೆಗಳನ್ನು ಪತ್ತೆಹಚ್ಚಿದ ಅವರು ಅಲ್ಲಿನ ಕೆತ್ತನೆಗಳನ್ನು ನೋಡಿ ಅಚ್ಚರಿಪಡುತ್ತಾರೆ. ಸ್ಥಳೀಯ ಬುಡಕಟ್ಟು ಜನರ ಸಹಾಯ ಪಡೆದು ಅವುಗಳ ಕುರಿತು ನಿರಂತರ ಅಧ್ಯಯನ ಮಾಡುತ್ತಾರೆ. ತಮ್ಮ ಅಧ್ಯಯನದ ವಿವರಗಳನ್ನು 1901 ರಲ್ಲಿ 'ಇಂಡಿಯನ್ ಆಂಟಿಕ್ವಾರಿ' ನಿಯತಕಾಲಿಕದಲ್ಲಿ ಪ್ರಕಟಿಸುತ್ತಾರೆ. ಅವರ ಈ ಸಂಶೋಧನೆ ಇತಿಹಾಸಕಾರರ ಮತ್ತು ಪುರಾತತ್ವಶಾಸ್ತ್ರಜ್ಞರ ಗಮನ ಸೆಳೆಯುತ್ತದೆ. ಬಂಡೆಗಳ ಬದಿ ಭಾಗದಲ್ಲಿ ಆಳವಾದ ಕಮರಿ ಇದೆ. ಅಪಾಯಕಾರಿ ಸ್ಥಳವಾದ ಈ ಪ್ರದೇಶದ ಪ್ರವೇಶ ದ್ವಾರವನ್ನು ಮುಚ್ಚಲಾಗಿದೆ. ಉಕ್ಕಿನ ಮೆಟ್ಟಿಲುಗಳ ಮೂಲಕ ಸುಲಭವಾಗಿ ಹಿಂದಿರುಗಬಹುದು.



ಕೆಟ್ಟ ಕಾಮೆಂಟ್ ಮಾಡಿದವರನ್ನು ಹೇಗೆ ಶಿಕ್ಷಿಸಬೇಕು?

Ask the Editor
• ವಿಶ್ವೇಶ್ವರ ಭಟ್
ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ
ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ
asktheeditorvv@gmail.com

ನವೀನ ಕುಂಟಾರ, ಬೆಂಗಳೂರು

• **ಸಂಪಾದಕರೇ, ಸಾಮಾಜಿಕ ಜಾಲತಾಣದಲ್ಲಿ ಕೆಲವರ ಕಾಮೆಂಟುಗಳನ್ನು ನೋಡಿದರೆ ಬುರುಡೆಗೆ ತಟ್ಟಬೇಕು ಅನಿಸುತ್ತದೆ. ಈಗಾಗಲೇ ನನ್ನ ವಿರುದ್ಧ ಕೆಟ್ಟದಾಗಿ ಕಾಮೆಂಟ್ ಮಾಡಿದ ಇಬ್ಬರಿಗೆ ಹೊಡೆದಿದ್ದೇನೆ. ನಾನು ಮಾಡುತ್ತಿರುವುದು ಸರಿಯಾ ?**

– ನವೀನ್ ಅವರೇ, ನೀವು ಮಾಡುತ್ತಿರುವುದು ಖಂಡಿತಾ ಸರಿ ಅಲ್ಲ. ಸಾಮಾಜಿಕ ಜಾಲತಾಣದ ಮಜಾ ಇರುವುದೇ ಕಾಮೆಂಟುಗಳಲ್ಲಿ, ಪ್ರತಿಯೊಬ್ಬರಿಗೂ ತಮ್ಮ ತಮ್ಮ ಅನಿಸಿಕೆಗಳನ್ನು ಹೇಳುವ ಅಧಿಕಾರವಿದೆ. ಕೆಲವರು ಅಸಭ್ಯವಾಗಿ, ಕೆಟ್ಟದಾಗಿ ಪ್ರತಿಕ್ರಿಯಿಸಬಹುದು. ವೈಯಕ್ತಿಕ ನಿಂದನೆಗೆ ಇಳಿಯಬಹುದು. ಅನಗತ್ಯವಾಗಿ ಟೀಕಿಸಬಹುದು. ಸಾಧ್ಯವಾದರೆ ಅವುಗಳಿಗೆ ನೀವು ಸಮಜಾಯಿಷಿ, ಸ್ಪಷ್ಟನೆ ನೀಡಿ. ಅಷ್ಟರ ಮೇಲೂ ನಿಮ್ಮನ್ನು ನಿಂದಿಸಿದರೆ, ಅಂಥವರನ್ನು ನಿರ್ಲಕ್ಷಿಸಿ. ಅದನ್ನು ಬಿಟ್ಟು ಹೊಡೆಯುವುದು, ಬಡಿಯುವುದು ಸರಿ ಅಲ್ಲ. ಸಾಮಾಜಿಕ ಜಾಲತಾಣವೆನ್ನುವುದು ಅತ್ಯಂತ ಉತ್ತಮವಾದ ಪ್ರಜಾಸತ್ತಾತ್ಮಕ ವೇದಿಕೆ. ಎಲ್ಲರೂ ನಿಮ್ಮನ್ನು ಹೊಗಳಬೇಕು ಮತ್ತು ಹೊಗಳುತ್ತಾರೆ ಎಂದು ನಿರೀಕ್ಷಿಸಬೇಡಿ. ಕೆಲವರು ನಿಮ್ಮ ಕಾಲೆಳೆಯಲೆಂದೇ ಕಾಮೆಂಟು ಮಾಡುತ್ತಾರೆ. ಅವನ್ನು ಸಹಿಸಿಕೊಳ್ಳಬೇಕು. ಬೇರೆಯವರ ಟೀಕೆಗಳನ್ನು ಸಹಿಸಿಕೊಳ್ಳುವುದು, ಅರಗಿಸಿಕೊಳ್ಳುವುದು ಮತ್ತು ಮನ್ನಿಸುವುದು ಉತ್ತಮ ಬೌದ್ಧಿಕ ಸಂಸ್ಕಾರ. ನಮ್ಮನ್ನು ಯಾರೂ ಟೀಕೆ ಮಾಡಬಾರದು ಎಂದು ಬಯಸಬಾರದು. ಟೀಕೆಗಳಿಂದ ಕಲಿಯುವುದು ಸಾಕಷ್ಟಿರುತ್ತದೆ. ನಿಮಗೆ ಟೀಕೆ ಸಹ್ಯವಾಗದಿದ್ದರೆ, ಅಂಥ ವ್ಯಕ್ತಿಗಳನ್ನು ಬ್ಲಾಕ್ ಮಾಡುವ, ಕಾಮೆಂಟ್‌ಗಳನ್ನು ಬ್ಲಾಕ್ ಮಾಡುವ ಆಪ್ಷನ್ ಇದೆಯಲ್ಲ. ಸ್ನೇಹಿತರೊಂದೇ ಅಲ್ಲ, ಟೀಕಾಕಾರರೂ ನಮ್ಮನ್ನು ತಿದ್ದುತ್ತಾರೆ, ಕನ್ನಡಿ ಹಿಡಿಯುತ್ತಾರೆ. ಅಷ್ಟಕ್ಕೇ ವಿಚಲಿತರಾಗಿ, ಹೊಡೆಯಲು ಹೋಗಬೇಡಿ. ಎಲ್ಲಾ ಟೀಕೆಗಳಿಗೂ ನೀವು ಪ್ರತಿಕ್ರಿಯಿಸಬೇಕೆಂದಿಲ್ಲ. ಕೆಲವನ್ನು 'ಪಾಸ್' ಮಾಡಬಹುದು. ಇದಕ್ಕಿಂತ ಮುಖ್ಯವಾಗಿ, ಟೀಕೆಗಳನ್ನು ಖುಷಿಯಿಂದ ಸ್ವೀಕರಿಸುವ ಮನೋಭಾವ ಬೆಳೆಸಿಕೊಳ್ಳಿ. ಮೊನ್ನೆ ನಾನು ಅಂಕೋಲಾದ ಕೃಷಿ ಹಬ್ಬದಲ್ಲಿ ಪಾಲ್ಗೊಂಡ, ಭತ್ತದ ಗದ್ದೆಯಲ್ಲಿ ನಾಟಿ ಮಾಡುವ ಫೋಟೋವನ್ನು ಫೇಸ್ ಬುಕ್ ನಲ್ಲಿ ಹಾಕಿದ್ದೆ. ಯಾರೋ ಒಬ್ಬರು, 'ನಕಲಿ ರೈತ' ಎಂದು ಕಾಮೆಂಟು ಹಾಕಿದ್ದರು. ನಾನು ಅವರನ್ನು ಬ್ಲಾಕ್ ಮಾಡಲಿಲ್ಲ, ಕಾಮೆಂಟನ್ನೂ ಡಿಲೀಟ್ ಮಾಡಲಿಲ್ಲ, ಹತ್ತಾರು ಸಕಾರಾತ್ಮಕ ಟೀಕೆಗಳ ಮಧ್ಯೆ ಇಂಥ ನಕಾರಾತ್ಮಕ ಟೀಕೆಗಳೂ ಇರಬೇಕು. ಟೀಕೆಗಳು ನಮ್ಮನ್ನು ಶಿಥಿಲಗೊಳಿಸಬಾರದು. ಅವುಗಳಿಂದ ನಾವು ಗಟ್ಟಿಯಾಗಬೇಕು. ಟೀಕಾಕಾರರನ್ನೂ ಸಹಿಸಿಕೊಳ್ಳಬೇಕು. ಇವ್ಯಾವವೂ ಸಾಧ್ಯವಾಗದಿದ್ದರೆ ನೀವು ಟ್ವಿಟರ್ ಅಥವಾ ಫೇಸ್ ಬುಕ್ ಅಕೌಂಟ್ ಡಿಲೀಟ್ ಮಾಡಿ ನೆಮ್ಮದಿಯಿಂದ ಇರಬಹುದಲ್ಲ..

ನಾಗರಾಜ ಜೋಶಿ, ಧಾರವಾಡ

• **ಸಾರ್, ನನ್ನ ಸ್ನೇಹಿತನೊಬ್ಬನಿದ್ದಾನೆ, ಆತ ವಿಪರೀತ ಸುಳ್ಳು ಹೇಳುತ್ತಾನೆ. ಕೆಲವು ಸಲ ಅಗತ್ಯವಿಲ್ಲದಿದ್ದರೂ, ವಿನಾಕಾರಣ ಸುಳ್ಳು ಹೇಳುತ್ತಾನೆ. ಕ್ಷಣ ಮಾತ್ರದಲ್ಲಿ ಕತೆ ಸೃಷ್ಟಿಸಿಕೊಂಡು ಸುಳ್ಳು ಹೇಳುತ್ತಾನೆ. ಆತನ ಸಮಸ್ಯೆಯನ್ನು ಪರಿಹರಿಸಲು ನಾನು ಹೇಗೆ ಸಹಾಯ ಮಾಡಬಹುದು?**

– ಜೋಶಿಯವರೇ, ಇಂಥವರನ್ನು ಸುಧಾರಿಸುವುದು ಕಷ್ಟ. ಕಾರಣ ಇಂಥವರಿಗೆ ಸತ್ಯ ಮತ್ತು ಸುಳ್ಳುಗಳ ನಡುವಿನ ವ್ಯತ್ಯಾಸ ಗೊತ್ತಿರುವುದಿಲ್ಲ. ಇಂಥವರು ಸುಳ್ಳು ಹೇಳಿ, ಅದನ್ನೇ ನಿಜವೆಂದು ತಮ್ಮನ್ನೇ ನಂಬಿಸಿಕೊಳ್ಳುತ್ತಾರೆ. ನಮ್ಮ ರಾಜ್ಯದ ಮುಖ್ಯಮಂತ್ರಿಯೊಬ್ಬರಿದ್ದರು. ಅವರಿಗೆ ಫೋನ್ ಬಂದಾಗ ತಮ್ಮ ಹೆಸರನ್ನು ಬಿಟ್ಟು ಅವರು ಹೇಳುವುದೆಲ್ಲವೂ ಸುಳ್ಳು ಎಂದು ಜನ ಮಾತಾಡಿಕೊಳ್ಳುತ್ತಿದ್ದರು. ಸುಳ್ಳು ಹೇಳುವ ಕಾಯಿಲೆಯನ್ನು ನಿಲ್ಲಿಸುವುದು ಕಷ್ಟ. ಸುಳ್ಳು ಹೇಳಿ ಸಿಕ್ಕಿ ಬಿದ್ದರೂ ಬದಲಾಗುವುದಿಲ್ಲ, ಬುದ್ಧಿ ಬರುವುದಿಲ್ಲ. ಅದರ ಬದಲು, ನಿಮ್ಮ ಸ್ನೇಹಿತನನ್ನು ಯಾವುದಾದರೂ ರಾಜಕೀಯ ಪಕ್ಷಕ್ಕೆ ಏಕೆ ಸೇರಿಸಬಾರದು? ಇನ್ನು ಕೆಲವು ತಿಂಗಳಲ್ಲಿ ಚುನಾವಣೆ ಸಮೀಪಿಸುತ್ತಿದೆ. ಎಲ್ಲಾ ರಾಜಕೀಯ ಪಕ್ಷಗಳಿಗೂ ಅಂಥವರ ಅಗತ್ಯ ಇದ್ದೇ ಇರುತ್ತದೆ. ರಾಜಕಾರಣದಲ್ಲಿ ನಿಮ್ಮ ಸ್ನೇಹಿತರು ಯಶಸ್ವಿಯಾಗುವುದರಲ್ಲಿ ಸಂದೇಹವೇ ಇಲ್ಲ.

ಸಂತೋಷ ಎಚ್.ಡಿ., ಕೊರಟಗೆರೆ

• **ಭಟ್ರೇ, ಕನ್ನಡ ಪತ್ರಕರ್ತನಾಗಲು ಇಂಗ್ಲಿಷ್ ಬರಬೇಕಾ? ಇಂಗ್ಲಿಷ್ ಬರದಿದ್ದರೆ ಕೆಲಸ ಸಿಗುವುದಿಲ್ಲವಾ?**

– ಸಂತೋಷ್ ಅವರೇ, ಕನ್ನಡ ಪತ್ರಕರ್ತನಾಗಲು ಕನ್ನಡವೊಂದೇ ಬಂದರೆ ಸಾಕು ಎಂಬ ಭಾವನೆ ಅನೇಕರಲ್ಲಿದೆ. ಹೀಗಾಗಿ ಇಂಗ್ಲಿಷ್ ಕಲಿಕೆಗೆ ಕೆಲವರು ಹೆಚ್ಚಿನ ಗಮನ ಕೊಡುವುದಿಲ್ಲ. ನೀವು ಉತ್ತಮ ಕನ್ನಡ ಪತ್ರಕರ್ತನಾಗಲು ಇಂಗ್ಲಿಷ್ ಜ್ಞಾನ ಕೂಡ ಇರಬೇಕು. ಕನ್ನಡದ ಸುದ್ದಿಮನೆಯಲ್ಲಿ ಸುದ್ದಿ ಎಲ್ಲೆಡೆಗಳಿಂದ ಹರಿದು ಬರುತ್ತವೆ. ಆ ಪೈಕಿ ಹಲವು ಇಂಗ್ಲಿಷಿನಲ್ಲಿರುತ್ತವೆ. ಅವನ್ನು ಕನ್ನಡಕ್ಕೆ ಅನುವಾದಿಸಬೇಕಾಗುತ್ತದೆ. ಅಲ್ಲದೇ ಸುದ್ದಿಮನೆಯಲ್ಲಿ ಜನರಲ್ ಡೆಸ್ಕ್ ಎಂಬ ಪ್ರತ್ಯೇಕ ವಿಭಾಗವಿರುತ್ತದೆ. ಅಲ್ಲಿ ಕೆಲಸ ಮಾಡಲು ಇಂಗ್ಲಿಷ್ ಜ್ಞಾನ ಇರಲೇಬೇಕು. ಅಲ್ಲಿ ದೇಶ–ವಿದೇಶಗಳಿಂದ ಬರುವ ಸುದ್ದಿಯನ್ನು ಗ್ರಹಿಸಿ, ಬರೆಯಬೇಕಾಗುತ್ತದೆ. ಅವೆಲ್ಲವೂ ಇಂಗ್ಲೀಷಿನಲ್ಲಿರುತ್ತವೆ. ಹೀಗಾಗಿ ಆ ಭಾಷೆ ಗೊತ್ತಿರಬೇಕು. ನಿಮಗೆ ಇಂಗ್ಲಿಷ್ ಬರದಿದ್ದರೆ ಗ್ರಾಮಾಂತರ ಅಥವಾ ರಾಜ್ಯದ ಸುದ್ದಿಗಳನ್ನಷ್ಟೇ ನಿಭಾಯಿಸುವ ವಿಭಾಗಗಳಲ್ಲಿ ಕೆಲಸ ಮಾಡಬೇಕಾದೀತು.

ಇನ್ನು ನೀವು ವರದಿಗಾರರಾಗಿದ್ದರೆ, ಇಂಗ್ಲಿಷ್ ಬರಲೇಬೇಕು. ಅಮಿತ್ ಶಾ ಅಥವಾ ರಾಹುಲ್ ಗಾಂಧಿ ಅವರ ಪತ್ರಿಕಾಗೋಷ್ಠಿಗೆ ನಿಮ್ಮನ್ನುಕಳುಹಿಸಿದರೆನ್ನಿ. ಅವರೊಂದಿಗೆ ಮಾತಾಡಲು, ಅವರು ಹೇಳಿದ ವಿಚಾರಗಳನ್ನು ಗ್ರಹಿಸಲು ನಿಮಗೆ ಇಂಗ್ಲಿಷ್ ಅಥವಾ ಹಿಂದಿ ಬರಲೇಬೇಕು. ಇಲ್ಲದಿದ್ದರೆ ಅವರು ಹೇಳಿದ್ದನ್ನಷ್ಟೇ ಕೇಳಿ ಬರೆಯಬೇಕಾಗುತ್ತದೆ. ಪ್ರಶ್ನೆ ಕೇಳಬೇಕು ಎಂದು ನಿಮಗೆ ಅನಿಸಿದರೂ, ವಿಷಯ ಗೊತ್ತಿದ್ದರೂ, ಭಾಷೆ ಗೊತ್ತಿಲ್ಲ ಎಂಬ ಒಂದು ಕಾರಣಕ್ಕೆ ಬಾಯಿ ಮುಚ್ಚಿಕೊಂಡಿರಬೇಕಾಗುತ್ತದೆ. ಇದು ಪತ್ರಕರ್ತನಾದವನಿಗೆ ಹಿಂಸೆ. ಅದೇ ನಿಮಗೆ ಇಂಗ್ಲಿಷ್ ಗೊತ್ತಿದ್ದರೆ, ನೀವು ಇಂಗ್ಲಿಷ್ ಪತ್ರಕರ್ತರಂತೆ ಸಲೀಸಾಗಿ ಪ್ರಶ್ನೆಗಳನ್ನು ಕೇಳಬಹುದು, ಅವರೊಂದಿಗೆ ಮಾತಾಡಬಹುದು. ವಿಷಯ ಗೊತ್ತಿದ್ದೂ, ಭಾಷೆ ಗೊತ್ತಿಲ್ಲ ಎಂಬ ಒಂದು ಕಾರಣಕ್ಕೆ ಸುಮ್ಮನಿರುವವದರಂಥ ಅಸಹಾಯಕ ಪರಿಸ್ಥಿತಿ ಮತ್ತೊಂದಿಲ್ಲ. ಹೀಗಾಗಿ ನಿಮಗೆ ಇಂಗ್ಲಿಷ್ ಒಂದೇ ಅಲ್ಲ, ಹಿಂದಿ ಸಹ ಗೊತ್ತಿರಬೇಕು. ಅದರ ಜತೆ ಇತರ ಕೆಲವು ಭಾಷೆಗಳು ಗೊತ್ತಿದ್ದರೆ ಇನ್ನೂ ಒಳ್ಳೆಯದು. ಹೀಗಾಗಿ, ನಿಮಗೆ ಕನ್ನಡ ಮಾತ್ರ ಗೊತ್ತಿದ್ದರೆ, ನೀವು ಒಳ್ಳೆಯ ಕನ್ನಡ ಪತ್ರಕರ್ತರಾಗುವುದು ಕಠಿಣ. ಯಶಸ್ವಿ ಕನ್ನಡ ಪತ್ರಕರ್ತರಾಗಬೇಕೆಂದಿದ್ದರೆ ಇಂಗ್ಲಿಷ್, ಹಿಂದಿ ಗೊತ್ತಿರಲೇಬೇಕು. ಪ್ರಧಾನಿ ಮೋದಿಯವರು ಏಕಾಏಕಿ ಸಿಕ್ಕರೆನ್ನಿ, ನಿಮಗೆ ಹಿಂದಿ ಗೊತ್ತಿದ್ದರೆ, ಅವರು ನಿಮ್ಮೊಂದಿಗೆ ಮಾತಾಡಲು ಆಸಕ್ತಿ ತೋರಬಹುದು. ಇಲ್ಲದಿದ್ದರೆ ಅದೊಂದೇ ಕಾರಣಕ್ಕೆ ಅವರೊಂದಿಗೆ ನಿಮಗೆ ಸಲೀಸಾಗಿ ಮಾತಾಡಲು ಆಗದೇ ಹೋಗಬಹುದು. ದೇವೇಗೌಡರಿಗೆ ಒಳ್ಳೆಯ ಆಕ್ಸ್‌ಫರ್ಡ್ ಇಂಗ್ಲಿಷ್ ಬರುತ್ತಿದ್ದಿದ್ದರೆ ಹೇಗಿರುತ್ತಿತ್ತು ಎಂಬುದನ್ನು ಒಂದು ಕ್ಷಣ ಯೋಚಿಸಿ. ಅದೇ ರೀತಿ ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾದ ಸಿ.ಟಿ.ರವಿ ಸಲೀಸಾಗಿ ಕನ್ನಡ ಮಾತಾಡುವಂತೆ, ತಮಿಳು ಅಥವಾ ಹಿಂದಿ ಅಥವಾ ಇಂಗ್ಲಿಷ್ ಮಾತನಾಡುತ್ತಿದ್ದಿದ್ದರೆ, ಅವರನ್ನು ಯಾರು ಹಿಡಿದು ಕಟ್ಟಿ ಹಾಕುತ್ತಿದ್ದರು? ಇಷ್ಟೊತ್ತಿಗೆ ಅವರು ಎಲ್ಲಿಗೋ ಹೋಗಿರುತ್ತಿದ್ದರು. ಕನ್ನಡ ಪತ್ರಕರ್ತರಾಗಿ ಒಳ್ಳೆಯ ಇಂಗ್ಲಿಷ್ ಬಲ್ಲವರಾಗಿದ್ದರೆ, ನೀವು ಕನ್ನಡವೊಂದೇ ಬಲ್ಲ ಪತ್ರಕರ್ತರಿಗಿಂತ ಮೇಲಿರುತ್ತೀರಿ, ನಿಸ್ಸಂದೇಹವಾಗಿ.

ನಿಂಗರಾಜು ಆರ್, (ಇಮೇಲ್ ಮೂಲಕ)

• **ಭಟ್ರೇ, ನಿಮ್ಮ ಪ್ರಕಾರ, ಎಷ್ಟು ಜನ ಸ್ನೇಹಿತರಿದ್ದರೆ, ಒಳ್ಳೆಯದು?**

– ನಿಂಗರಾಜು ಅವರೇ, ಪರಿಚಿತರೆಲ್ಲ ಸ್ನೇಹಿತರಲ್ಲ. ಸಲುಗೆ, ಆಪ್ತತೆ ಇದ್ದವರೂ ಸ್ನೇಹಿತರಲ್ಲ. ಸ್ನೇಹಿತರಾಗುವುದು ಒಂದು ದೊಡ್ಡ ಅರ್ಹತೆ. ನಮ್ಮ ಲಾಭಕ್ಕಾಗಿ ಸಂಬಂಧ ಬೆಳೆಸುವುದು ಸ್ನೇಹ ಅಲ್ಲ, ಅದು ವ್ಯವಹಾರ. ಯಾವ ಉದ್ದೇಶವಿಲ್ಲದೇ, ಲಾಭವಿಲ್ಲದೇ, ಒಬ್ಬರನ್ನು ಇಷ್ಟಪಡುವುದು ನಿಜವಾದ ಸ್ನೇಹ. ಒಬ್ಬ ವ್ಯಕ್ತಿಯಲ್ಲಿರುವ ಗುಣ ದೋಷಗಳನ್ನು ಒಪ್ಪಿಕೊಂಡೂ ಇಷ್ಟಪಡುವುದು ಸ್ನೇಹ. ಇಡೀ ಜಗತ್ತೇ ನಮ್ಮನ್ನು ಬಿಟ್ಟು ಅಗಲಿದರೂ, ಆ ಒಬ್ಬ ನಮ್ಮನ್ನು ಅರಸಿಕೊಂಡು ಬರುತ್ತಾನಲ್ಲ ಆತ ನಿಜವಾದ ಸ್ನೇಹಿತ. ಸ್ನೇಹಿತರಾಗುವುದಕ್ಕೆ ಅರ್ಹತೆ ಬೇಕು. ಸನಿಹಕ್ಕೆ ಬಂದವರನ್ನೆಲ್ಲಾ ಸ್ನೇಹಿತರೆಂದು ತಬ್ಬಿಕೊಳ್ಳಲು ಆಗುವುದಿಲ್ಲ. ಸಾಮಾನ್ಯವಾಗಿ ನೀವು ಕಷ್ಟದಲ್ಲಿದ್ದಾಗ, ನಿಮ್ಮ ಸನಿಹ ಯಾರೂ ಸುಳಿಯುವುದಿಲ್ಲ. ನೀವು ಕಷ್ಟದಲ್ಲಿದ್ದೀರಿ ಎಂಬುದು ಗೊತ್ತಿದ್ದೂ, ನೆರವಿನ ಹಸ್ತ ಚಾಚಲು ಮುಂದೆ ಬರುತ್ತಾನಲ್ಲ, ಆತ ನಿಜವಾದ ಸ್ನೇಹಿತ. ನೂರಾರು ನಕಲಿ ಸ್ನೇಹಿತರು ಇರುವುದಕ್ಕಿಂತ, ಇಂಥ ಸ್ನೇಹಿತ ಒಬ್ಬನೇ ಇರಲಿ, ಸಾಕು. ನೀವು ನಿಮ್ಮ ತಂದೆ–ತಾಯಿ, ಅಣ್ಣ–ತಮ್ಮ, ಹೆಂಡತಿ, ಮಕ್ಕಳು ಮತ್ತು ರಕ್ತ ಸಂಬಂಧಿಗಳ ಮುಂದೆ ಹೇಳಲು ಸಾಧ್ಯವಾಗದ್ದನ್ನು ಸ್ನೇಹಿತರ ಮುಂದೆ ಮುಕ್ತವಾಗಿ ಹೇಳಿಕೊಳ್ಳುತ್ತೀರಿ. ಅವರ ಮುಂದೆ ಓಪನ್ ಅಪ್ ಆಗುತ್ತೀರಿ. ಹೀಗಾಗಿ ಉತ್ತಮ ಸ್ನೇಹಿತರನ್ನು ಆರಿಸಿಕೊಳ್ಳುವುದೂ ಒಂದು ಕಲೆ. ಜೀವನದಲ್ಲಿ ಹೆಚ್ಚು ನೋವು ಕೊಡುವವರೂ ನೀವು ನಂಬಿದ, ಸ್ನೇಹಿತರ ಸೋಗಿನಲ್ಲಿರುವವರು ಎಂಬುದು ಗೊತ್ತಿರಲಿ. ಹೀಗಾಗಿ ಇಲ್ಲಿ ಸಂಖ್ಯೆ ಮುಖ್ಯವಲ್ಲ.

ಅಜಯ್ ಬೆಂಡಿಗೇರಿ, ಹುಬ್ಬಳ್ಳಿ

• **ಭಟ್ರೇ, ಅಪರಿಚಿತ ಹುಡುಗಿಯೊಬ್ಬಳು ನನ್ನ ಬಳಿ ಬಂದು, 'ಐ ಲವ್ ಯು' ಅಂದಳು. ಒಂದು ವೇಳೆ ನನ್ನ ಸ್ಥಿತಿಯಲ್ಲಿ ನೀವು ಇದ್ದಿದ್ದರೆ ಏನು ಮಾಡುತ್ತಿದಿರಿ?**

– ಅಜಯ್, ನಾನು ಏನು ಮಾಡುತ್ತಿದ್ದೆನೋ, ಅದನ್ನೇ ನೀವೂ ಮಾಡಬೇಕಿಲ್ಲ. 'ನಮಸ್ಕಾರ' ಎಂದು ಹೇಳಿದವರಿಗೆ, ಹೇಳಿದವರು ಯಾರೇ ಇದ್ದಿರಬಹುದು, ಅವರಿಗೆ ತಿರುಗಿ, 'ನಮಸ್ಕಾರ' ಎಂದು ಹೇಳುತ್ತೇವೆ, ಹೇಳಬೇಕು. ಅದು ಶಿಷ್ಟಾಚಾರ, ಸಭ್ಯತೆ, ಒಳ್ಳೆಯ ಸಂಸ್ಕಾರ. ಆದರೆ 'ಐ ಲವ್ ಯು' ಎಂದು ಹೇಳಿದವರಿಗೆ ತಿರುಗಿ, ಅದೇ ಶಬ್ದಗಳಲ್ಲಿ ಉತ್ತರ ಹೇಳಬೇಕಿಲ್ಲ, ಹೇಳಲೂಬಾರದು. ಪ್ರೀತಿಯಲ್ಲಿ ನಾವು ಸದಾ ಧಾರಾಳವಾಗಿರಬೇಕು. ಆದರೆ ಎಲ್ಲರನ್ನೂ ಪ್ರೀತಿಸುವಷ್ಟಲ್ಲ. ಆಗ ಅದು ಪ್ರೀತಿ ಎಂದು ಕರೆಯಿಸಿಕೊಳ್ಳುವುದಿಲ್ಲ. ಯಾರೋ ಬಂದು, 'ಐ ಲವ್ ಯು' ಎಂದು ಹೇಳಿದರೆ, ಸ್ವಲ್ಪ ಯೋಚಿಸಬೇಕು. ಪ್ರೀತಿ ಕುರುಡು, ಆದರೆ ನಾವು ಕುರುಡರಲ್ಲ ಎಂಬುದು ಗೊತ್ತಿರಬೇಕು. ಅಷ್ಟಕ್ಕೂ ಹಾಗೆ ಹೇಳಿದವಳ ಜತೆ ಫ್ಲರ್ಟ್ ಮಾಡುವುದು ನಿಮ್ಮ ಉದ್ದೇಶವಾದರೆ, ನನ್ನ ಮಾತು ಕೇಳಿ ಪ್ರಯೋಜನವಿಲ್ಲ.

ವೆಂಕಟೇಶ ಕೆ.ಎಸ್. (ಇಮೇಲ್ ಮೂಲಕ)

• **ನನಗೆ ಸಮಯದ ನಿರ್ವಹಣೆ ತುಂಬಾ ಕಷ್ಟ ಅನಿಸುತ್ತಿದೆ. ಕಛೇರಿ, ಮನೆ, ಇತರ ಕೆಲಸಗಳನ್ನು ನಿರ್ವಹಿಸಲು ಇಪ್ಪತ್ನಾಲ್ಕು ಗಂಟೆಗಳು ಸಾಲುತ್ತಿಲ್ಲ . ಆದರೆ ಬೆಳಗ್ಗೆ ಸುಮಾರು ಆರಕ್ಕೆದ್ದು ಹನ್ನೊಂದು ಗಂಟೆಗೆ ಮಲಗಿದರೂ ಸಮಯ ನಿರ್ವಹಣೆ ಸಾಧ್ಯವಾಗುತ್ತಿಲ್ಲ. ಪರಿಹಾರ ತಿಳಿಸಿ.**

– ಜಗತ್ತಿನಲ್ಲಿ ಅಮೆರಿಕ ಅಧ್ಯಕ್ಷ, ಭಾರತದ ಪ್ರಧಾನಿಯಿಂದ ಹಿಡಿದು, ಭಿಕ್ಷುಕನವರೆಗೆ ಎಲ್ಲರಿಗೂ ಇರುವುದು ಇಪ್ಪತ್ನಾಲ್ಕು ಗಂಟೆ. ಈ ವಿಷಯದಲ್ಲಿ ಕಾಲ ಕಟ್ಟುನಿಟ್ಟು. ಯಾರ ಪ್ರಭಾವಕ್ಕೂ ಆತ ಒಳಗಾಗುವವನಲ್ಲ. ಹೀಗಾಗಿ ನಾನು ಅಮೆರಿಕ ಅಧ್ಯಕ್ಷ, ಭಾರತದ ಪ್ರಧಾನಿಯಂತೆ ಕಮ್ಮಿಯಲ್ಲ ಎಂದು ಭಾವಿಸಬಹುದು. ಅವರಂತೆ ನಿಮಗೂ ಇಪ್ಪತ್ನಾಲ್ಕು ಗಂಟೆ ಇದೆಯಲ್ಲ. ಅವರೆಂದೂ ತಮಗೆ ಸಮಯ ಇಲ್ಲ, ಪುರುಸೊತ್ತಿಲ್ಲ ಎಂದು ಎಲ್ಲೂ, ಎಂದೂ ಗೊಣಗುವುದಿಲ್ಲ. ಅವರಿಗಿಲ್ಲದ ಗೊಣಗಾಟ, ಚಿಂತೆ ನಿಮಗೇಕೆ? ಸಮಯವೆಂಬುದು ಹಣಕ್ಕಿಂತ ದುಬಾರಿ. ಹಣವನ್ನು ಹೇಗೆ ಲೆಕ್ಕ ಹಾಕಿ, ಸಾಕಷ್ಟು ಯೋಚನೆ ಮಾಡಿ ಖರ್ಚು ಮಾಡುತ್ತೀರೋ, ಅದೇ ರೀತಿ ಸಮಯವನ್ನೂ ವ್ಯಯಿಸಿ. ತನ್ನಿಂದತಾನೇ ನಿಮಗೆ ಸಮಯ ಮಿಗಲಾರಂಭಿಸುತ್ತದೆ. Time is what we want most. But what we use worst ಎಂಬ ಮಾತನ್ನುಕೇಳಿರಬಹುದು. ನಿಮ್ಮ ಸಮಯದ ಮಹತ್ವವನ್ನು ಮನಗಾಣುವ ತನಕ ನಿಮಗೆ ಸಮಯ ನಿರ್ವಹಣೆ ಕಷ್ಟವಾಗುತ್ತದೆ. ನನಗೆ ಯಾವುದಕ್ಕೂ ಸಮಯ ಇಲ್ಲ ಅಂದ್ರೆ, ಯಾವುದೂ ಸಾಧ್ಯವಾಗುವುದಿಲ್ಲ. ಸಾಧ್ಯ ಮಾಡಿಕೊಂಡರೆ ಎಲ್ಲದಕ್ಕೂ ಸಮಯ ಸಿಗುತ್ತದೆ. ಸ್ವಾಮಿ ವಿವೇಕಾನಂದರ, ಶಂಕರಾಚಾರ್ಯರ ಜೀವನವನ್ನು ಓದಿ. ಇವರಿಬ್ಬರೂ ತಮ್ಮ ಅಲ್ಪ ಜೀವಿತ ಅವಧಿಯಲ್ಲಿ ವಿಶ್ವವೇ ಬೆರಗಾಗುವ ಸಾಧನೆ ಮಾಡಿ, ಇಂದಿಗೂ ಶಾಶ್ವತವಾಗಿ ನೆಲೆಸಿದ್ದಾರೆ. ಯಾವುದಕ್ಕೂ ಸಮಯ ಇಲ್ಲ ಎನ್ನಬೇಡಿ. ಎಲ್ಲದಕ್ಕೂ ಸಮಯವಿದೆ, ಆದರೆ ಮಾಡಿಕೊಳ್ಳಬೇಕಷ್ಟೆ.